ಪ್ರಫುಲ್ಲ ಭಾರತ

ಮಲ್ಲಿಕಾ

ಪ್ರಫುಲ್ಲ ಭಾರತ

ಮಲ್ಲಿಕಾ

ಅತ್ರಾಪಿ ಭಾರತಂ ಶ್ರೇಷ್ಠಂ
ಜಂಬೂದ್ವೀಪೇ ಮಹಾಮುನೇ ।
ಯತೋಽಹಿ ಕರ್ಮಯೋರೇಷಾ
ಹ್ಯತೋಽನ್ಯಾ ಭೋಗ ಭೂಮಯಂ॥

Praphulla Bharata in Kannada by 'Mallika'
Published by Lakshmi Prakashana,
170, Langford Road, Bangalore-560 025.

ಪ್ರಥಮ ಮುದ್ರಣ : ೧೯೯೦

ಬೆಲೆ : ಇಪ್ಪತ್ತಾರು ರೂಪಾಯಿಗಳು

ಮುದ್ರಕರು :
ನ್ಯೂ ಐಡಿಯಾಸ್
ನಂ. 30, 15ನೇ ಮುಖ್ಯ ರಸ್ತೆ
ಮೂರನೆಯ ವಿಭಾಗ, ಜಯನಗರ
ಬೆಂಗಳೂರು–560 011

"ಶ್ರೀ ಲಕ್ಷ್ಮೀಪಾದಾರ್ಪಣಮಸ್ತು"

ಪ್ರಫುಲ್ಲ ಭಾರತ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು–056 025

ಪರಿವಿಡಿ

ನಿವೇದನೆ

ಕವಿತೆ – ಕಾವ್ಯ ಎಂದರೆ ಒಮ್ಮೆ ಓದಿ ಬಿಸಾಡುವ ಪ್ರತಿಕೆಗಳಂತಲ್ಲ. ಾವ್ಯ ಯಾವತ್ತೂ ಮನನಾತ್ಮಕವಾದ ಸುಂದರ ಸೃಷ್ಟಿ. ಭಾವನಾತ್ಮಕವಾದ ವಿತೆಯು ಕವಿಯ ಆಳವಾದ ಅನುಭವ, ಧ್ಯಾನ, ತಪಸ್ಸು ಇವುಗಳಿಂದ ಆತ್ಮ ಾವೇಶಪೂರ್ವಕವಾಗಿ, ಗಿಡದಿಂದ ತಳಿರು ಮೊಗ್ಗು ಹೂವುಗಳು ಹೊಮ್ಮು ಂತೆ ಹೊಮ್ಮಿ ಬರುತ್ತದೆ. ಸತ್ಕಾವ್ಯದಲ್ಲಿ ವಿಷಯ ಸಂಪತ್ತಿ ಪ್ರಧಾನವಾದರೂ ಾವ ಅಲಂಕಾರಗಳು ಅತ್ಯಾವಶ್ಯಕವೂ ಹೌದು. ದೇಹ ಸೌಂದರ್ಯ ಗೌಣ ಾದರೂ ಆತ್ಮ ಸಮಸ್ತಕ್ಕೆ ಅವಲಂಬನ ರೂಪವಾಗಿರುವುದರಿಂದ ದೇಹ ೌಂದರ್ಯ ಬಾಹ್ಯ ತುಷ್ಟಿಗೆ, ಆತ್ಮ ಪರಿಪುಷ್ಟಿಗೆ ಪೂರಕ. ಕಾವ್ಯಗಮಣಿಯು ತ್ವ ಆಲೋಚನೆ ತಪಸ್ಸುಗಳೆಂಬ ದಿವ್ಯ ಅಡರ್ಪುಗಳಿಂದ ಅಲಂಕೃತಳಾಗಿದ್ದಲ್ಲಿ ಾಲ್ಕು ಕಾಲ ಬಾಳಿ ಬದುಕಲು ಪೂರ್ಣ ಸಮರ್ಥೆಯಾಗುತ್ತಾಳೆ. ಅಂತಲೇ, ದ್ಯಸಾಹಿತ್ಯಕ್ಕಿಂತ ಪದ್ಯ ಸಾಹಿತ್ಯ ಆಲೋಚನೆಯನ್ನು ಪ್ರಗಾಢಗೊಳಿ ುವುದು ಮಾತ್ರವಲ್ಲ; ಭಾವನಾವೇಶಕ್ಕೆ ದಾರಿ ಮಾಡುತ್ತದೆ. ಶ್ರೇಷ್ಠ ್ರತಿಭಾ ಸಂಪನ್ನ ಕೃತಿಯಲ್ಲಿ ಸೃಷ್ಟಿಯಾಳದ ತಳದವರೆಗೂ ನುಗ್ಗಿ, ಅತ್ಯು ್ತಮ ಭಾವ ಚಿಂತಾರತ್ನಗಳನ್ನು ಹೆಕ್ಕಿತರುವುದೇ ಸರಿಯಾದ ವಿಮರ್ಶೆಗೆ ೂರಕ. ನೀರಮೇಲಿನ ಬೆಳ್ನೊರೆಯನ್ನು ತಂದರೆ ಏನೇನೂ ಸಾಲದು. ಕಾವ್ಯ ಮಣಿಗೆ ಒನಪು ಒಯ್ಯಾರ ಮಿಂಚುಗಳ ಶೃಂಗಾರವೂ ಇರತಕ್ಕದ್ದು. ಅಂದರೆ, ದು ದೇವವಿಗ್ರಹದಂತೆ ಭಕ್ತಿ ಭಾವನಾಪೂರ್ವಕವಾಗಿ ಇದ್ದರೇನೇ ಕಾವ್ಯ ಾಮಿನಿ ಸಹಜ ಗುಣ ಸಂಪನ್ನೆ ಎನಿಸುತ್ತಾಳೆ. ಧ್ಯಾನಮಯವೂ ತತ್ವ ೀಲವೂ ಆಗಿರದ ಕವಿತೆಗಳು ಎಷ್ಟೇ ರಾಗ ಸಂಪತ್ತಿಯಿಂದ ಕೂಡಿದ್ದರೂ ಸಾಗ ದ ಬೆಳ್ನೊರೆಯಂತೆ ನೀರಸ ಮತ್ತು ಕ್ಷಣಿಕ. ಅಂದರೆ ಅತ್ಯುತ್ತಮ ಾವ್ಯಕ್ಕೆ ತಪಸ್ಸಿನಿಂದ ತೇಜಸ್ಸು. ಪ್ರೇಮವಿಲ್ಲದ ಕಾಮವನ್ನು ಬಯಸಿದರೆ ಂದ್ರಿಯಗಳಿಗೆ ತಾತ್ಕಾಲಿಕ ಸಂತೃಪ್ತಿ ಲಭಿಸಿದರೂ ಆತ್ಮ ಹಾನಿ ತಪ್ಪಿದ್ದಲ್ಲ.

ಅಂತಲೇ, ಕವಿತೆಯ ಗೌರವವು ಅದರ ಪುಷ್ಟಿ-ತುಷ್ಟಿಗಳಲ್ಲಿದೆ. ಅದರ ಆಳಕ್ಕಿಳಿದು ಚಿಂತಾರತ್ನಗಳನ್ನು ಆಯ್ದುಕೊಳ್ಳಬಲ್ಲ ಜಾಣರು ಮಾತ್ರ ಕಾವ್ಯ ವಾಚನದಿಂ ಸಂತೃಪ್ತಿ ಪಡೆಯಬಲ್ಲರು ಮತ್ತು ಆರಾಧಿಸಬಲ್ಲರು. ಕಾವ್ಯರಚನೆ ಕುಸುರಿ ಕೆಲಸದಂತೆ ಕಷ್ಟದಾಯಕ ಮತ್ತು ಗಂಭೀರ ಯೋಚನಾದಾಯಕವಾಗಿರುವುದರಿಂದ ಅದು ಭವ್ಯ ದರ್ಶನವೂ ಹೌದು. ಕಲ್ಪನೆಯಲ್ಲಿ ಪ್ರಾಣವಾಯುವನ್ನು ಕಂಡುಕೊಳ್ಳುವ ಸಂವಿಧಾನವೇ ಸ್ವಾಧ್ಯಾಯ.

ಪ್ರಮೋದನಾಮ ಸಂವತ್ಸರ ಶ್ರಾವಣ ಶುಕ್ಲ ಅಷ್ಟಮಿ ಸೋಮವಾರ

ಮಲ್ಲಿಕಾ
೩೦-೭-೧೯೯೦

ಕಮಲಾದೇವಿ

ನೈಸರ್ಗಿಕೀ ಚ ಪ್ರತಿಭಾ
ಶ್ರುತಂ ಚ ಬಹು ನಿರ್ಮಲಂ ।
ಅಮಂದಶ್ಚಾಭಿ ಯೋಗೋಽಸ್ಯಾಃ
ಕಾರಣಂ ಸಂಪದಃ ॥

ಹೇಳು ಹೇಳೆನ್ನ ಹೃನ್ಮಂದಿರದ ರಾಗಾನು
ರಾಗಿಣಿಯೆ! ಅಂತರ್ಯಾಮಿಾ ಭಾವ ಭಾಮಿನಿಯೆ!
ಮಧುರರಸಮಯ ರಸಾಲ ಚಿಂತನದಿಂದೆಸೆವ
ಚಂದ್ರಿಕಾ ಹಿರಣ್ಮಯೀ ವಾಗ್ಜ್ಞಾನ್ಧವೀ ತಾಯೆ!
ಹೃನ್ಮಂಡಲದಾಳದಿಂ ಹರಿಸು ತವ ವಾಣಿಯಂ
ವೀಣಾ ತಂತ್ರಿಯಂ ಮಿಡಿದು ರಾಗರಸ ಹರಿಸುವೊಲ್;
ಉಕ್ಕಿ ಹರಿಯಲೀ ರಾಗಲಹರಿ ಹನಿಹನಿಯೈಸಿ
ಭರತವರ್ಷದುತ್ಫುಲ್ಲ ಕಮಲ ಕುಸುಮಂಗಳ
ಸರಮಾಲೆಯಿಂ ಜಗ ಬೆಳಕಿಗಿಡುವ ನೇಮದಲಿ.
ನೀಲ ನೈದಿಲೆ ಕಾಮ ಕಸ್ತೂರಿ ಮಲ್ಲಿಗೆಯ
ಹೂಹಾರಮೆಂತಂತು ವರ್ಣಮಯ ಗಂಧಮಯ
ಚಿನ್ಮತಿಯ ಚೆಂಕೃತಿಯಲಿ ಸಂಜೀವನ ಧಾರೆ
ಹರಿಯಲೀ ರಾಗರಸ ವಾಹಿಯೈಸಿ ಓ ತಾಯೆ!
ಅಕ್ಷರೆ, ರಾಗ ತಾಳಲಯ ಮಣಿಮಾಲಿನಿ ದೇವಿ,
ಪ್ರಸನ್ನ ಭಾವ ಚಿಂತಾಖನಿಯೆ, ಭುವನ ಸ್ವರ
ಸಂಮೇಲದಲಿ ನಿಯಯ ಸಂಯಮ ಮಧು ಮಾಧುರ್ಯ
ಉಕ್ಕುವೊಲ್ ಸ್ವಚ್ಛಂದಮಾನಂದ ಶೀಲದಿಂ
ರಸಸ್ಫೂರ್ತಿಯನೀಯೆನಗೆ ಆನುಲಿಯಲಿಹ ಕಿರು
ಗೀತೆಯಲಿ ಸ್ವಾತಂತ್ರ್ಯಧುನಿ ಧುಮುಧುಮಿಸಲೀ ರಸ

→

ಧಾರೆ ಕಸ್ನಾಡ ಪೆಣ್ಮಣಿಯರೆರ್ದೆಯರಳ್ಸುವೊಲ್.

ಓ ಎನ್ನ ಮನಃಪಕ್ಷಿಯೆ, ಕಟುಮನದ ಕುಮತಿಯ
ಕೊರಳ್ ಬಲುಹಕೆ ನೊಂದು ನೀರಾಗಿ ನಲುಗದಿರ್ ;
ತಾಳಲಯ ಛಂದಗಳನುಬಂಧಮಿರದಿರೆ, ರಾಗ
ಭಾವದಿಂಪಿನ ಸೊಂಪು ಭಕ್ತಿ ಭಾವದ ಪೆಂಪು
ಇರ್ದೊಡದು ಸಾಲ್ಗುಂ ಕಣಾ, ಪ್ರತಿದಿನ ಉಲಿಯೆ !

ಚೈತ್ರ ಕಾನನ ಮಹಾ ಪರ್ಣಾರ್ಣವದ ಮೇಗಡೆ
ಉದಯರವಿಯಾಗಮನಮಂ ಸಾರಿ ಹೇಳ್ವವೊಲ್
ಎಳೆಬೆಳಕು ಚಳಚಳಿಸಿ ಪೊಳೆದುದು ದಿಗ್ತಟಾಂತ
ಲಗ್ನದಲಿ, ಮಂಜಿನರಸಧಾರೆ ಉಕ್ಕಿಹರಿದೊಲ್.
ಚಣಚಣಂ ಮಿಗಿಲಪ್ಪ ಬೆಳಕಿನ ಛವಿ ಬೆಳ್ಪನೆ
ಬೆಳಗಿದತ್ತು ಜಗಮಂ, ಬಳಿಕಲಾ ಎಳ ರವಿಯ
ಉದಯಮಾನೋತ್ಸವ ನಡೆದುದು ಪೂರ್ವೀ ನೀಲ
ದಿಗ್ಭಿತ್ತಿಯ ಮೇಲೆ. ಬೃಹದ್ ಬ್ರಹ್ಮಗಿರಿಯ
ಶಿರೋದ್ದೇಶವದು ಉಜ್ವಲೋಜ್ವಲ ಕಿರಣಗಳ
ಚುಂಬನದಲಿ ಮಿಸುನಿಯಲೇಪವೊರೆದಂತೆವೊಲ್
ಮಧುಮಯಂ ಲೋಕಮೋಹನೀಯ ಸಂಕ್ರಾಂತಿಯಿಂ.
ಮಾಮರದ ಎಲೆಹೊದರಿನಲಿ ಹುದುಗಿ ಕುಳಿತೊಂದು
ಕೋಗಿಲೆಯು ಇನಿಗೊರಳಿಂ ಕಮನೀಯ ಸುಸ್ವನಂ
ಹರಿದುದು ನಲವಿಂ ಕುಹು ಕುಹೂ ರಾಗಮಾಲೆಯಿಂ
ಸ್ವಾಗತಿಸುವಾನಂದ ಮೋದದಲಿ. ಆಗಳೇಂ,
ಮರಬಳ್ಳಿ ಗಿಡಗಳಲಿ ಪಕ್ಷಿ ಸಮಾಜಮೆಳ್ಚಿತ್ತು
ಎರಂಕೆಯೊದರಿ ಇನಿಗೊರಳಿಂ ರಾಗರಸಮಂ
ಹರಿಸಿದುವು ಬಾಲರವಿಗೆ ಸುಪ್ರಭಾತಮಂ ಹಾರೈಸಿ. →

ಎಲ್ಲೆಡೆಯು ಎಳೆಬೆಳಕು ಬೆಳಗಿ ಹೊಗರೇರುತಿರೆ
ಅಂದ ಚಂದದಿಂ ಮೈಗೊಂಡ ಕಾದಂಬನಿಗಳ್
ಹಳದಿ ಕುಂಕುಮ ಪೀತ ಕೆನ್ನೀಲ ತಿಳಿಗೆಂಪು
ನಸುಗೆಂಪು ಕೆಂಗೆಂಪು ಹೂಗೆಂಪು ಕಡುಗೆಂಪು
ಪೀತ ಚಂದನ ಧವಳ ಹವಳ ವರ್ಣವರ್ಣೋಪ
ವರ್ಣಮುಸು ಸಂಗಮಂ ಗುಡಿಗೋಪುರಗಳೆತ್ತು
ರಂಜಿಸಿರ್ದುವಂಬರದೊಳ್ ವಿವಿಧ ವಿನ್ಯಾಸದಲಿ.

ಭೋರ್ಗರೆವ ಅರಬ್ಬಿ ಮಹಾ ಸಾಗರ ತೀರದ
ಪ್ರದೇಶದೊಳ್ ಸುಂದರ ಸಮುದಾಣದಲಿ ಮೈ
ಗೊಂಡ ಮಂಗಳೂರು ನಗರ ದೇಶ ಆರೋಗ್ಯ
ಧಾಮನೆನೆ ಮೆರೆದತ್ತು ಮನೋಹರ ಶೈಲಿಯುಲಿ.
ನಗರಿಯೊಳ್ ಮೈದಾಳಿ ನೆಲೆಗೊಂಡ ಪರಿಪುಣ್ಯ
ದೇಗುಲಗಳಲ್ಲಿ ದೇವದೇವಿಯರ್ಗೆ ನಿಚ್ಚಂ
ತನಿನೆಳಗಿನಲಿ ಸಲ್ಲುವ ಧೂಪದೀಪ ಸುಗಂಧ
ದ್ರವ್ಯಗಳ್ ಪ್ರೊತ್ತೂರಿದು ಸಮೃದ್ಧ ಸೇವೆಯುಂ
ಸಲ್ಲುತಿರೆ ಗಂಟೆ ಜಾಗಟೆ ಶಂಖ ಕೊಂಬು ಕಹಳೆ
ಮೊಳಗಿದುವು ಗಣಗಣಿಸುತ. ಸಡಗರ ಸಂಭ್ರಮ
ಸಂತಸಗಳೊಂದುಗೂಡಿದ ಪ್ರಾತಃಸಮಯುವದು
ತಣ್ಪಿನೆರೆಯ ಸುಶಾಂತಿಯಿಂ ರಾರಾಜಿಸಿದತ್ತು.

ಮಂಗಳೂರಿನೊಳ್ ನೆಲೆನಿಂತೊಂದು ಶ್ರೀಮಂತ
ಸಮಾಜದಲಿ ಮಹಾ ಸನ್ಮಾನ್ಯತೆಯಂ ಪಡೆದ
ಗಣ್ಯವ್ಯಕ್ತಿ ಅನಂತಯ್ಯ ಧಾರೇಶ್ವರಂ
ವೃತ್ತಿಯಲಿ ಜಿಲ್ಲಾಧಿಕಾರಿ. ಅನನ್ಯ ಅನುಭವ
ಘನಿಸಿ ಸದ್ಗುಣಗಳ ಗಣಿಯೈಸಿದ ಮಹನೀಯಂ. →

ಸಹಧರ್ಮಿಣಿ ಗಿರಿಜಾಬಾಯಿ ಮಂಗಳಾಂಗಿಯುಂ
ವಿದ್ಯಾ ಸುಸಂಸ್ಕೃತೆ. ಉನ್ನತ ಕುಟುಂಬಿನಿ ಮೇಣ್
ಸಕಲ ಸದ್ಗುಣ ಸಂಪನ್ನೆಯುನೆ ಸತ್ಯಸುಂದರಿ.
ಸಂಜೀವನ ಸೌಶೀಲ್ಯದಿಂ ವಿಜೃಂಭಿಸಿದ
ಪರಮ ನಾರೀಮಣಿ.

ಸನ್ ಸಾವಿರದೊಂಭೈನೂರಮೂರ.
ನೇ ಶಕವರ್ಷದ ಏಪ್ರಿಲ್ ತಿಂಗಳ ಮೂರನೇ
ತೇದಿ ! ಸಡಗರ ಸಂಭ್ರಮಗಳಿಂದೆ ಸಂಭವಿಸಿ,
ಭಾರತ ಜನನಿಯ ಕೀರ್ತಿ ಪತಾಕೆಯಂ ಆರ‍್ಯೈದಾ
ಅನನ್ಯ ಅನುಪಮ ತೇದಿ ! ತನಿವೆಳಗಿನಲಿ ನವ
ನವೋದಿತ ಸ್ವರ್ಣಾರುಣನ ಉಜ್ವಲೋಜ್ವಲಿತ
ಸೌಂದರ್ಯರಾಶಿಯುಲಿ ಪಡಿಮೂಡಿದ ಸುಸುಂದರ
ದಿನ. ಸುರಸುಂದರ ಇನ. ಸುಂದರಾತ್ಮಕ
ಚಣ. ಪರಿ ಭಾವಿಸಿದೊಡೆ ಸೌಂದರ್ಯ ಶೀಲತೆಯೆ
ಎಲ್ಲ. ಸೌಂದರ್ಯಮಂ ಕಡೆದು ಮಥಿಸಿ ಮಥಿಸಿ
ನವನೀತಮಂ ತೆಗೆದ ಪಾಂಗಿನಲಿ ಸೌಂದರ್ಯ
ಶ್ರೀತಾನಾಗಿ ಸಂಜನಿಸಿತೊಂದು ಪರಿಪುಣ್ಯ
ಶಿಶು ದಂಪತಿಗಳ ಕಣ್ ಬೆಳಕಾಗಿ. ಆನಂದ
ಪ್ರೇಮ ಸಂಭ್ರಮಗಳ್ ಒಗ್ಗೂಡಿದ ತ್ರಿವೇಣಿ
ಸಂಗಮದಲಿ ಮುಳುಗೆದ್ದರಾ ದಂಪತಿಗಳ್.

ಮಾಸಾಂತ್ಯದಲಿ ಅನೇಕ ಬಂಧುಮಿತ್ರ ಬಳಗದ
ಸಮಕ್ಷಮದೊಳ್ ನಾಮಕರಣ ಮಹೋತ್ಸವಂಗೈದು
ಮುದ್ದು ಶಿಶುವಿಂಗೆ ಕಮಲಾದೇವಿ ಎಂಬನ್ವರ್ಥ
ನಾಮಕರಣಂಗೈದು ತೋಷಮಂ ಸಂತೋಷಿಸಿದರ್. →

ಮುದ್ದು ಶಿಶು ಮುದ್ದುಮುದ್ದಾಗಿ ಬೆಳೆಯುತಿರ್ದುದು
ತನ್ನ ಭಗಿನಿಯೊಡಂ. ನೀರೆರೆದ ಎಳೆಯ ಬಾಳೆ
ಸಸಿಯೊಲ್, ಗರಿ ಮೊಳೆತ ಹಕ್ಕಿಮರಿಯೊಲ್, ತಾಯಿ
ಉಡಿಯ ಜಿಂಕೆ ಮರಿಯೊಲ್ ಆನಂದ ಭೋಗದಿಂ
ನಲಿನಲಿಯುವಳ್ ಪೆತ್ತವರ ಬಲ್ಮೆಯೈಸಿರಿಯ
ನೋಂಪಿಯಲಿ. ಅನುದಿನದಭ್ಯುದಯದಿಂ ಮನನೆರ್ಚಿ
ದಂಪತಿಗಳ್ ಸ್ವರ್ಗ ಸುಧೆಯಂ ಕಂಡರ್ ಮುದ್ದು
ಪುತ್ರಿ ಕಮಲೆಯ ಬಾಲ ಲೀಲೆಯಿಂ. ಉಜ್ವಲಿಪ
ತುಂಬು ಗಣ್‌ಗಳ ಕಾಂತಿ, ಸಂಪಿಗೆಯ ಮೊಗ್ಗಿನೊಲ್
ಸುಸುಂದರ ಮೂಗು, ದುಂಡುಮುಖ, ಕಪ್ಪುಕೂದಲ
ಪ್ರಭಾಳೆಯಿಂ ಸುಶೋಭಿಸುತೆ ಆಡಾಡಿ ಪಾಡಿ
ಎಳೆ ನಗುವಿನ ಮೃದು ಮಧುರಲಹರಿಯಂ ಹರಿಸಿ
ಕುಣಿವಳ್ ಥಕಥೈ ಥಕಥೈ ಪಾರ್ಥಿವ ಕುಮಾರಿ.
ಐದು ಸಂವತ್ಸರಗಳೆಂತು ಕಳೆದುವೊ ಅಂತಂತು
ಮುಂಬೆಳೆದು ಮುದ್ದುಮಾತುಗಳ ಝರಿಯಂ ಹರಿಸಿ
ಎಲ್ಲರ ಮನಮತಿಯಂ ಸೆಳೆದು ನೆರೆ ಮುತ್ತುಗಳ
ಸೇಸೆಯಂ ಪಡೆದು ತುಷ್ಟಿಯಿಂ ಪುಷ್ಟಿಯಿಂ ಮೈ
ದುಂಬಿದಳ್ ಕಮಲಮುಖಿ. ಸಗ್ಗದಿಂದೈದ ಸಗ್ಗ
ಸಿರಿಯೊ, ಆವ ಗುರುಕೃಪೆಯೊ, ಚಿನ್ನದ ಬೊಂಬೆಯೊ,
ಬೆಣ್ಣೆಯ ಪುತ್ಥಲಿಯೊ, ಗಂಧರ್ವ ಬಾಲೆಯೊ ಎನಲ್
ಸರ್ವಾಂಗ ಸೌಂದರ್ಯದಿಂದೊಪ್ಪಿ ಚಿಗರಿಯೊಲ್
ಲವಲವಿಕೆಯ ಬೀಡಾದಳ್ ಎಲ್ಲರ್ಗೆ ಮುದ್ದಿನ
ಕುವರಿ ಕಮಲಾದೇವಿ.

ಸನಿಹದಲಿ ಮೈವೆತ್ತು

→

ಬಹು ಮಕ್ಕಳಿಂಗಾಶ್ರಯವಿತ್ತು ಪೊಸ ರೂವಿನ
ಕಾನ್ವೆಂಟ್ ಕೈವೀಸಿ ಕರೆದತ್ತು ಪ್ರಸನ್ನ
ತೇಜದಲಿ. ಸುವಿದ್ಯಾ ಸರಸತೀ ದೇವಿಯುಂ
ಈಧರಾತಲದೊಳಿನ್ನು ಒಗ್ಗಾಲೊಳ್ ನಿಂದಿಹ
ಕಾಲಮಾನಂ. ಅಕ್ಷರದನೇಲಕ್ಕರೆಯುಂ
ಮೂಡಿರದ ಜನಕೋಟಿ. ಜಡ ಭರತತೆಯ ಘೋರ
ರೂಪು ಎಲ್ಲೆಡೆಗಳಲಿ ಎನಲ್ ಸಮುಯಕ್ಕೊದವಿ
ಆಶ್ರಯವನು ನೀಡಿದ ಕಾನ್ವೆಂಟ್ ಸಾಕ್ಷಾತ್
ಸರಸ್ವತಿಯ ದಿವ್ಯ ದೇಗುಲ ಮಾದತ್ತು
ಅಕ್ಕರದೊಳಕ್ಕರೆಯುಳ್ಳ ಚಿಣ್ಣ ಮಕ್ಕಳಿಗೆ.
ಉತ್ಸುಕ ಮನದ ಕಮಲನಾಸುನೆಗಾ ಶಾಲೆಯುಂ
ಸ್ವರ್ಗತುಲ್ಯಮಾಯ್ತು; ಸರಸ್ವತಿಯ ಗುಡಿಯಾಯ್ತು;
ಚಿಣ್ಣರಾಟಕೂಟದ ಸನ್ಮಂದಿರಮಾಯ್ತು.
ಪೆತ್ತವರಿಗೆ–ಶಿಕ್ಷಕಿಯರಿಗೆ ತೋಷವುಕ್ಕುವ
ಸಿರಿ ಬುಗ್ಗೆಯಾಯ್ತು ಆ ದಿವ್ಯ ಕಾನ್ವೆಂಟ್ !
ಇತರ ತರತರದ ಪಕ್ಷಿಗಳ ಮಧ್ಯೆ ಬೆಳ್ಮೆಯಿನ
ಹಂಸೆಯೊಂದು ಮೆರೆದವೊಲಾಯ್ತು ಎನೆ ಸಲ್ವವೊಲ್
ಹಲವಾರು ಚಿಣ್ಣರ ನಡುವೆ ಕಮಲಾದೇವಿಯ
ಸೇರ್ಪಡೆಯದು ಸರ್ವಾಂಗ ಸುಂದರವೇ ಆಯ್ತು.
ಆಟಪಾಟದಲಿ ಮುಂದೆ, ನಲ್ವಾತಿನಲಿ ಮುಂದೆ,
ಓದು ವಿದ್ಯೆಯಲಿ ಮುಂದೆ, ಕುಣಿದಾಟದಲಿ ಮುಂದೆ,
ಎಲ್ಲ ವಿಷಯ ವಿಪ್ಲವಗೊಳಿಪಂತೆ, ಕತ್ತಲೆಯ
ಜಡಿಕುಟ್ಟಿ ಓಡಿಪಂತೆ ಬೆಳ್ದಿಂಗೆಯ ಚಂದ್ರಿಕೆ !
ಪೂವಿಂದೆ ಪೂವಿಂಗೆ ಪಾರ್ವ ಮರಿದುಂಬಿಯೊಲ್

→

ನೈಮನಸಗಳ್ ಗರಿಹಗುರ ಎಂಬಿಸಂ ನಲಿಯುತಲಿ
ಗೃಹದಿಂ ಶಾಲೆಗೆ ಪಾಸ್ವಳಾ ಲಲಿತ ಕುಮಾರಿ.
ದಿನದಿನಂ ನೋನೋಕ್ಸ್ಪ ಕುಡಿನೋಟದ ಕುದಿಟ್ಟ
ತಾಗಿ ಕುವರಿಗೆಲ್ಲಿ ಕೇಡಪ್ಪುದೊ ಎನುತೆನುತೆ
ಮುದ್ದುಮಗುವಿನ ಕಪೋಲಪಾಲಿಯಲಿ ಕರ್ಪಿನ
ಬೊಟ್ಟಿಟ್ಟು ಕಳಿಪುವಳ್ ತಾಯಿ ದೋಷ ಪರಿಹರಿಸೆ.
ಮತ್ತಮಾಗಳಾಗಳ್ ಮೊಗಂ ನಿಳುಪಿ ಲಟಲಟ
ಲಟಿಕೆಯಂ ಮುರಿಯುವಳ್ ಮನಪಾರೆ ಮುದ್ದಿಟ್ಟು ;
ಶನಿದೇವರಿಂಗೆ ಹರಕೆವೊತ್ತು ಕೈಮುಗಿದಳ್.
ಮಾತೆ ಗಿರಿಜಾಬಾಯಿ ಮಂಗಳಾಂಗಿ.

ಅಂತಿಂತು

ಸಂದುಹೋದುವೆರಡು ವರ್ಷ ಮಾಸಂಗಳ್
ಸಂಚಿತ ವೇಶದಲಿ. ಆವ ಕುಗ್ರಹದತಿ
ಕೂರದೃಷ್ಟಿ ಬಿಳ್ದುದೊ, ಮತ್ತಾವ ಪಿಶಾಚಿಯ
ಕಿಡಿಗಣ್ ಸಿಡಿದುದೊ, ಇನ್ನದಾವ ಕಡು ಧೂರ್ತರ
ನೀಚದೃಷ್ಟಿ ತಾಗಿದುದೊ ಎನಲಾ ಅನಂತಯ್ಯ
ಧಾರೇಶ್ವರ್ ತೀವ್ರತಮ ರೋಗರುಜೆಯ ವ್ಯಗ್ರ
ರುದ್ರಮುಷ್ಟಿಯಲಿ ಸಿಲ್ಕಿ ರುಗ್ಣಶಯ್ಯೆವಿಡಿದಂ !
ಗಿರಿಜಾಬಾಯಿ ಮಂಗಳಾಂಗಿಯುಂ ಪಂಡಿತರ,
ಧನ್ವಂತರಿಗಳ, ಘನವೈದ್ಯರ ಮರೆಹೊಕ್ಕು
ವೈದ್ಯೋಪಚಾರಮಂ ಕೈಕೊಂಡಳ್.

ಎನಿತೆನಿತು

ಶ್ರಮಿಸಿ ಶತ ಸಾಧನೆಸುಂಗೈದು ಹರಕೆಯಂ
ಪೊತ್ತು ಕಂಡಕಂಡ ಗುಡಿಗೋಪುರಗಳಲಿ ಸತ್

→

ಸೇವೆಯಂ ಸಲಿಸಿಯುಂ ಕೈಗೂಡದಾಯ್ತಲಾ
ಅನಂತಯ್ಯನ ಆರೋಗ್ಯಭಾಗ್ಯಂ. ಆವುದೋ
ಕುಗ್ರಹಂ ಚಂಡಭಂಡತನದಿಂ ರೋಷದುಸಿರ್
ಬಿಡುತಿರ್ದುದೊ ಎನೆ ದಿನದಿನಂ ರೋಗಂಪೆರ್ಚಿ
ಓಷಧಿ ಕಷಾಯಂಗಳ್ ಒಗ್ಗದೆ ನೆರೆಸೊರಗಿ
ಸುಱುಂಟಿ ನರಳಿ ಶರೀರ ಸಂಪುಟಂ ರೋಗದ
ಭಾಱದಿಂ ಜಜ್ಜರಿತಮಾಗಿ ಒಣಕಾಷ್ಠಮಾಯ್ತು.
ಬಂಧುಜನ ಮಿತ್ರಜನ ಪರಿಜನ ಸುತ್ತುವಱಿದರ್.
ಆಱಿರ್ದೊಡೇಂ ? ಮಿೞ್ತು ಮಹರಾಯು ಪಿಂದಿಱುಗಿ
ಪೋದಪನೆ ಬಱಿಗೈಲಿ ? ಅನಂತಯ್ಯ ಮಱಣಿಸಿ
ಮಡದಿ ಮಕ್ಕಳಂ ಕೈವಿಟ್ಟಂ ನಡು ಹಾದಿಯಲಿ,
ಸರ್ವತೋಮುಖೀ ಜೀವನನಂ ಕಾಲದೆಶೆಗೊತ್ತಿ.

ಮಱಣ ಶಯ್ಯೆಯೊಳಿರ್ದಾಗಳೊರ್ಮೆ ಸುಪುತ್ರಿಯಂ
ಬಳಿಗೆ ಕರೆದು ಕೇಳ್ದಂ ಅನಂತಯ್ಯ “ಕುವರೀ !
ಮುಂದೆ ದೂರ ಭವಿಷ್ಯದಲಿ ನೀಂ ಏಂಗೈದಪೆ ?
ಏನಾಗಬಯಸುವೆ ಪೇಳ್ ?”
ಆರೇಳು ವರ್ಷದ
ಬಾಲಕಿಯು ಏನೊಂದಂ ನುಡಿಯದೆಯೆ ನೋಡಿದಳ್
ಪಿತನ ಸೊರಗಿದ ವದನಬಿಂಬವಂ
“ಕೇಳೆನ್ನ
ಮುದ್ದು ಕಮಲೆ! ಅದ್ಭುತ ಕೊಳಕು ಮಂಡಲವಾಗಿ
ನಾಱುತಿಹ ಈ ಮನುಕುಲವಂ ತೊಳೆದು ಬೆಳಗಿಪ
ಕಾರ್ಯಮಂ ಕೈಕೊಂಡು ರಾಷ್ಟ್ರವನುದ್ಧಱಿಸು !”
ಕಮಲಾದೇವಿಯುಂ ಮಱುನುಡಿಯದೆಯೆ ಕಂಬನಿ

→

ಸೂಸಿದಳ್ ಎಸಳ್ಗಂಗಳಲಿ. ಧಾರೇಶ್ವರರ್
ಮತ್ತೆಂದರ್ "ಮಗಳೇ! ಜ್ಞಾನಿಸುಮನಮುಂಮಥಿಸಿ
ನೀಂ ಧೀಶಕ್ತಿಯುಳ್ಳ ಧೀಮಂತೆ! ನೆನಪಿರಲಿ
ಎನ್ನಯ ಅಭಿಲಾಷೆ."
ಕುಮಾರಿ ತಲೆಯಾಡಿಸುತ
ಸಮ್ಮತಿಯನು ಸೂಸಿದಳ್ ಗಂಭೀರ ಗತಿಯಲಿ.
ಪುಟ್ಟ ಬಾಲೆಯು ಸ್ಮೈಯೊಳ್ ಬಿಸಿ ನೆತ್ತರ್ ಹರಿದುದು
ಜಳಜಳಿಸಿ. ಹನಿಗಣ್ಣಿನ ಬಾಲಕಿ ಉತ್ತರಿಸೆ
ಬಾಯಿ ಬಾರದೆ ಮಿಣ್ಣನಾದಳ್. ಅನಂತಯ್ಯ
ಮತ್ತೆಂದರ್ "ಮಗಳೇ! ನಿನ್ನೊಳಿನಗೆ ಪೂರ್ಣ
ನೆಚ್ಚಿಹುದು. ನೀನೆನ್ನ ಪ್ರತಿಭಾನ್ವಿತ ಕುವರಿ.
ನಿನಗೆ ಸರ್ವತ್ರ ಸದಾ ದೈವರಕ್ಷೆಯಿರಲಿ."
ಆ
ಮಾತಿಂಗೆ ಕಮಲಾದೇವಿಯುಂ "ಆಯ್ತು, ನಿಮ್ಮಯ
ಆಶಯಮೆ ಎನ್ನಾಶಯಂ" ಎಂದಳ್ ನಯದಿಂ.

ಅನಂತಯ್ಯ ಧಾರೇಶ್ವರ್ ಧರೆಯೊಳ್ ತನುವಿಟ್ಟು
ನೇಪಥ್ಯಕೆ ಪುಟನೆಗೆದ ಬಳಿಕಂ ಸಾಮಾಜಿಕ
ಪ್ರಭೃತಿಗಳ ಶಾಸ್ತ್ರ ಸೂತ್ರಂ ಕೊರಳ್ಗಿತ್ತು ಮಿಗೆ
ಒತ್ತುತಲಿ ಪರಮಸತಿ ಗಿರಿಜಾ ಬಾಯಿಯುಂ
ಮಣಿಯದೆ ಬೆದರದೆ ಪಿಡಿದಳ್ ನೇರ ಹಾದಿಯಂ.
ಮಕ್ಕಳೆಂದಿನಂತೆವೊಲ್ ಕಲಿಸರ್ ಕಾನ್ವೆಂಟ್
ಶಾಲೆಯ ಸುಖಾಶ್ರಯದೊಳ್. ಸ್ವಚ್ಛಂದಮಾನಂದ
ಮೋದದಲಿ ವರ್ಷಮಾನಸೆಂತೈದುವಂತಂತು
ಭಂಗ ಬನ್ನಂಗಳಂತಂತು ಬಂದು ಸಂದುವು
ಸದಾಕಾಲಂ ನೆನೆನೆನೆದು ದಣಿವ ಮಾಳ್ಕೆಯಲಿ. →

ಅಂದಿರ್ದ ಸಾಮಾಜಿಕ ರೂಢಿಗನುಗುಣಮಪ್ಪಿ
ಕುಟುಂಬದ ಹಿರಿಯ ಪ್ರಭೃತಿಗಳ್ ಹಿರಿಯುಬ್ಬೆಯರ್
ಮುಂದ್ವೈದು ನೆರೆ ಮುಂದ್ವೆಸಿ ಮುಗ್ಧದುಗ್ಧಮಾನಸ
ಪ್ರವೃತ್ತಿಯ ಮುದ್ದು ಮಗು ಕಮಲಾದೇವಿಯಾ
ಲಗ್ನಮಂ ನಿಶ್ಚಯಿಸಿದರ್, ಬಾಲವಟುವನಾಯ್ದು.
ಸಡಗರ ಸಂಭ್ರಮಗಳ್ ಉಕ್ಕಿ ಹರಿಯುತ್ತಿರಲ್
ಮೂದಿನಗಳ್ ಶಾಸ್ತ್ರ ಸೂತ್ರಗಳಿಂ ತುಂಬಿದ
ಮದುವೆ ನಡೆದುದು ಭೂರಿ ಭೋಜನದೊಡಂ ; ನೆರೆದ
ಅತಿಥಿ ಅಭ್ಯಾಗತರಂ, ದೇವ ಬ್ರಾಹ್ಮಣರಂ
ನೆರೆ ಸತ್ಕರಿಸಿದರ್ ಅತುಲ ಅಕ್ಕರೆಯಿಂದೆ.
ಬಾಳು ಬದುಕಿನ ಅರ್ಥಗಿರ್ಥವನಿನಿತರಿಯದೆ
ಎಳೆಯರೊಡನೆ ನಗೆಮಾತುಗಳ ಚಿನ್ಮುತ್ತುಗಳಂ
ಚೆಲ್ಲಿ ಸೂಸಿ ಅಂಗೈಲಿ ಆಡುವ ಗಿಳಿಮರಿಯೇಂ
ಬಲ್ಲುದು ? ಹೊಸ ಸಿಂಗರದಾನಂದ ಸಿಹಿಯೂಟ
ಕೂಡಿ ವೈಭವೀಕರಿಸಿದ ಲಗ್ನಮಂಟಪಂ
ಎಳೆಯರಾಟಕೊಂದು ನಲ್‌ದಾಣಮೊ ಎನೆ ಕುಣಿದು
ಕುಪ್ಪಳಿಸಿದರ್ ಪುಟಪುಟಿವ ಸೆಂಡಿನ ತೆರದಲಿ.
ಬಾಲೆ ಕಮಲಾಂಗಿಯುಂ ಓರಗೆಯ ಚಿಣ್ಣರೊಡಂ
ನಕ್ಕು ನಲಿದಿರೆ, ಬೊಬ್ಬಿಡುವ ವಾದ್ಯ ಗಾನದಿಂ,
ಮಾತುಗಳ ಮರ್ಮರೋಲ್ಲಾಸದಿಂ, ಬ್ರಾಹ್ಮಣರ
ಮಂತ್ರೋಚ್ಚಾರಣೆಯಿಂ ಗದ್ದಲಮಯಮಾಗಿಹ
ಕಲ್ಯಾಣ ಮಂಟಪದಲಿ ಜನನಿಯ ತೊಡೆಯಮೇಲೆ
ಕುಳ್ಳಿರ್ದು ಮಾಂಗಲ್ಯ ಧಾರಣೆಗೆ ಕೊರಳೊಡ್ಡಿ
ಎಳೆನಗೆ ಹರಿಸಿದಳ್ ಮುದ್ದು ಬೊಂಬೆಯಂ ಹೋಲಿ !

→

ನಾರೀಮಣಿಯರ್ ಹಾಡಿ ಪಾಡಿದರ್ ರಾಗಾ
ನುರಾಗದೊಳ್. ಪರ ರಾಗಮಾಲಿಕೆಯು ಹಿಂದಿನ
ದಾರಣ ದಮಸ ನೀತಿಯುಂ ಮೈಮಸಗೊಂಡು
ಪರಂಪರಾನುಗತಿಯಲಿ ನಲವಿಂ ಛಲದಿಂ ಮೇಣ್
ಧರ್ಮದಿಂ ಬಾಳ್ಬನದ ಕೆಂಬೆಂಕೆಯಲಿ ಸುಟ್ಟು
ಉರಿದೊಡಂ ಸ್ತ್ರೀಕುಲಜರಿಂಗೆಲ್ಲವುಂ ದಿವ್ಯ
ಸರಾಗವಿರೆ ಸರ್ವತ್ರ ರಾಗಾನುರಾಗವೇ !

ಕತ್ತಲೆಯ ಬಾಳ್‌ಬನದಿಂ ನಿರುತದ ಶೈಲಾಗ್ರಕೆ
ದಿಟ್ಟಿಯಟ್ಟಲ್ ಹೀನ ಸಮಾಜದ ಸ್ವಾರ್ಥತೆಯು
ಮಾನವೀಯತೆಯುಂ ಕೊಲೆಗೈದು ಕತ್ತಲಿಗವಿಯು
ಸದನಮೆ ಶಿವನ ಸ್ವರ್ಣಗುಡಿಯಾಯ್ತೆನೆ ಶೋಭಿಸಿ
ಜೃಂಭಿಸುವ ಜೀವನ ರಥ ಮುಗ್ಗರಿಸಿಯುಂ ದಿನ
ನಿತ್ಯ ನಡೆದಿಡೆ ಊರ್ಧ್ವ ಮುಖಿಯಾಗಿ. ಮುವ್ಮಾತು-
ನಲ್ಮಾತುಗಳ ಪರಾಕಾಷ್ಠೆಯಲಿ ಜಗಮರೆತು.

ಮದುವೆಯ ಬಳಿಕ ಸಡಗರ ಸಂಭ್ರಮಗಳ್ ಅಳಿದುವು
ಮೈಮುರುಟಿ. ಬಾಲೆಯುಂ ಬೆಳೆದು ಬಲಿತು ಷೋಡಶ
ವರ್ಷಮಾನಂ ಉರುಳುವನಕ ತಾಯುಡಿಯ ಹಕ್ಕಿ
ಮರಿಯಾಗುಳಿವ ದಿವ್ಯ ರೂಢಿಯೊಳ್ ಉಳಿದಳಾ
ಬಾಲೆ ಕಮಲಾದೇವಿಯುಂ ತಾಯಿಯ ಬಳಿಯಲಿ.

ಕಮಲಾಯತಾಕ್ಷಿ ಕಮಲಾದೇವಿಯುಂ ನಿಚ್ಚ
ಬಾಲಲೀಲಾ ತೋಷದ ಹರಿಗೋಲನ್ನೇರಿ
ಕಾಲದ ಹೊಳೆಯಲಿ ತೇಲುತ್ತೆ ವಿದ್ಯಾಸಂಸ್ಥೆಯ
ಅಂಗಳಿಯೆನೆ ಮೆರೆದಳ್ ಮುದ್ದು ಮುಖದ ರಾಗಿಣಿ. →

ತೃಷಾಪೂರ್ಣ ಸೂತ್ರದಿ ಬಂಧಿತಳೊ ಎನಲ್ಕೆ
ಕಳೆದತ್ತು ಗಳಿಗೆಗಳ್ ದಿವಸಗಳ್ ಮಾಸಗಳ್
ವರ್ಷಮಾನಂಗಳ್ ಪರಿದೋಡುವ ಜಲಧಿಯ ತೆರದಲಿ.
ಕಾಲಮಾನವುಂ ಸರಾಗ, ಬಾಲ್ಯಮುಂ ಸರಾಗ,
ವಿದ್ಯಾಭ್ಯಾಸಮುಂ ಸರಾಗ. ಬಾಲೆಯ ಮನೋಗತಿ
ಗಾಳಿಯೊಲ್ ಸರಾಗ ಎನಲ್ಕೆ ಪ್ರಾಣ ಗರಿಹಗುರ !

ಆವ ದೈವದಾಣತಿಯೊ ಪತಿಯೆಂಬ ಬಾಲಕಂ
ದುರ್ವಿಧಿಯ ರುದ್ರಮರಣ ಶಾಸನದ ಕೇಳಿಗೆ
ಸಿಲ್ಕಿ ಘೋರ ಮರಣವನ್ನೊಪ್ಪಿ ಸ್ವರ್ಗದಾಣಕೆ
ತೆರಳಿದಂ, ಸಂಸಾರದ ಕರ್ಮಯೋಗಕೆ ತಾಂ
ಸಿಲುಕದೊಲ್. ಘೋರ ದುಃಖ ವಾರ್ತೆಯುಂ ಮನೆಮನೆಯಂ
ಮುಟ್ಟಿ ಸುಟ್ಟಿತು ಕಾಳ್ಗಿಚ್ಚಿನೊಲ್. ಬಂಧು ಬಳಗಂ
ಮುಳುಗಿದುದು ದುಃಖಸಾಗರದಿ. ಆ ಅಳುಗೋಳು
ಕಮಲಾದೇವಿಯ ಕರ್ಣಮಂ ಕೋರೈಸಿತು, ಕಾದ
ಶೀಶದೊಲ್. ಆದರಾ ದುಃಖಬಾರ್ತೆಯ ಹುರುಳ್
ಅರಿಯದ ಎಳೆಮನ ಕುಗ್ಗದಿನಿತು ಮುಳುಗಿತು ದಿನ
ಚರಿಯೊಳೆಂದಿನಂತೆ. ಬಳಗದ ದುಃಖಸಂಕಟದ
ಅಳಲಂ ನೋಡಿಯುಂ ಬಾಲೆ ಇರ್ದಳ್ ನಿಶ್ಚಿಂತೆ
ನಿರಾತಂಕದ ಭಾವನೆಯಲಿ, ಸುತ್ತಮುತ್ತಿನ
ಜೀವನಗತಿಗೆ ತಲೆಮಣಿಯದೆಯೆ. ಪೆತ್ತಮ್ಮ
ಗಿರಿಜಾಬಾಯಿ ಮಂಗಳಾಂಗಿಯುಂ ಮುದ್ದಿನ
ಕುವರಿಯ ಘನ ಘೋರ ವೈಧವ್ಯಕೆ ಮರುಗಿದಳ್
ಕರಗಿದಳ್ ಬಿಸಿಲಟ್ಟದ ಮಂಜಿನೊಲ್. ಕೆಲದಿನ
ಮಾನಂ ಕಳೆವನಿತರೊಳ್ ಪತಿಯ ಕುಟುಂಬಿಗರ್

→

ಮುಂದ್ವೈದು ಕಮಲಾದೇವಿಗೆ ಉಂಬಳಿಯಾಗಿ
ಮದುವೆಯುಂದು ತಾವಿತ್ತ ಒಡವೆವಸನಗಳಂ
ಸೆಳೆದೊಯ್ದು ಸೊಸೆಯಂ ಕೈವಿಟ್ಟರ್ ಸುಲಭದಲಿ !

ಕ್ರಮಾನುಕ್ರಮದೊಳ್ ಪರಿಸರದಲೆನಿತೆನಿತೊ
ಬಂಧು ಬಳಗದ ಮುಗ್ಧ ದುಗ್ಧ ಬಾಲೆಯರ್ ಅತಿ
ದುರದೃಷ್ಟ ಪರವಶತೆಯಿಂದೆ ಪತಿಯಂ ಕಳೆದು
ಕೊಂಬ ದುರ್ಯೋಗಕೆ ತುತ್ತಾದರ್. ಮುಗ್ಧೆಯರ
ಮನೋಗತಿಯನಿನಿತೂ ಲೆಕ್ಕಿಸದೆ ನಿರ್ದಯೀ
ಕುಟಂಬಿಗರ್ ಮಂದ್ವೈಸಿ ಮುಂದ್ವೈದು ಸುಮಂಗಳೆಯ
ಮಂಗಳ ದ್ರವ್ಯವಂ ಕಳೆದು ವಿಧವಾ ವ್ರತಮಂ
ಹಿಡಿಸಿದರ್ ! ಕ್ಷೌರಿಕನ ಮುಂತೆ ಎಳೆತಂದು ನಿಲ್ಲಿಸಿ
ತಲೆಗೂದಲ್ ಬೋಳಿಸಿ ಕಗ್ಗೆಂಪಿನ ಬಣ್ಣಂ
ಕಾರ್ವ ರಕ್ತಾಂಬರಂ ಉಡಿಸಿದರ್ !
ಎಳೆ ಹೃದಯ
ಕಡುನೊಂದು ಹಾಹಾಕರಿಸುತಿರೆ, ಅಮಾನವೀಯ
ಕೃತ್ಯವಂ ಕಂಡು ಮರ್ಮರ ಮರುಗಿ ಕರಗಿದ
ಕಮಲಾನನೆ ನಿಡುಸುಯ್ದುಳ್ ದಿಕ್ಕೆಟ್ಟು ಮತಿಗೆಟ್ಟು
ಬೆಕ್ಕಸದಿಂ ಬೆರಗಾಗಿ. ಆದೊಡೇಂ ? ಕಣ್ಣಿಂದೆ
ನೋಡಿಯುಂ ಪಿಣ್ಣನಿರ್ಪುದಲ್ಲದೆ ಬೇರೆಗತಿ
ಇಲ್ಲವೆನೆ ದುಃಖಾಶ್ರು ಹನಿತುವು ಮುತ್ತಾಗಿ
ದುಂಬಿಗಣ್ಣುಗಳ ಅಂಚಿನಲುದಿಸಿ ಬಾಲಕಿಯ.

ಹಾ ! ಏನುಮಿದೇನೆನುತೆ ಮನಮತಿಗಳ್ ನೆರೆ
ನೊಂದು ಹಾಹಾಕರಿಪ ಸಮಯದೊಳ್ ತನ್ನಮನೆಯ
ಹಿರಿಯ ವ್ಯಕ್ತಿ, ನಲ್ಮೆಯ ದೊಡ್ಡಮ್ಮನುಂ ಪತಿಯಂ →

ಕಳೆದುಕೊಂಡಳ್ ಕ್ರೂರ ದುರ್ವಿಧಿಯ ರುದ್ರತಮ
ಪಾಶಕೆ ಸಿಲುಕಿ. ಆಗಳೇಂ ಸಾಮಾಜಿಕರ
ಗಜಬಜಂ? ವಿಧವೆ ದುಃಖದಿಂ ತಹತಹಿಸುತಿಱಲ್
ಮಾನಿಸಿದರೇ? ಕರುಣೆದೋಱ್ದರೇಂ ? ಮುಂದಾಗಿ
ಸಾಮಾಜಿಕ ದುಷ್ಕರ್ಮವಂ ಲೀಲಾಜಾಲದಿಂ
ಪ್ರೋತ್ಸೈಸಿದರ್ ಒಮ್ಮನದಿಂ ! ಆ ಚಿಱ ದುಃಖಿನಿಯ
ಸಂಕಟಕೆ ಮಱುಗಿದರಿಲ್ಲ. ನೋವುಂಡವರಿಲ್ಲ.
ಅನ್ನೆಬಱಂ ದೂಱದೂರದಿಂ ಕಂಡಿರ್ದ ಕಡು
ಧೂರ್ತಮತಿಯ ದುಷ್ಕರ್ಮದ ವಿಚಿತ್ರ ದರ್ಶನಂ
ಮನೆಯೊಳಾಯ್ತು ಬಾಲೆಯ ಕಣ್ಮುಂತೆಯೆ ! ಆಗಳ್
ಎಳಮನಂ ಕೆಱಳಿದ ಎಳೆ ನಾಗಿನಿಯೊಲ್ ನಿಚ್ಚ
ಜಂಜಡದಲಿ ಸಿಲ್ಕಿ ತಹತಹಿಸಿದತ್ತು ಪಱಮ
ಚಿಂತನಾವೇಶಾವೇಶದಲಿ ಮುಳುಗಿ. ಕಮಲಾ
ದೇವಿಯುಂ ದುಃಖಸಂಕಟಕೋಪಗಳ ಭವ್ಯ
ಕಾನನದಲಿ ಚರಿಸಿಯುಂ, ಕಂಬನಿಯ ಕಡಲಲಿ
ಮುಳುಗಿಯುಂ ತಾನೇಂಗೈಯಲಾಱದ ಸ್ಥಿತಿಯಲಿ
ಇರುತಿರ್ದು ಏಕಾಂತ ಚಿಂತನೆಯಲಿ ಕಳೆದಳ್
ಕಡು ಮೂರ್ಖ ಮನಮತಿಗಳ ದೌರ್ಭಾಗ್ಯಕೆ ಮಱುಗಿ.

ಮುಂದೆ, ತನ್ಮಾತ್ಮಕತೆಯಲಿ ಪ್ರೀತಿಯ ದೊಡ್ಡಮ್ಮನ
ದುಃಖ ಪ್ರಕರಣಮಂ ಕುಱಿತು ಕರಿಯಕ್ಕರದ
ಮಾಲೆಯಲಿ ರುದ್ರಭೀಷಣ ಚರಿತೆ ಹೊಮ್ಮಿದುದು
ಒಡಲಿನ ಕಡು ಸಂಕಟದ ಧಾರೆಯನು ಹರಿಸಿ ;
ಭಾರತ ವರ್ಷದ ಪೆಣ್ಮಣಿಯರ ಸಂಕಷ್ಟಗಳ
ರಣಗೋಳಿನ ಬಾಳ್ ಬದುಕಂ ಬಣ್ಣಿಸುವಂತೆ. →

ಏಕಾಂತ ಭಾವನೆಯು ಏಕಾಂತ ಚಿಂತನೆಯು
ಏಕಾಂತ ಸಾಧನಾ ಶೀಲತೆಯು ಭವಿಷ್ಯವ
ನೆನೆವಳ್ ಮನವಮತಿಯುಂ ಮಸಗಿಮಸಗಿ. ಅನನ್ಯ
ಶ್ರದ್ಧಾನಿಷ್ಟೆಯು ಸಮ್ಯಕ್‌ದೃಷ್ಟಿಯುಂ ಎಲ್ಲೆಲ್ಲಿ
ಯಾವ್ಯಾವೆಡೆಯಲಿ ಹರಿಸಿದೊಡಲ್ಲಿ ಕಾಂಬುದದು
ಅತ್ಯದ್ಭುತ ಕುಂದುಕೊರತೆಗಳ ಉಗ್ರಾಣವೇ!
ಭಾರತೀಯರ ದಿವಿನಾದ ವೇದ ಸಂಸ್ಕೃತಿಯುಂ
ಎನಿತೆನಿತುವಿರಿದೊ ಅನಿತನಿತು ಕೀಳರಿಮೆ ಜಡ
ಮನವಮತಿಗಳಲಿ ಎನೆ ಬಲು ಚಿಂತನೀಯಮೆನ್ನಿಸಿ
ಅನನ್ಯ ಹೃದಯ ದ್ರವ್ಯ ದ್ರವಿಸುವುದು ಮರುಕದಿಂ.
ನೇಹಿಗರ ತಂಡದೊಡಂಗೂಡುತೆ ಭವಿಷ್ಯದ
ಕಾರ್ಯವಾಹಿಯುಂ ಕುರಿತು ವಿವೇಚನೆಯದ್ಭುತ
ಕರ್ತ್ತರಿಗೆ ಮನಗುಡುವಳ್ ಭವ್ಯ ಭವಿತವ್ಯದ
ವೇದಿಯನ್ನೇರಿ. ಹೆಂಗಳೆಯರ ಮುಗ್ಧ ಮನವಂ
ಇನ್ನಿನಿತು ಕಟ್ಟಲೆಗವಿಯಲಿ ಅದುವಿಡುವ ಅರ್ಥ
ಹೀನ ತಥ್ಯಹೀನ ನಯವಂಚನೆಯು ಶಾಸ್ತ್ರದ
ಸಂಕೋಲೆಗಳಿಂ ಬಂಧಾನುಬಂಧಿತವಾದ
ರಣಗೋಳಿನ ಕಣವಂ ನೆನೆಯುವಳ್ ಎಡೆವಿಡದೆ.
ಈ ಎಲ್ಲವಗೆಯು ಕಷ್ಟಗಳ ಪರಿಹಾರಮೆನೆ
ಸ್ತ್ರೀಜನರ ಮನೋವಿಕಾಸವಲ್ಲದೆ ಬೇರಿಲ್ಲ;
ಎಂಬೊಂದು ಆತ್ಮ ನಿರ್ಣಯಕೆ ತಲೆಬಾಗುವಳ್.
ಪೆತ್ತಮ್ಮ ಗಿರಿಜಾ ಬಾಯಿ ಮಂಗಳಾಂಗಿಯುಂ
ನೀಡುವೊಂದು ಅನುಪಮ ಒತ್ತಾಸೆ ದಿವಿನಾದ
ಪ್ರೋತ್ಸಾಹ ಒಳ್ನುಡಿಗಳ ಚೋದನೆ ಎಲ್ಲವುಂ

→

ಪಜ್ಜೆ ಪಜ್ಜೆಯುಂ ಮುನ್ನೂಂಕುವುದು ಭಾರತದ
ಉತ್ತರೋತ್ತರಕೆ.

ಶಾಲೆಯೊಳ್ ಕಲಿವ ಮಕ್ಕಳ
ಒತ್ತಡಂ ಬಲಿಯುತಿರೆ ದಿನದಿನಂ ಕಟ್ಟುಸಿರ್
ಪೆರ್ಚೆ ರುಂದ್ರ ತಪಸ್ಸಿನಲಿ ತಹತಹಿಸುತಿರ್ದ
ಮಕ್ಕಳ ಗತಿ ಅವರ್ಣನೀಯಮಾದತ್ತು. ಬಡ
ಶಾಲೆ-ಬಡಮಕ್ಕಳಿನೆ ಕೊನೆಗಾಣದ ಬಡತನ.
ಒಳಹೊರಗೆ- ಸಂದಿಗೊಂದಿಯಲಿ ನಡೆದುದು ಶಾಲೆ
ಬಹುತರದ ಭಂಗ ಬನ್ನಗಳಿಂದೆ. ಅಸ್ವತಂತ್ರ
ಭಾರತದಲಿ ಆರ್ಥಿಕ ಅಡಚಣೆಯದು ಮಾಗದ
ಹುಣ್ಣಿನೊಲ್ ಹಿಂಸ್ರಕಂ. ಭವ್ಯ ಭವಿತವ್ಯವೆಂಬುದು
ಪರಿಭಾವಿಸಿ ನೋಡೆ, ಕನಸಿನ ಗಂಟು ಮಾತ್ರಮೇ.
ಜನಕೋಟಿಯುಂ ಹಿಂಡಿ ಹೀರುವ ಬಿಳಿಯ ಜನರ
ಪ್ರಭುತ್ವದಲಿ ಆರ್ಥಿಕ ಸ್ಥಿತಿಗತಿ ಉತ್ತಮಿಪ
ದಾರಿ ಮುಂದಿಲ್ಲದಿರೆ ಯತ್ನಿಸಿಯುಂ ಕತ್ತಲೆಯ
ದಟ್ಟತೆರೆ ಸುಮಾನಸ ಲೋಕಕ್ಕೆ. ಕಿಕ್ಕಿರಿದು
ತುಂಬಿ ಉಸಿರ್‌ಗಟ್ಟುವ ವಿದ್ಯಾರ್ಥಿಗಳ ದಿವ್ಯ
ಸಂಕಷ್ಟಮಂ ನೆನೆದು ಮನಮರುಗಿ ನೆರೆನೊಂದು
ನೀರಾದ ತಾಯಿ ಗಿರಿಜಾಬಾಯಿಯುಂ ತನ್ನ
ಹಿರಿದಾದ ಅನುಕೂಲಿತ ಬಿಡದಿಯನಿತ್ತು ನಲ್
ಮಕ್ಕಳ ಕಿನಿಸಿಗೆಯುಂ ಪರಿಹರಿಸಿದಳ್ ತುಂಬು
ಹೃದಯ ಕಲಸದ ಅಮೃತವನೊರೆದು. ಸ್ತ್ರೀಯರ
ಪರಮೋದ್ಧಾರಮಂ ಮನಮತಿಗಳಲಿ ನೆನೆನೆನೆದು.
ಸಾಮಾಜಿಕ ರಂಗದಲಿ ಪೆಣ್ಣಿಂ ಬಿಜ್ಜೆಯಿಂ

→

ದೂರವಿರಿಸಿರ್ದ ಕಾಲಮಾನದೊಳ್ ಪೆಣ್ಣೀ
ಮುಂಬರಿದು ಬಿಡದಿರ್ಪಂ ದಾನ್ನೈದುದು ಘೋರ
ತಪ್ಪಾಯ್ತು, ಕಠಿಣಕ್ರಮವಾಯ್ತು, ಉರಿಗಣ್ಣಿಗೆ.
ಒಡಲ್ಗಿಚ್ಚು ಉರಿದುರಿದು ಮತಿಮೌಢ್ಯಂ ಘನಿಸಿ
ಕುದಿಗೊಳೆ ಕೊತಕೊತ. ಕೆಸರಿಗೆ ಕಲ್ಲೆಸೆದಂತೆ
ತಿರುಗಿ ಬಿಳ್ದ ಹಿರಿಯರಿಗೆ ಮಣಿಯಲಿಲ್ಲವಾ ತಾಯಿ !

ದೃಷ್ಟಿ ಸೀಮೆಯಲಿ ಕಂಗೊಳಿಪ ಬೃಹದ್ ಇಂದ್ರ
ಗಿರಿಶೃಂಗದ ಕುಕ್ಷಿಲಂ ಪಚ್ಚವರ್ಣಾಂತ
ರೇಶಿಮೆಯ ಉತ್ತರೀಯಂ ಹೊದ್ದವೊಲ್ ಮೆರೆದು
ವಿಜೃಂಭಿಸಿರೆ ಉದಯರವಿಯ ಉಜ್ವಲೋಜ್ವಲ
ಕಿರಣಂಗಳ್ ಮುದ್ದಿಸಿ ಪ್ಲಾವಿತಗೊಳಿಸಿರ್ದುದು
ಮಿಸುನಿರಸಮಂ ಲೇಪಿಸಿ ಸಿಂಗರಿಸಿದ ತೆರೆದಿ.
ಸುನೀಲಾಂಬರದ ಪೂರ್ವೀಭಿತ್ತಿಯ ಸೀಮಾ
ಕ್ಷೇತ್ರದೊಳ್ ಸಾಲ್ಗೊಂಡು ಮೈಯೊಡೆದು ಕೆನ್ನೀಲ
ಮುಗಿಲ್ ಗುಡಿಗೋಪುರಗಳ್ ಸಂಭ್ರಮಿಸಿ ಸ್ವಾಗತಿಸೆ
ಅರುಣಾರುಣಂ ಗಿರಿಶಿಖರದ ಮೇಲೇರಿದಂ.
ಆಗಳೇಂ, ಪಕ್ಷಿ ಸಮಾಜದ ಪ್ರೇಮಾನುರಾಗದ
ಗಲಿಬಿಲಿಯು ? ಎರೆಂಕೆಗಳ ಬಿದಿರ್ಚಿ ಪಟಪಟಿಸಿ
ಕೊರಳೆತ್ತಿ ವಿವಿಧ ರಾಗ ಭಾವದ ಪ್ರಾರ್ಥನಾ
ಗೀತಾಂಜಲಿಯನರ್ಪಿಸುತೆ, ಸ್ವಾಗತಂ ಬಯಸಿ
ಹಾಡಿ ಪಾಡಿ ನಲಿದಾಡಿದುವು ಗಿಡುಮರಗಳಲಿ.
ಗಾನಯೋಗಿ ಕೋಗಿಲೆಯುಂ ಸುಸ್ವರಂ ಹರಿಸಿ
ತನ್ನೊಂದು ದಿವಿನಾದ ಪನ್ನತಿಕೆಯಲಿ ಬೀಗಿ
ಅಡಗಿದಂತೆವೊಲ್ ಕಣ್ಗೆಮರೆಯಾಗಿ ಭಕ್ತಿಯ
ಭಾವಂ ತೋರ್ದುದು ಮರದ ಎಲೆ ಹೊದರಿನಲಿ ಹುದುಗಿ. →

ವಿರಾಟ್ ವಿಶ್ವಾಂಡವಮಂ ಬೆಳಗಿತು ಚೈತ್ರಪ್ರಭಾತಂ
ಜಗಜಗಿಪ ಉಜ್ವಲೋಜ್ವಲ ಕಿರಣ ಮಾಲೆಯಿಂ.
ಬೆಕ್ಕೈಯಿನ ಬೆಳರ್ತು ಬೆಂಡಾದ ಬೆಣ್ಣೆಮುಗಿಲ್
ಅಂಚುಗಳ ಕೊರೆದು ಕೋರೈಸಿ ತೂಪ್ವ ಹೊಂಗಿರಣ
ರಾಶಿಯುಂ ನೆಯ್ದಿರ್ದುದು ಪೊಚ್ಚಪೊಸ ಅಂಚಂ.
ನಿಸರ್ಗ ಸತ್ ಸಂಪದವದು ಲೋಕ ಮನೋಹರ
ತೇಜದಲಿ ಹವಡಿಯುಂ ಆವಾವ ಬ್ರಹ್ಮಾಂಡ
ಕರ್ಮಭಾರಕೆ ಕುಗ್ಗಿ ಕಪ್ಪುಗುಬ್ಬಿದುದೊ ಎನೆ
ಜಡಜೀವನಂ ಕತ್ತಲೆಯ ಕಣದಲಿರೆ ಮಿಗೆ
ಕರುಣಾಜನಕಂ ; ದಮನೀಯ ಪಾರಾವಾರಂ!

ಕಮಲಾದೇವಿಯುಂ ನಿಚ್ಚ ಚಿಂತನೀಯ ವಿಚಾರ
ವಿಪ್ಲವದಲಿ ಮುಳುಂಗಿ ಭಾರತೀಯರ ಭವ್ಯ
ಭವಿಷ್ಯದ ಪುಣ್ಯ ವೇದಿಯಲಿ ಅಂಡಲೆಯುವಳ್
ಚಿಂತನಾದ್ರವ್ಯ ಕಲ್ಸಕ್ಕರೆಯುವೊಲ್ ಘನಿಸಿ.
ಭಾರತಾಂಬೆಯ ಪಾರತಂತ್ರ್ಯಮಂ ಕಿತ್ತೊಗೆದು
ಜನಜೀವನ ಸಂವೃದ್ಧಿ ಪಥವಿಡಿಪ ಕನಸಂ
ಕಾಣುತೆ, ಪಗಲಿರುಳ್ ತೊಳಲಿದಪಳ್ ಕಠಿಣಕಟು
ಪಂಜರ ಬದ್ಧ ಸಿಂಹಿಣಿಯಂತೆ ತನ್ನ ತಾಂ ಮಥಿಸಿ.
ಎಲ್ಲಿ, ಯಾವೆಡೆಯಲಿ ಪಜ್ಜೆಯಂ ಮುಂದಿಡುವೆನೆನೆ
ಕುಸ್ಥಿತಿ ಕುವಿಚಾರಗಳ್ ಮೈದುಂಬಿದ ಕುಮತಿ
ಪಣ್ತ ಕುಜನರ ಉಪಟಳಂ ; ಕಾಗೆಗಳ ಹಿಂಡು
ಜಾಯ್ಕಿಸಿದ ಮಾಕ್ಕೆಯಲಿ ಕಿವಿಮನವಮಂ ಕಿಡಿಸುವರ್.
ಆದರಾ ಕಗ್ಗತ್ತಲೆ ವಗೆಯ ಕರ್ಕರೆಯುಂ
ಕಾಲಾನುಕಾಲದಿಂ ಘನಿಸಿರಲೊಡಲಿನಲ್ಲಿ
ಮತ್ತೇಂ ಪೆರ್ಚಳಂ ? ಎಂಬೊಂದು ನಿರ್ಲಕ್ಷ್ಯದಲಿ →

ದಿವ್ಯಕಾರ್ಯ ಶೀಲತೆಯೊಳ್ ಮುಳುಗಿದಳ್ ಪೂರ್ಣ
ಮನದಿಂ. ಧನ್ಯೆ! ಕಮಲಾದೇವಿ ಮಂಗಳಾಂಗಿ!

ಕಾಲವದು ಪಣ್ತು ಜೀವನರಂಗದೊಳ್ ಜೀವ
ಕಳೆಯುಂ ಕಳೆಗೊಳ್ಳುತಲಿರಲ್ ವಿದ್ಯೆ ಬುದ್ಧಿಗಳ
ಉದ್ದೀಪನೆಗೆ ಬಾಯಿ ಬಿಡುವನಿತು ಮನಕುಮುದ
ಅರಳುತಿರ್ದುದು ದಿನದಿನಂ. ಗಾಂಧೀ ಮಹಾತ್ಮರ
ಸ್ವಾತಂತ್ರ್ಯ ಘೋಷಣೆಯ ಧೀರ ಮೊಳಗು ರಾಷ್ಟ್ರದ
ಮೂಲೆಮೂಲೆಯಲಿ ಪ್ರತಿಧ್ವನಿಸೆ ಮನ ಅರಳಿ
ಪರ್ಯಾಲೋಚಿಸುವಂತಾಯ್ತು ನಿರಕ್ಷರೀ ಜನಪದಂ.
ಕಮಲದಳಾಯತಾಕ್ಷಿ ಕಮಲಮುಖಿಯುಂ ತನ್ನ
ಆತ್ಮೀಯ ಗೆಳತಿಯರ ಧೀಮಂತ ವಿಲಾಸದ
ವೇಶಪಾವೇಶದಲಿ ತರ್ಕವಿತರ್ಕಗಳೆಳ
ಸುರುಳಿಯುಂ ಬಿಚ್ಚಿದಳ್ ವಾದವಿವಾದಮಂ ಪೂಡಿ.
ಪ್ರೈಜುಂಎಸುಪೊಲ್ ಜಪ್ರನೆ ಧುಮುನಿಥಮುನಿಯುಲಿ
ಬಿಸಿನೆತ್ತರ್ ಕೋಡಿ ಹರಿಸಿ ಗಾಂಧೀಜಿಯ ಕರೆಗೆ
ಮಣಿದರೆಲ್ಲರ್ ಒಮ್ಮತದೊಮ್ಮನದಿಂದೊಪ್ಪಿ.
ಬಿಸಿ ನೆತ್ತರಿನ ಎಳೆಯ ಜೀವಗಳ್ ರಾಜಕೀಯ
ರಂಗಕಿಳಿಯೆ ಪುಟಿಪುಟಿದುವು ಧೈರ್ಯಸ್ಥೈರ್ಯದಿಂ
ಮೈವೆರ್ಚಿ. ಹಾಡಿದುವು ತರತರದ ಪಕ್ಷಿಗಳ್.
ಝೇಂಕರಿಸಿದುವು ಭೃಂಗಗಳ ಹಿಂಡು. ಹರಿಸಿದುದು
ಕೋಗಿಲೆ ಇನಿಗೊರಳಿನ ರಾಗಮಾಲೆಯಂ. ಓ!
ಅಂತರಂಗಿಕ ಭಾವನೆಯ್ಯೈಸಿರಿ ದಳವಿಂದ
ಮಂದಾರ ಸುಮದೊಲಾಯ್ತು ಅದ್ಭುತ ಯೋಜನಾ
ವೈಖರಿಯಲಿ. ಕಂಗಳ್ ಬಜ್ಜರದರಲ್ ಪೊಕೆದು
ಜ್ವಲಿಸಂತೆವೊಲ್ ವೀರಾವೇಶಂ ಕುದಿಗೊಂಡು →

ನಲಿದಳಮಿತ ಕೋಮಲಬಾಲೆ ಕಮಲಾದೇವಿ.

ಡಾ|| ಆ್ಯನಿ ಬೆಸೆಂಟ್ ತಮ್ಮಯ ಗೆಳತಿ ಮಾರ್ಗರೇಟ್ ಕಸಿನ್ಸರೊಡಂ ಭಾರತ ಪರ್ಯಟನೆಯೊಳ್ ಜನ ಮನಕೆ ಬೆಳಕೀವ ಸಂಯೋಜನೆಯಲಿ ಎಲ್ಲೆಡೆ ವಾಗ್ಜ್ಯೋತಿಯಂ ಹರಿಸುತೆ ಮಂಗಳೂರಿಂಗೆ ಬರೆ ಕಂಡರ್ ಮುದ್ದು ಮುಖದ ಮಾನಿನಿ-ಬಾಲಕಿ ಕಮಲಾದೇವಿಯಂ. ಬಾಲಕಿಯ ಧೀಮಂತಿಕೆಯಂ ವಿಶಾಲ ಹೃದಯವಂತಿಕೆಯಂ ಮನಗೊಂಡು ನೆರೆ ತೋಷದಿಂ ಆನಂದದಿಂ ಹೃನ್ಮನಂಗಳಂ ತುಂಬಿ ಉಕ್ಕಿ ಕೋಡಿವರಿಯೆ ಬಾಲೆಯಂ ತಬ್ಬಿ ತಲೆಯನತಿ ಪ್ರೇಮದಿಂ ನೇವರಿಸಿ ನಗೆಮುಗುಳ್ ಹರಿಸಿ,

"ಇಂದೆನ್ನೊಡಲ್ ತುಂಬಿ ತಣಿದುದು ನಿನ್ನಂ ನೋಡಿ. ನಿನ್ನಂತೆಲ್ಲರಿರ್ದೊಡೆಲ್ಲಿಯ ಕೊರಂ ಭಾರತಕೆ ? ನಿನ್ನ ಶಾಲೆಗೆಮ್ಮಂ ಕರೆದೊಯ್ದು ತೋರು ಮಗುವೆ !" ಎಂದರ್ ಕಾರುಣ್ಯದ್ರವ್ಯ ಕರಗಿ.

ಕಮಲಮುಖಿ ಅತಿಥಿಮುಖ್ಯರ ಆಶಾಪ್ರವೃತ್ತಿ ಮೇಣಧಿಕ ಕರುಣೆದಯೆಗಳನರಿತು ತೋಷದಿಂ ಮನವೆರ್ಚಿದೊಡಂ ಶಾಲೆಯ ಸ್ಥಿತಿಗತಿ ಮನಕೆ ಮುಳ್ಳಾಯ್ತು; ನೊಂದು ನೋಯುತಲದಂ ವಿವರಿಸುತೆ ಕರೆದೊಯ್ದಳ್ ತನ್ನಯ ಶಾಲೆ ಕಾನ್ವೆಂಟಗೆ. ಬಾಲಕಿಯ ಬೆಂಬಿಡಿದ್ವೈದ ಅತಿಥಿಗಳ್ ಸೌಧಂ ಬೊಕ್ಕು ಒಳ ಹೊರಗೆ ನೋಡಿ ಸಾಮಿಾಪಿಸಿದರ್. ಹಳೆ ಹಳೆಯ ಕಟ್ಟಡ ಮೆನಲ್ ಮೃತ್ಯು ಛಾಯೆಯುಂ ಕವಿದು →

ದುರವಸ್ಥೆಯಲಿರಲ್ ಮನಮುರುಗಿದರ್. ಬಡಜನ,
ಬಡಶಾಲೆ, ಬಡತನವೆ ಎಲ್ಲ. ಡಾ|| ಆ್ಯನಿ ಬೆಸೆಂಟ್
ಮಾರ್ಗರೆಟ್ ಕಸಿನ್ಸ್‌ರವರ್ ಕಮಲಲೋಚನೆಯು
ಬೆನ್ನತಟ್ಟಿ,

"ಮಗುವೆ, ಇದರ ದುರಸ್ತಿಗೆ ಶಾಲಾ
ಮಕ್ಕಳ್ ಒಗ್ಗೂಡಿ ರಸವತ್ತಾಗಿಹ ನಾಟಕ
ಆಡಿ ಹಣ ಕೂಡಿಸುತಿದರ ದುರಸ್ತಿಯಂ ಕೈ
ಕೊಳ್ಳುವುದೊಳ್ಳಿತು. ನೀನಿದಕೇನೆಂಬೆ ?" ಎಂದರ್.

"ಆಯ್ತು, ಡಾಕ್ಟರ್ ! ನಿಮ್ಮಗಳ ಅಭಿಮತದ ಮುಂತೆ
ಎನ್ನದೇನಿಹುದು ? ನೀವೆಂತೆಂದೊಡಂತಂತು
ಎನ್ನಭಿಮತಂ. ನೀವ್ ತೋರ್ದ್ದ ಪಥದಿ ನಡೆವುದೆ
ಶ್ರೇಯಸ್ಕರವೆಮಗೆನೆ ತಡೆಯೇಕೆ ? ಇಂದಿನಿಂ
ಕಾರ್ಯಚಟುವಟಿಕೆಯುಂ ಏರ್ಪಡಿಸುವೆಂ ಇಡೀ
ಶಾಲೆಯುಂ ಒಗ್ಗೂಡಿಸಿ ನಿಮ್ಮ ನೇತೃತ್ವದಲಿ."

ಒಮ್ಮೆಲೆ ತನುಮನಗಳ್ ಗರಿ ಹಗುರವಾದುವು;
ತನಗಿದೊಂದು ದೈವ ಸಹಾಯವೆಂಬ ನಂಬುಗೆ
ಮನದುಂಬಿ ಮೈದುಂಬಿ ಅಭಿನಂದಿಸಿ ನಲವಿಂ
ನಮಿಸಿದಳ್ ಬಾಲೆ ಕಮಲಾದೇವಿ. ಮಾರ್ಗರೆಟ್
ಕಸಿನ್ಸ-ಳ ಪತಿ ಐರಿಷ್ ಕವಿ ಮೇಣ್ ಥಿಯೊಸಫಿಸ್ಟ
ಜೇಮ್ಸ್ ಹೆನ್ರಿ ಕಸಿನ್ಸ್ (ಜೆ. ಹೆಚ್. ಕಸಿನ್ಸ್) ಸ್ವತಃ
ಉಲ್ಲೇಖಿಸಿದ "ಮೀರಾಬೇನ್" ನಾಟಕವಾಡಲ್
ಒಮ್ಮನದೊಳೊಮ್ಮತದಲಿ ನಿರ್ಧರವಾಗಲಾ
ನಾಟಕದ ವ್ಯವಸ್ಥೆಯುಂ ಮೇಣ್ ನಟನಟಿಯರಂ
ಆರಿಸುವ ಬೋಧಿಸುವ ಕಾರ್ಯಮಂ ಕೈಕೊಳಲ್ →

ಶ್ರದ್ಧೆಯಿಂ ಮೇಣಾಸ್ಥೆಯಿಂ ಶಿಕ್ಷಕರ ವೃಂದಂ
ಮುಂದೈದಿರೆ ಎಲ್ಲವುಂ ಹಾಲ್ಜೇನಿನಂತೆವೊಲ್
ಸರಾಗಂ. ಉತ್ಸಾಹ ತೋಷಗಳ ನೆರೆಯುಕ್ಕಿ
ಹರಿದತ್ತು ರಾಗಾನುರಾಗದಲಿ. ಮೀರಾ-ಳ
ಪಾತ್ರಕೆ ಸುರಸುಂದರಿ ಕಮಲಾದೇವಿಯುಂ
ಆಯ್ಕೆಯಾದಳ್ ಎಲ್ಲರ ಮೆಚ್ಚಿನ ರಮಣಿಯೈಸಿ.
ಆಗಳೇಂ ಮತಿಗೆಟ್ಟು ಮನಂಗೆಟ್ಟು ಹುಚ್ಚಿದ್ದ
ಸಾಮಾಜಿಕರ ಕ್ರೂರ ವರ್ತನೆಯು ಕರ್ಕರೆಯು ?
ಹದ್ದುಗಳ ಮಾಳ್ಕೆಯಲಿ ರೊಯ್ಯನೆರಗಿ ದನಿಯೆತ್ತಿ
ಬೊಬ್ಬಿರಿದು ಸಭ್ಯತೆಯ ಸಮಾಜದ ಎಲ್ಲೆಯುಂ
ಮೀರಿ ನಿಲ್ದತ್ತು ! ದಿನದಿನಂ ವಾಗ್ಬಾಣಗಳ
ಜಾಲಮಂ ಹರಿಸಿ ಒದರಿತು ಕೊರಳ್ ಹರಿವನ್ನ.

"ಉನ್ನತ ಸಮಾಜದ ಪೆಣ್ಮಣಿಯರ್ ಹೊರಬಿಳ್ದು
ನಾಟ್ಯರಂಗವನೇರ್ವುದು ಲಜ್ಜೆಗೇಡು !"

ಎಂಬುವ

ಗೊಡ್ಡು ರಾಗಾಲಾಪನೆ ಎಳ್ದುದು ಎಲ್ಲೆಡೆಯು.
ಪೆಂಗಳೆಯರ್, ಶಿಕ್ಷಣರಂಗದ ಧೀಮಂತರ್
ಮಾನಿಸದದಂ ಕಾರ್ಯವಾಹಿ ಮುಂಬರಿಸಲಾ
ದಿಶೆಯೊಳ್, ಪುರುಷ ಪ್ರಧಾನ ಸಮಾಜದಲಿ ಕೋಪ
ರೋಷಗಳ್ ಕುದಿಗೊಳ್ಳದೆ ಸುಮ್ಮನಿರ್ಪುವುದೇಂ ?
ಅಗಾಧ ಮತಿಮೌಢ್ಯದ ಖಡ್ಗಹತಿಯ ಮುಂತೆ
ಧೀಮಂತತೆಯ ವಾದ ನಿಲ್ಲದಾಯ್ತು. ವಿದ್ಯಾ
ಸರಸ್ವತಿಯರಾದ ಡಾ|| ಆನಿಬೆಸೆಂಟ್ ಮೇಣುಂ
ಮಾರ್ಗರೆಟ್ ಕಸಿನ್ಸ್ ಕಮಲೆಯಂ ಬೆಂಬಲಿಸುತ್ತೆ

→

ಮಾಗ್ಗುರಿಯುಂ ಹರಿಸಿ ಪುಷ್ಟೀಕರಿಸಿಯುಂ ಸುವ್ಯರ್ಥಂ !
ಎಲ್ಲರೆದೆಯಲಿ ವಿಷಾದದ ಸುಯ್ಲು ಹರಿದಾಡಿ
ಉದ್ರೇಕಿಸಿತು ಮನಮುಕ್ತಿಗಳಂ. ಕೆಲಬರ್ ನಕ್ಕು
ನಲಿದೊಡೆ ಕೆಲಬರ್ ಸುಖದುಃಖದಲಿ ಕರಗಿದರ್.
ಶಾಂತಿಯುಂ ಕಲಕಿದತ್ತು ; ಸಮಯುಂ ಕಳೆದತ್ತು
ವ್ಯರ್ಥವಾಗಿ. ಮುಂದೇಂ ? ಎಂಬ ಪ್ರಶ್ನೆ ಎಳ್ದತ್ತು
ಮನಮುಕ್ತಿಗಳಲಿ. ಬಡಜನರ ಬಡಶಾಲೆಯ ಕಂಬ
ಕಂಬಗಳ್ ದುಃಖದಿಂ ಕಥಾ ಸಾರಮಂ ಮೈ
ದುಂಬಿ ಕಂಬನಿಗಳಂ ಸೂಸಿದುವು ಬಳಬಳನೆ.
ಅಶಾಂತಿ ಅಸಮಾಧಾನಗಳ ರುದ್ರ ಗಂಭೀರ
ಹೊಗೆ ಏರಿದತ್ತು ಅಂಬರದೆತ್ತರವೇದಿಗೆ.
ಶ್ವೇತಾಂಬರಧಾರಿಣಿ ಕಮಲಾದೇವಿಯುಂ
ಮನಂಗೆಟ್ಟೊಡಂ ತೋರ್ಪಡಿಸದೆ ವಿದೇಶೀ
ಮಾತೆಯಂನೊತ್ತಟ್ಟಿಗೆ ಕರೆದಳ್ ವಿನಯದಿಂ.

"ಕೇಳಿ, ಅನಿದಕೆ ಬೆದರಿ ಪಿಂಜರಿಯೆಂ, ಮೀರಾ
ಪಾತ್ರದೊಳ್ ನಟಿಸುವುದೆ ದಿಟಂ !"

ದೃಢ ಕಂಠದಲಿ
ಹೊರ ಬಿಳ್ದ ಬಾಲೆಯಭಿಪ್ರಾಯಮಂ ಕೇಳ್ದರಾ
ವಿದೇಶೀ ತಾಯಂದಿರು ಬ್ರಹ್ಮಾನಂದದಿಂ.
ಎಳೆಮನದಪುತ ಧೈರ್ಯಸ್ಥೈರ್ಯಮಂ ಮನಗೊಂಡು
ಪುರಿದುಂಬಿಸಿದರ್ "ನೀನಹುದು ದಿಟ್ಟೆ !"

ಈರ್ವರ್
ಪ್ರಸನ್ನ ತೇಜದಿಂದೊಪ್ಪಿ ಬಾಲೆಯ ತಲೆಯಂ
ನೇವರಿಸಿ ಮೈದಡವಿ ಅನುರಾಗದಿಂ ಪೇಳಿ

→

ಕೇಳಿದರ್ "ಕೇಳು, ಕೇಳೆಲೆ ಬಾಲೆ ! ನಿನ್ನನುಂ
ಎನಿತು ಪೊಗಳಿದೊಡಮದು ಅಲ್ಪವೇ ನೀಂ ದಿಟ್ಟೆ !"

ಪ್ರೀತಿಯಿಂ ಬಲ್ಮೆಯಿಂ ತಲೆಯಂ ನಿಳುಪಿ ಮುದ್ದು
ಗೈದು ಬೆನ್ತಟ್ಟಿದರ್ ಹೃನ್ಮನಂಗಳ್ ಒಲವಿಂ
ತುಂಬಿ.

"ಮತಿ ಮೌಢ್ಯಕೆ ನಿರ್ಲಕ್ಷ್ಯವೇ ಮದ್ದು !"
ಪುಟ್ಟೆ

ಪುಟಿವ ಎಳಬಾಲೆಯ ವಿಚಾರಾತ್ಮಕ ಜ್ಞಾನಮಂ
ಅಳೆದು "ಆಯ್ತಾಯ್ತು ಮಗುವೇ ! ದೃಢ ಮನಸ್ಸಿಗೆ
ಮೆಚ್ಚಿದೆಂ. ನೀಂ ಮುಂದೆ ನಿಲ್ಲು !"
ಒಮ್ಮನದಿಂದೆ
ನುಡಿದು ಚೋದನೆಯಿತ್ತ ತಾಯಂದಿರಂ ನಮಿಸಿ
ಮುಂದಾಗೆ ಒಗ್ಗೂಡಿದರ್ ಗೆಳತಿಯರ್ ಮುದದಿ.

ಆದೊಡೇಂ ಸಾಮಾಜಿಕರ ರುದ್ರ ರೊಚ್ಚುಡುಗಿ
ಹೋಹುದುಂಟೆ ? ಕೊಲೆಗೈವ ಬೆದರಿಕೆಯ ಪತ್ರಗಳ
ಸರಮಾಲೆಗಳ್ಬೈದುವು ಮತ್ತೆ ಮತ್ತೆ. ಬೈಗುಳ
ಶಾಪಾನುತಾಪಗಳ ಧೋರಣೆಯ ದೂಷಣೆಯು
ಕೊನೆಗಾಣಲಿಲ್ಲಂ. ಅಂತುಮಲ್ಲದೆಯುಂ ತಮ್ಮ
ಜಾತಿಯಿಂ ಬಹಿಷ್ಕರಿಸುವ ಭೀತಿಯೊಡ್ಡಿದರ್ !
ಬಾಲೆಯದಕೆ ಕುಗ್ಗಿದಳೆ ? ಬೆದರಿದಳೆ ? ಇಚ್ಛೆಯಂ
ಕೈವಿಟ್ಟಳೆ ? ಮತಿ ಮೌಢ್ಯದ ತುಳಿಲಾಳ್ಗಳ ಬಾಣ
ಬಿರುಸುಗಳ ಬದಿಗೊತ್ತಿ ನಾಟಕದ ರಂಗಮಂ
ಏರಿ ರಾಜರೋಷದಲಿ ನಟಿಸುವ ಸಿದ್ಧತೆಯ
ಪುರುಪಿನಲಿ ನಿರುತಳಿರೆ ಸಿಡಿದೆದ್ದ ಸಾಮಾಜಿಕ →

ಪಿತೃಗಳ್ ಸುಮ್ಮನಿರ್ದರೇಂ ? ಪಲ್ಮಸಗಿ
ತಂತಮ್ಮೊಳ್ ಜಡಿದಾರ್ದು ಕಟ್ಟಕಡೆಯೊಳ್ತಮ್ಮ
ಧೀಮಂತನಮಂ ತೋರ್ಪಡಿಸಿ ಪನ್ನತಿಕೆಯುಳಿಸೆ
ನಾಟಕದ ನಾಯಕ ಪಾತ್ರ ಧಾರಿಯನಪಹರಿಸಿ
ಕಾಣದೊಲ್ ಬಂಧಿಸಿಟ್ಟರ್ ದೂರದೂರಿನಲಿ !
ವಿರೋಧಿಗಳ ಹಿಂಡು ಕೈಚಪ್ಪಳೆಯನಿಕ್ಕುತಲಿ
ತಿರಸ್ಕಾರದಿಂಪಟ್ಟಹಾಸಗೈದರ್ ಹೀಹೀ
ಕರಿಸಿ ಕೈಮುಸೆದುತ್ಸಾಹದಿಂ ; ಗೆಲ್ದ ಗೆಲ್ಲಮೆಯ
ಜುಮ್ಮು ಬಿಮ್ಮುಗಳ ಮೋಜಿನಲಿ ! ಬಿಗೆ ತೋಷದಲಿ !
ಹಠ ಸಾಧನೆಯ ರೊಚ್ಚಿನ ಸಾಮಾಜಿಕ ಪಿತೃಗಳ
ದುರ್ವರ್ತನೆಯಿಂದಲಿ ಹಸನ್ಮುಖಿ ಕಮಲೆಯು
ಜ್ಯೋತ್ಸ್ನವತಿ ಚೋದಿಸುವ ರೂಪಕವಂ ಕಂಡು
ವಿದೇಶೀ ಮಾತೆಯರೊಡನೆ ಮೇಣ್ ತನ್ನಯಾ
ಧೀಮಂತ ಗೆಳತಿಯರೊಡನೆ ಮುಳುಗಿದಳ್ ನಗೆಗಡಲಲಿ.

ಧೀಮಂತ ಸಮಾಜದ ಧೀಮಂತರೆಸಗಿರ್ದ
ಹೇಯಕೃತ್ಯ ಮಾನಸಪಟಲವಂ ನೆರೆಚುಚ್ಚಿ
ಚುಚ್ಚಿ ಗಾಸಿಗೊಳಿಸುತಿರೆ ಇಡೀ ಸಮಾಜವಂ
ದೀನೆಯರೆದುರಿಪುದೆನೆ ಹತ್ತಿರ್ದಯಿಲ್ಲದೆಯೆ
ಸಾಧ್ಯಮೇ ? ಸಾಮೋಪಾಯದಂಕ ಮುಗಿಸಿದ್ದಾಯ್ತು.
ಇಂ ಶಕ್ತಿಯಿಂದಾಗದುದು ಯುಕ್ತಿಯಿಂದಲಿ
ಪೂರೈಸುವ ಯೋಜನಾವಾರ್ಧಿಯೊಳ್ ಗೆಳತಿಯರ
ಕೂಟದಲಿ ಪ್ರಯತ್ನಪೂರ್ವಕವಾಗಿ ಭರದಿಂ
ಯೋಚಿಸಿರೆ ಮನಃಚಿತ್ತಗಳ್ ಕಲಕಲಮಯವಾಗಿ
ಭುಗಿಲೆದ್ದುವು. ಮುಂತಣಕಾರ್ಯವಾಹಿಗೆ ತನ್ನ

→

ಅಣಿಗೊಳಿಸಂತೆ. ಮತಿಮೌಢ್ಯದ ದಟ್ಟ ಕತ್ತಲಿಸು
ಕಗ್ಗವಿಯ ಮುಃತ್ರೆ ಕಿನ್ನರಿಯುಂ ಜಡಿದು ಕುಟ್ಟಿ
ಬಾರಿಸಿದೊಡೇಂಬಹುದು ? ಸರ್ವತ್ರ ವ್ಯರ್ಥವೆನೆ
ಬೇರೊಂದು ವ್ಯವಸ್ಥೆಯಂಗೈದಪೆನೆಂದೆಂದು
ಭಾವಿಸಿದಳ್ ಷೋಡಶ ಕಳಾಪೂರ್ಣ ಷೋಡಶಿ.
ಧೀರ ಗಂಭೀರ ವೈಯಾರದಲಿ ನೇರ ಪಥ
ವಿಡಿಯೆ ಘನ ಛಾಯಾಂಧತೆಯೊಳಲ್ಲಿ ಚೆಂಬಿಸಿಲ್
ಕೆಣ್ಗೆಸೆದುದು ಮಿಂಚಿನ ಹೊನಲಾಗಿ. ಆಗಳ್ತೆ
ಮಾರ್ಗರೇಟ್ ಕಸಿನ್ಸ್ ಸಮಯೋಚಿತ ಜಾನದಿಂ
ಮುಂದೈದುತೆ "ಕಥಾನಾಯಕನ ಪಾತ್ರವನಾಂ
ನಿರ್ವಹಿಸುವೆ. ನೀಂ ಸಿದ್ಧಳಾಗು ಕಮಲೆ !" ಎನೆ,
ಆರಾರ ಅಡೆತಡೆಗಳ ಕಟ್ಟುನಿಟ್ಟಿಗೆ ಜಗ್ಗಿ
ಕುಗ್ಗದೆಯೆ ಮುನ್ನಡೆವ ಕೆಚ್ಚುದಿಸಿತೆದೆಯೊಳ್.
ತನ್ನವರೊಪ್ಪಿದರ್, ಪುರುಪು ಉತ್ಸಾಹಗಳ್ಗೂಡಿ
ಪೊಗರೇರಿದುದು ಮತ್ತೆ. ಕಡು ಚೆಲ್ವಾಂತ ಮಿಾರಾ
ನಾಟಕದ ಪಾತ್ರಂಗಳ್ ಮೈನೆತ್ತು ನಲಿದುವು
ಕಣ್ಮುಂದೆ. ಕಮಲಾದೇವಿಯು ನಾಯಕಿಯ ನಿಜ
ಪಾತ್ರನೆಂತಂತು ಮಾರ್ಗರೆಟ್ ಕಸಿನ್ಸಳ ನಾಯಕ
ಪಾತ್ರವಂತಂತು ನಿಷ್ಠೆಯಿಂ ತುಷ್ಟಿಯಿಂ ಪರಿ
ಪುಷ್ಟಿಯಿಂ ಆನಂದ ಭೋಗದಿಂ ನಡೆದತ್ತು.
ಪಾತ್ರಪಾತ್ರಗಳಲಿ ವರ ಜೀವ ಕಳೆಯುಂ ತುಂಬಿ
ತುಳುಕಿ ಸುರಸುಂದರಗೈಯೆ ಗೆಯ್ದ ಆಸ್ಥೆಯುಂ
ಸತ್ಯಸೌಂದರ್ಯಕಿಂಬು ಕೊಡುತಿರೆ ಮನ ಮತಿಯಲಿ,
ನಾಟಕವದು ನಡೆದುದು ಸಹೃದಯರ ಎದೆಯಂ

→

ಸೂರೆಗೊಂಡು. ಮಿನ್ನೆ ಧೀರ ರೌದ್ರಗತಿಯಲಿ ನೆರೆ
ವಿರೋಧಿಸಿ ಹುಯ್ಲೆಬ್ಬಿಸಿದ ಸಾಮಾಜಿಕರ್ ತಲೆ
ತಗ್ಗಿಸಿದರ್ ! ಕಲುಷಿತ ಜನಪದಂ ಬುಸುಗುಡುತೆ
ತಣ್ಣಗಾಯ್ತು ಬಸುವಳಿದಂತೆವೊಲ್. ಎಳೆನೆಣ್ಣು
ಗೆಲ್ದು ಗದ್ದಿಗೆಯೇರಿ ನಿಲ್ದಳೇ ಎಂಬೊಂಬು
ರೊಚ್ಚು ಕುದಿದೆದೆಯಲಿ ಸುಡುತಲಿತ್ತು ಕೆಂಬೆಂಕೆ
ಸುಟ್ಟುರಿಸುವಂತೆ. ಆದರಾ ತನ್ವಂಗಿಯ ಘನ
ಚಾತುರ್ಯದ ಮುಂತೆಲ್ಲವುಂ ಅನುಪಮ ವ್ಯರ್ಥ.

ಅಂತೊಂದು ಕಣಕಟು ಭುವನಮಂಡಲವೊಗೆದ
ಘೋರ ನಿಷ್ಠೂರ ಘಾತವದು ಚಿತ್ತಶ್ರೀಯಲಿ
ಅಚ್ಚಳಿಯದವೊಲ್ ಅಚ್ಚೊತ್ತಿ ವಿಧವಿಧ ವಿಜಯ
ಯಾತ್ರೆಗೆ ಕಳಸವಿಟ್ಟು ಹರಸಿದಂತೆಂಬೊಲಾ
ಕಮಲಮುಖಿ ನಿಚ್ಚ ಊರ್ಧ್ವಮುಖಿ. ಅಂದಿಂದಿಗುಂ
ಒದವಿದ ಘಟನಾವಳಿಗಳ ಹಂತ ಹಂತದಿಂ
ಜಯಗೀತವ ಹಾಡಿದವೊಲಾಯ್ತು ಹರಸಿ ಹರಸಿ.
ಮುಂದೆ, ಧೀರ ಧೀಮಂತ ಮಹಿಳಾಮಣಿಯುಂ
ಡಾ|| ಆ್ಯನಿಬೆಸೆಂಟ್, ಮಾರ್ಗರೆಟ್ ಕಸಿನ್ಸ್, ಜೆ. ಹೆಚ್
ಕಸಿನ್ಸ್, ಸಿಸ್ಟರ್ ನಿವೇದಿತ, ಮಹಾತ್ಮ ಗಾಂಧೀಜಿ
ಪಂಡಿತ ಜವಹರಲಾಲ ನೆಹರೂ ಮೊದಲಪ್ಪ
ಹಿರಿಯಕ್ಕಳ ಹೆಜ್ಜೆಯ ಜಾಡನಡರಿ ದೂರ
ಗಮ್ಯದ ದಿವಿನಾದ ನೆಲೆಯುಂ ಮುಟ್ಟಿ ಸತ್ಕೀರ್ತಿ
ಮಾಲೆಯುಂ ಧರಿಸಿದ ಪರಮೋಚ್ಚ ಪರಮಶೀಲೆ.
ಮಾರ್ಗರೆಟ್ ಕಸಿನ್ಸ್ ಕಲಿತು ಬಲಿತು ನುರಿತ ಪರಮ
ಪಿಯಾನೋ ತಜ್ಞೆ. ಗುರುವರ್ಯ ರವೀಂದ್ರನಾಥ

→

ಟಾಗೋರರಿಂ ಕಲಿತ, ರಾಷ್ಟ್ರೀಯ ಸಂಪದಮಂ
ಭಕ್ತಿಯಿಂ ನೇಮದಿಂ ಪಾಡಿ ಪೊಗಳಿ ಬಣ್ಣಿಪ
"ಜನಮನಗಣ ಅಧಿನಾಯಕ" ಮತ್ತಮಾ "ವಂದೇ
ಮಾತರಂ" ಸಂಗೀತಗಳಂ ಭಾವನಾತ್ಮಕ
ರಾಗಭಾವದಿ ನುಡಿಸುತಿರೆ ಪಿಯಾನೋದಲಿ ಅವು
ಕಿವಿಗಿಂಪು ಮಾತ್ರನೆ ? ಅನೋಘ ಮಾತೃಕಾಮಯಿ
ಪಚ್ಚೆ ಪಟ್ಟುಡೆಯನುಟ್ಟ ಇಡೀ ಭಾರತ ವರ್ಷ
ಧಾತ್ರಿಯೇ ಮೂರ್ತಿವೆತ್ತು ನಲಿವುದು ಕಣ್ಮುಂದೆ !
ಮನಃಪ್ರಾಣಗಳಂ ನಲವಿಂ ಸೂರೆಗೊಂಬ ವರ
ರಾಷ್ಟ್ರೀಯ ಚಿತ್ತಾರ ರಂಜಿಸುತಿರೆ ದೃಷ್ಟಿಯ
ಕಕ್ಷೆಯಲಿ, ಪರರಾಳ್ವಿಕೆಯ ಘೋರಾತಿಘೋರ
ಶೃಂಖಲಾಬದ್ಧತೆಯಂ ನೆನೆದು ದುಃಖಿತಳೆನೆ
ಭಾರಮಾದುವು ಹೃನ್ಮನಂಗಳ್ ಶಿಲಾಭಾರ
ಹೋಲಿ ! ಕಂಬನಿಗಳುದುರುವುವು ಹನಿ ಹನಿಯೈಸಿ ?

ಅಹಾ ! ಸರ್ವಾಂಗ ಸೌಂದರ್ಯದುಂಬಿದ ಬಣ್ಣನೆ !
ಭಾರತ ರಾಷ್ಟ್ರನೇಂ ಸಾಮಾನ್ಯಮೇ ? ರಾಷ್ಟ್ರೀಯ
ಪ್ರಾಕೃತಿಕ ಶಕ್ತಿಯುಂ ಅಗಾಧ. ಅನನ್ಯ ಜನ
ಪದಂ ಅಗಾಧ. ಎಲ್ಲಮಿರ್ದೇನಿಲ್ಲದ ತೆರದೊಳ್
ಪರರಾಳ್ವಿಕೆಯ ವಜ್ರಮುಷ್ಟಿಯಲಿ ಸಿಲ್ಕಿ ಬರೀ
ಅಸ್ಥಿಪಂಜರಂ ಭಾರತರಾಷ್ಟ್ರ ಎಂದೆನಲ್
ಅತಿ ಸಂಕಟ ಪ್ರದಂ. ಘೋರ ಸಂಕಷ್ಟಕರಂ.
ಯೋಚಿಸುತಿರೆಯಿರೆ ರಾಷ್ಟ್ರೋದ್ಯಮಕೆ ಹಾರೈರೆದು
ದೀನದಲಿತರುದ್ಧರಣ ಕಾರ್ಯಂಮನಗೊಳಿಸೆ
ಬಾಲೆಯ ನಿರಾಶೆ ತೊಲಗಿದುದಾಶೆಯೆದೆತುಂಬಿ.

→

ರಾಷ್ಟ್ರ ಜೀವನ ಸ್ವರೂಪಂ ಊರ್ಧ್ವಮುಖಿಯಾಗಿ
ನಡೆದಂದು ಭಾರತ ಜನನಿ ತುಷ್ಟಿಪುಷ್ಟಿಯಂ
ಪಡೆದಪಳ್ ಸಮುಜ್ವಲ ತೇಜದಿಂ ತಾನೊಪ್ಪಿ,
ಎಂಬರಿವು ಮನತುಂಬಿದುದು ಸವಿಗನಸಿನಪೊಲ್.

ಕಮಲಮುಖಿ ಕಮಲಾದೇವಿಯ ಬಿಜ್ಞೆಯುಜ್ಜುಗಂ
ಜ್ಞಾನದಾಹದ ನೋಂಪಿಯಲಿ ತೊಳಗಿ ಬೆಳಗಿದುದು
ಅನುದಿನಂ. ಬಾಲಕಿಯ ಜ್ಞಾನದಭಿವೃದ್ಧಿಯುಂ
ಎಂತಂತು ಶಾಲೆಯೇಳ್ಗೆಯುಂ ನಡೆದುದಂತೆಯೆ.
ಲತಾಂಗಿಯ ಸ್ತ್ರೈನ್ಯ ಅಂಗಾಂಗಗಳ್ ರಸಭರಿತ
ಮಾಫಲದೊಲ್ ತುಂಬುತಿರೆ ಕುಮಾರಿ ರಂಜಿಸಿದಳ್
ವರಲಕ್ಷ್ಮಿಯೊಲ್ ! ಭುವನ ಹೃದಯದಿ ದಿವಿಸಾದ
ಜ್ಞಾನ ಸೌಂದರ್ಯ ಪ್ರಭೆಯ ವಿದ್ಯುತ್ ಸ್ಫುರಿಯುಂ
ಹರಿಸುತ್ತೆ ನಳನಳಿಸಿದಳ್ ಲೋಕಾಭಿರಾಮ
ಭಂಗಿಯಲಿ. ಶಾಲೆಯಭ್ಯಾಸಮಂ ವಿದ್ಯುಕ್ತ
ರೀತಿಯಲಿ ಪೂರೈಸಿರೆ ಮುಂದಿನಭ್ಯಾಸಕ್ಕೆ
ಮದರಾಸ್ ವಿಶ್ವವಿದ್ಯಾಲಯಮಂ ಪುಗುವೊಂದು
ಸದಿಚ್ಛೆಯಲಿ ಪಯಣಿಸಿದಳ್ ಮದರಾಸ್ ನಗರಿಗೆ.

ಪೊಸ ಊರು ಪೊಸಜನ ಪೊಸ ವಾತಾವರಣ ಪೊಸ
ಭಾಷೆ ಪೊಸ ವಿಶ್ವವಿದ್ಯಾಲಯ ಪೊಸತೆ ಎಲ್ಲ.
ಓರಗೆಯರಾರಿಲ್ಲದಿರೆ ಬಾಲೆ ಕಂಗೆಟ್ಟು
ತಳಮಳಿಸಿದಳಿಲ್ಲ. ವಿಶ್ವವಿದ್ಯಾಲಯವದು
ಮಹಾಸ್ವರ್ಣದ್ವಾರವನು ಹರವಾಗಿ ತೆರೆದುದು
ದಿವ್ಯ ಸ್ವಾಗತ ಬಯಸಿ. ನವಾಗತ ಸುಸುಂದರಿ
ಅಭಿಜ್ಞಾನನೋಹಿನಿ ಕಮಲಾದೇವಿಯುಂ ಕಣ್ →

ನೆಟ್ಟು ನೋಡಿದಳಾ ಮಹಾ ವಿಶ್ವವಿದ್ಯಾಲಯ
ಮಂದಿರವನು. ತಾನೆಂದು ಮನದೆ ಬಗೆಯದಿರ್ದ
ಜ್ಞಾನನಿಲಯ ! ಬಗೆವಗೆಯ ವಿದ್ಯೆಯುಂ
ನೆಲೆಗೊಂಡು ವಿಜೃಂಭಿಪ ಭಾಗವಿಭಾಗಗಳ್, ದೇಶ
ವಿದೇಶಗಳ ವಿದ್ಯಾರ್ಥಿ ಸಮೂಹ. ಮತ್ತಮಾ
ಶೋಡಷಕಳೆಗಳಿಂ ಬೆಳಂಗುವ ಗುರುವರ್ಗಂ !
ನೋಡಿದಳ್ ಕಣ್ತುಂಬ ಲಲನಾಮಣಿ, ವಿದ್ಯೆಯ
ಅಧಿದೇವಿಯೇ ಭುವಿಗವತರಿಸಿದ ಮಾಕ್ಕಿಯಲಿ
ತೋರಿದತ್ತು ಆ ವಿದ್ಯಾಮಂದಿರಂ ! ಬಾಲೆ
ಆನಂದ ಪುಳಕಗೊಳ್ಳುತೆ ನಿರುತನಾದಳಾ
ದಿವ್ಯ ಮಂದಿರದ ಗರ್ಭಗುಡಿಯೊಳ್ ಕಲಿಕೆಯಲಿ.

ವಿಶ್ವವಿದ್ಯಾಲಯಂ ತುಂಬಿ ತುಳುಕುವ ತೆರದಿ
ಕಿಕ್ಕಿರಿದ ತರುಣತರುಣಿಯರ ಎಣೆಯಿಲ್ಲದಿಹ
ಅದುಭುತ ಸಮಾವೇಶ ! ಮುನ್ನೆ ತನ್ನ ಕಣ್ಣಿಂದೆ
ಕಾಣದಿಹ ವಿಶೇಷಮಿರೆ ಪ್ರಪ್ರಥಮ ನೋಟಕೆ
ವಿಭ್ರಮೆಗೊಳುವೊಲಿರ್ದ ಮಹಾ ವಿಶ್ವವಿದ್ಯಾ
ಲಯ ! ಆಳರಸರ ಸಕಲೈಶ್ವರ್ಯಮಂ ಸೂರೆ
ಗೊಂಡ ತಾಂತ್ರಿಕ ಸ್ಥಾವರ ! ಯುವ ಪ್ರಭೃತಿಗಳಿಗೆ
ಪುರುಷೀವ ಮನೋಮಯ ಪ್ರಾಣಮಯ ಮಂದಾರ !

ಕಮಲಾದೇವಿಯುಂ ಪರಿಚಿತರಿಲ್ಲನೆಂದರಿತು
ಬೆದರುವಟ್ಟಳಿಲ್ಲ. ಮಹಾಲಯದ ಒಳಬೊಕ್ಕು
ಅಡ್ಡಾಡುತೆ ಭಾಗವಿಭಾಗದೊಳಿಹ ವಿಧವಿಧ
ಪಾಠಪ್ರಣಾಳಿಯನರಿತು ಮುದಿತ ಮನ ಮಲಿತು
ಬಲಿತುದು ಕಲಿಯೊಲ್ ಕಲಿವ ರಸವಿದ್ಯಾಬುದ್ಧಿಯ →

ನೋಂಪಿಯಿಂ. ಕರಕುಶಲ ಲಲಿತ ಕಲೆಗಳಿಗಾಗಿ
ವಿಕಾಸಲಿಸಿದ ಭಾಗವ ಕಂಡು ಹೃನ್ಮನಗಳಲಿ
ಹರ್ಷದ ಹೊನಲುಕ್ಕಿ ಹರಿದುದು. ಕುಗ್ಗಿ ಕಮರಿದ
ಭಾರತ ಸುಸಂಸ್ಕೃತಿಯ ಕುಶಲ ಕಲೆಗಳಿಂಗೆ
ಕಾಯಕಲ್ಪಗೈವೊಂದು ಸದ್ಯೋಜನೆ ಮಿಂಚಿರೆ
ಮನದಿ ಪುಳಕಿತಳಾದಳ್ ತರಳೆ. ಎದೆಯ ಹಕ್ಕಿ
ಹಾಡಿ ಆನಂದ ಸುಧೆಯುಂ ಹರಿಸಿತು ದಿವಿನಾಗಿ.
ಪ್ರೀತಿದೂರಂ ಬಿಟ್ಟು ಬಂದುದುಂ ಬೇಸರಂ
ಬೆರಸುವ ಬದಲ್ ಹರಿಸಿತು ತೋಷದ ಝರಿಯುಂ.

ಕಮಲಾದೇವಿಯುಂ ಸಮ್ಯಕ್ ದೃಷ್ಟಿಯುಷ್ಟಿಯುಂ
ಹರಿಸಿದಳ್ ಜಗದಗಲ. ಎಲ್ಲಿ ಯಾಪಡೆಯೆನ್ನದೆ
ಲೋಕವೆಲ್ಲ ಪ್ರಗತಿಯ ದಾಪುಗಾಲಿಂದೋಡ್ವ
ಪುರುಪಿನಲಿರೆ ಭಾರತ ರಾಷ್ಟ್ರೀಯ ಸ್ಥಿತಿಗತಿ
ಹದಗೆಟ್ಟು ನಾರ್‍ವುದು ಮನಕೆ ಮುರಿದುದು ಮುಳ್ಳಂ,
ಹೃದಯ ಬನದ ಕೋಗಿಲೆಯುಂ ಹಾಡಿದುದು ವೀತ
ರಾಗದಿಂ. ಮನಮುದುಡಿ ಬಿಸುಸುಯ್ದಳ್ ರಮಣೀ
ಮಣಿ. ದೂರ ಭವಿಷ್ಯದ ವೇದಿಯೊಳ್ ಅಂಡಲೆದು
ನಿರ್ಣಯಿಸಿದಳ್ ಜೀವನದ ಭವ್ಯ ಭವಿಷ್ಯವಂ.

ಪಗಲಿರುಳುರುಳಿ ಜೈಗುನೆಂಪು ಹರಡಿ ಮುಸ್ಸಂಜೆಯುಂ
ಅಡರಿಬರೆ ದಿಗ್ವೆಣ್ಣು ಮೆರೆದಳತಿ ವೈಭವೋ
ಪೇತ ಉಜ್ವಲ ತೇಜದಿಂದೆ. ಅರುಣಾರುಣನ
ಸಪ್ತಾಶ್ವಗಳ ಸ್ವರ್ಣರಥಂ ಸಾರ್ದುದು ಮೆಲ್ಲ
ಮೆಲ್ಲನೆಯೆ ಸಂಭ್ರಮಿತ ಸುಂದರಿಯ ಚೆನ್ನುಡಿಗೆ
ನಿರ್ಭಾರ ನಿರ್ಧಾರ ನಿಯೋಜನೆಯ ಸ್ಥೂಲ →

ಸೂಕ್ಷ್ಮ ಬೆಳ್ಮುಗಿಲ್ ಸೈನ್ಯ ಜೇತರ್ಜು ಜೆಂಡಾಗಿ
ಒಯ್ಯನೊಯ್ಯನೆ ತೇಲುತಿರ್ದುವು ಅಂಬರದ
ತುಂಬೆಲ್ಲಾ ರಾಜನ್ಯೆಭವದಲಿ. ಕಪೋತಗಳ
ಹಿಂಡು ದಟ್ಟಣಿಸಿ ಬಲು ಶಿಸ್ತಿನಿಂ ರೆಕ್ಕೆಗಳ
ಬದಿರ್ಚಿ ನೀಲಗಗನ ಹಿನ್ನಲೆಯಲಿ ಸ್ಪರ್ಧೆಯ
ಪುರುಡೊ ಎನೆ ಹಾರುತಿರ್ದುವು ಲಿಖಿತ ಚಿತ್ರದೊಲ್
ಕರಿ ಚುಕ್ಕಿ ಚಿಕ್ಕಿಗಳಂ ಹೋಲಿ. ಮೆಲ್ಲಮೆಲ್ಲನೆ
ತೀಡಿಬಹ ಮಂದ ಮಂದಾನಿಲನ ಸುಖ ಸ್ಪರ್ಶ
ತನುಮನಗಳಂ ಪುಳಕಗೊಳಿಪವೊಲ್ ಶೀತಲಂ.
ಅಸ್ತಮಾನ ಶೋಭಾ ಶೈಲಿಯು ದಿವ್ಯ ಮುದ್ರೆಯು
ಒತ್ತಿಯೊತ್ತಿ ಮಹಾ ಪಶ್ಚಿಮ ವಾರ್ಧಿಯಲಿ ಮುಳುಗಿ
ಕೆಮ್ಮನೆ ಕೆನ್ನೀರ್ ಓಕುಳಿಯನಾಡಿದನ್. ಸುನೀಲ
ಜಲಧಿಯಲಿ ರಂಗು ಮಾಣಿಕದ ಚಂದನಕಾಂತಿ
ಹರಡಿದುದು ಕದಡಿದೊಲ್. ಪಕ್ಷಿ ಸಂಕುಲಂ ಹಾಡಿ
ಪಾಡಿ ನಲಿದುವು ಅನುದಿನದ ಸಂಧ್ಯಾರಾಗದ
ನೇಮದಲಿ. ಪ್ರಾರ್ಥನಾ ಗೀತಾಂಜಲಿಯಲಿ ಭಕ್ತಿ
ಸಮುಜ್ವಲತೆಯುಂ ಪೊಣ್ಮಿರೆ ವಿವಿಧ ಕಂಠಗಳಲಿ
ರಾಗಾರುಣತಾನ ಚೆಲುವಾಯ್ತು ಮಧುಮಾಧುರ್ಯ
ಮಯಮಾಯ್ತು.

ಸಂಜೆಯುರುಳಿ ಕರಗೆ ನಿಶಾದೇವಿ
ಪ್ರಶಾಂತ ಶಾಂತಿಯಿಂ ವಿಶ್ರಾಂತಿಯ ಪ್ರಣಯ
ಪ್ರಸಂಗದಲಿ ಪ್ರಮತ್ತೆಯಾದಳೊ ಎನೆ ಕಪ್ಪು
ಉಡಿಗೆಯಿಂ ಪರಿಶೋಭಿಸಿ ನಕ್ಷತ್ರಗಳ ಮಾಲೆ
ಸೂಡಿ ಪಜ್ಜೆ ಪಜ್ಜೆಯುಂ ಮುಂದಿಟ್ಟಳತಿ ಪ್ರೇಮ

→

ಸಂಭ್ರಮದಿಂ. ಕಮಲಾದೇವಿಯುಂ ದಿನಚರಿಯ
ಪರಿಶ್ರಮದಿಂ ಮೈಸೋಲ್ದು ವಿಶ್ರಾಂತಿಗೆತ್ತಳ್
ಶಯ್ಯೆಯನಡರ್ದು. ರಾತ್ರಿಯೇಕಾಂತ ಶಾಂತಿಯುಂ
ಮಧುಮಯಂ. ಸವಿನಿದ್ದೆಯೋಚನೆಯುಂ ಮಧುಮಯಂ.
ಗಾಢ ನಿದ್ದೆಯುಂ ಮಧುಮಯಂ. ದಿವ್ಯ ಮಧುರ ಸುಖ
ಸ್ವಪ್ನಸಂಪದಕಾದರವಾದಾ ಸವಿನಿದ್ದೆ !
ಸ್ವಪ್ನ ಸಾಮ್ರಾಜ್ಯದ ಭ್ರಮಾಲೋಕ ನಲಿದುದು
ಮನೋ ಭಿತ್ತಿಯಲಿ .... ಪಚ್ಚ ಪಸುರ್ವುಲ್ಲ
ರನ್ನಗಂಬಳಿಯ ಹಾಸಿನಮೇಲೆ ದಿಂದಿಮ್ಮನೆ
ಪಜ್ಜೆಯಿಡುತ್ತೆ ಐರಾವತಂ ನಡೆದು ಬಂದಂತೆ
ನಡೆತಂದನೊರ್ವ ವ್ಯಕ್ತಿಶ್ರೀ! ತಾನೆಂದೆಂದು
ಕಂಡು ಕಾಣದ ವ್ಯಕ್ತಿ! ಬೆಕ್ಕಸ ಬೆರಗಾದಳ್
ಕಮಲೆ. ಅದೆ ಗಳಿಗೆಯೊಳ್ ಆತನುಂ ಅಚ್ಚರಿಯ
ಕುಂಡದಲಿ ಮುಳುಗಿದಂ. ಎದುರ್ನಿತ್ತ ರೂಪಸಿಯ
ಅಮೋಘ ವ್ಯಕ್ತಿತ್ವಮಂ ಕಂಡೊಡನೆಯೆ ಮೈಮನ
ಮರೆತು ಮಾರುವೋದಂತೆ ನಿಬ್ಬೆರಗಾದನಾ
ಯುವ ಪ್ರಭೃತಿ! ಉಜ್ವಲಿಪ ಉಲ್ಕೆಗಳ ತೆರದಲಿ
ಪೊಳೆದುವು ನಯನದ್ವಯಗಳ್. ಒಡನೆ ಹೃತ್‌ಗುಡಿಯ
ಸ್ವರ್ಣದ್ವಾರಮಂ ತೆರೆದು ಸ್ವಾಗತಿಸಿದಂ ತೋಷ
ಘೋಷದಿಂ. ಪ್ರೇಮ ಪ್ರಸನ್ನ ಭಾವದ ಪ್ರಭೆ
ಹರಿದುದು ವದನ ಬಿಂಬದಲಿ. ಕಮಲೆಯುಂ ಮನದೆ
ಅಚ್ಚರಿವಟ್ಟು ಆರುಮಿದಾರೆಂದು ನೋಡುತಿರೆ
ಕನಸೊಡೆದು ಬಯಲಾಯ್ತು! ತನ್ನೊಳ್ ಪರಿಭಾವಿಸಿ
ಕನಸಿನ ಯುವಪುರುಷನ ವ್ಯಕ್ತಿತ್ವಮಂ ನೆನೆಯೆ
ವೀರೋಚಿತ ಧೀಮಂತ ಮೂರುತಿಯ ಚಿತ್ತಾರ →

ಸುಳಿದುದೊರ್ಪೆ ಇರ್ಪೆವುತ್ತೊರ್ಪೆ ಸವಿ ನಿದ್ದೆಯಂ
ದೂರೀಕರಿಸಿ. ಕಮಲೆ ಭ್ರಮಾಲೋಕದಲಿ
ಕೆಲಚಣಂ ಅಂಡಲೆಗ ಬಳಿಕಂ ಮುಸುಗಿಟ್ಟು
ಮಲಗಿದಳ್ ಕನಸಂ ಬದಿಗೊತ್ತಿ.

ಮಹಾತ್ಮಾ

ಗಾಂಧೀಜಿಯ ಭಾರತ ಸ್ವಾತಂತ್ರ್ಯ ಚಳವಳಿಯ
ಅಮೋಘ ಕರೆಯ ಕೇಳಿ ಪುಟಿದೆದ್ದುದು ತರಳೆಯ
ದಿವ್ಯ ಚೇತನ ಚೆಂಡಿನ ಮಾಳ್ಕೆಯಲಿ. ತನ್ನಯ
ಸಹಪಾಟಿಗಳ ದಿವ್ಯ ಪಡೆಯನುಂ ಸಂಘಟಿಸಿ
ಒಮ್ಮನದಲಿ ಮುನ್ನುಗ್ಗುವ ಧೀರ ಸಾಹಸದಿಂ
ಮುಂದಾದಳ್ ಅದ್ಭುತ ಸತ್ಯಾಗ್ರಹದ ರಂಗಕೆ.
ಸುತ್ತಮುತ್ತಲೆಲ್ಲೆಡೆಯುಂ ಧಂಧಂಮನೆ ಎರ್ದೆ
ಗುಂಡಿಗೆಯಂ ನಡುಗಿಪ ಬ್ರಿಟಿಷರ ಘೋರತರ
ಸುಡುಗೋಲಿಗಳ ಮೊಳಗು ! ಚೀರಿ ಸಾಯ್ವರ ಗೋಳು !
ಎಲ್ಲವುಂ ಘನನೆತ್ತಿದುದು ಪುಣ್ಯ ಭುವಿಯಲಿ ರಕ್ತ
ಸಿಂಚನಂಗೈಯ್ದು ರಕ್ತಾಕ್ತಗೊಳಿಸಿ. ರಾಷ್ಟ್ರದ
ಸ್ವಾತಂತ್ರ್ಯ ವಿಚಾರ ವಿಪ್ಲವಂಗಳ್ ಮುಸುಗಿದುವು
ಮನಂ. ನೀರೆ ತನ್ಮಯಳಾದಳ್ ಸ್ವಾತಂತ್ರ್ಯದ
ಚಳವಳಿಯಲಿ ; ರಾಷ್ಟ್ರೋದ್ಧಾರಮಂ ಗುರಿಗೊಂಡು.
ಬಗೆವಗೆಯ ವಿಚಾರ ಪ್ರಳಯಾಗ್ನಿ ಕೆರಳ್ದುದು
ಮನಶ್ಚಿತ್ತಗಳಂ ಹಿಂಜಿ ಸಿಡಿದೇಳಿಸುವಪೊಲ್ !
ರಾಷ್ಟ್ರೀಯ ಬಡತನದ ಕ್ರೂರ ಕೋಟಲೆಯನುಂ
ಕಿತ್ತೊಗೆದು ತಹತಹಿಪ ಜನಮನಕೆ ಸ್ವಾಂತನಂ
ನೀಡುವಂತೆಪೊಲ್ ದಿವಿನಾದ ಕಾರ್ಯಕ್ರಮದ

ನಿರೂಪಣೆಯಿಂದೆ ರಾಷ್ಟ್ರ ಸೇವೆಯಂಗೈಯೆ ತಾಂ
ಮುಂದ್ವೆದರ್. ಧರ್ಮನಿಷ್ಠೆಯಿಂ, ರಾಷ್ಟ್ರ ಭಕ್ತಿಯಿಂ,
ಗೆಣೆಯುರಂಗೂಡೆ ಸರ್ವ ಗ್ರಾಮಂಗಳ ವ್ಯಾಪಿ
ಸಂಯೋಜನೆಯುಂ ರೂಪಿತವಾಯ್ತು. ಬಡಜನಂ
ಹಿರಿಜನಂ ಕಲಿತವರ್ ಕಲಿಯದವರ್ ಮೆಚ್ಚುವ
ಮಾಳ್ಕೆಯಲಿ. ಗ್ರಾಮೋದ್ಧಾರ ಕಾರ್ಯದ ಅಂಗವೆನೆ
ಅಕ್ಷರದಾನ, ಚರಕಯಜ್ಞ, ಕೈಗಾರಿಕಾಕ್ಷೇತ್ರ
ಗ್ರಾಮನೈರ್ಮಲ್ಯ ಪಶುಪಾಲನೆ ಮೊದಲಪ್ಪ
ವಿಧವಿಧದ ಕಾರ್ಯಕ್ರಮಗಳಿಂಗೆ ಮನೆಮನೆಯ
ಜಡ ನಿದ್ರಿತ ಕುಂಭಕರ್ಣರಂ, ಮುಟ್ಟಿ ತಟ್ಟಿ
ಎಚ್ಚರಿಸಿ ಮನುಕುಲದ ಬದುಕಿನ ಮೌಲ್ಯಮಂ
ಮನಗೊಳಿಸಿದ ಪರಿಶ್ರಮ ಸಾಮಾನ್ಯಮಲ್ಲಂ.
ಬಡಜನರಿಗೆ ತಾಯಾಗಿ ಪರಿಜನರಿಗೆ ಪರಮ
ಗೆಳತಿಯಾಗಿ ರಾಷ್ಟ್ರಕೆ ಪರನೋಚ್ಚತಮ ಔರಸ
ಪುತ್ರಿಯಾಗಿ ಬಾಳಿಗೆ ಚೆಂಬೆಳಕು ಬರಿಸುವೊಲ್
ಬದುಕಿ ಬಾಳಿದರ್ ಕಮಲದಳಾಯತಾಕ್ಷಿ ಕಮಲೆ.

ನಿರಕ್ಷರೀ ಜನಕೋಟಿ ಅಜ್ಞಾನ ಅವಜ್ಞೆಯ
ಕೂಪದಲಿ ನರಳ್ವ ಮುಗ್ಧದುಗ್ಧರಿರಲ್ ವಿಷಯ
ನಿರೂಪಣೆಯೆನೆ ಪಾಗ್ಜ್ಞಾನ ವಿಷಯ ಬಲವೇ ಬಲಂ.
ಬಲ್ಮೆಯಿಂದೆ ಮನಮತಿಯನು ಬೋಳೈಸಿ ಎರ್ದೆಯ
ಕುಂಡಲಿನಿಗಿಳಿಸಿ ರಾಷ್ಟ್ರೋದ್ಯಮಕೆ ಸಜ್ಜನಿಂ
ಇಳಿಸುವೊಡೆ ಸೋಲ್ದು ಗೆಲ್ವುದೆ ನಿತ್ಯಕ್ರಮವಾಯ್ತು.
ಓರಗೆಯರ ಕೂಟದಲಿ ಸುಮಧುರ ನೇಹದೊಲವು
ಮನಮನಂಗಳಂ ಬೆಸೆದು ಕಾರ್ಯರಂಗದಲಿ ನೆರೆ

→

ಪ್ರರುಷೀಯುವುದು ಕುಂದು ಕೊರತೆಗಳ್ ಮೂಡದಿಹ
ಮಾಕ್ಕಿಯಲಿ. ಪಗಲಿನ ಪರಿಶ್ರಮದ ಬಳಿಕಲಾ
ನಿಶಿಯ ರಾಜ್ಯಭಾರಂ. ಚಂದ್ರಚಂದ್ರಿಕೆಯ ವರ
ಜ್ಯೋತ್ಸ್ನಾಧೌತಾಂಬರವನ್ನುಟ್ಟು ನೆರೆ ವಿಜೃಂಭಿಸೆ
ಮೈಯ ಬಳಲ್ಕೆಯುಂ ಪಾರ್ದುಪುದು ದಶದಿಶೆಗೆತ್ತು.
ಕಂಗಳಿಂಗೆ ನಿದ್ದೆಯು ಮಬ್ಬು ಕವಿದು ಬರುವನ್ನ
ಓದುಬರೆಹಗಳ ಕೃಷಿಯಜ್ಞದಲಿ ಮುಳುಂಗಿ,
ಭಾವನಾ ಲೋಕದಲಿ ವಿಹರಿಸಿ ಅನುಭವ ರಸ
ಸ್ವಾದನೆಯಿಂದೆ ಮೈಮರೆವರ್ ನಿಚ್ಚ ರೂಢಿಯಲಿ.
ದಿನಚರಿಯದು ಮುಗಿಬಗಿಯಾದಪುದು ನಡುರಾತ್ರಿ
ಸಮಯದೊಳ್ ಅತ್ಯಲ್ಪ ವಿಶ್ರಾಂತಿಯು ನೇಮದಿ.
ಏಕಾಂತ ಚಿಂತನೆಗೆ ಏಕಾಂತ ಸುವಿಚಾರ
ದೋಹನೆಗೆ ತನಿಯುಗುವ ತಣ್ಣನೆಯ ತನಿರಾತ್ರಿ
ತಣ್ಪಿನ ಸುಖಾಶ್ರಯವನೀವುದು ಹರಸುವೊಲ್.
ಯೋಚಿಸಿ ಪರಿಭಾವಿಸಿ ಮಿಗೆ ವಿಶ್ಲೇಷಿಸಿ ನೋಡೆ,
ಭಾರತ ಭುವಿಯ ವೇದಪರಿಮಳದ ಮುಸುಗಿನಲಿ
ಪೆಣ್ಮಣಿಯರ ಶೋಷಿತ-ಶಾಸಿತ ಬದುಕದು ತೆರೆದ
ಚೈತ್ಯಾಕ್ಷಿಗಳ ಮುಂತೆ ಸುಳಿಯುತಿರುತಿರೆ,
ಹಾ! ಪೆಣ್ಗಳ ಬಾಳ್ ಕಣ್ಣೀರಲ್ಲದೆಯೆ ಸುಖದ
ಬೀಡು ಎನಲಂಟೇ? ಕಣ್ಣೀರೇ ಕಣ್ಣೀರು!
ಸುವಿದ್ಯಾ ದಾರಿದ್ರ್ಯ ಸ್ವಾತಂತ್ರ್ಯ ದಾರಿದ್ರ್ಯ
ಕಾರುಣ್ಯ ದಾರಿದ್ರ್ಯ ಆರ್ಥಿಕ ದಾರಿದ್ರ್ಯಗಳ
ನರಕ ಕೂಪದಲಿ ಹೆರುವ ಯಂತ್ರಗಳೆನಿಸಿ ಕ್ರಿಮಿ
ಕೀಟಗಳ ಮಾಳ್ಕೆಯಲಿ ಬಾಳಿಗೈದು ಸುಮ್ಮನೆ

→

ಸಂದುಹೋಪ ಸತದೃಷ್ಟ ಜೀವಿಗಳ ಕಥೆಯುಂ
ಕರುಳ್ ಕೊರೈಸುವನಿತು ಕಡು ಕರುಣಾಜನಕಂ.
ಅಂತುಮಲ್ಲದೆಯುಂ ಮುಗ್ಧಮನದ ಭಾವಿನಿಯರ್ಗೆ
ಶಾಸ್ತ್ರಸೂತ್ರಗಳ ಸಂಕೋಲೆಗಳಿಂದೆ ಕೊನರ್‍ದು
ಮತಿಮೌಢ್ಯದಿಂ ಬಾಳ್ಗೆಡುಗು. ಮುಂಬಟ್ಟೆಗೆಡುಗು.
ಅರೆಹೊಟ್ಟೆ, ಅರೆಬಟ್ಟೆ, ಅರೆಜಾನದೊಳ್ ನಿಚ್ಚ
ಪ್ರಗತಿಯೆ ಗೆಡುಗು. ತ್ರಿಲೋಕ ಜ್ಞಾನವೆ ಗೆಡುಗು.
ಯೋಚಿಸಿ ನೋಡೆ, ದಿವ್ಯ ಜೀವನನೆ ಕನ್ನಡಿಯ
ಗಂಟೆನೊಲ್ ನಿರಾಶಾದಾಯಕಂ ; ಎಂಬೊಂದು
ಸಮ್ಯಕ್ ದೃಷ್ಟಿಯ ವಿಶ್ಲೇಷಣೆ ಮನೋಭಿತ್ತಿಯಲಿರೆ
ಒಡಲೆಲ್ಲ ದುಗುಡದ ಕಡಲು ತೊಡೆಯುದಂತೆವೊಲ್ !

ರುಂದ್ರ ಚಿಂತನೆಯು ಪಾತ್ರೆಯಂಚಿಸಲಿ ತಕಪಕನೆ
ಕುದಿದೆದ್ದುದೊ ಎನಲ್ ಮನದೊಳ್ ಪ್ರಾರ್ಥನೆಯೊಂದು
ಪೊದಳ್ದುದು ಕಣ್‌ಮುಗಿದು ಕೈಮುಗಿದು ಸಲಿಸಿದಳ್
ಕಮಲಾಂಗಿ ಪ್ರಾಣಮಯ ಧ್ಯಾನಮಯ ದನಿಯಿಂದೆ.

"ಓ, ಪ್ರಭುವೆ! ಮನುಕುಲದಲಿ ಪುಟ್ಟಿದೊಡಾಯ್ತೆ ? ಈ
ಬಾಳ್ಬದುಕು ಸುಂದರವಿರವೇಡಾ ? ಕಂಗಳಿರ್ದ
ಕುರುಡ ಜನ ಮಹಾ ಸಾಗರದ ಕಲ್ಮಶಂ ಬಳಿಯೆ
ಕೇವಲ ಕೆಲವು ಹಸ್ತಗಳ್ ಸಾಲ್ಗುಮೆ ಪ್ರಭುವೇ !
ಎಂತೀ ಪರಮ ರಾಷ್ಟ್ರದ ಮುನ್ನಡೆ ? ಇನ್ನೆಂತು
ಜ್ಞಾನದ್ಯೈಸಿರಿಯ ಝರಿ ಝುಳಝುಳಿಸಿ ಪರಿವುದೊ
ರಾಷ್ಟ್ರಾದ್ಯಂತಂ ? ದಯೆಗೈದು ಕೃಪೆದೋರು !"

ನೋವು ಬೇವುಗಳ ರಸಮುಂಡೊಡಲ ಪ್ರಾರ್ಥನೆಯುಂ
ನಡೆದತ್ತು ರಾಷ್ಟ್ರೀಯ ದುಸ್ಥಿತಿಗೆ ಮರ್ಮರನೆ →

ಮರುಗಿ. ಕಮಲಾದೇವಿಯ ದೂರದೃಷ್ಟಿ ಹರಿದುದು
ಜಗಜಗಲ, ಎಲ್ಲಡೆಯುಂ ರಾಷ್ಟ್ರಗಳಭಿವೃದ್ಧಿಯ
ಹಿರಿಮೆ ಮೇಣ್ ಸಂಜೀವನ ಯೋಗಮಂ ನೆನೆದು
ತಮ್ಮವರ ಹೀನ ಸ್ಥಿತಿಗಾಗಿ ಮನಮರುಗುತೆ.
ಓರಗೆಯ ಗೆಳತಿಯರ ಬಳಗಮಂ ಕಟ್ಟಿದಳ್
ಸಾಮಾಜಿಕ ಸೇವೆಗೆ ಒಮ್ಮನದಲಿ ಸಲ್ಲುವ
ಮಾಳ್ಕೆಯಲಿ ಕಲಿಕೆಯ ಬಿಡುವಿನ ವೇಳೆಯೊಳ್ ಬಡ
ಜನಕೋಟಿಯ ಮನವರಳಿಸಿ ಹರಿಸುವಳ್ ಸರಳ
ಸುಲಲಿತ ವಾಗ್ಝಾನ್ಹವಿಯಂ ಮನೋಜ್ಞಮಾಗಿ.

ಡಾ|| ಆ್ಯನಿ ಬೆಸೆಂಟ್ ಮೇಣ್ ಮಾರ್ಗರೆಟ್ ಕಸಿನ್ಸ್
ಮೇಣಿತರ ಧೀಮಂತ ಒಡನಾಡಿ ಮಹಿಳೆಯರ
ಸಹಕಾರದೊಡಂ ಮಹಿಳೆಯರನು ಸಂಘಟಿಸಿ
"ಆಲ್ ಇಂಡಿಯಾ ವುಮೆನ್ಸ್ ಕಾನ್‌ಫರೆನ್ಸ್"- ಅನ್ನು
ದೆಹಲಿ ನಗರಿಯಲಿ ನಡೆಸುವೊಂದು ದೃಢನಿರ್ಣಯ
ಮೂಡಿದತ್ತು ಪೂರ್ವದಿಯಲಿ ಶಿಲಾ ಕಾಠಿಣ್ಯ
ಮಿಡಿಮೊಗ್ಗು ಮೂಡಿದಂತೆ. ಸಮ್ಮೇಳನಂ ಗುರಿ
ಗೊಂಡ ಪ್ರಣಾಳಿಯಲಿ–ಸ್ತ್ರೀಪುರುಷ ಸಮಾನತೆ,
ಆರ್ಥಿಕ ಸ್ವಾತಂತ್ರ್ಯ, ವೈಯಕ್ತಿಕ ಸ್ವಾತಂತ್ರ್ಯ,
ಪತಿ-ಪಿತರ ಆಸ್ತಿಗಳಲಿ ಸಮಪಾಲು, ಬಾಲ್ಯ
ವಿವಾಹ ನಿಷೇದ, ವಿಧವಾ ವಿವಾಹ ಈ ಎಲ್ಲ
ಮಹತ್ತರ ವಿಚಾರಂಗಳಂ ಅಳವಡಿಸುತೆಲ್ಲ
ಪ್ರತಿನಿಧಿಗಳ ಒಮ್ಮತದಿಂದಧಿಕೃತಗೊಳಿಸಿ
(ಅಂದಿನ) ಸೆಂಟ್ರಲ್ ಅಸೆಂಬ್ಲಿಯ ಮುಂದೆ ತರುವೋದು
ಸದುದ್ದೇಶಂ "ಆಲ್ ಇಂಡಿಯಾ ವುಮೆನ್ಸ್

→

ಕಾನ್‌ಫರೆನ್ಸ್" ಕೂಡಿಸಿದುದು ಜಡ ನಿದ್ರಿತರ
ಕಾಲವಮಾನವಲೊಂದು ಪ್ರಚಂಡ ವಿಜಯೀ
ಯಾತ್ರೆಯ ದಂಡು!

ಮುಂದೆ ಯುವಜನ ಗೋಷ್ಠಿಯುಂ ನಡೆಯೆ
ಧವಳಾಂಬರ ಧಾರಿಣಿ ಕಮಲಾದೇವಿಯುಂ ತಾಂ
ಚಂದ್ರನ ಚಂದ್ರಿಕೆಯೆ ನೃನೆತ್ತಂತೆವೊಲ್ ನಡೆತರೆ
ಸ್ವಾಗತ ಸಮಿತಿಯ ಮುಂಬಿಗ ಹರೀಂದ್ರನಾಥ
ಚಟ್ಟೋಪಾಧ್ಯಾಯಂ ಬೆಕ್ಕಸ ಬೆರಗುವಟ್ಟಂತೆ
ನೆಟ್ಟ ಕಣ್ ಕೀಲಿಸದೆಯೆ ನಿಂದಂ ಕೈಮುಗಿದು
ಸ್ವಾಗತಿಸುವುದಂ ಮರೆತು! ಕಮಲಾದೇವಿಯುಂ
ಕಣ್ಣಿಟ್ಟು ನೋಡಿದಳ್, ಗಂಭೀರ ಮಾನವನ
ಸುರಮ್ಯ ಪ್ರತಿಛಾಯೆ ಕರುವಿಟ್ಟು ನಿಲಿಸಿದಂತೆ
ಕಣ್ಸೆಸೆದ ಮೂರ್ತಿಯಂ. ನವನವೀನ ಮನೀಷ!
ಪ್ರಪ್ರಥಮ ದರ್ಶನದೊಳ್ ಪರಸ್ಪರ ಮಾತು
ಮೂಕ ಮೌನಮಾಗೆ, ಹೃನ್ಮನಂಗಳರಳಿ ದಳಬಿರಿದು
ಸ್ನೇಹ ಪ್ರೇಮಗಳಾಗರಮಾದುವು ದಿವಿನಾದ
ಪಾಶದಿಂ ಬಗಿದು ಕಟ್ಟಿದ ಮಾಳ್ಕೆಯಲಿ. ಅಹಾ!
ಈರ್ವರುಂ ಮಂತ್ರಮುಗ್ಧ ಮೋಹಕತೆಯಲಿ ಮೈ
ಮರವಟ್ಟು ನೋಡಿಯೇ ನೋಡಿದರ್ !ಮತ್ತಮಾ
ಸಭೆಯೊಳಗಣ ಕಾರ್ಯಕಲಾಪಗಳ ನಡುನಡುವೆ
ನೋಡುತಿರ್ದರ್ ಮರಳಿಮರಳಿ; ಮನಃಕಲ್ಪಮಂ
ಕಾಡುತಿರ್ದರ್ ಹೊರಳಿ ಕೆರಳಿ; ಆತ್ಮ ಸಾಕ್ಷಿಗೆ
ಚ್ಯುತಿ ತಾರದೊಲ್ ಸೋಲ್ದು-ಗೆಲ್ದು ಕೌತೂಹಲಾ-
ವಿಷ್ಟತೆಯಲಿ. ಚಿಂತನಮಂಥನಗಳಅನುಪಮ

→

ಶ್ರದ್ಧಾ ವೈಖರಿಯಲಿ ಕಳೆದುದಧಿವೇಶನಂ.
ಕಮಲಾದೇವಿಯುಂ ತಾನಂದು ಕನಸಿನಲಿ
ಕಂಡ ಯುವ ಘನಂ ಇವನಿದ್ದನೋ ಎಂದೆನುತೆ
ತನ್ನೊಳ್ ನೆನೆದಳಂದಿನ ಸಹಜರೂಪಿನಿಂ
ಮೂಡಿವಂದ ಕನಸಿನ ಚಿತ್ರವಂ. ಆ ದಿವ್ಯ
ಹರುಷಪುರುಷ ಮೂರುತಿಯೀ ತೆರದಿ ಗಂಭೀರ
ಧೀರ ಸೌಂದರ್ಯದ ಶರೀರವಂ ತಾಳ್ದೀಗೆ
ಬಂದೆನ್ನ ಎದುರ್ವೆತ್ತು ನಿಂದನೆ ? ಎಂಬೊಂದು
ಭಾವ ಚಿಂತಾಮಣಿ ಮಿಡಿದುದು ಮನವಂ. ನುಡಿಯೆ
ಬಾಯಿ ಬಾರದಿರೆ ಮಿಣ್ಣನಾದಳ್ ಕಮಲಮುಖಿ.
ಯುವ ಪ್ರಭೃತಿ ಹರೀಂದ್ರನಾಥಂ ಚೆಚ್ಚರಿಸೆ
ಚಿತ್ಕಿರಣಗಳ ಜ್ವಾಲೆಯುಂ ಚಳಚಳಿಸಿ ಧೀರ
ಗಾಂಭೀರ್ಯದಿಂದೆ ಸುಖಮುಚ್ಚೈಗೆ ಸಂದು ಹೋದಂ
ಚಿನ್ಮುಹೂರ್ತಂ ಘನಿಸಿ. ಒಡನೆ ತಾನೆಳ್ಚತ್ತು
ಪುಟಿದು ಪ್ರಸನ್ನತೇಜದಿಂ ಪ್ರೇಮಾಲಾಪ
ಸ್ವರವಂ ಹಾಡಲುರೆ ಸೋತು ನಿಂದಳ್ ಕಮಲ
ದಳಲೋಚನೆ ವರ ಲಿಖಿತ ಚಿತ್ರದ ಪಾಂಗಿನಲಿ.
ಹೃದಯದ್ವಯಂ ಮಧುಮಧುರವಾದಂತೆ
ಭಾವಕೋಶಂ ಬಿರಿದು ಉಕ್ಕಿ ಹರಿದುದು ಪ್ರೇಮ
ರಸವಾಹಿನಿ. ಗಿಡುಮರದಿ ನಲಿನಲಿದು ಸುರಗಾನ
ಹಾಡಿದುವು ಹಕ್ಕಿ. ಸಂಭ್ರಮಿಸಿ ಝೇಂಕರಿಸಿದುವು
ತುಂಬಿ. ಸುಯ್ದುಯ್ದು ಸುಯ್ಯನೆ ಬೀಸಿತು ತಂಗಾಳಿ.
ಸುಗಂಧದ ಕಂಪನೆರಚಿತ್ತು ಪೂ ನಳನಳಿಸಿ.
ತೋಷದಿಂ ಮುಗುಳು ಬೀರುತಲಿತ್ತು ಯುವಗೋಷ್ಠಿ.

→

ತಿಳಿ ನೀಲದಾಗಸದಿ ಒಯ್ಯನೊಯ್ಯನೆ ಮುಗಿಲ್
ದಂಡು ಚಲಿಸುತಿರ್ದುವು ಸುಡುಬಿಸಿಲಿಗೆ ಮಾರೊಡ್ಡಿ.
ಇಕ್ಕೆಡೆಯು ಗೆಣೆಯ ವೃಂದ ಸಂತಸದಿಂ ಹಸಿ
ಹಾಡಿ ಪಾಡಿ ನಲಿನಾಡಿ ಮುಳುಗಿತು ಮೈಮರೆತು.

ಮುಂದೆ ಮಂಗಳ ಮುಹೂರ್ತಮಡರಿ ಬರಲ್‌ದಿನ
ದಿನಂ ಗೆಣೆಯ ವೃಂದದ ತೋಷ ಕೂಟದಲಿ ನವ
ದಂಪತಿಗಳಾದ ಕಮಲಾದೇವಿ ಮತ್ತಂ
ಹರೀಂದ್ರನಾಥಂ ಗೃಹಸ್ಥಾಶ್ರಮಂ ಪೊಕ್ಕರ್.
ಸಾಮಾಜಿಕ ಸೇವಾ ಸೈಖರಿಗೆ ಕರಂಗಳ
ಬಲುಹು ದ್ವಿಗುಣಿಸಿಪತ್ತು ಪತಿಯುಂ ಒಡಗೂಡಿ.
ನಾಟಕ ಕಣದಲಿ, ಕರಕುಶಲಕಲೆಯೋಳ್ಗಿಯು
ಕ್ಷೇತ್ರದಲಿ, ದೀನದಲಿತರ ಸೇವೆಯುಲಿ. ಅಕ್ಷರ
ದಾನ ಯಜ್ಞದಲಿ ಒಗ್ಗೂಡಿ ಪಾಲ್ಗೊಳ್ಳುತ್ತಿ
ಹೃನ್ಮಗಳ ಆಕರದಿಂ ಸಲಿಸಿದರ್ ಸೇವೆಯಂ.

ಸುಮನಶೀಲೆ. ಕಮಲಾದೇವಿಯುಂ ತಮ್ಮ ನಲ್
ಪೆಸರ–ಲೋಕ ಪ್ರಿಯ ಕಸ್ತೂರಿ ಪರಿಮಳದೊಲ್
ಘಮಘಮಿಸುತಲಿರ್ದ ಪೆಸರ–ಮುಂತೆ ಸಂಲಗ್ನ
ಭರಿತ ಜೀವನದ ಕುರುಹಾಗಿ ಕಮಲಾದೇವಿ
ಚಟ್ಟೋಪಾಧ್ಯಾಯ ಎಂಬುಪಾಧಿಯು ಪೊತ್ತುಕೊಳೆ
ಕಮಲಾದೇವಿ ಚಟ್ಟೋಪಾಧ್ಯಾಯ ಎಂದಾಯ್ತು
ಪೆಸರ್ ಮುಂದಿನ ಕಾಲಮಾನಂ. ಒಲುಮೆ ಬಲುಮೆ
ತುಂಬಿ ತುಳುಕಿ ಸ್ನೇಹಾನುರಾಗದ ಪ್ರೇಮಮಯ
ಸಂಸಾರ ರಥಂ ನಡೆದುದು ಹಲಕೆಲವುಕಾಲ
ಮಾತ್ರಂ. ಏತನ್ಮಧ್ಯೆ, ಪಾರಸ್ಪರಿಕ ಪ್ರೇಮ →

ತಪಸ್ಸಿನ ಕುಸುಹಾಗಿ ಶಿಶು ಸುತನಂ ಪಡೆಯುವ
ಸೌಭಾಗ್ಯ ಲಭಿಸಿ ತಾಯ್ತನದ ಅನುಭವ ಘನಿಸಿ
ಪಕ್ವವಾಗೆ ಹೃದಯ ಗಂಗೋತ್ರಿಯಲಿ ಉಕ್ಕಿ
ಹರಿದತ್ತು ಕ್ಷೀರಧಾರೆಯ ಮಹಾಪೂರ. ಶಿಶು
ರಾಮಕೃಷ್ಣಂ ಪೆತ್ತವರ ಕಣ್ಮಣಿಯು ತಾನಾಗಿ
ಮೊಲ್ಲೆಯ ಮಿಡಿಮೊಗ್ಗನೆ ಮುಂಬೆಳೆಯುತಲಿರ್ದಂ
ದಿನದಿನಂ ದಳಬಿರಿವ ಪಾಂಗಿನಲಿ. ನವೋನವ
ದಂಪತಿಗಳ್ ಕಂದನ ಪಾಲನೆ ಪರಿಪೋಷಣೆ
ಮೇಣಕ್ಕರೆಯಲಿ ಸರಿಸಮತೆಯಿಂ ಪಾಲ್ಗೊಂಡು
ಸಲಹಿದರ್ ಎಡವಿಡದೆ. ಆದೊಡದು ಧನ್ಯತೆಯ
ಹಿತವನಿನಿತು ತಾರಲಿಲ್ಲ, ಸಮಾಜ ಸೇವೆಯಿಂ
ಕುದಿಗೊಂಡು ಹರಿತವಾದ ಮನದಲುಗಿಗೆ. ನಿಚ್ಚ
ಕಿನಿಸಿಗೆಯ ಸಾಮ್ರಾಜ್ಯ ಕವಿದು ತೀವ್ರತರದೊಳ್
ಘಾತಿಸುತಿರೆ ಹೃನ್ಮನಗಳಂ ವೇದನೆಯೊಂದೆ
ಸರ್ವತ್ರ ಕೂಳು ಚಿಂತನಾದ್ರವ್ಯಕೆ. ಅಂತಿಂತು
ಕೆಲವಾನು ವರ್ಷಮಾನಂ ಸಂದುದು ದಾಂಪತ್ಯ
ಜೀವನದಲಿ. ಬಳಿಕಂ ಕಮಲಾದೇವಿಯುಂ ನೆರೆ
ಸಂಸಾರ ಬಂಧವಂ ಕಿತ್ತೊಗೆದು ಶೃಂಖಲಾ
ಬದ್ಧ ಜೀವನೀಯ ಬನಕೆ ಆತುರಾತುರದ
ವಿದಾಯವನಿತ್ತು ಕಂದನ ಪೋಷೆಯ ಭಾರವಂ
ವಹಿಸಿದರ್ ಮಾತೃತ್ವದ ಹಿರಿಮೆಯಂ ಮಾನಿಸಿ.

ಭಾರತೀಯ ಸಂಸ್ಕೃತಿಯ ಅದ್ಭುತ ಹರವಿನೊಳ್
ಹಬ್ಬಿ ಹರಡಿದ ಕೀಳುವಗೆಯ ಜಾತಿ ಭೇದ
ಅತಿಪಿಡುಗು. ಮೇಲು ಕೀಳುಗಳ ವರ್ಗೀಕರಣ

→

ಇವುಗಳಿಂಗೆ ಕಿರೀಟವನಿಟ್ಟ ತೆರದಿ ದಿವ್ಯ
ಬಡತನ-ಜಡತನಗಳ ನಂಟು ತೊಡೆಯಲಾಗದ
ಪರಿಯಲಿರೆ ಜನಪ್ರಗತಿಯ ಪಥದಲೊಂದು ಪೆರ್
ಬಂಡೆಯೊಲ್ ಮಾರೊಡ್ಡು. ಬಡತನದ ಪಡಿನೆಳಲಲಿ
ಬಾಳ್ವ ಬಡ ಕರಕುಶಲ ಕಲಾವಿದರ ಜೀವನ
ಸಂಕಷ್ಟ ಪರಿತಾಪಗಳಿಂ ನರಳುತಿರ್ದುದು
ತಾನ್ಗೆಯ್ದ ಕಲಾಕೃತಿಗಳನುಂ ಕಣ್ಣೆತ್ತಿ
ನೋಳ್ಪ ಮತಿಮಾನ್ಯರಿರದೆ. ಕಮಲಾದೇವಿಯುಂ
ಬಡ ಕಲಾವಿದರ ಕರಕುಶಲ ಕಲೆಯಂ ಗುರುತಿಸಿ
ಸರ್ವವಿಧದಲಿ ಮುಂದೈದರ್ ಮುಕ್ತಮನದಿಂದೆ
ಸಹಾಯ ಹಸ್ತವ ನೀಡೆ. ಕಲೆಯಿರ್ದು ಕೃತಿಯಿರ್ದು
ಸರ್ವದಯೆ ಸಹಕಾರ ಆರ್ಥಿಕ ಸಮುದಾಯಗಳ
ಬಡತನದ ಉರಿಬೆಂಕಿ ಸುಡುತಿರೆ, ಉರಿನಾಲಿಗೆ
ಚಾಚಿ ನೆಕ್ಕಿ ರಕ್ಕಸಿಯ ಹಿಂಸ್ರಕ ಪಲ್ ಮಸೆವ
ರೋಷವೆಂಬಂತೆ ಬದುಕು ದುರ್ಬರಗತಿಗೇರಿ
ನರಳುತಿರ್ದತ್ತು ಹೊರಳಿಹೊರಳಿ. ಅವರದೊಂದು
ಕಣ್ಣೀರ್ ಬಾಳಿಗೆ ಬೆಳಕಿನ ಹೊಂಗಿರಣಗಳ
ಹರಿಸೆ ನಿರ್ವಹಿಸಿದಮಿತ ಶ್ರಮಿಕ ಸಾಧನೆಯ
ದಿವ್ಯ ಪಾರಾವಾರ ಯಾತ್ರೆಯುಂ ಬೀಸಿಬಹ
ಸಂಕಷ್ಟಗಳ ಪವನಹತಿಗೆ ತತ್ತರಿಸಿಯುಂ
ಹಿಮ್ಮೆಟ್ಟಿದಳಿಲ್ಲ ಪಿಡಿದ ಕಾರ್ಯಕ್ಕೈಗೂಡಿ
ಬರುವನ್ನೆ. ಹೃತ್ಕೋಶದಕ್ಕರೆಯ ಹೊರೆಯಂ
ಹೊತ್ತು ಹಾಲ್ಜೇನಿನ ಸವಿಯಂ ಹರಿಸುತಿರಲ್,
ಜಡಭರತರ ಜಡನಿದ್ದೆಯುಂ ಹರಿದು ಎಚ್ಚತ್ತು

→

ಕೂಡುವರ್ ಚಳವಳಿಯ ರಂಗದಲಿ. ಸ್ತ್ರೀಪುರುಷ-
ರೊಗ್ಗಿನ ವಿಜಯ ಚಿನ್ಹೆಯ ತರತರದ ಪ್ರಗತಿಯ
ಲಕ್ಷಣಗಳ್. ಕಂಗೊಳಿಸಿದುವು ಹೆಜ್ಜೆ ಇರಿಸಿದೆಡೆ
ಎಡೆಗಳಲಿ, ಸಹಚರಿಗಳ ಸಹಕಾರದಿಂ.
ನಿರಕ್ಷರೀ ಜನರ ಮಾರ್ಗದರ್ಶನಗೈದರಿಲ್ಲ.

ಬ್ರಿಟಿಷರ ಆಳ್ವಿಕೆಯಲಿ ಅನ್ನೆಬರಂವಿಂಥ
ಉಪಕರಿಸಿದರಿಲ್ಲ. ಮನುಕುಲದಲಿ ಪುಟ್ಟಿಯುಂ
ಮಾನವೀಯತೆಯನರಿಯದೆ ಬಾಳ್ವರ ಕಣ್ತೆರೆಸೆ
ಪಣಕಟ್ಟಿ ಉಜ್ವಲೋಜ್ವಲ ದೀಪದಾರಿಣಿಯೋ
ಆಗಿ ಕೀರ್ತಿವೆತ್ತ ಕರುಣಾಮಯಿ! ಎಲ್ಲೆಲ್ಲಿ
ಬೆಳಕಿಲ್ಲವೋ ತಾನಲ್ಲಿ ಜೆಂಬೆಳಕೆನೆ ಸಲ್ವಳ್
ದೇವಮಾನಿನಿಯೊಲ್! ದೂರದೂರದ ಹಳ್ಳಿ
ಹಳ್ಳಿಗಳಿಗೆ ಕಾಲ್ನಡೆ ಪಯಣವಲ್ಲದೆ ಬೇರೆ
ಗತಿಯಿಲ್ಲ. ತನ್ನವರ ತಂಡದೊಡಂ ಎಡೆಎಡೆಗೆ
ಸುಡುವಿಸಿಲ ವೇಗೆಯಲಿ ಸ್ವೇದಧಾರೆಯುಂ ನೆರೆ
ಸುರಿಸುತ್ತೆ ದೇಶಕೋಶದ ಮೂಲೆ ಮೂಲೆಯುಂ
ಸುತ್ತಿ ಅಂಡಲೆದು ಜಡಮತಿಗಳಂ ಮುಟ್ಟಿ ತಟ್ಟಿ
ಬಡಿದೆಬ್ಬಿಸುವ ಹುಮ್ಮನಲಿ ಕಾರ್ಯ ನಡೆದತ್ತು.
ಪ್ರಚಾರ ಪ್ರವಚನಗಳುಂ ಮೇಣ್ ಅನನ್ಯ
ಪ್ರಯತ್ನದಿಂ ಪರಮ ಪರಿಶ್ರಮದಿಂ ಎದೆಯ
ವಿಶ್ವಾಸದಿಂ ದಿವ್ಯ ಜ್ಞಾನದಿಂ ರಾಷ್ಟ್ರೀಯ
ಹಣೆಬರೆಹಮಂ ತಿದ್ದುವೊಂದು ನಿಜ ತೇಜದಿಂ
ನಿರುತಳಾದಳ್ ಕಮಲೇಂದು ಮುಖಿ. ತಾನೈದಾ
ಎಡೆಎಡೆಗಳಲಿ ಎನಿತೆನಿತೊ ಶಾಲೆಗಳೆದ್ದುವು

→

ವರ ವಿದ್ಯಾಪ್ರಸಾದವಮಂ ಹಂಚುವ ತೆರದಲಿ.
ಜಗಲಿಯಲಿ, ಹಟ್ಟಿಯಲಿ, ಮರದಡಿಯಲಿ ಎಲ್ಲಿ
ಒಂದಿನಿತು ತಾಣವೋ ಅಲ್ಲಿದ್ದುವತಿ ಸಣ್ಣ
ಪುಟ್ಟ ಶಾಲೆಗಳು ಬಡಮಕ್ಕಳ ಏಳ್ಗೆಯಂ
ಬಯಸಿ; ರಾಷ್ಟ್ರದೇಳ್ಗೆಯಂ ಹಾರೈಸಿ; ಮತ್ತಮಾ
ಸ್ತ್ರೀಯರ ಒಳಗಣ್ ತೆರೆಸುವ ಸಂಯೋಜನೆಯ
ರಂಗಕೆ ಅಡಿಗಲ್ ಇಡುವ ಸದುದ್ದೇಶದಿಂ.

ಬ್ರಿಟಿಷ್ ಭಾರತದ ಬಡತನ ಮೇರೆ ಮೀರಿರ್ದು
ಆಳ್ವರ ಅಲಕ್ಷ್ಯದಿಂ ನರಳುತಿರ್ಪ ಭಾರತ
ವರ್ಷದ ಸಮೀಕ್ಷೆಯಲಿ ಸಮ್ಯಕ್‌ದೃಷ್ಟಿಯಿಟ್ಟದ
ಜೆ. ಹೆಚ್. ಕಸಿನ್ಸ್ ದಂಪತಿಗಳುಂ, ರಾಷ್ಟ್ರೀಯ
ಸೃಷ್ಟಿ ಸಂಪದಂ ಸರ್ವಾಂಗ ಸುಂದರತೆಯಲಿ
ವಿಜೃಂಭಿಸಿಯುಂ ಜನ ಜೀವನವದು ಆರ್ಥಿಕ-
ಬೌದ್ಧಿಕ ದುಸ್ಥಿತಿಯಲಿ ನರಳುತಲಿರೆ ಬ್ರಿಟಿಷರ
ಕಡು ಸ್ವಾರ್ಥವದು ಕಾರಣ ಎಂಬುದನರಿತವರ್. ಜನ
ಗಣಮನವನರಳಿಸುವ ಸಂಯೋಜನೆಯಲಿ ತನು
ಮನಂಗಳಂ ಮುಡುಪಿಟ್ಟು ಸುವಿದ್ಯಾ ಪ್ರಚಾರ
ಕೈಕೊಂಡ ಸಹೃದಯವಂತ ಧೀರೋದ್ದಾತ
ಜೆ. ಹೆಚ್. ಕಸಿನ್ಸ್ ಅಪೂರ್ವ ಪ್ರಜ್ಞಾನಿ. ಭಾರತದ
ವೇದಾಂತ ಪರಿಮಳ, ಸಂಸ್ಕೃತಿಯ ಸೊಬಗು ನೋಣ್
ಪ್ರಕೃತಿಯೈಸಿರಿಯ ಮಹೋನ್ನತಿಯನರಿದರಿದು
ಮನಗೊಂಡು ತನ್ನಾತ್ಮಮಂ ಸಂಸ್ಕೃತಿಯ ಸಿರಿ
ಸೊಬಗಿನಲಿ ಅದ್ದಿ ವಿಚಾರ ವಾಹಿಯಲಿ ಈಸಿ
ಘನನೆತ್ತು ಜಾನಿಸಿದೊಡೆ ಭಾರತ ಧಾತ್ರಿಯುಂ

→

ಪುಣ್ಯಭೂಮಿ–ಪವಿತ್ರ ಭೂಮಿ ಎಂಬುದು ಸತ್ಯ. ಅರ್ಥಾತ್ ದುರದೃಷ್ಟ ಪರವಶತೆಯಲಿಂದೊರ್ಮೆ ಪಾರತಂತ್ರ್ಯವನೊಪ್ಪಿದುದರ ಅಭಿಯೋಗವಂ ಅಳಿಸುವುದೆನೆ ಜನಕೋಟಿಯಂ ವಿಶ್ವವಿದ್ಯಾಲಯವಂ ಪುಗಿಸಿ ಗೆಲಿಸುವುದಲ್ಲದೆ ಗತಿಯಿಲ್ಲ ಎಂಬೊಂದು ಆತ್ಮ ನಿರ್ಣಯಕೆ ಪಣ ಕಟ್ಟಿದರ್. ದಂಪತಿಗಳ ಹೃನ್ಮನಗಳ್ ಪಲ್ಲವಿತ ಸುಂದರ ಬಂಧುರ ಅಭಿಲಾಷೆಯಲಿ ಭಾರತ ಜನನಿಯಾ ಕಂಬನಿಯ ತೊಡೆಯೆ ಶ್ರಮದಾನಂಗೈದು ಸತತ ದೇಹ ಇಕ್ಷುವಂ ಹಿಂಡಿ ಹಿಪ್ಪೆಗೈದ ಧನ್ಯರ್ !

ಜೆ. ಹೆಚ್. ಕಸಿನ್ಸ್ ಹಿಂದೂತ್ವವಂ ಒಪ್ಪಿ 'ಜಯರಾಂ ಕಸಿನ್ಸ್' ಎಂಬ ನಾಮಧೇಯವಂ ಪಡೆದು ಹಿಂದೂ ಎನಿಸಿದರ್ ಭಾರತದಲಿ ನೆಲೆ ನಿಂದು. ವಿದ್ಯಾಕ್ಷೇತ್ರದೊಳ್ ಪದಾರ್ಪಣೆಗೈದು ಜ್ಞಾನದೀವಿಯನುರ್ಗಿಸೆ ತವಾಯುರ್ಮಾನವಂ ಸವೆಸಿದರ್ ಭಾರತೀಯರಿಗಾಗಿ. ವಿದ್ಯೆಯಂ ಪ್ರಚುರಪಡಿಸಲೆಲ್ಲ ಕಡೆಯುಂ ಪ್ರವಾಸವಂ ಕೈಕೊಂಡು ಶಾಲಾ ಕಾಲೇಜುಗಳಂ ತೆರೆದುನಡೆಸಿ "ಉಪಕುಲಪತಿ ಜಯರಾಂ ಕಸಿನ್ಸ್" ಆಗಿ ಎಲ್ಲರ ಮೆಚ್ಚುಗೆಯಂ ಪಡೆದು ಕೀರ್ತಿವೆತ್ತ ಮಹೋದಯಂ ! ಬ್ರಿಟಿಷರ ಆಳ್ವಿಕೆಯೊಳ್ ತಮ್ಮ ಧೈರ್ಯವಂ ದಿಟ್ಟತನದಿಂ ಪ್ರದರ್ಶಿಸಿ ನಿಜ ಪರಿವರ್ತನೆ ಹೊಂದಿ ಸಾಹಸ ಕಾರ್ಯವೆಸಗಿ, ಭಾರತಿಯ ಔರಸ ಪುತ್ರನೆನೆ ವಿಜೃಂಭಿಸಿದರ್ ಜಯರಾಂ ಕಸಿನ್ಸ್ !

→

ಸ್ವಯಂ ಸೇವಕರೆನೆ ಸೇವೆ ಸಲಿಸಿದ ಅನುಪಮ
ಬಾಂಧವ್ಯದೀ ವಿದ್ಯಾಧಿಕಾರಿಯೀ ಪರಮ
ಧೀಮಂತನೀ ಪವಿತ್ರತಮ ಪ್ರೇಮದೀ ಪುಣ್ಯ
ಕಾರ್ಯದೀ ಅಮಿತಶ್ರದ್ಧೆಯೀ ಆತ್ಮತೋಷದೀ
ಪರತತ್ವರಸಪಾನದೀ ನಿತ್ಯ ಸೇವೆಯಾ
ನೇಮದೀ ಜನ್ಮ ಸಾಫಲ್ಯದೀ ಪೌರಸ್ತ್ಯ
ಧರ್ಮವೇತೃವೀ ದೀನ ಬಂಧುವೀ ನಿಸ್ಸೀಮ
ಭಾತೃಭಾವದೀ ದೇವಮಾನುಷ್ಯ ವ್ರತದೀ
ಶಾರದೆಯ ಆರಾಧಕನೀ ಯುವ ಮನೀಷಿಯ
ಸೇವಾಕಾರ್ಯಂ ಜನ್ಮಜನ್ಮಗಳ ಸುಕೃತದ
ಹೊನಲೇ ಹರಿದು ಬಂದವೊಲ್ ಘನಂ. 'ಪ್ರಜ್ವಾಲಿತೋ
ಜ್ಞಾನಮಯಃ ಪ್ರದೀಪಃ' ಎಂಬೊಂದು ನುಡಿಗಟ್ಟು
ಸರ್ವತ್ರ ಸಲ್ವುದವರಿಂಗೆ. ಭಾರತ ರಾಷ್ಟ್ರದ
ಸ್ವಾತಂತ್ರ್ಯ ಹೋರಾಟಮುಂ ಬರಿಗೈಲಿ ಹೊಡಿ
ಸುಡುಗೋಲಿಗಳಿಗೆದುರ್ವೆತ್ತ ಸ್ವಯಂ ಸೇವಕರ
ಎರ್ದೆಯಲಿ ಕೆಚ್ಚು ಉರಿದಿರೆ ಜಗಜಗಿಸುವ ಜಯ
ಶೀಲತೆಯ ನೆಚ್ಚಿರ್ದುದು ಹೃದಯ ಕುಂಡದಲಿ
ಎಂದಿಗುಂ ಮಾಸಿ ಮುದುಡಿ ಬಾಡದ ಮಾಳ್ಕೆಯಲಿ.

ದಿವಸಾನಸಮಯದೊಳ್ ಪಡುವಣದ ಕರ್ನೀಲ
ಭಿತ್ತಿಯಲಿ ಅಶ್ವಾಶ್ವ ರಥದೊಳೈತಂದನೋ
ಎನಲ್ ಥಳಥಳಿಪ ಅರುಣಾರುಣಂ ಒಯ್ಯನೆಯೆ
ಇಳಿತಂದನ್ ಮಹಾ ಜಲಧಿಯ ತಟನಿಗೆ. ಸ್ವರ್ಣ
ಕಿರಣಗಳ ಶಾಂತಿಯಿಂದಲಿ ಕೆಂಗಲಿಸಿದತ್ತು
ಜಲರಾಶಿ ಓಕುಳಿಯ ಪಾತ್ರೆಯುಂ ಹೋಲಿ ! ತುಳು

→

ತುಳುಕುವ ಜಲಧಿಯಲಿ ಜಲಚರಂಗಳ ಲೀಲಾ
ಖೇಲನ ನಡೆದತ್ತು ಮುದದಿಂದೆ. ವರ ಚಂದನ
ವರ್ಣಮಂ ಪೈಗೊಂಡು ರಂಜಿಸಿದುವು. ಸುಂದರ
ತನುವಿಂದೆ. ಅಂಬರದ ನೀಲ ಪಟಲ ಚುಂಬಿತ
ಅಸ್ತ-ಅಚಲ-ಕುಕ್ಕಿಲಂ ವರುಣ ದಿಕ್ತಟದ
ಕನಕ ಕಾಂತಿಯು ಹರವಿನಲಿ ಮೆರೆದುದು ಅನನ್ಯ
ರೂಪಿಂ. ಮೆಲ್ಲಮೆಲ್ಲನೆ ಇಳಿದಿಳಿದು ಕ್ರಕಚಿತ
ದಿಗಂತ ಸುಲಲಿತ ರೇಖೆಯಲಿ ಅರುಣನ ರುಕ್ಮ
ರುಚಿರ ಸುಂದರ ಬಿಂಬ ಕವರ್ಗಾಯುತ್ತ ಗತಿಯಲಿ
ನಿಂದೆಸೆದಿರೆ ಚೆಲುವಾಯ್ತು ಸಂಧ್ಯಾ ಶೋಭೆಯುಂ
ಸೊಗಯಿಸಿ.

ಪರಿಭಾವಿಸಿ ನೋಡೆ ದಿನಚರಿಯಲ್ಲಿ
ಸಂಭವಿಸುವ ಸುಖದುಃಖಗಳ ಸುವಿಸ್ತರಮೆ
ಘನೀಭೂತಮಾದಂತೆಸೆದುದು ಅಸ್ತಮಾನದ
ಭಂಗಿಯಲಿ ಹೊಮ್ಮಿದ ಸಕಲತರ ಕಲಾಕಲೆಯು
ವಿಕೃತಿಯ ಸುಕೃತಿ. ಎವೆಯಿಕ್ಕದೆ ನೋಳ್ಪಕಣ್
ಹಗಲುಗನಸೆಂಬಂತೆ ನೋಡುತಿರೆಯಿರೆ ರವಿಯು
ಸ್ವರ್ಣಬಿಂಬ ಜಲಧಿಯಲಿಳಿದು ಪೈಗರೆದತ್ತು.

ಕಮಲಾದೇವಿಯುಂ ಸಾಯಂ ಕಾಂತಿಯ ಬನಸಿರಿ
ವೈಭವದಲಿ ಬಹುಪಕ್ಷಿ ಕೂಜನದ ಮಧ್ಯೆ ನಿಂದು
ಯೋಚಿಸಿದಳ್ ಹೃದಯದಾಕಾಂಕ್ಷೆಯ ಮಹತ್ತರ
ಚಿಂತನಾಹ್ರದಂ ದಟ್ಟೈಸಿ. ಸೇವಾ ತಪೋ
ನಿಷ್ಠೆಯೊಳ್ ಸ್ವಪ್ನವೋ ದರ್ಶನವೋ ಕಂಡಳು
ನಾರಿ ಭಾರತ ಭವಿಷ್ಯದ ಕಾಂತಿ ಪ್ರವಾಹಂ.

→

ಅಃ, ಕಣ್ಣ ಕತ್ತಲೆಯ ಜಾಡಿಸುವ ಪರಮೋಚ್ಚ
ಪ್ರಜ್ಞಾನಿಗಳ ದಿವ್ಯ ಪ್ರಭೆ ರಾರಾಜಿಸಿತು.
ರಾಷ್ಟ್ರೀಯ ಮಹಾಸಂಸ್ಥೆ ಕಾಂಗ್ರೆಸ್ಸಿನ ಮುನ್ನಡೆ
ಮೇಣ್ ಧ್ಯೇಯಧೋರಣೆಗಳ ಸಂಯೋಜನೆಯಿಂದೆ
ಸ್ವಾತಂತ್ರ್ಯಯಜ್ಞದ ಅಧ್ವರ್ಯೂರ್ಉದ್ಗಾತೃಹೋತಾರರ್
ತಾವಾಗೆಸೆದ ರಾಷ್ಟ್ರ ಭಕ್ತರಂ ನೆನೆಸಿದಳ್
ಮನದಲಿ ಅಮಿತ ಭಕ್ತಿ ಭಾವ ತುಂಬಿ ತುಳುಂಕಿ.

ಮಹಾತ್ಮಾ ಗಾಂಧೀಜಿ ರವೀಂದ್ರನಾಥ ಟಾ–
ಗೋರ್, ಬಂಕಿಮಚಂದ್ರಬಾಬು, ಸಿಸ್ಟರ್ ನಿವೇ–
ದಿತ, ಡಾ|| ಆ್ಯನಿ ಬೆಸೆಂಟ್, ಕಸ್ತೂರಿ ಬಾ, ನೆಹರು,
ಕಮಲಾ ನೆಹರು, ಸುಭಾಸ್ ಚಂದ್ರಬೋಸ್, ರಾಜ
ಗೋಪಾಲಾಚಾರಿ, ರಾಜೇಂದ್ರ ಪ್ರಸಾದ್, ಜಯ
ಪ್ರಕಾಶ್ ನಾರಾಯಣ್, ಮೌಲನಾ ಆಜಾದ್,
ಮೇಡಂ ಕಾಮ, ವಿಜಯಲಕ್ಷ್ಮಿ ಪಂಡಿತ್, ಮಹಾ
ದೇವ ದೇಸಾಯಿ, ಸರೋಜಿನಿ ನಾಯ್ಡು, ಕೆಂಪಂಗಿ
ನಾಯಕ, ಪಟೇಲ್, ಪಂತ್, ಅಂಬೇಡ್ಕರ್, ಗೋಖಲೆ,
ತಿಲಕ್, ಅಮೃತಕೌರ್, ಸುಶೀಲಾ ನಾಯರ್ ಈ
ಮೊದಲಪ್ಪ ಪರಮರತ್ನಗಳ ಮುಂಬಟ್ಟೆಯಲಿ
ಬೆಳಗಿದರ್ ಉಜ್ವಲಿಪ ಜ್ಯೋತಿರ್ಧಾರಿಗಳೈಸಿ,
ಸ್ವಾತಂತ್ರ್ಯ ಸಮರದ ಕಹಳೆಯ ಮೊಳಗು ಕಿವಿಗಳ್
ಗಡಚಿಕ್ಕುವ ತೆರದಲಿ ಕೇಳುತಿದೆ ಎಡೆವಿಡದೆ !
ಶಿಲೆಶಿಲೆಗಳುಂ ಚೇತನಂಬಡೆದು ಎದ್ದೇಳ್ವ
ಸನ್ನಿವೇಶ ಒದವಿ ಬಂದಿರಲ್ ಕಾಳ್ಗಿಚ್ಚಿನೊಲ್
ರಾಷ್ಟ್ರವ್ಯಾಪಿಯಾಗಿ ಹರಡುತಲಿರ್ದುದು ದಿವ್ಯ

→

ಭಾವಾನ್ವಿತ ಸ್ವಾತಂತ್ರ್ಯದ ಅಸಹಕಾರ ಚಳವಳಿ.

ಇಂತಿರಲ್ ಆತ್ಮಪ್ರಭೆಯಂ ಕತ್ತಲೆಯಲಿಡೆ
ಒಪ್ಪುದೆ ಮನಂ ? ಸಾಮಾಜಿಕ ಕ್ಲೈಬ್ಯಮಂ ತೊಳೆಯೆ
ಗೈಪ ಸೇವೆಯದು ಅಖಿಲ ಮಹಿಳೆಯ ಸೇವೆಯುಂ
ಮಾತ್ರಮೆನೆ ರಾಷ್ಟ್ರಸೇವೆಗೆ ತಲೆಗುಡುವ ಹುರುಪು-
ಹುಮ್ಮಸ್ಸು ಒಗ್ಗೂಡಿ ದಿನದಿನಂ ಪೊಗರೇರೆ
ಸ್ವಾತಂತ್ರ್ಯ ಚಳವಳಿಯ ಯಜ್ಞಶಾಲೆಯದು ಕೈ-
ಗೆಟುಕುವ ಶಶಿತಾರೆಗಳ್ ! ಕಮಲೆ ಗೆಣೆಯರೊಡಂ
ಪಜ್ಜೆ ಪಜ್ಜೆಯಂ ಮುಂದಿಡೆ ಎಲ್ಲೆಲ್ಲಿಯುಂ ಕಣ್
ಸೆಳೆವುದು ಭರತಮಾತೆಯ ಪಾದಪದುಮಂಗಳಿ !
ಅಃ, ಇಲ್ಲಿ ಈ ದಿಶೆಯಲಿಯೆ ಗೈವೆನೆನ್ನೆಲ್ಲ
ಕಾರ್ಯಕ್ರಮಂಗಳೆನುತೆ ಮುಂದೈದಳ್ ಸಹಚರಿ
ಬಂಧುಗಳೊಡಂ ಸಂತೋಷ ಘೋಷಿಣಿಯಾಗಿ.

ಪುಟ್ಟ ಕಂದನ ಹೊಣೆಗಾರಿಕೆ ಭುಜವನೇರಿರಲ್
ಕಮಲಾದೇವಿಯುಂ ಪ್ರಭಾತ್ ಫೇರಿಯಲಿ ಮೇಣ್
ಚಳವಳಿಯ ಕ್ಷೇತ್ರದಲಿ ಕಂದನಂ ಮುಂದಿಡುತೆ
ಕಾರ್ಯವೆಸಗುವಳ್. ಪ್ರಭಾತ್ ಫೇರಿಯಲಿ ಕಿರಿಯ
ಕುವರ ಮುನ್ನಡೆವನ್ ತ್ರಿವರ್ಣಧ್ವಜಮಂ ಹಿಡಿದು
ನೋಳ್ಪರ ಕಣ್ ಆಶ್ಚರ್ಯ ಚಕಿತಗೊಳ್ವ ತೆರದಿ !

ಏತನ್ಮಧ್ಯೆ, ಬ್ರಿಟಿಷ್ ಸರಕಾರ ಭಾರತದ
ಘೋರಾತಿಘೋರ ಬಡತನವನಿನಿತು ಲೆಕ್ಕಿಸದೆ
ಪ್ರಕೃತಿ ದತ್ತ ಉಪ್ಪು–ಬಡಜನರ ಗಂಜಿಯಂ
ರುಚಿಗೊಳಿಪ ಅಗ್ಗದ ಉಪ್ಪು–ತುಟ್ಟಿಗೊಳಿಪಂತೆ.
ನಿಷ್ಕರುಣೆ-ನಿರ್ದಯೆ ನಿರಾತಂಕಗಳ ಕೂರ →

ಅನುಬಂಧದಿಂ ದಿವ್ಯ ಬಡಿವಾರದ ವ್ರತದಿಂ
ಆಳ್ವಿಕೆಯ ಕಟ್ಟಾಳ್ತನದ ಧೈರ್ಯಾಲಾಪದಿಂ
ಕರ ಭಾರಮಂ ಹೇರಿದರ್ ! ಅನ್ನೆಗಂ ಬ್ರಿಟಿಷ್
ಪ್ರಭುತ್ವದ ಇಕ್ಕುಳದಲಿ ಸಿಲ್ಕಿ ಬವಣೆಗಳ
ಕೆಂಬೆಂಕೆಯಲಿ ಬೆಂದು ಸುಟ್ಟು ಕರಿಮುರಿಯಾದ
ಬಡಜನರ ಕಂಗಳ್ ನೆರೆ ರಂಗೇರಿದುವು ಕಡು
ಕೋಪದ ಕಿಡಿ ಕಾರಿ. ಅಸಮಾಧಾನದ ದರಗು
ಹೊತ್ತಿ ಉರಿದಿರೆ ಚಟಪಟಿಸಿ ಧೂಮವೇರಿದುದು
ಗಗನಕ್ಕೆ.
ಆಗಳಾ ಗಾಂಧೀಜಿ ಮುಂದೈದು
ಹಿರಿ ಸಜ್ಜನರುಗಳಂ ಮುಂದೈಸಿ ಬಿಳಿಯ ಜನರ
ಪ್ರಭುತ್ವದ ಮುಂತೆ "ಬಡವರ ತುತ್ತಿಗೆ ಭಾರ
ಹೇರಿ ಘಾಸಿಗೊಳಿಸದಿರಿ" ಎಂದೆಂಬ ಕೋರಿಕೆ
ಸಲಿಸಿದರ್ ಮನತುಂಬಿ. ಬಿಳಿಯರ್ ಲಕ್ಷಿಸಿದರೇಂ
ಅದಂ ? ಒಗೆದರೊಡನೆ ಕಸದ ಬುಟ್ಟಿಗೆ ಎಂದಿನ
ತಿರಸ್ಕಾರ ಭಾವಮಂ ಬೀರಿ ! ಕಣ್ಣಿರುತಿರ್ದು
ಕುರುಡಾದ ಸರಕಾರ ದುರ್ಮಾನದಿಂ ಬಿಗಿದು
ತನುಮನಮುರಗಟ್ಟೆ ಮೊಗದಿರುವಿತು. ಒಡನೊಡನೆ
ಎಲ್ಲೆಡೆಗಳಲಿ ಬಡವರ ಒಡಲುರಿ ಧಗಧಗಿಸಿ
ಹಾಹಾಕರಿಸಿತು, ರೋಷ ಕೋಪಗಳ ಉಸಿರಾಡಿ.

ಮಹಾತ್ಮಾ ಗಾಂಧೀಜಿಯುಂ ನಿರ್ವಹಿಸಿದ ಪರಮ
ರಾಯಭಾರವದು ಸೋಲ್ದು ಸೊಗಡಪ್ಪಿ ಮುದುಡಿರೆ
ರಾಷ್ಟ್ರೀಯ ಕಾಂಗ್ರೆಸ್ ಮಹಾ ಸಂಸ್ಥೆಯ ಪ್ರಮುಖ
ಸಚೇತಕರ ಪ್ರಾಣ ಕೊತಕೊತ ಕುದಿದತ್ತು, ಇಕ್ಷು

→

ರಸದಪ್ರೊಲ್. ಅಸಹಕಾರದ ಕುಡಿಕೊನರಿ ಬೆಳೆದು
ನೆನೆ ಕೊನೆಯೇರುತಿರೆ ವಿಫಲ ಸಂಧಾನದ ಸುದ್ದಿ
ಹರಡಿದುದು ಕಾಳ್ಗಿಚ್ಚಿನೊಲ್ ರಾಷ್ಟ್ರದಾದ್ಯಂತ.
ರೋಷದುಸಿರ್ ಕಾರಿದುವು ನಭೋ ಭೇರಿಯೈದ
ಘೋಷಣೆಗಳಂ ಬ್ರಿಟಿಷ್ ಪ್ರಭುತ್ವದ ವಿರುದ್ಧ!
ರಾಷ್ಟ್ರದೊಳೆಲ್ಲ ಮೂಲೆಮೂಲೆಗಳಲಿ ಪ್ರತಿ
ಧ್ವನಿಸಿದುದು ಜನರಾಶಿಯು ಹೃನ್ಮನಗಳಿಂದೆ
ಪೊದಳ್ದ "ವಂದೇ ಮಾತರಂ!" "ಭಾರತ ಮಾತಾ
ಕಿ ಜೈ!" "ಮಹಾತ್ಮಾ ಗಾಂಧೀಜಿಗೆ ಜೈ" ಎಂಬ
ಮಹಾಂದೋಳನದ ಪರಮೋಚ್ಚ ಸೊಲ್ಲಿನ ಮೊಳಗು!
ಆದರಾ ಕಿವುಡು ಸರಕಾರ ತಲೆ ಮಣಿಯಿತೇಂ?
ಗಾಂಧೀಜಿಯು ಸಂದರ್ಭೋಚಿತ ಪ್ರಸಂಗದಿಂ
ಕಾರ್ಯ ಸ್ಫೂರ್ತಿಯಿಂದಲಿ ತಮ್ಮ ದಿವ್ಯಾಸ್ತ್ರಮಾದ
ಸತ್ಯಾಗ್ರಹ ಬಾಣವನುಂ ಬೋಂಕನೆ ಹಿರಿದರ್
ಬತ್ತಳಿಕೆಯಿಂದೆ. ಗಾಂಧೀವಾಣಿ ಮೊಳಗಿದುದು
ಮೂಲೆಮೂಲೆಗಳ್ ಪ್ರತಿಧ್ವನಿಸುವ ತೆರದಲಿ.

"ಸರಕಾರದ ಉಪ್ಪಿನಕಾಯಿದೆಯನು ಮುರಿಯುತೆ
ಎಲ್ಲರುಂ ಉಪ್ಪು ಗೈವುದೇ ಸರಿ. ಮುನ್ನುಗ್ಗಿ!
ಬೆದರದಿರಿ! ಮಾಡಿ ಮಡಿಯಿರಿ! ಹಿಂಜರಿಯದಿನಿತು
ಹೋರಾಡಿ!"

ದಿವ್ಯ ಸಂದೇಶವಂ ಮನಗೊಂಡು
ಜನರಾಶಿ ಸತ್ಯಾಗ್ರಹದಖಾಡಕ್ಕಿಳಿದರ್
ಮಹಾ ಸಾಗರದ ತೀರಗಳಲಿ. ಜನನೇ ಜನ.
ಹುರುಪು ಹುಮ್ಮಸ್ಸುಗಳ ಆಕರವಲಿ ಮುಂದೈದು

→

ಉಪ್ಪಿನ ಸತ್ಯಾಗ್ರಹಕಣಿಯಾದುದು ಜನರಾಶಿ.
ಗಾಂಧೀಜಿಯುಂ ಚಿಂತನ ಮಂಥನದ ಆಳದಿ
ಮುಳುಗಿ, ಬ್ರಿಟಿಷರ್ ಸ್ತ್ರೀಜನರಿಗೆ ನೀಡುತಿಹ
ಗೌರವಾದರಮುಂ ಗಮನಿಸಿ ತಮ್ಮ ಸತ್ಯಾ-
ಗ್ರಹಿಗಳ ತಂಡದಿಂ ಪೆಣ್ಣಂ ಪೊರತಃ ಪಡಿಸಿದರ್.
ಪೆಣ್ ತಮ್ಮ ಮುಂದಿಡುವುದು ಹೇಡಿತನದ ಕುರುಹು.
ಅದರಿಂ ನಗೆಗೇಡಿತನವಲ್ಲದೆ ಬೇರಿಲ್ಲ
ಎಂಬೊಡೆ ಹಿಂತಿಕ್ಕುವುದೆ ಲೇಸು ಎಂದರಾ
ಗಾಂಧೀಜಿ. ಆಗಳೇಂ ಸ್ತ್ರೀಜನರ ಕಾತರತೆಯು
ಕೊರಗು ? ದುಃಖದುರುಟನೆಯು ರಣಗೋಳು ? ಎನಿತೆನಿತು
ಕಾಡಿಬೇಡಿದೊಡಂ ಮಣಿಯುರ್ ಗಾಂಧೀಜಿ. ಆ
ಸನ್ನಿವೇಶದಲಿ ಕಮಲಾದೇವಿಯುಂ ಗಾಂಧೀ
ಮಹಾತ್ಮರ ಬಳಿಗೆ ಧಾವಿಸಿದರ್ ಮನವೊಲಿಸಲ್.
ಧೈರ್ಯದಿಂ ವಾದವಿವಾದ ಹೂಡಿ ತರ್ಕಪಿತರ್ಕ
ಬೆಳೆಸುತಿರೆ ಕೋಪದ ಕಿಡಿಗಳ್ ಸಿಡಿದು ಹಾರಲ್
ಅಂಜಿದರೆ ? ಮಣಿದು ಕೈಬಿಟ್ಟರೆ ? ಪಿಡಿದ ಕಜ್ಜ
ಕೈಗೂಡುವನ್ನ ಹರಿಸಿದರ್ ವಾಗ್ಜಾಲಮುಂ
ಕಡು ಕೆಚ್ಚಿನ ಕೊರಳುಲಿಯುಲಿ! ಮಹಾತ್ಮರಾಗಳ್
ಮೆಚ್ಚಿ ಹರುಷದ ಹೊನಲ್ ಹರಿಸಿ ಒಪ್ಪಿದರವರ
ವಾದಮಂ ತೋಷದಿಂ. ನೆತ್ತಿಯೊಳ್ ತಮ್ಮ ಕೈ
ಹಸ್ತವನಿರಿಸಿ ಹರಸಿ ನಲ್ ಆಶೀರ್ವದಿಸಿದರ್
ಬಲು ಪ್ರೇಮದಿಂ.

"ಮಗಳೇ, ನೀಂ ಪರಮ ದಿಟ್ಟೆ!
ನಿನ್ನಯ ತಪಸ್ಸಿಗೆ, ದಾಷ್ಟ್ರ್ಯಕೆ ಮೆಚ್ಚಿದೆಂ. ದಕ್ಷಿಣ

→

ವಲಯದೊಳ್ ಉಪ್ಪಿನ ಸತ್ಯಾಗ್ರಹದ ನಾಯಕತ್ವ
ವಹಿಸಿಕೊಳೆ ತಕ್ಕ ಮಾನಿನಿ ! ನಿನಗೆ ದೈವ ರಕ್ಷೆ
ಇರ್ಕೆ. ನೀಂ ಕಾರ್ಯಮಂ ನಿರ್ವಹಿಸು. !”
ಕಮಲೆಯುಂ
ತೋಪದಿಂ ತನ್ನ ಗೆಳೆಯರ ತಂಡದೊಡಂ ದೂರ
ಮುಂಬಯಿಯ ಕಡಲ ತೀರಕೆ ಧಾವಿಸಿದರ್ ವರ
ನಾಯಕಿ ಎನಿಸಿ. ಪೊಗರೇರಿದುದು ಜನ ವಾರ್ಧಿಯಲಿ.
ಹಿರಿಯರ್ ಕಿರಿಯರ್ ಸ್ತ್ರೀಪುರುಷರೆನ್ನದೆ
ಒಗ್ಗೂಡಿ ನೀಲ ಸಾಗರಕೆ ಪ್ರತಿಪಡಲೋ
ಎನೆ ಜನಗಣ ಕೂಡಿದುದು ತೀರದಲಿ ವಿಧವಿಧ
ವರ್ಣಮಯ ವಸನಂಗಳ ಪ್ರದರ್ಶನದವೊಲ್.
ಬಗೆವಗೆಯ ಶೈಲಿಯಲಿ ವಿಧವಿಧದ ಭಾಷೆಗಳ
ಮೋಜಿನಲಿ ಪರಿಹಾಸ್ಯದ ನಲ್ ಮಾತುಗಳನಾಡಿ
ನಗೆಯ ಗುಲ್ಲೆಬ್ಬಿಸುತೆ ಎಸಗಿದರ್ ಕಾರ್ಯಮಂ.

ನೈರುತ್ಯ ದಿಙ್ನಗರಿಯಿಂ ಒಯ್ಯನೊಯ್ಯನೆಯೆ
ಸುಯ್ಯನೆಯೆ ಸುಯ್ಯುತ್ತೆ ಬೀಸಿವಂದು ತನುಗಳ
ನೇವರಿಸಿ ಮನವಂ ತಣಿಸಿ ಮುದ್ದಿಸಿದಂ ಮಿಗೆ
ಚೆಂಬಿಸಿಲ ಬಿಸುಪಿಂಗೆ ನೆರವೀಯುವಂತೆವೊಲ್,
ಸಾಗರಿಯ ತಣ್ಗಂಪು ಅನಿಲನ ತನಿಯಿಂಪುಗಳ
ಸಂವೃದ್ಧಿಯುಂ ವ್ಯಾಪಕವಾಗಿ ಹರಡುತಿರೆ
ಜನರಾಶಿಯಲಿ ನಿಜಪುರುಡು ಗಳಿಗೆಗಳಿಗೆಗುಂ
ಮೇರೆ ಮೀರುತಿರ್ದುದು ಕಮಲೇಂದುಮುಖಿ ಕಮಲೆಯ
ನೇತೃತ್ವದಲಿ ! ಬ್ರಿಟಿಷರ ರುದ್ರ ಕಾಯಿದೆಯ
ಘೋರ ಕಟ್ಟಳೆಯಂ ಮುರಿದು ಗೈದರ್ ಉಪ್ಪಿನ

→

ರಾಶಿಯಂ ! ಬಿಳಿಯುಪ್ಪು ಕರಿಯುಪ್ಪು ಪುಡಿಯುಪ್ಪು
ಇಡಿಯುಪ್ಪು ರಾಶಿರಾಶಿ ಬಿಳ್ದುದು ತೀರದಲಿ !
ಕೊಳ್ಳುವವರ್ ಮುಂಬರೆ ದಂಡುಗಟ್ಟಿ, ತಾಸಿನಲಿ
ನಲವತ್ತು ಸಾವಿರ ರೂಪಾಯಿಗಳ ವ್ಯಾಪಾರ
ನಡೆದತ್ತು ಬ್ರಿಟಿಷರ ಉರಿಗಣ್ಣನಿನ್ನಿನಿತು
ಉರಿಸುವ ತೆರದಿ ! ಉಪ್ಪಿನ ಪೊಟ್ಟಣಗಳ್ ಕೈಯಿಂ
ಕೈಗೆ ಚಲಿಸಿದುವು ಸಾಲುಸಾಲ್ಕೈಸಿ ! ನೋಳ್ಪ ಕಣ್
ಅಚ್ಚರಿ ಪಡುವೊಲ್ ! ಪುಣ್ಯದ್ರವ್ಯವದು ಝಣಝಣ
ಧಾವಿಸುತಲ್ಕೈದುದು ಕೈಚೀಲಗಳಿಗೆ ! ಆಗಳ್
ಸಾರ್ಜೆಂಟರ್ ದೇಶೀಯ ಸೈನಿಕರ್ ಒಟ್ಟು
ಗೂಡಿ ಧಾವಿಸುತಲ್ಕೈದರ್ ಬಂಧಿಪ ಪರವಾನಗಿ
ಪತ್ರದ ಸಹಿತ ! ರಾಕ್ಷಸ ಸೈನ್ಯದಾವೇಶದಾ
ವೇಶದಲಿ ! ಹಾ, ದೇಶದಾರಕ್ಷಕ ಬಂಧುಗಳೆ
ರಾಷ್ಟ್ರೀಯ ಸ್ವಯಂಸೇವಕ ಸೇವಕಿಯರಂ ತೀವ್ರ
ಅಲಕ್ಷ್ಯದಿಂ ನಿಕೃಷ್ಟಭಾವದಿಂ ಕಾಣುತ್ತೆ
ಹೊಡೆದು ಬಡಿದು ಜಡಿಕುಟ್ಟಿ ಬಂಧಿಸೆಳದೊಯ್ದರ್....
ಜೇಲ್‌ಗಳ ಕತ್ತಲಮನೆಗೆ. ಮಾತೃಭೂಮಿಯಾ
ಭಕ್ತಿ ಗೌರವಾದರಗಳಂ ಕಿಂಚಿತ್ ಲೆಕ್ಕಿಸದೆ !
ಬ್ರಿಟಿಷರ್ ರಾಷ್ಟ್ರಮಂ ದೋಚಿ ಹಿಂಡಿ ಹೀರುತೆ
ಹಿಪ್ಪೆಗೈವುದಂ ಕಂಡುಕಂಡು ತಮ್ಮವರಿಗೆ
ತಾವೆ ಮಾರಕಮಾದರ್ ಅನನ್ಯ ರಾಷ್ಟ್ರೀಯ
ಸ್ವಾತಂತ್ರ್ಯ ಯಜ್ಞದಲಿ ಅಧ್ವರ್ಯುಗಳಂ ಹೋಲಿ !
ಅಸ್ವತಂತ್ರ ಬದುಕಿನ ಕೂಳುಂಡು ತೊಳಲಿಯುಂ
ಸ್ವಾತಂತ್ರ್ಯದ ಹುರುಳಂ ಅರಿಯದ ಶತ ಮೂರ್ಖರ್

→

ದಗ್ಧ ದನಿ ಎದೆಯ್ಗಾಳದಿಂದ್ಯೈದಿರೆ ತತ್ತರಿಸಿ
ಎದೆ ನಡುಗಿದ ನ್ಯಾಯಾಧಿಪನ ಮೊಗವಿಳಿದು ನೆರೆ
ಕರ್ಪು ತಳೆದೊಡದಂ ತೋರ್ಪಡಿಸದೆಯೆ ಕಮಲೆಯುಂ
ಅಡಿಯಿಂ ಮುಡಿಯುವರೆಗೆ ನಿಟ್ಟಿಸಿದಂ. ಬೆಳ್ಮೈಯುಂ
ನೀಲಿಗಟ್ಟಿಸಿದ ಪೋಲೀಸರ ಲಾಠಿ ಏಟಿನ
ಬಾಸುಂಡೆಗಳ್ ಕಾಣಿಸಿದುದು ಉರ್ಬಿ ನೆತ್ತರ್
ಜಿನುಗಿ. ಎದೆ ನಡುಗಿಪ ರೌದ್ರಾವತಾರಕ್ಕೆ
ಈಡಾಗಿಯುಂ ಕಿಂಚಿತ್ ಬೆದರದೆ ಎದುರ್ನೆತ್ತ
ನಾರೀಮಣಿಯು ದಾಷ್ಟ್ರ್ಯತನಕೆ ನೆಚ್ಚಿಮೆಚ್ಚಿಯುಂ
ವ್ಯಕ್ತಪಡಿಸೆ ನಾಣ್ಚಿದನಾ ನ್ಯಾಯಾಧಿಕಾರಿ !
ಆದರೊಡಲಿನ ಕಿಚ್ಚು ಉರಿಯುತಿರೆ ಬೆಂಕೆಯೊಲ್
ಜೇಲಿನಾ ಕಗ್ಗತ್ತಲಮನೆಗವರಂ ಕಳಿಪಿ
ತನ್ನ ಸೇಡಂ ತೀರ್ಚಿದನಾಗಳಿಗೆಯುಲಿ ಮನ
ಮತಿಗಳ್ ಕುದಿಕುದಿದು.

ಕಮಲದಳಾಯತಾಕ್ಷಿ
ಕಮಲಾದೇವಿಯು ಧೈರ್ಯಸ್ಥೈರ್ಯದಿಂ ಪೌರುಷೇಯ
ಪ್ರವೃತ್ತಿಯಿಂ "ಸರ್ವಾಧಿಕಾರಿಣಿ !" ಎಂದೆಂಬ
ಒಕ್ಕೊರಲ ಬಿರುದು ಸಂದುದು ಸೆರ್ವೆಯುಲಿ ಸರ್ವ
ಪ್ರಕಾರಗಳಲಿಯುಂ ಒಪ್ಪುವಾ ಮಾಳ್ಕೆಯುಲಿ !
ಸಹಚರರ್ ಒಲಿದು ಗೌರವದಿಂದಿತ್ತ ಅನನ್ಯ
ಬಿರುದು ! ಕಮಲಾದೇವಿಯು ಧೀಮಂತ ಪ್ರಕೃತಿ
ವೈಭವಕೆ ಸಲ್ಲುವಂತೆವೋಲ್ ಒಲಿದಿತ್ತ ಬಿರುದು !
ಕಮಲೆ, ಸುಖದುಃಖಮಂ ಸಮದೃಷ್ಟಿಯಿಂ ಕಾಂಬ
ಧೀಮಂತ ತಪಸ್ವಿನಿ. ನಿರ್ಮಲ ಮನಮಂದಿರೆ.

→

ಧವಳ ಕೀರ್ತಿಮಾಲಾಧಾರಿಣಿ. ಪರಮೋಚ್ಚ
ಮಾತಾಮಯಿ. ಭಾರತಿಯ ಔರಸ ಪುತ್ರಿಯೈಸಿ
ದೀನಾತಿದೀನ ಜನಕೋಟಿಗೆ ಸಹದುಃಖಿನಿ
ತಾನಾಗಿ, ಧೀಮಂತರ ಸಹಚರ್ಯೆಯಾಗಿ, ನಿಜ
ಮಾನವೀಯತೆಯ ಪ್ರತೀಕಮಾಗಿ ವೇದಾಂತಿನಿ
ಭಾರತ ಜನನಿಗೆ ಕೀರ್ತಿಮಾಲೆಯಂ ತೊಡಿಸಿದರ್.
ಆಗಳಾಗಳ್ ದೇಶವಿದೇಶ ಸ್ವದೇಶಗಳ
ಪರ್ಯಟನೆಯಂಗೈದು ಅನುಭವಾಮೃತಂ ನೆರೆ
ಪಡೆದು ಜೀರ್ಣಿಸಿ ಗಳಿಸಿದ ದಿವ್ಯಜ್ಞಾನದಿಂ ವಿಶ್ವ
ಮಾನ್ಯತೆಯಂ ಪಡೆದ ಪರಮ ಧನ್ಯೆ ! ಕಲಾವಂತ
ಮಹನೀಯರ ಮಧ್ಯೆ ಕಲಾನಿಧಿ ! ಅಬಲೆಯರ
ಮಧ್ಯೆ ಅಭಯ ಹಸ್ತವಿಡಿದ ಮಾತೆ ! ಲೇಖಕರ
ಮಧ್ಯೆ ಪರಮ ಲೇಖಿಕೆ ! ದೀನದಲಿತರ ಮಧ್ಯೆ
ಸಹಾಯ ಹಸ್ತ ಚಾಚಿದ ದಿವ್ಯ ರಾಗಿಣಿ ! ಬಡವ
ಬಲ್ಲಿದರ ಮಧ್ಯೆ ಅನುಪಮ ಸೇತು ! ಮಕ್ಕಳ
ಮಧ್ಯೆ ಅಕ್ಷರೆ ತಾಯಿ ಸರಸ್ವತಿ ಎಂತೆಂತು
ಅಕ್ಷರ ದಾನಿ ! ಎಲ್ಲಿ ತಾನಿಹಳಲ್ಲಿ ಘನ ಸೇವೆಯ
ಪ್ರವೃತ್ತಿಯೊಂದಲ್ಲದೆ ಬೇರಿಲ್ಲವಾ ತಾಯಿ
ಕಮಲಮುಖಿಗೆ. ಮನುಕುಲದುದ್ಧರಣ ಕಾರ್ಯಮಂ
ಪ್ರಾಣಾಂತದವರೆಗುಂ ನಡೆಸಿದ ಅನನ್ಯ ದೇವಿ !
ವೃತ್ತಿಪ್ರವೃತ್ತಿಗಳ್ ಜಾನಮೋದಕಲ್ಲದೆ
ಪೆರ್ಮೆಗಲ್ಲವಾ ಕಮಲಾಂಗಿಗೆ. ಸರ್ವತ್ರ ಸದಾ
ಮನುಕುಲದುದ್ಧರಣ ಕಾರ್ಯಮಂ ಕೈಗೊಂಡು
ಲೋಕೋತ್ತರ ಸೇವೆಯಂ ಸಲಿಸಿದ ಮಹಿಳೆಯುಂ

→

ಬಯಸಿದೊಡೆ ಸ್ವತಂತ್ರ ಭಾರತದಲಿ ಉನ್ನತ
ಸ್ಥಾನವಂ ಅಲಂಕರಿಪ ಶಕ್ತಿಗೇಂ ಕೊರವಿತ್ತು ?
ರಾಷ್ಟ್ರಪತಿಯಾಗಿ, ಉಪರಾಷ್ಟ್ರಪತಿಯಾಗಿ ಕೇಂದ್ರ
ಮಂತ್ರಿಯಾಗಿ, ರಾಜ್ಯಪಾಲರಾಗಿ, ರಾಯಭಾರಿಯಾಗಿ
ಗೌರವಾದರಗಳಿಂ ಕೈವೀಸಿ ಕರೆಯುತಿಹ
ಹುದ್ದೆಗಳಿರುತ್ತೆ ಏನೆಲ್ಲ ಆಗಬಹುದಿತ್ತೊ?
ದೀನ ಜನ ಸೇವಾ ವ್ರತವಂ ಆನಂದದಿಂ
ಮನಗೊಂಡು ದಿವ್ಯಸ್ಥಾನ ಮುಖೇನ ನಡೆಸುವ
ಸುಯೋಗಂ ಎದುರ್ವೆತ್ತಿರೆ ತಲೆವಣಿದರೇಂ ?
ಎಂದಿನ ನಿರಾಡಂಬರದ ಜೀವನಂ
ಬಾಳ್ದು ಧವಳಿಮಾ ಕೀರುತಿ ಮಾಲೆಯಂ ತೊಟ್ಟು
ಆತ್ಮಗೌರವವಂ ಉಳಿಸಿ ಬೆಳೆಸಿದ ಧೀಮಂತೆ !

ವಿಶ್ವ ಪ್ರೇಮದಿಂ ವಿಶ್ವಬಾಂಧವ್ಯವಂ ತಾಂ
ಗಳಿಸಿ ವಿಶ್ವಾತ್ಮಕವೆನಿಸಿದ ಸಾಹಿತ್ಯವಂ
ಸೃಷ್ಟಿಸಿದ ಕಮಲಾದೇವಿಯುಂ ಪ್ರಖ್ಯಾತ
ಸಾಹಿತಿ. ಪಗಲಿರುಳಿನ ಕಾರ್ಯಕಲಾಪಗಳಿಂ
ಸ್ವಚಿಂತನೆಗೆ, ಸ್ವಹಿತಕೆ ಪೊಳ್ತಿಲ್ಲದೆಯುಂ
ಚಿಂತನಾವೇಶದ ವಿಷಯವಾಹಿ ಹರಿಯುವುದು
ಮಸಿಯೊರತೆಯಲಿ ರಸ ಸೃಷ್ಟಿಯಾಗಿ. ಅನನ್ಯ
ಲೇಖನಿಯ ಉಲ್ಲೇಖ ವಾಹಿಯಂ ಪರಿಭಾವಿಸಿ
ನೋಡೆ, ಹಲಕೆಲವು ಉದ್ಗ್ರಂಥಗಳ್ ಮೂಡಿ
ರಂಜಿಸುತಿವೆ ಧೀಮಂತರ ಕರಕಮಲಗಳಲಿ !

"ಅವೇಕನಿಂಗ್ ಆಫ್ ಇಂಡಿಯನ್ ವುಮೆನ್‌ಹುಡ್"
"ಇನ್ ವಾರ್ ಟೋರ್ನ್ ಚೈನಾ" "ಅಂಕಲ್ ಸ್ಯಾಮ್ಸ್
ಎಂಪೈರ್" "ಅಮೆರಿಕ ಲ್ಯಾಂಡ್ ಆಫ್ ಸೂಪರ್‌ಲೆಟಿವ್ಸ್" →

"ಇಂಡಿಯಾ ಅಟ್ ದಿ ಕ್ರಾಸ್‌ರೋಡ್ಸ್" "ಹ್ಯಾಂಡಿಕ್ರಾಫ್ಟ್ಸ್"
ಮುಂತಪ್ಪ ಲೇಖನಕೃತಿ ಜನಜನಿತಂ. ಅಂತು
ಮಲ್ಲದೆಯುಂ ಇತ್ತೀಚಿನ ಕೃತಿ ಮಹೋನ್ನತ
ಆತ್ಮಕಥೆಯುಂ "ಇನ್ನರ್ ರೀಸೆಸಸ್ ಔಟರ್
ಸ್ಪೇಸಸ್" ಅವರ ದಿನಚರಿಮಾತ್ರಮಲದೆ ದಿವ್ಯ
ಕಾಲಮಾನದ ಕಥೆಯೇ ಹರಿದು ಬಂದತ್ತು ವರ
ಐತಿಹಾಸಿಕವಾಗಿ! ಜಗ ಜಂಜಡತೆಯ ಕ್ಲಿಷ್ಟ
ಪರಿಸ್ಥಿತಿಯಲಿಯುಂ ಕಮಲಾದೇವಿಯ ಕಾರ್ಯ
ಕ್ರಮದ ಪೆರ್ಚಳಮಂ ಗಮನಿಸದಿರಲಿಲ್ಲವಾ
ಜನಕೋಟಿ. ಅಲ್ಲಿ ಇಲ್ಲಿ ಎಲ್ಲೆಡೆಗಳಿಂದಲಿ
ಅನೇಕಾನೇಕ ಪ್ರಶಸ್ತಿಗಳ್ ಓಡುತ್ತೆ
ಬಳಿಗೈದುವು ಸಾಲ್ಗಟ್ಟಿ. ಅಧ್ಯಕ್ಷ ಪೀಠಗಳ್
ಸರ್ವತ್ರ ಸಿದ್ಧಿ. "ಆಲ್ ಇಂಡಿಯಾ ವಿಮೆನ್ಸ್
ಕಾನ್‌ಫರೆನ್ಸ್" ಮಹಾಮಂಡಲಕೆ ಅಧ್ಯಕ್ಷಿಣಿ,
ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷಿಣಿ.
ಅಖಿಲ ಭಾರತ ಕರಕುಶಲ ಮಂಡಳಿಯ ಅಧ್ಯ-
ಕ್ಷಿಣಿ. ಭಾರತೀಯ ನಾಟ್ಯಸಂಘದ ಅಧ್ಯಕ್ಷಿಣಿ.
ಬಗೆವಗೆಯ ಸಂಘ ಸಂಸ್ಥೆಗಳ ಪುಟ್ಟುವಳಿ ಮೇಣ್
ಸಂಪರ್ಕ ಮಾಧ್ಯಮಗಳಿಗೆ ಲೆಕ್ಕವಿರದನಿತು
ಅನುಬಂಧಂ. ಸಂಗೀತ ನಾಟಕ ಅಕಾಡೆಮಿಯ
ರತ್ನ ಸದಸ್ಯತ್ವ ದೊರಕಿಬತ್ತು. ಮೇಣವರ
ನಾಮಾಂಕಿತದೊಳ್ ರಾಷ್ಟ್ರ ಮಟ್ಟದಲಿ ನಾಟಕ
ಪ್ರಶಸ್ತಿಯುಂ ಅಂದಿಂದಿಗುಂ ವಿರಾಜಮಾನಂ !

ಹೊನಲುಲು–ನ ವಾಟುಮುಲ್ ಪ್ರತಿಷ್ಠಾನದ ದಿವ್ಯ

→

ಪ್ರಶಸ್ತಿ, ಫಿಲಿಪೀನ್ಸ್–ನ ಮ್ಯಾಗಸೆಸೆ ಪ್ರಶಸ್ತಿ,
ಜೆಕೋಸ್ಲೊವಾಕಿಯಾ–ದ ಸ್ವರ್ಣ ಪದಕ ಗೌರವ, ಯುನೆ–
ಸ್ಕೋ–ದ ಸನ್ಮಾನ ಪತ್ರ, ಭಾರತ ಸರಕಾರದ
ಪದ್ಮವಿಭೂಷಣ ಪ್ರಶಸ್ತಿ, ವಿಶ್ವಭಾರತಿಯ
"ದೇಶಿಕೋತ್ತಮ" ಗೌರವ ಪದವಿ. ಇಂತೆಲ್ಲವುಂ
ಎಲ್ಲಿರ್ದೊಡಲ್ಲಿಗೆ ಪುಡುಕಿಕೊಂಡೈದುವೊಂದರ
ಬಳಿಕೊಂದು ಸಾಲುಸಾಲ್ಕೈಸಿ. ಕೈಗಾಣಿಕೆಗಳ್-
ಒಳ್ನುಡಿಯ ಕಾಣಿಕೆಗಳಿಂಗೆ ಲೆಕ್ಕವಿಲ್ಲಂ.
ಪುಟ್ಟಿನಿಂ ಕೊನೆವರಂ ರಾಗಾನುರಾಗದನು-
ಭೋಗವದು ಕಟ್ಟಿಟ್ಟ ಬುತ್ತಿಯೊಲ್ ನಿಶ್ಚಲಂ.
ಮುಖಾಮುಖಿ ಭೇಟಿಗೈದ ಬಡಬಂಧು ವರ್ಗಂ
ಎಂದೊ ಎಲ್ಲಿಯೊ ತನ್ನೊಡಂ ಸಹಕರಿಸಿದ ಸಹ
ವರ್ತಿಗಳಂ ಅಧ್ಯಾಪಕ ವರ್ಗವಂ ತಾನೆಂದು
ಮರೆತರಿಲ್ಲಂ. ಆವ ಗಳಿಗೆಯುಲಿ ಆ ಶ್ರೀಮುಖ
ಎದುರ್ನೆತ್ತು ಬರಲಾಗಳಿಗೆಯೊಳ್ ನಗೆಮುಗುಳ್
ಬಿರಿದು ಸ್ವಾಗತಿಪ ಸರಳ ಸೌಜನ್ಯತೆಯಿರುತಿರೆ,
ಮಾತೃಹೃದಯ ಕುಂಡದೊಳ್ ಹಾಲ್ಜೇನ್ ತುಂಬಿದ
ಮಾಳ್ಕೆಯಲಿ ಸದಾಕಾಲಂ ಅಮೃತಮಯಂ.

ಅಂತಿಂತು ಕಾಲದ ಪಕ್ಷಿಯುಂ ಬಿಸ್ರನೆ ರೆಕ್ಕೆ
ಬಿದಿರ್ಚಿ ಜಗದಗಲಂ ಪಾರ್ದು ಮಾವು ಬೇವಿನ
ರಸಮನುಂಡು ತೂಗುಯ್ಯಾಲೆಯನಾಡಿ ಉರುಳ್ದು
ಹೋಹುತಿರೆ ಸುಖದುಃಖಗಳಂ ಕೊಚ್ಚಿ ರ್ಘಾಡಿಸಿ
ನಡೆದತ್ತು ಧೀರಗತಿಯಲಿ, ಹಿಂಚು ಮುಂಚಾಗದೆ.
ದಿನದಿನಂ ಕಾಲಯಾನದೊಡಂ ಕಮಲಮುಖಿಯ

→

ಆಯುವರ್ಷನಂ ಕಳೆಯುತಿರ್ದುದು ಕಾಲಮಾನವ
ಬೆನ್ನೇರಿ. ಮೈ ಮುದುಡಿಯುಂ ಮನಃಚಿತ್ತಗಳ
ಬಲುಹು ಕುಗ್ಗಲಿಲ್ಲಂ. ಕಲಾಪೂರ್ಣ ಕರಗಳ
ಕೌಶಲಂ ಯಥೋಚಿತಮಾಗಿ ಮುಂಬರಿದತ್ತು
ನವೋನವ ಶಾಲೀನ್ಯ ಶೈಲಿಯಿಂ ಬಿಂಬಿಸುತೆ.

ಕಮಲಲೋಚನೆ ಕಮಲಾದೇವಿಯುಂ ತಾಂಪಡೆದ
ಮ್ಯಾಗ್‌ಸೆಸೆ ಪ್ರಶಸ್ತಿಯಂ ವಿಶ್ಲೇಷಿಸಿದ ಪರಿಯಿದು,
"ಸಮುದಾಯ ಸೇವೆಯಲಿ ನಾಯಕತ್ವಂ ಅರಿತು
ಗುರುತಿಸುವೊಡೆ ಸಮುದಾಯದಿಂ ನಾಯಕನೆಂಬ
ವ್ಯಕ್ತಿಯಂ ಪ್ರತ್ಯೇಕಿಸಿ ಅಂತರಮಂ ಎತ್ತಿ
ತೋರ್ಪುದಲ್ಲದೆ, ನಾಯಕ ವ್ಯಕ್ತಿತ್ವದಲೊಂದು
ಭ್ರಮೆಯಂ ಮೂಡಿಸದೆ? ಸಮುದಾಯದೊಳೊಂದೈಸಿ
ಜೀತಲ್ಲದೆ, ಸಾರ್ಥಕ ಸೇವೆಯಂ ಸಲಿಸುವುದು
ಪ್ರತಿಷ್ಠೆಯ ವಿಷಯಮಲ್ಲಂ. ಸಹ ಜೀವಿಗಳ
ಹೃದಯಂ ಗೆಲ್ವ ಸಾರ್ಥಕ್ಯ ಸೇವೆ ನಾಯಕ
ವ್ಯಕ್ತಿಯ ಕರ್ತವ್ಯಂ. ಅದರೊಳ್ ಪ್ರತಿಫಲ
ಇರುತಿರಲದಂ ಮುಕ್ತ ಮನದಿಂ ತೆರೆದ ಹೃತ್
ಕಲಶದಿಂ ದೀನದಲಿತರೇಳ್ಗೆಗೆ ಸಲಿಸುವುದೆ
ಸತ್‌ಸೇವೆ. ಭಾರತ ಸಂಸ್ಕೃತಿಯ ಸಾರದಲಿ
ಪರಂಪರಾನುಗತ ಸೇವೆಯುಂ ಎಣೆಯಿಲ್ಲದಿಹ
ಶಾಂತಿ ಸಂವೃದ್ಧಿಯಿಂ ಕೂಡಿರಲದುವೆ ಸ್ವರ್ಗ !"

ಸ್ವತಂತ್ರ ಭಾರತ ಸಾಮ್ರಾಜ್ಯದೊಳ್ ಮೈದಾಳಿ
ಅನನ್ಯ ಸ್ನೇಹ–ಬಂಧು–ವಲಯಮಂ ನಿರ್ಮಿಸಿದ
ಕೇಂದ್ರೀಯ ಸಂಗೀತ ನಾಟಕ ಅಕಾಡಮಿಯುಂ

→

ಕಲಾವಿದ ಬಂಧುಗಳಂ ಸನ್ಮಾನಿಸೆ ಸಡಗರ-
ಸಂಭ್ರಮಗಳಿಂದೇರ್ಪಡಿಸಿದರ್ ಮಹೋತ್ಸವವಂ.
ಬಗೆವಗೆಯ ಕರಕುಶಲ ಕಲೆಯಿಂ ಗುರುತಿಸಿರಲ್
ಶ್ರದ್ಧೆ ಪ್ರೇಮಾದರಂಗಳ್ ಮೆರೆದುವು ಜೃಂಭಿಸಿ.
ಕಲಾವಿದರ ಅದುಭುತ ಸಂಘಟನೆಯಿಂದಲಾ
ಸಭೆ ಗೌರವಾವೇಶದಿಂದುರ್ಬಿ ಷೋಡಶ
ಕಳೆಗಳಿಂ ಸುಶೋಭಿಸಿದುದು ಸಡಗರಂ ಉಕ್ಕಿ !
ಮಹಾಸಭೆಯ ಸಿಂಗರಂ ಭಾರತೀಯವಾಗಿಹ
ತಳಿರು ತೋರಣಗಳ ಸುಶೋಭೆಯಿಂ ವಿಜೃಂಭಿಸಿ
ಮೆರೆದುದು ಕಣ್ಮನ ಸೆಳೆಯುವ ತೆರದಿ. ಕಿಕ್ಕಿರಿದು
ತುಂಬಿದ ಸಭೆಯು ಅಧ್ಯಕ್ಷತೆಗೈದರ್ ರಾಷ್ಟ್ರದ
ರಾಷ್ಟ್ರಪತಿಗಳ್. ಸ್ವಾತಂತ್ರ್ಯದ ಸ್ವಚ್ಛಂದತೆಯ ಸವಿ
ಮೊಗೆದುಂಡ ಜನರಾಶಿಯುಲಿ ಸಂತೋಷವೇ
ಮೈವೆತ್ತವೊಲ್ ತೋಷಮಯವಾದುದಾ ಭವ್ಯ
ಸಭೆ. ರಾಷ್ಟ್ರಪತಿಗಳಂ ಶ್ರದ್ಧಾಪೂರ್ವಕವಾಗಿ
ಹರ್ಷೋನ್ಮತ್ತತೆಯಿಂ ಸ್ವಾಗತಿಸಿ ಕರೆದೊಯ್ದು
ಉಚಿತಾಸನದಲಿ ಕೂಡಿಸಿದರ್. ಬಳಿಕಂ ಸಭೆ
ಆರಂಭವಾಗೆ ಸ್ವಾಗತಕಾರಂ ತನ್ನೊಂದು
ಸುಸ್ವಾಗತಮಯ ಭಾಷಣವಂ ಬಲು ಭೂಷಣ
ಗೊಳಿಸಿಕೊಳೆ ಅಧ್ಯಕ್ಷರಂ ಪಾಡಿ ಪೊಗಳುತೆ ....
"ರಾಷ್ಟ್ರೀಯ
ಬಹುಮೂಲ್ಯ ಕಾರ್ಯಕ್ರಮಗಳಿರುತಿರಲೆಲ್ಲಂ
ಬದಿಗೊತ್ತಿ ತಮ್ಮಯ ಅಮೂಲ್ಯ ಸಮಯವನಿಂದು
ನಮ್ಮೊಡನೆ ಕಳೆಯಲೈತಂದುದೆಮ್ಮಯ ಅಹೋ

→

ಭಾಗ್ಯವೆ ಸರಿ."

ಎಂದಾಡಿ ಉದಾತ್ತ ಮನದಿಂದೆ
ಗೌರವ ತೋರ್ದು ಮಾನಿಸಿದರ್ ರಾಷ್ಟ್ರಪತಿಗಳಂ !
ಅದೇ ವೇದಿಕೆಯೊಳ್ ಉಪಸ್ಥಿತರಿರ್ದ ಕಮಲಾ
ದೇವಿಯ ಮೊಗಂ ಕೆಂಪಡರಿ, ದಿಗ್ಗನೆಳ್ದು ಧ್ವನಿ
ವರ್ಧಕದ ಮುಂದೈದು ತಮ್ಮ ಹಾರೈಕೆಯನಿಂತು
ಕೇಳಿಸಿದರ್ ಸಭೆಗೆ,

"ಅಃ, ಇಂತೊಂದು ಅನುಪಮ
ಕಲಾವಂತರ ಮಧ್ಯೆ ಕಾಲಹರಣಮೆಂದೊಡೆ
ರಾಷ್ಟ್ರಪತಿಗಳಿಂಗೆ ವಿಶೇಷಗೌರವಲ್ಲದಿದು
ಬೇರಲ್ಲ. ಇದುವೆ ಅಮೂಲ್ಯ ಸಮಯಮೆಂಬುದ
ನೊಪ್ಪುವರ್ ರಾಷ್ಟ್ರಪತಿಗಳ್. ಅಪೂರ್ವ ಸಂಘಟನೆ.
ಅಪೂರ್ವ ಸಮಯ. ಅಪೂರ್ವಭೇಟಿ ಎನೆ ಎಲ್ಲಂ
ಹಿತಕರಂ ! ಸ್ವಾಗತಕಾರರ ಮುಮ್ಮಾತುಗಳುಂ
ಅಚ್ಚರಿಯೆ ! ಧೀಮಂತ ಕಲಾವಂತರ ನಡುವೆ
ಕಾಲಹರಣಮೆನಲದು ಸುಯೋಗಮಲ್ತೇ ರಾಷ್ಟ್ರ
ಪತಿಗೆ ? ಅಥ ಇತರರಿಗೆ ? ಲೋಕದೊಳ್ ಎಲ್ಲರ್ಗೆ ?"

ಈ ವಗೆಯ ಧೈರ್ಯಸ್ಥೈರ್ಯ ಧೀಮಂತಿಕೆಗಳತಿ
ಶ್ರೀಮಂತಿಕೆಗೆ ಎಣೆಯಿಲ್ಲದ ಕಾರ್ಯವಾಹಿಯಲಿ
ಮುಳುಗೆದ್ದು ಪೈಮನ ಪುನೀತಗೊಂಡ ಕಮಲಾ
ದೇವಿಯ ಪರಮೋಚ್ಚ ಕಲಾಕಲೆಯುಗುವ ದಿವ್ಯ
ಜೀವನಂ ಮಾದರಿಯಪ್ಪುದು ಭಾರತೀಯರಿಂಗೆ.

ಜನ್ಮಭೂಮಿಯ ಮಹೋನ್ನತಿಗಾಗಿ ತನ್ನಾತ್ಮ
ಸರ್ವಸ್ವಮಂ ನಿವೇದಿಸಿ ಶ್ರೀಗಂಧದವೊಲ್ →

ಜನ್ಮವಂ ತೇಯ್ದು ಸಮರ್ಪಿಸಿ ನೇಪಥ್ಯವೇರಿದ
ಕಮಲಾದೇವಿಯುಂ ನಿಜ ಸ್ನೇಹಮಯಿ, ಪ್ರೇಮಮಯಿ,
ವರ ಸಹೃದಯಮಯಿ ಅಪೂರ್ವಕಲಾಮಯಿ ಅಮಿತ
ಕಾರುಣ್ಯಮಯಿ, ರಮ್ಯ ಸಾಹಿತ್ಯ ರಸಿಕಮಯಿ
ಎಂಬೊಲಾ ಅದುಭುತಮಯಿಗಳ ಸಂಗದಿಂದಲಿ
ವಿಜೃಂಭಿಸಿದ ಧ್ರುವತಾರೆ. ಲೋಕಮಾನಿನಿ.

ಸ್ವತಂತ್ರ್ಯ ಭಾರತ ಸಾಮ್ರಾಜ್ಯದ ಸ್ವಚ್ಛಂದ
ಜೀವನಂ ರಾರಾಜಿಸಿರೆ ಕಮಲಾದೇವಿಯುಂ
ಆವೊಂದಧಿಕಾರ ಗದ್ದಿಗೆಯು ನೇರ್ವ ಅದ್ಭುತ
ಧೀಶಕ್ತಿಯಂ ಪೊಂದಿಯುಂ ಮುಂದೈದರಿಲ್ಲ.
ದುಷ್ಟ ದುರಾಶೆ ಪ್ರತ್ಯಾಸೆಗಳ ಪಾಶಕಿನಿತು
ನಿಲುಕದೆಯೆ ಸರಳ ಜೀವನದಲಿ ಬದುಕಿ ಬಾಳಿದ
ಅನನ್ಯ ಧೀಮಂತೆ ! ಏಗಳುಂ ನಿಶ್ಚಂಚಲೆ,
ನಿರ್ವ್ಯಸನೆ, ನಿರ್ಲಿಪ್ತೆ. ಸ್ವತಃ ಜವಾಹರರ್
ತಮ್ಮಯ ವಿದ್ವತ್‌ಪೂರ್ಣ ಮಂತ್ರಿಮಂಡಲ ತುಂಬೆ
ಗೌರವಾದರಗಳಿಂದಲಿ ಕರೆಯಂ ನೀಡಿದರ್.
ಆದರಾ ದಿವ್ಯ ಚೇತನದ ಪರಮೋದ್ದೇಶ-
ಉತ್ಕಟೇಚ್ಛೆಯುಂ ಇರ್ದುದು ಸಮಾಜ ಸೇವೆಯ
ಕಡೆಗೆ. ದೀನಜನಬಂಧುಗಳ ಮಾತೆ ತಾನೈಸಿ
ಚಳಚಳಿಸುತಿರ್ದರ್ ಬದುಕಿನ ಕೊನೆಗಳಿಗೆಯುಂ
ಅಡರಿ ಬರುವನ್ನ. ಆ ಕರುಣಾರ್ದ್ರ ಹೃದಯಿ
ತನ್ನಯ ಮನೋಮಯ ಪ್ರಾಣಮಯ ಉದ್ದೇಶಮಂ
ಹೃದಯಂಗಮವಾಗಿ ವಿವರಿಸಿದ ಪರಿಯಿದು,

"ಭಾರತ ಸ್ವಾತಂತ್ರ್ಯ ಚಳವಳಿಗಿಳಿದಾಗಲಾಂ →

ಈಯೊಂದು ಹುದ್ದೆಗಳ್ ಎನ್ನೆದುರಿಗಿರಲಿಲ್ಲಂ.
ಆನೊರ್ವ ಸ್ವಯಂ ಸೇವಕಯಾಗಿ ಸಾರ್ವಜನಿಕ
ಜೀವನಂ ಆರಂಭಿಸಿದೆನ್. ಅಂತಃಪ್ರೇರಣೆಯಿಂ
ರಾಷ್ಟ್ರೀಯ ಸಾಮಾಜಿಕ ಸೇವಾಕಾರ್ಯಕರ್ತೆ ;
ಅಂತೆಯೇ ಉಳಿಯುವೆಂ ಆಜೀವ ಪರ್ಯಂತ."

ಅಃ, ಜೃಂಭಿಸಿದುದು ನಿಸ್ವಾರ್ಥಮಯ ಜೀವನಂ
ಸ್ವಾರ್ಥಿಗಳ ಕೋಳ್ಕಿಸರ ಕಲ್ಮಷ ಬೆಂಚೆಯ ಮಧ್ಯೆ !
ರಾಷ್ಟ್ರ ಸ್ವಾತಂತ್ರ್ಯ ಹೋರಾಟದಲಿ ಶ್ರಮವಂ
ನೆರೆ ಶ್ರಮಿಸಿ ಹಿಂಡಿದ ಅನುಪಮ ಪುಣ್ಯಾವನಿ.

ತನ್ನೆಲ್ಲ ಸ್ವಗಳಿಕೆಯಂ ಮೇಣ್ ವಂಶಜರ
ಪಿತ್ರಾರ್ಜಿತ ಆಸ್ತಿಯನುಂ ಸಾರ್ವಜನಿಕರಾ
ಸೇವೆಗೆಂದು ಮೀಸಲಿರಿಸಿ ಮುಂಬರಿದರ್ ತಾಂ
ನಿರ್ನಿಮಿತ್ತಂಮಳ್ಕರೆಯ ಉತ್ತರೋತ್ತರಕೆ.
ದಿವ್ಯ ಆತ್ಮೋದ್ಧಾರ ಸಂಭ್ರಮದಿಂದೆ,
ರಾಷ್ಟ್ರೋದ್ಯಮದ ಬಹು ಬಹುಲ ರಾಗರಸದಿಂದೆ,
ಧರ್ಮಭೀರುತೆಯ ಪಾವಿತ್ರ್ಯ ಪಥದಿಂದೆ ವರ
ಶ್ರೇಯೋಚಿತವಾಗಿ ಲೋಕಮಾನ್ಯತೆಯ ಭವ್ಯ
ಮಣಿ ಮುಕುಟನೆತ್ತ ಅನಭಿಷಿಕ್ತ ಮಹಾರಾಣಿ
ತಾನ್ಯೆದು ಎಂಭತ್ತೈದು ವರುಷಗಳ ತುಂಬು
ಜೀವಕಾನನದಲಿ ಮಹದ್ ಸ್ವತಂತ್ರ ಭಾರತದ
ಕನಸು ಕಟ್ಟ ನನಸು ಕಂಡ ಯಶೋ ಕೇತನಂ !
ಪ್ರಭುದ್ಧ ಜೀವಮಾನವ ಸೇವೆಯಲಿ ತೇಯ್ದು
ಮೈಸೋತು ಸಗ್ಗದೈಸಿರಿಗೆ ಎದೆಯೊತು ಬಗೆ
ಯೋತು ಸಾವಿರದೊಂಭೈನೂರೆಂಭತ್ತೆಂಟನೇ →

ಅಕ್ಟೋಬರ್ ಇಪ್ಪತ್ತೊಂಭತ್ತರಂದು ಸುದೂರ
ಪಯಣ ಹೊಡಿದರ್ ಉಳಿದ ಕೆಲಸ ಕಾರ್ಯವುಂ
ಸಹಚರಿಗಳಿಂಗಿತ್ತು.
ಓ, ಪ್ರಭುವೆ! ಆ ದಿವ್ಯ
ಚೇತನ ಮರುವುಟ್ಟು ಪಡೆಯುವೊಡೆ ಮತ್ತೆಮತ್ತೆ
ಮೇಣ್ಮತ್ತೆ ಭಾರತ ಜನನಿಯ ಉಡಿಯಲಿ ಹುಟ್ಟಿ
ಬೆಳೆದು ಜಗತ್ ಜಡಸಮುದಯಕೆ ದಾರಿದೀಪವ
ಎತ್ತಿ ಹಿಡಿಯುವೊಲ್ ಕರುಣಿಸೈ ಎನುತೆ ಒಡಲ
ಮೊರೆಯನೊರೆಯುತೆ ಕಾಲ್ ಪಿಡಿದು ಬೇಡಿಕೊಂಬೆನ್.

ಓ, ಪ್ರಿಯ ಸೋದರೀ, ನೀನೆಲ್ಲೆ ಇರು ಎಂತೇ
ಇರು. ನಿನ್ನ ನೆನೆನೆನೆದು ಎನ್ನಯ ಮನಃಕಲ್ಪ
ಅರಳಿ ಕಾವ್ಯಕಾನನದಲಿ ಮೊಲ್ಲೆ ಮಿಡಿ ಮೊಗ್ಗು
ಮೂಡಿ. ದಳಬಿರಿದು ಮಲ್ಲಿಕಾ ಪರಿವೇಶದಲಿ
ಚೋದಿಸಿ ಉತ್ತೇಜಿಸಿದ ತಾಯೆ, ನಿನಗೆನ್ನ
ಪರಮ ನಮನಂ. ದಿವ್ಯ ನಮನಂ.

— o —

ಶುಕದೇವ

ಅಜ್ಞಾನೇನ ತು ತದ ಜ್ಞಾನಂ
ಯೇಷಾಂ ನಾಶಿತಮಾತ್ಮನಃ !
ಶೇಷಾಮಾದಿತ್ಯವಜ್ಞಾಂ
ಪ್ರಕಾಶಯತಿ ತತ್ಪರಮ್ ॥

ಬ್ರಹ್ಮ ಮಾನಸ ಪ್ರಭವೆ, ಶಾರದೆ, ಶ್ರೀವರದೆ !
ಪರಮ ವಿಭವೆ, ಭಾವರಸಖನಿಯೆ, ಮನಮೋಹನ
ವಾಗ್ದೇವಿಯೆ ! ಮಮಹೃತ್ ಗುಡಿಯ ವರ ವೀಣಾ
ಪಾಣಿಯೆ. ಸರಸ ಸಲಿಲ ಕಾವ್ಯಕಾಮಿನಿಯೆ. ಹೇ,
ದೇವಿ ! ಪರಮ ಕಲ್ಯಾಣಿ, ದೇವ ಮಾನಿನಿ!
ನಿನ್ನಮಲ ಪಾದ ಪದ್ಮಗಳಿಂಗೆ ಮೈ ಬಾಗಿ
ತಲೆ ಮಣಿದು ನಮಿಸುವೆಂ ನಮ್ರವಿನಯ ಭಾವದಿಂ.
ಹೇ, ಜಗಜ್ಜನನಿ, ಶ್ರೀ ಭವತ್ತಾರಿಣಿ, ಸರಸ
ಕವಿಕಾವ್ಯ ಕಲಾಯೋಗಿನಿ ! ವಾಣಿ ಹೇ, ಮಧುರ
ರಸಮಯ ರಸಾಲ ಸರಳ ಸಲಿಲ ವಾಹಿನಿಯೆ !
ಆನಂದ ಸ್ವಚ್ಛಂದ ಭುವನ ಲೀಲಾ ಸ್ಫೂರ್ತಿ
ಕಿಡಿಗಳಲಿ ಕಿರಿದೊಂದನೆನಗಿತ್ತು ವೈದ್ಯುತಚಿತ್
ಸ್ಫೂರ್ತಿ ಕಿಡಿಯನುಜ್ವಲಿಸಿ ಜಡಮನನೆಚ್ಚರಿಸು.
ತ್ರಿಭುವನ ಸ್ವರ ಸಮ್ಮೇಳನದಿ ಹರಿಯಲೀ
ಕಾವ್ಯಲಹರಿ ತಾಳಲಯನಿಯಮರಾಹಿತ್ಯರಸ
ವಾಹಿಯಾಗಿ. ಕನ್ನಾಡಿನ ಮನಃಚಿತ್ತಮಂ
ಮುಟ್ಟುವೊಲ್ !
ಓ, ಭಾವನಾ ಸುಂದರಿಯೆ ! ನಿನ್ನ
ದಯನೀಯ ಪರಕೆಯಿಂದಲ್ತೆ ಕಾವ್ಯರಮಣಿಯ

→

ನಲ್ ಬಾಳ್ತೆ ? ನೀನುಮೆನ್ನ ಶಿರಮುಡಿಯಂ ಏರಿ
ಒತ್ರೊತ್ತಿ ತತ್ತಳ ತುಳಿದು ನರ್ತಿಸೆ ತೊದಲ್ವ
ಕೊರಳ್ದನಿಯೆನ್ನ ಜಳಜಳಿಸಿ ರಾಗರಸವಂ
ಪರಿಸದೇಂ ಸುಸುಂದರ ಧಾರೆಯ್ಯೈಸಿ. ನೀನೇ
ಎನ್ನ ಮಾರ್ಗದರ್ಶಿನಿ. ನೀನೇ ಸುಭಾಷಿಣಿ.
ನೀನೇ ಸುಸ್ವರ ದಾಯಿನಿ, ನೀನೇ ಪ್ರಮೋದಿನಿ
ತಾಯೆ, ದಯೆದೋರ್ದೆನಗೆ ನಿನ್ನ ವೀಣಾವಾಣಿಯ
ಸ್ವರವಂ ನೀಡು ಕರುಣಾಪೂರ್ಣ ಮನದಿಂದೆ.
ತಾಯೆ, ಕಲ್ಪನಾ ಸುಂದರಿಯೆ, ಶಿರವಂ ಮಣಿವೆ
ತವ ಪದತಲಕೆ ಭಕ್ತಿಗೌರವ ಭಾವದಿಂದಲಿ.
ಮಲಿನ ದರ್ಪಣಂ ದೇವಸೂರ್ಯನಂ ಕನ್ನಡಿಸೆ
ನೋನೋಡಿ ಹಿಗ್ಗಿನಲಿವ ಮಗುವಿನ ಪಾಂಗಿನಿಂ
ನಲಿನಲಿವೆ ಭಕ್ತಿ ಸುಧಾ ಸೂತಿಯಲಿ ನೆರೆಮಿಂದು.
ಭವದೀಯ ವಿವಿಧ ಕೋಟಲೆಗಳಲಿ ಮುಳುಗಿಯುಂ
ರಾಗರಸ ಹರಿಸಿ ವಾಲ್ಮೀಕಿ ಪಂಪ ರನ್ನರ
ದಿವ್ಯ ಪದಧೂಳಿಯಂ ಶಿರದೊಳಾನುವ ಪುಣ್ಯ
ಪದಂ ಈಯೆನಗೆ. ಹೇ, ತಾಯೆ ! ಕರ ಜೋಡಿಸಿ
ಬೇಡುವೆ, ಮನದಿ ಭಕ್ತಿರಸ ತುಂಬಿ ಪ್ರಾರ್ಥಿಸುವೆ,
ನಿನ್ನ ವಾಗ್ಧಾರೆಯಂ ಹರಿಸು ರಸವತ್ತಾಗಿ.

ಹೇಳು, ಹೇಳೆನ್ನ ಹೃದಯ ವೀಣೆಯೇ ಹೇಳು !
ಮನದೊಳಾನು ನೆನೆನೆನೆದು ಕೋದ ವರ ವೈದುಷೀಯ
ಬಾಲಮುನಿಯ ಜ್ಯೋತಿರ್ಮಯ ಜೀವನಧಾರೆಯ
ಕಿರಿದೊಂದು ಪ್ರಕರಣವನೀ ಚಿಂಕೃತಿಯಲಿ
ಮಹಾ ರಾಗವಿರಾಗದ ರಾಗಾರುಣತಾನಂ

→

ಹೇಳು, ಹೇಳ್ಕೆ ಆನುಲಿವ ಕಥೆಯು ಸರಾಗದಲಿ.

ಅಂದು, ಶ್ರಾವಣಾಶಾಢ ಪುಣ್ಯದಿನವೂನದ
ಸದ್ದಿಲ್ಲದ ರಾತ್ರಿಯದು ಪ್ರಶಾಂತಗತಿಯುಲಿ
ಉರುಳ್ದುದು ಶುಭೋದಯಕೆ ಆವ ಮುಹೂರ್ತವಂ
ಆರೈದುದೊ ಎಂದೆನಲ್, ಕೋಟ್ಯಾನುಕೋಟಿಯುಲಿ
ಉಜ್ವಲಿಪ ತಾರೆಗಳ ಬಜ್ಜರದ ಮಾಲೆಯಂ
ಸೂಡಿರ್ದ ನಿಶಾದೇವಿಯು ಕಾಳಶರೀರಂ
ಹೊತ್ತಿದುದು ಉರಿಕಿಡಿಯು ತೇಜೋವಿಲಾಸದಲಿ.
ಚೆಲುವಿನ ಸಿರಿಸೊಬಗುಗುವ ವಸಂತ ಪ್ರಭುವಿನ
ಒಡ್ಡೋಲಗದಲಿ ಒಯ್ಯನೊಯ್ಯನೆ ತೀಡಿಬಹ
ಮಂದಮಾರುತಂ ದಶದಿಶೆಯಿಂ ತರುಬಿ ತಂದ
ಕುಸುಮಗಂಧಮಂ ಸಿಂಪಡಿಸುವೊಲಲ್ಲಲ್ಲಿ ನುಸುಳ್ದು
ಪರ್ಣಾರ್ಣವದೊಳಂಡಲೆದು ಗಿಡುಮರಂಗಳಂ
ಮುಟ್ಟೆ ಮುದ್ದಿಸಿ ಮೃದು ಮಧುರ ಮರ್ಮರ ಶತ
ಶೃತಿಯೇಳಿಸುವ ಮಂದಮಾರುತನ ಲೀಲಾ
ಖೇಲನವದು ಮನಮತಿ ರೋಚಕಂ. ಪರಿಸರದ
ವನಾಂತರದಲಿ ಶಿಷ್ಟಪ್ರಾಣಿಗಳ್ ಎಚ್ಚೆತ್ತು
ಮೆಲು ಮೆಲ್ಲನೆ ನಡೆದಾಡುವ ಸರಸರ ಶಬುದಂ
ಮುಟ್ಟುತಿರ್ದುದು ಅಂತರಂಗದ ಪರಮ ಕೇಂದ್ರ
ಕುಂಡಲಿಯಂ. ವನಧಿಯಿಂ ಇಬ್ಭಾಗಗೊಳಿಸಿರ್ದ
ದೇವಗಂಗಾಲಹರಿಯುಂ ವನದೇವಿಯ ದಿವ್ಯ
ಒಡ್ಯಾಣಮೊ ಎನೆ ಥಳಥಳಿಸುತ ಝುಳಝುಳಝುಳ
ಮಂಜುಳ ರವದ ಗಾನ ಗೇಯಮಂ ಹರಿಸುತಿರೆ
ಮೈಮನ ಮರೆಸುವನಿತು ಸಂಮ್ಮೋಹನೀಯತವು

ದೃಶ್ಯಮಾನ ಸೌಂದರ್ಯದ ನಿಧಿಯೆ ತಾನಾಗಿ
ಮೆರೆದತ್ತು ನೋಳ್ಪ ಕಂಗಳ್ ಮತ್ತಾಗುವನ್ನ.
ಪೊಚ್ಚ ಪೊಸ ಪಸುರೊಡೆದು ನಳನಳಿಪ ಪಚ್ಚನೆ
ಪರ್ಣಾರ್ಣವಂ ಮೈಸೊರ್ಕಿ ಮಿಡಿಮೊಗ್ಗು ಪೂಕಾಯಿ
ಪಣ್ಗಳಿಂ ತುಂಬಿ ರಾರಾಜಿಸಿರೆ ದೇವೇಂದ್ರನ
ನಂದನವನವೇ ಧರೆಗಿಳಿತಂದವೊಲ್ ಭವ್ಯ
ಸುಸುಂದರ ವೇಶಿ, ಬೆಡಗು ಬಿನ್ನಾಣದ ಕುಸುಮ
ಕೋಟಿಯು ಕಿರೀಟವ ತೊಟ್ಟು ಮೆರೆವಂತೆವೊಲ್.
ಹುಣ್ಣಿಮೆಯ ರಾತ್ರಿಯಲಿ ಚಂದಿರನ ಬೆಳುದಿಂಗಳ್
ಹಾಲಿನ ಹೊಳೆ ಹರಿದುದು ಭೂಮಿಯಮೇಲೆ. ಚಂದ್ರನ
ಒಡ್ಡೋಲಗದೈಸಿರಿಯುಂ ತೊಳಗಿ ಬೆಳಗುತೆ
ತ್ರಿಲೋಕದ ಸೊಬಗಿಗೆ ಪುಷ್ಟಿಯುಂ ತುಷ್ಟಿಯುಂ
ನೀಡಿದತ್ತು. ಸದ್ದಿಲ್ಲದ ಮಹಾಶಾಂತಿಯಲಿ
ಪ್ರಕೃತಿಯ ದಿವ್ಯ ಪಾರಾವಾರವದು ಮುಳುಗಿ
ನಿದ್ದೆಗೆತ್ತುದೊ ಎನಲ್ ಸತ್ ಶಾಂತಿ ಆವರಿಸಿ,
ಸರ್ವತ್ರ ಶಾಂತಿ ಸುಖದವತರಣದಿಂ ನಲಿದುದು
ಚೈತ್ರೋದಯದ ವಿಪುಲ ಸಸ್ಯ ಸಿರಿ ಸಂಪತ್ತು.

ನಿಶಿಯುರುಳುರುಳಿ ತಣ್ಣನೆ ಬ್ರಾಹ್ಮೀ ಮುಹೂರ್ತಂ
ಅಡರಿಬರೆ ಹುಣ್ಣಿಮೆಯ ಮಂಜು ಮುಗಿಲಿನ ಉಣ್ಣೆ
ರಾಶಿರಾಶಿಯು ಹಾಸುಹೊಕ್ಕಿನೊಳ್ ಜೊನ್ನ ಸಿರಿ
ಪ್ರವಹಿಸಿದುದು ಹಾಲು ಹರಿದ ತೆರದಲಿ. ಪರ್ಣ
ಕುಟಿಯ ಕಿಂಡಿಯಲಿ ಹಾಲ್ಬೆಳಕು ಮೈಚಾಚಿದುದು
ಮುಟ್ಟಿ ಮುದ್ದಿಸಿ ಎಚ್ಚರಿಸುವಂತೆ. ಮುಂಗಡೆಯ
ಕೈಸಾಲೆಯಲಿ ಮಲಗಿ ನಿದ್ರಿಸಿರ್ದ ಬಾಲಕ

→

ಉಲ್ಲಾಸದಿಂದೆ ಮೈವೆರ್ಚಿ ಮನವೆರ್ಚಿ ತಾಂ
ಲೇಖಿಸಿದ ಗ್ರಂಥಗಳ ಓಲೆಕಟ್ಟುಗಳನುಂ
ಬಿಗಿಗಟ್ಟಿ ಕೈಕೊಂಡು ಪ್ರಾಂಗಣಂ ದಾಂಟಿದಂ.
ತಲೆ ಬಾಗಿಲಿನೊಳ್ ಕಂದನುಂ ನಲ್ಮೆಯಿಂ ಬೀಳು
ಕೊಟ್ಟು ನಿಂತಿರ್ದ ತಾಯ್ತಂದೆಯರ್ ಕರುಣಾರಸ
ಪೂರ್ಣ ದಿಟ್ಟಿಯುಂ ಹರಿಸಿರ್ದರತ್ತಲೆ. ಕುವರ
ಓರೊರ್ಮೆ ಪಿಂದಿರುಗಿ ನೋಡುತ್ತೆ ದಾಪುಗಾಲ್
ಮುಂದಿಡುತೆ ನಡೆದಂ. ಸಮುಜ್ವಲಿಪ ಮೊಗಸಿರಿಯು
ಪ್ರಸನ್ನ ತೇಜದಿಂ ಬೆಳಗಿದುದು ಚಂದ್ರಮನ
ಚಂದ್ರಿಕೆಯ ಮಾಳ್ಕೆಯಲಿ. ಮುಡಿಗಟ್ಟಿದ ಪೊದೆಪೊದೆಯ
ಬೊಂತೆಗೂದಲ ಕೆಂಜಡೆ, ಪೀತ ಕೌಶೇಯ ಮಡಿ
ವಸ್ತ್ರದ ಮಲ್ಲಗಚ್ಚೆ, ಕೊರಳಲಿ ವರ ರುದ್ರಾಕ್ಷ
ಮಾಲೆಯಿಂ ಪರಿಶೋಭಿತ ಬಾಲರಿಸಿಯ ಪಾದ
ಪದ್ಮಂಗಳ ಸುಂದರ ಸಂಚಾಲನೆಯಿಂ ಆ
ವನವರ್ತ್ಮವೆ ಪುನೀತಮಾಯ್ತೋ ತನಿಪೊಳ್ತಿನ
ವಾತಾವರಣವೆ ಧನ್ಯವಾಯ್ತೋ ಎಂಬೊಲಾ
ಸತ್ಯ ಸೌಂದರ್ಯಮೆಸೆದುದುನ್ನತ ಚಿತ್ರಣಂ!

ಪೂರ್ವೀ ದಿಗ್‌ತಟಾಂತ ಲಗ್ನದಲಿ ಮುಂಬೆಳಕು
ಇಂದ್ರಲೋಕದಿಂ ತುಳುಕಿತೋ ಎನೆ ಮಂಗಲ ಛವಿ
ಚೆಲ್ಲಿದುದು ಸೀಮಾಕ್ಷೇತ್ರದಂಚಿನಲಿ. ಮುಗಿಲಿನ
ಮಂಜು ರಾಶಿಯು ಬೆಣ್ಣೆವಾಹಿನಿಯು ಮೇಲೆ ಮೆಲು
ಮೆಲ್ಲನೆಯೆ ಏರಿದುದು ಎಳನೇಸರಿನ ತನಕ
ಮಂಡಳಂ. ಕೆನ್ನೀಲ ಮುಗಿಲ್ ಗುಡಿಗೋಪುರಗಳ್
ಕರಕರಗಿ ಹರಿದುವು ದಿವಿಸಾದ ಹೂಹೊನಲಾಗಿ.
ಗಿಡುಮರಗಳಲಿ ನಿದ್ದೆಯಿಂ ಎಚ್ಚರಂಗೊಂಡ →

ಪಕ್ಷಿ ಸಂಕುಲಂ ನಲ್ಮೆಯಿಂ ತೋಷದಿಂ ಹಾಡಿ
ಪಾಡಿ ರಾಗಾಲಾಪನೆಗೈದುವು ಉದಯರವಿಗೆ
ಸುಪ್ರಭಾತಂ ಕೋರಿ. ದಿಶೆದಿಶೆಯಿಂ ತೀಡಿ
ಬಹ ಮಂದಮಂದಾನಿಲನ ಮೃದು ಮಂದ ಸುಖ
ಸ್ಪರ್ಶವದು ಶೀತಲಂ. ಮನೋಜ್ಞಂ. ಅರೆವಿರಿದ
ಕುಸುಮಕೋಟಿಯ ಕಂಪು, ಮಂದಾನಿಲನ ತಣ್ಪು
ಶೀತಲ ಶಾಂತಿಗು ಪೆಂಪು, ಪಕ್ಷಿಗಳ ಕೊರಳಿನ
ರಾಗಮಯಮದಿಂಪು ಎಲ್ಲವುಂ ಕೂಡಿ ನಲಿದುದು
ಮಂಗಳ ಶೋಭೆಯಲಿ ಪ್ರಾತಃಸಮಯಮಂ ಸ್ವರ್ಗ
ಮಧುರಗೊಳಿಸಂತೆ. ಚಿಂತನಮಂಥನಗಳಿಂಗೆ
ಆಗರಮೈಸಿದ ಪ್ರಶಾಂತ ಸಮಯಂ ಮನಕೆ
ಮುದವ ನೀಡುತಿರೆ ಸ್ವರ್ಣೋಜ್ವಲೋದಯದಿಂದೆ
ಮೈವೆರ್ಚಿದವೊಲ್ ಮಧುರ ಸಂಮೋಹನ ರತಿಯ
ರೂಪದಲಿ ಮೈದಾಳಿದತ್ತು ಪ್ರಾತಃಸ್ಫೂರ್ತಿ.

ಬಾಲರಿಸಿಯ ರಸಾದ್ರ್ರದೃಷ್ಟಿಯ ವನವಿಹಾರಕೆ
ಪ್ರಕೃತಿಯೈಸಿರಿಯು ಅತ್ಯಾಕರ್ಷಣೀಯ
ಚಿತ್ರಮಿರೆ ತನುಮನ ಪುಳಕಗೊಂಡುವು ಮೈನವಿರ್
ನಿಮಿರ್ವುವಂತೆ. ಮಧುಮಯರಸಕ್ಷಣದೊಳ್ ಚಿನ್ಮಯ
ಮೂರುತಿಯ ಮುಖಾಂಭೋಜದಲಿ ಸಮುಜ್ವಲಿಪ
ತೇಜೋರಾಶಿಯಿಂ ಬಾಲಧೃವನೊ ಅಥ ಬಾಲ
ಷಣ್ಮುಖನೊ ಎನೆ ಬಾಲ ಸೌಂದರ್ಯವೆರ್ಚಿದುದು
ಪುಟವಿಟ್ಟ ಅಪರಂಜಿಯಂತೆವೊಲ್ ! ಪ್ರಚಂಡ
ಮಾರ್ತಾಂಡನ ಚೆಂಬಿಸಿಲ್ ಉರವಣೆಯಂ ಇನಿತು
ಮಾನಿಸದೊಲ್ ದಟ್ಟಣಿಸಿದ ಪಚ್ಚವಾರ್ಧಿಯಲಿ

→

ತಣ್ಪು ಹೆಪ್ಪುಗಟ್ಟಿರೆ ಭೀಷ್ಮ ಸಂಮೋಹನತೆ
ಲಿಖಿತ ಚಿತ್ರಪಟದಂತೆಸೆದುದು ಸುರಸುಂದರ
ಶೈಲಿಯುಲಿ. ಎತ್ತೆತ್ತಲು ಬೇರೂರಿ ನಿಂದಿಹ
ಭವ್ಯ ಬಲ್ ಬಲೋನ್ಮತ್ತ ಭೂಜೇಶಂಗಳುಂ
ಏರುತ್ತೇರಿ ಮುಗಿಮುಗಿಲ್ ಮುದ್ದಿಸಿ ನಲಿಯುವುದು
ಪೆರ್ಮೆಯಿಂ. ಅತ್ಯದ್ಭುತ ದೈತ್ಯ ದೇಹದ ಜಟಿಲ
ಕುಟಿಲ ವಿನ್ಯಾಸದಿಂ ಶಾಖೋಪಶಾಖೆಗಳಂ
ಚಾಚಿ ಚಾಚಿ ಗಂಭೀರವಾಗೆಸೆದು ತರತರ
ಕುಲ ಕೀರ್ತಿಯಂ ಪ್ರದರ್ಶಿಸಿದವೊಲ್ ಮೆರೆದಿರ್ದುವು
ಪ್ರಶಾಂತ ಮೌನದಲಿ. ಹಾದಿಯ ಸಮೀಪದಲಿ
ಬೃಹದಾಕಾರದೊಳ್ ಮುಂಬೆಳೆದು ಕಳಿತು ಮಾಗಿ
ತಂದಲ್ಸುರಿವ ತನಿವಣ್ಗಳಿಂ ತುಂಬಿ ಜಗ್ಗಿದ
ತುಂಬಾಲರ ವೃಕ್ಷಮಂ ಕೊರಳೆತ್ತಿ ನೋಡಿದಂ.
ರೆಂಬೆ ರೆಂಬೆಯುಂ ಪಚ್ಚೆ ಮೈಯಿನ ಬೊಂಬೆಯಿಂ
ಸಿಂಗರಿತಮಾದುದೆನೆ ಅಸಂಖ್ಯಾತ ಪಂಡಿತ–
ವಕ್ಕಿಗಳ ದಂಡು ಮೇಳೈಸಿರ್ದುವು ಪಣ್ಣುಗಳ
ಸಂಸೇವನೆಯ ಆಕರದಿಂ. ನಾಮುಂದು ತಾ
ಮುಂದು ಎಂದು ನುಗ್ಗಾಡುವ ಪಕ್ಷಿಗಳ ವಳಗ
ಆಕರ್ಷಣೀಯಮಾದುದು ನೆಟ್ಟ ನೋಟಕ್ಕೆ.
ಪ್ರಸನ್ನರಿಸಿಯ ತೇಜೋರಾಶಿಯುಂ ನೋಡಿ
ನಲ್‌ಗೊರಳ್ ಕೊಂಕಿಸಿ ಹಿರಿ ಪಂಡಿತವಕ್ಕಿಯುಂ
ನುಡಿದುದಿಂತು,

“ವಟುವೇ, ನೀನೇಂ ಪಸಿವೆಯಿಂದದ
ಮಾಳ್ಕೆಯಲಿ ನೋಡುತಿಹೆ. ಇದೊ ರಸವತ್ತಾದ

→

ಪಣ್ಣಂ ಸವಿದು ನೋಡೈ"
ಪಿರಿಯ ಗೊಂಚಲೊಂದಂ
ಕತ್ತರಿಸಿ ಕೆಡವಿದುದು ಅನುರಾಗಭಾವದಿಂ.
ಶುಕದೇವಂ ಸಂತಸದಿಂ ಪಣ್ಗಳಂ ಕೈಕೊಂಡು
ಮೆಲ್ಲುತೆ ಮುದದಿಂ ನುಡಿಸಿದಂ,
"ನೀಂ ಬಲುಪಂಡಿತ
ವಕ್ಕಿಯೆ ದಿಟಂ. ನಿನ್ನ ದಯಾ ಪೂರ್ಣ ಕೊಡುಗೆಗೆ
ಧನ್ಯವಾದ ಕಣ! ಇಂ ಕೆಲ ಗೊಂಚಲ್ಗಳಂ ನೀಂ
ನೀಡಿ ಉಪಕರಿಸೈ."
ವಟುವಿನ ಮನದಾಸೆಯುಂ
ಪೂರೈಸೆ ತನಿವಣ್ಗಳನಾರಿಸಿ ಕೆಳಗೆಸೆದುದು
ನಿಜ ಪ್ರೀತಿಯ ನೇಮದಲಿ ಆ ಪಂಡಿತವಕ್ಕಿ.

ಬಾಲರಿಸಿ ಪಣ್ಗಳಂ ಹೆಕ್ಕಿ ತಿಂದು ಮಾನಸ
ಪಕ್ಷಿಗೆ ಮುದವನೂಡಿ ಪ್ರಕೃತಿಯ ವೈಭವಕೆ ಎದೆ
ಯೊತು ಧ್ಯಾನಮಯ ಗಾಂಭೀರ್ಯದಿಂದೆ ಮಿಥಿಲಾ
ನಗರದೇಶದ ಪಥವಂ ಪಿಡಿದಂ. ರವಿಯೇರಿ
ಪೊಗರೇರುವಾಗಸದೊಳುಕ್ಕಿಬರೆ ತಿಳಿಗೆಂಪು
ಕೆಂಗೆಂಪು ಹೂಗೆಂಪು ನಸುಗೆಂಪು ಕೆನ್ನೀಲ
ಪೀತ ಕನಕ ಕುಂಕುಮ ಹಳದಿ ನೀಲ ಚಂದನ
ವರ್ಣೋಪವರ್ಣಮಯ ಫೇನ ಬುದ್ಬುದ ತುಲ್ಯ
ಜ್ವಾಲೋಪಮಾರಕ್ತ ಪಯೋನಿಧಿಗಳ್ ತೊಳಗೆ
ಪಂಕ್ತಿ ಪಂಕ್ತಿಗಳಂತೆ ವಿವಿಧ ವಿನ್ಯಾಸದಲಿ
ರುಂದ್ರಾಂಬರದಂಚಿನಲಿ ಜ್ವಲಿಸಿ ಕುದಿದೆದ್ದುದೊ
ದಿನಮೊನಲ್ ರಂಜಿಸಿತು ರಸದೃಷ್ಟಿಗೆ ಬಂಧುರ

→

ದಿನೋದಯದ ಸುಪ್ರಭಾತಂ. ಪ್ರಕೃತಿಯು
ಪಸುರ್ಗಡಲ ಪೆರ್ದೆರೆಗಳಲಿ ಸ್ಪರ್ಧೆಗೆತ್ತುದೊ
ಎನಲ್ ವೀಚಿ ವೀಚಿಗಳಾಗಿ ಪ್ರಾಚೀ ದಿವ್ಯ
ದಿಗಂತವಮಂ ತಬ್ಬಿ. ನಾನಾದಿಶೆಗೆ ಹಬ್ಬಿದ
ಮಹಾಗಿರಿ ವನಶ್ರೇಣಿ ಎಳೆಮನವಮತಿಗಳಿಂಗೆ
ಚೆಲ್ವಾಯ್ತು; ತೋಷದಾಗರಮಾಯ್ತು. ಬಾಲವಟು
ಆನಂದ ಭಾವದಿಂ ಪ್ರಕೃತಿ ವೈಭವವಂ ಮನದುಂಬಿ
ಮೈದುಂಬಿ ಭಕ್ತಿಭಾವ ಘನಿಸುತಿರೆ ಮನದಲಿ
ಪರಮೋಲ್ಲಾಸದಿಂ ನಡೆವನೇಕಾಂಗಿ. ಗಾಳಿಯು
ಅಲೆಪದಿಂ ಕುಸುಮತತಿ ನಲಿಯೆ ನಸುಗಂಪಿನಿಂ
ಮನಮತ್ತ ಮಧುಪಂಗಳುಂ, ಭ್ರಮರಂಗಳುಂ
ದಂಡುದಂಡ್ಯೈಸಿ ಬಂದೆರಗಿ ಹೂವ್ನೊಡಲ್ ಬೊಕ್ಕು
ಹೊಂಧೂಳಿಯಲಿ ಹೊರಳಿ ಹೊರಳಿ ಹೊಂಬೊಗರೇರಿ
ಪೂವಿಂಪೂವಿಗೆ ಹಾರಿ ಮಕರಂದ ಭಿಕ್ಷೆಯಂ
ಬೇಡಿ ಝೇಂಕರಿಸಿದುವು ಓಂಕಾರ ಸೂಸುವೊಲ್.
ವಿಧವಿಧದ ಪಕ್ಷಿ ಸಂಕುಲದ ಕೂಜಿತಂ ತುಮುಲ
ಸುಮಧುರಮಯದಿಂ ಚೈತ್ರ ಪ್ರಭಾತಂ ಧ್ವನಿ
ಸಾಂದ್ರಮಾಗಿರೆ ಉದುರುತಿರ್ದುವು ಇಬ್ಬನಿ ಹನಿ
ಪನ್ನೀರ್ ತಳಿದಂತೆವೊಲ್.

ಹಾದಿಯಂಚಿನಲಿ
ಬೃಹದ್ ಬಯಲಮಧ್ಯೆ ಮಹಾಜಲರಾಶಿಯಿಂ
ತುಂಬಿ ತುಳುಕುವಂತೆವೊಲಿರ್ದ ವಿಸ್ತಾರವಾದ
ಪವಿತ್ರ ಪರಿಶುಭ್ರತಮ ಪುಷ್ಕರಣಿಯುಂ ಕಣ್
ದಿಟ್ಟಿಗೆಸೆದುದು ಮನಃಪ್ರಾಣಗಳ್ ಆಕರಿಪ

→

ಮಾಳ್ಕೆಯಲಿ. ಬಾಲರಿಸಿ ಭವ್ಯ ಜಲರಾಶಿಯಂ
ನೋಡುತಿರಲುತ್ಫುಲ್ಲತೋಲ್ಲಾಸ ಉಕ್ಕಿದುದು
ಹೃತ್ ಕುಂಡಲಿನಿ ಬಿರಿಯುವಂತೆ. ಪುಳಕಿತ ಮೈ
ಮನಗಳಿಂ ಭಾವಗಾಂಭೀರ್ಯದಿಂ ನೋಡಿಯೇ
ನೋಡಿದನ್. ಸರೋವರದಲಿ ಜಲಪಕ್ಷಿಗಳ್, ಜಲ
ಚರಂಗಳ್, ಬೆಳ್ದಾವರೆ, ಕೆಂದಾವರೆ ನೈದಿಲೆ
ಕನ್ನೈದಿಲೆಗಳ ಬಲು ಮನಮೋಹಕ ಸುಂದರ
ಚಿತ್ತಾರಗಳಿಂ ತುಂಬಿ ನಯನಾಕರ್ಷಣೀಯ
ಸೌಂದರ್ಯವದು ಪೊದಳ್ದುದು ಪುಷ್ಕರಣಿಯಲ್ಲಿ.
ನೋನೋಳ್ಪ ಕಂಗಳ್ ಮತ್ತಾಗುವೊಲ್ ಮೆರೆದುದು
ಪ್ರಕೃತಿಯ ಬಂಧುರ ಪರಿವೇಶಂ. ಬಾಲಕಂ
ಮುದದಿಂ ತಟನಿಯಂಚಿಗಿಳಿದಂ. ತಿಳಿನೀರಿಂ
ಕೈಕಾಲ್ ಮುಖ ಮಜ್ಜನಂಗೈದು ಬೊಗಸೆಯೊಳ್
ತಿಳಿನೀರ್ ಕುಡಿದು ಒಡಲ ಧಗೆಯಂ ತೀರ್ಚಿದಂ.

ತಾವರೆಗಳ ಸುಸುಂದರ ಸಂಸಾರಕೆ ನಿಚ್ಚ
ಹೆಗಲೆಣೆಯೊ ಎನೆ ಹಂಸಗಳ ಮನೋಹರ ರಮ್ಯ
ಸಂಸಾರದ ಚಿತ್ತಾರಂ ಕಣ್ಗೆಡ್ಡಮಾದುದು.
ಧವಳ ಕಾಂತಿಯ ಹಂಸೆಗಳ್, ಘನಕೃಷ್ಣವರ್ಣದ
ಹಂಸೆಗಳ್ ತಂತಮ್ಮ ಮರಿಗಳ ಸಂಸಾರ ಪರಿ
ವಾರಮಂ ಸುತ್ತಮುತ್ತಲ್ ಇರಿಸಿ ತೇಲುತಿರೆ
ಮೀನುಗಳ ಬೇಟೆಯಲಿ ತೊಡಗಿ ; ವರ್ಣಕಲಾವಿದನ
ಕುಂಚಕೆ ಮೈಯಾಂತ ಚಿತ್ರಮೊ ಎನಲ್ ಮಹೋನ್ನತ
ಸಂದೃಶ್ಯಮಾನ ವೈಭವ ಹೃನ್ಮನ ಮಧುರಂ.
ಒಳಗೊಳಗೆ ಗುಳುಗುಳುಗುಳುಗಾಡಿ ತಣಕುಪಣಕು

→

ಮಿಂಚಿಮಿನುಗಿ ಬೆಚ್ಚನೆಯ ಬಿಸಿಲಿಂಗೆ ಮೆಲ್ಲನೆ
ಮೈಗೊಡುವ ಮೋಜಿನಲಿ ನೀರ ಮೇಲಾಡುತಲಿ
ತೇಲಿಬಹ ಮತ್ಸ್ಯಗಳ ರಾಸಲೀಲಾ ವಿನೋದ
ನೋಳ್ಪ ದಿಟ್ಟಿಯುಂ ಸೆರೆವಿಡಿದುದು ರಸವತ್ತಾಗಿ.
ಸುತ್ತುಮುತ್ತಿನ ಪರಿಸರಮೆಲ್ಲಂ ಜಲನಿಧಿಯ
ತಣ್ಪಿನ ತನಿಯ ಸಾರವನುಂಡು ಪಸುರಿನುಡೆಯ
ಪೆರ್ಮೆಯಲಿ ತರತರದ ತಳಿರ್ಗಳ ಸಿಂಗರಂ
ಪೊತ್ತು ರಂಗು ಮಾಣಿಕದ ಮೈಯಾರದಿ ಬೀಗಿ
ಮೆರೆದಿರೆ ಜಗತ್ತು ಮಧುಮಯಂ ಕಣ್ಣನೋಟಕೆ.
ತಾವರೆಗಳ ಸುಸುಂದರ ಸಂಸಾರಕೆ ಪ್ರತಿ
ಪಡಲೊ ಎನಲಾತರತರದ ಹಿರಿಕಿರಿ ವಿಹಂಗಳ
ಸಂಸಾರ ಮೆರೆದತ್ತು ರಂಗುರಂಗಾಗಿ. ರಿಸಿ
ಶುಕದೇವನುಂ ಕಣ್ಣೆತ್ತಿ ಸುತ್ತಮುತ್ತಲಿನ
ಗಿಡುಮರಗಳನೀಕ್ಷಿಸಿದಂ. ಕಳಿತು ಹಣ್ಣಾಗಿ
ರಸಭರಿತಮಾಗಿರ್ದ ಪೇರಿಳೆ ನೇರಿಳೆ
ಪಣ್ಗಳ್ ಕಣ್ಗಳಿಗೆಸೆದುವು. ಓ! ಅಲ್ಲಿ, ನಸುನೇ
ದೂರದಲಿ ಸೀತಾಫಲದ ವೃಕ್ಷ ಕಣ್ಗೆಸೆಯೆ
ನೋಳ್ಪುದೇಂ? ಫಲ ಭಾರದಿಂ ವೃಕ್ಷವೇ ಬಾಗಿ
ಕೈಗೆಟುಕುತಿಹೆ ಮಧುರ ಫಲಂಗಳ ಹೇರಾಶಿ.
ಬಾಲರಿಸಿಯುಂ ಮುದದಿ ಮನವೋತು ಎದೆಯೋತು
ಪಣ್ಗಳಂ ಕಿತ್ತು ಭುಂಜಿಸಿ ಒಡಲ ಧಗೆದಾವರ
ಪಸಿವುಗಳನೆಲ್ಲವಂ ತೀರ್ಚಿ ನೀರುಕುಡಿದಂ.
ಪಯಣದ ಬಳಲಿಕೆಯುಂ ಮುಡಿದುದು ನಸುವೊಳ್ತಿನಲಿ.
ಪ್ರಕೃತಿಯ ವೈಭವೋಪೇತ ಪರಿದೃಶ್ಯಮಾನದ

→

ಸೌಂದರ್ಯದೊಳ್ ಮುಳುಗಿ ತೋಷದಿಂ ವೈವಿರ್ಚಿ
ದಟ್ಟನೆರಳ್ ಹರಡಿದ ಹೆಮ್ಮರದಡಿಯಲಿ ನಸು
ವಿಶ್ರಾಂತಿಗೆತ್ತಂ ಕೈದೊಳ್ ತಲೆದಿಂಬಾಗಿ.

ಉರುಳಿತು ನಸುವೊಳ್ತು ಕಿರುನಿದ್ದೆಯ ಮಬ್ಬಿನಲಿ.
ಒಡನೆ ನಿದ್ರಾಲೋಕದ ಮಂಪರದೊಳಾರೋ
ಕೆನ್ನೆ ಮುಖಗಳಂ ತಣ್ಣಗೆ ಮುಟ್ಟುವೊಲ್ ಮುಟ್ಟಿ
ಮೂಸಿ ಬುಸ್ಸನೆ ಬಿಟ್ಟ ಗಬ್ಬುಸಿರ್ ವದನಮಂ
ತಾಗೆ ಬೆಕ್ಕಸ ಬೆರಗಿನಿಂ ಕಣ್ತೆರೆದೆದ್ದಂ !
ನೋಡೆ, ಬೃಹದ್ ಭೀಕರಾಕಾರದ ಕಪ್ಪನೆ
ಭಲ್ಲೂಕವೊಂದು ಬಳಿಯಿಂ ದೂರ ಜಿಗಿದತ್ತು !
ಬೆದರಿದವೊಲ್ ನವಿರ್ ನಿಮಿರಿ ನಿಂತು ಇತ್ತಲೇ
ನೋಡಿತು ಭಯ ಭೀತ ಕಣ್ ನೋಟವಂ ಬೀರಿ. ಕೂರ
ಕಣ್ಗಳ ಕೂರ ನೋಟದ ಭಲ್ಲೂಕ ದೂರದೊಳ್
ನಿಂತು ನೋಡಿಯೇ ನೋಡಿತು ಅಚ್ಚರಿಯಿಂದಲಿ,
ಅಗ್ನಿಶಿಖೆ ಪೊಳೆವಂತೆ ಪೊಳೆವ ಉಜ್ವಲ ದೇಹಿ
ಚಿಣ್ಣನಂ. ಆಗಳಾ ಬಾಲರಿಸಿ ಶುಕದೇವನುಂ ನೆಟ್ಟ
ನಿಟ್ಟಾಲಿಗಳಂ ಚಂಚಲಿಸದೆ ಗಮನಿಸಿದಂ.
ಕಪ್ಪನೆ ಕರಿದೊಗಲಿನ ದಟ್ಟನವಿರ್‌ರಾಜಿಯುಂ
ಮನೋಗತಿಗೆ ಭಯವೂಡಿಸಿಯುಂ ವಿಸುಕಲಿಲ್ಲ.
ಮತಿಗೆಡದೆ ಮನಗೆಡದೆ ಗಂಭೀರ ಭಾವದಿಂ
ಎಳ್ದು ನಿಂತೊಡನೆಯೇ ಭಲ್ಲೂಕಮಲ್ಲಿಂದೆ
ಕಾಲ್ತೆಗೆದು ಓಡಿಮುದು ತೆಕ್ಕನೆ ವನಾಂತರಕೆ.
ಬಾಲರಿಸಿ ಮುಗುಳು ನಗು ಸೂಸಿ ಹಿಂದೆಯೇ ಕಣ್
ನೆಟ್ಟು ನೋಡಿದಂ ಭಲ್ಲೂಕನ ಘನ ರೂಪಿನ

→

ನಾಗಾಲ್ ಓಟವಂ. ಕ್ಷಣದೊಳ್ ತೋರಸ್ಟೈ
ಕಣ್ಮಾಯವಮಾಯ್ತು ಕರಿಮಿಂಚು ಮಿನುಗಿ ಸಂದವೊಲ್.

ಬಾಲರಿಸಿಯುಂ ಶಾದ್ವಲೋದ್ಯಾನದ ಹಚ್ಚನೆ
ಮಿದು ಹಾಸಿನಲಿ ಹೂವಡಿಗಳನುಂ ಮುಂದಿಡುತೆ
ಬೃಹದ್ ಬಯಲಂ ದಾಂಟಿದಂ. ಮುಖ ಮೈಯುಂ
ಮುಟ್ಟಿ ಮುದ್ದಿಸುವಂತೆವೊಲ್ ತಾಗುತಲಿರ್ದುವು
ಅಲ್ಲಲ್ಲಿ ಮುಂಬೆಳೆದ ಗಿಡಗಂಟೆಯು ಹರೆಗೈ
ಚಾಚಿರೆ. ವನಾಂತರದಿಂ ಹೊರಬಿಳ್ದುವೆಸಿತೋ
ಪ್ರಾಣಿಗಳ್ ಬಯಲ ಬೆಚ್ಚನೆಯ ಚೆಂಬಿಸಿಲ ಸುಡು
ಗಾವಿಂಗೆ ಮೈಗುಡುವ ಮೋದದಿಂ. ಪುಲ್ಮೇವ
ಆಸೆಯಿಂ. ಮಿಗಗಳಿಂಡು ಮಿಂಚುಮೈ ಹೊಂಗಲಿಸಿ
ಮುಂಡು ಬಾಲಮಂ ಪಟಪಟಿಸಿ ಓಡಾಡುತಿರೆ
ನಲಿನಲಿವ ಸುಸುಂದರ ಸಂಚರಣ ಕಣ್ಮನಕೆ
ಊಡಿಸಿದುದು ಆನಂದ ರಸಾಯನಾಮೃತವಂ.
ಗಳಿಗೆಗಳಿಗೆಗುಂ ಪ್ರಾಣಿಗಳ ಆಗಮನಂ
ವೆರ್ಚಿದುದು ನಿಬ್ಬಯಲಿನ ಶಾದ್ವಲೋದ್ಯಾನಕೆ.

ಶಿಷ್ಟ ಪ್ರಾಣಿಗಳ್, ನಿರ್ವೈರ್ಯದಿಂ ಬಾಳುತಿಹ
ಕ್ರೂರ ಪ್ರಾಣಿಗಳ್ ಗಮಿಸಿ ಪುಲ್ಮೇದು ಮಿಗಲಿತ
ಪಣ್ಗಳಂ ಮೆದ್ದು ಪಿಂದಿರುಗಿದುವು ವನಾಂತರ
ಪ್ರದೇಶಕೆ. ಬಾಲರಿಸಿ ಮುಂಬರಿಸಿದಂ ತನ್ನ
ಪಯಣಮಂ. ಪ್ರೌಢಾರುಣನ ಕೆಂಬಿಸಿಲೇರಿರೆ
ನೆತ್ತಿಗೆ, ಬಿಸಿಲಿನ ಧಗೆಯುಂ ಪೆರ್ಚಿ ಧಗಧಗಿಸಿ
ಕುದಿದೆದ್ದುದೊ ಪಗಲೆನಲ್ ಬೆಮರ್ ಬಸಿದು
ವದನ ಬಿಂಬ ನಿಜಮಜ್ಜನಮಾಯ್ತು ಮತ್ತೆ. →

ಮಧ್ಯಾಹ್ನ ಕಾಲೀನ ಪಗಲ್ ಥಳಪಳಿಸಿರುತೆ
ಮರೀಚಿಕೆಯೊಳ್ ಕಂಗಳಂ ರಂಜಿಸಿ ನಲಿದನಾ
ದಿನಮಣಿ. ನೀರವತೆಯ ಅಮೃತ ಚಣಂಗಳ್
ಸರಿದು ಉತ್ತರೋತ್ತರ ಪಯಣ ಪ್ರಕಾಂಡವದು
ಮುಂಬರಿದುದು ಯಥೋಚಿತವಾಗಿ. ಮುಂಪಥದಲಿ
ಅಲ್ಲಲ್ಲಿ ಮುನಿಜನರ್ ಮುನಿಪತ್ನಿಯರ್ ಬಾಲ
ವಟುಗಳ್ ಕಣ್ಗೊಳಿಸಿದರ್. ಪರಸ್ಪರ ಉಭಯ
ಕುಶಲೋಪರಿಯು ಬಳಿಕ ಮುಂಬರಿದುದು ವನಪಥ.
ದಿನಮಾನದ ಜಿಂಬಿಡಿದು ನಡೆದನಾ ಬಾಲಋಷಿ
ಪುರುಪಿನ ಗಣಿಯಾಗಿ. ಎಳೆಗಾಲ್ಗಳೆಂತು ನಡೆದುವೊ
ಹಾದಿಯೆಂತು ಕಳೆದುದೊ ತಾನರಿಯದ ತೆರದಲಿ.
ಪೊಳ್ತೇರಿ ಪೊಳ್ತಿಳಿದು ಕಾಲನ ನಡುವಿಸಿಲಿನ
ಧಗೆಯುಂ ಇಳಿದು ಪಗಲ್ ಕರಗಿ ಮುಗಿಬಗಿಯಾಗೆ
ಮಂದಮಂದಾನಿಲಂ ತಣ್ಣಗೆ ತನಿಯುಣಿಸುವ
ಪಾಂಗಿನಲಿ ಬೀಸಿವೀಸಿ ತನುಮನಮಂ ಮುಟ್ಟಿ
ಮುದ್ದಿಸಿ ತಣಿಸಿದಂ ಧಗೆದಣಿವು ಅಳಿಸುವಂತೆ.
ಮೃದುಗಾಳಿ ತೀಡುತಲಿರ್ದುದು ಮತ್ತೆಮತ್ತೆ
ಮೇಣ್ಮತ್ತೆ ಎಡೆವಿಡದ ವೇಶಾವವೇಶದಲಿ,
ಗಿಡುಮರಗಳಲಿ ಮರ್ಮರ ಧ್ವನಿಯ ಮೂಡಿಸುತ,
ಕಾಮಳ್ಳಿ ಗಿಳಿಗಳುಲಿ ಕೇಳಿಸಿತ್ತಿಂಪಾಗಿ
ಕಾನನವಲಯದ ವಿಜನ ನೀರವದಾಣದಲಿ.
ಓರೋರ್ಮೆ, ನಿಂತು ಮರಗಳ ಹೊದರಿನೆಡೆಯ ಗಿಳಿ
ಕಾಮಳ್ಳಿಗಳೆಡೆಗೆ ನಿಡುನೋಂಟವನಟ್ಟುತೆ ಹರೆ
ಹರೆ ಮಧ್ಯೆ ಅಲುಂಗುವ ಎಲೆಗಳಂ ಗುರಿಗೊಂಡು

→

ನೋಡುವನ್ ಪಕ್ಷಿ ದರ್ಶನಾರ್ಥಿಯಾಗಿ. ಗಿಡು
ತರುಗಳಲಿ ವಿವಿಧ ಪಕ್ಷಿಧಾಮವಂ ನೋನೋಡಿ
ಮನಮುದಿಸಿ ಆನಂದ ತುಂದಿಲತೆಯಲಿ ಮುಳುಗಿ
ಜತನದಿಂ ತೊಡಗುವನು ಮತ್ತೆ ಮಿಥಿಲಾನಗರಿಯ
ಸಂಯಾತ್ರೆಯಲಿ. ಬಟ್ಟ ಬಯಲ ಸುಡುಬಿಸಿಲಿನಲಿ
ಸುಟ್ಟುರಿದೊರ್ಮೆ ವನಧಿಯ ತಣ್ಣೆಳಲ ತಣ್ಪಿನಲಿ
ತಣಿದೊರ್ಮೆ ಸಾಗುವುದು ಮಿಥಿಲೆಗೆ ಕಠಿಣಪಥಂ.
ದೂರದಿ ಮರಕುಟುಕನ ಹಕ್ಕಿಯುಂ ಕಟಕಟನೆ
ಕುಟುಕುತಿರೆ ಹೆಮ್ಮರದ ಕಾಂಡವಂ, ಬಾಲರಿಸಿ
ಅದರ ಕೆಂಗೆಂಪುಗುವ ಉದ್ದನೆಯ ನಿಡುವಾಯ್
ಚೆಂಚೂಪುಟದ ಶಕ್ತಿಯೋಗವಂ ಜಾನಿಸುತಿರೆ
ಎರ್ದೆಗುಡಿಯಾತ್ಮ ಚೇತನಂ ಕೇಳಿಸಿತಿಂತು,

"ಕೇಳೆನ್ನ ಬಾಲರಿಸಿಯೇ! ಇಂದಿನೀ ದಿನದ
ಉತ್ತರೋತ್ತರ ಅಭಿವೃದ್ಧಿಯಂ ಗಂಭೀರ
ಚಿಂತನಾವೇಶದಲಿ ಸಂಭಾವಿಸೆಲೈ"

ಋಷಿ

ಕುವರ ಶುಕದೇವಂ ಮನವಂ ತರ್ಕವಿತರ್ಕದ
ಕತ್ತರಿಯಲುಗಿಗೊಡ್ಡಿದಂ. ದಿನದಿನಂ ಭವ್ಯ
ಪ್ರಕೃತಿಯಲಿ ಉದಯಾಸ್ತಮೆಂತಂತು ಬದುಕಿನ
ಚಣಚಣಂ ಛಲದಂಕದಲಿ ಸಂದು ಹೋಹುದೇ
ಸಂಜೀವನ ನೋಂಪಿಯೈ. ಶರೀರಮಿದು ಕುಗ್ಗಿ
ಮುಗ್ಗಿ ನಶಿಸಿಹೋಹುದು ನಾಳೆ. ಋತುನೃಪನುಂ
ಬಿಟ್ಟ ವನರಾಜಿಯೊಲಾದಪುದು ಬಾಳ್ ಬನ.
ಶೀತಕಿರಣ ಸ್ನಾತ ಶುಭ ಶುಭ್ರೋರ್ಣಭೃಗತಿ

→

ವಿಭ್ರಾಜಿಸಿರೆ ಪ್ರಶಾಂತ ನಿಶೀತವಮಂ ನೆನೆಯೈ.
ಕರ್ತವ್ಯ ಪರಾಯಣತೆಯ ದೃಢ ಗಂಭೀರ
ಸಾಧನಾ ವೈಖರಿಯುಲಿ ಮುಳುಂಗಿ ಸಾಧಿಪುದು.
ಆತ್ಮ ಚೇತನದ ಆವೇಶದಾದೇಶವಮಂ
ಅವಲೋಕಿಸಿದಂ ಏಕಾಗ್ರ ಚಿತ್ತ ವೃತ್ತಿಯಿಂ.
ಮುಂದೆ ಮುಂದೆ ಮುಂಕೊಂಡು ಬರೆ ಜಳಜಳಿಸಿ ಪರಿವ
ಕಾಲ್ವಾಯಿಯೊಂದನುಂ ಕಂಡಂ. ನೀರ್ಗಿಳಿದು ಕೈ
ಕಾಲ್ ತೊಳೆದು ಜಳಕವನಾಡಿ ಮುಖ ಮಜ್ಜನಂ
ಗೈದು ಬೊಗಸೆಯೊಳ್ ನೀರ್ ಕುಡಿದಂ ಒಡಲ್ ತುಂಬ.
ಕಾಲ್ವಾಯಿಯ ತನಿಯುಂಡು ತನಿಯುಗುವ ಪರಿಸರದಿ
ಮಧುಪ ಭೃಂಗ ವಿಹಂಗ ಸಂಗೀತ ಸಂಗದಲಿ
ಮಧುರಂಗದಂತರಂಗದ ವಿಪಿನ ವೀಥಿಯೊಳು
ಶಾಂತಿಲಕ್ಷ್ಮಿಯ ಪೂಜೆ ನಡೆದಿರ್ದುದು ಸಂತತ.
ಪಕ್ಷಿಗಳ ರಾಗಮಾಲೆಯೊಂದಲ್ಲದೆ ಸದ್ದು
ಗದ್ದಲಂಗಳ ಸೊಲ್ಲಿಲ್ಲ. ಎಲ್ಲವುಂ ತನಿಯಿಂಪು.
ಮನಃಪ್ರಾಣಂಗಳಿಗೆ ತನಿರಸದ ತನಿಯುಣಿಸಿ
ನಸುಪೊಳ್ತು ವಿಶ್ರಮಿಸಿ ಮತ್ತೆ ಪೊರಮಂಟನಾ
ಬಾಲಕಂ. ಪ್ರಸನ್ನ ವದನ ಬಿಂಬಂ ಸಾರ್ಚುಂ
ಪ್ರಭೆಯ ಮಿಸುನಿ ಲೇಪದಿಂ ಬೆಳಗಿ ತೊಳಗಿದುದು
ರವಿಬಿಂಬಕೆ ಪ್ರತಿಬಿಂಬವೊ ಎನೆ ಬಾಲವಟು
ಉಜ್ವಲಿಸಿದಂ ಬಾಲರವಿಯುಸಾಂಗಿನಲಿ. ಮನ
ಮತಿಗಳಲಿ ಭಕ್ತಿರಸಮಂ ತುಂಬಿ ಚಿಂತನಾ
ಪ್ರವ್ಯವಂ ವೆರಸಿ ಮಥಿಸುತಿರೆ ಮುಂಬಯಲಿನ
ಮಧ್ಯೆ ಕಂಡನೊಂದು ಪುಲಿಯುಂ ನಿದ್ದೆಗೈದುದಂ !

→

ಹರಿದ್ವರ್ಣದ ಕರ್ಪುರ ಪಟ್ಟೆ ಪಟ್ಟೆಯ ಪುಲಿಯುಂ
ಮನುಷ್ಯಗಂಧವಂ ಆಘ್ರಾಣಿಸಿದೊಡನೆಚ್ಚೆತ್ತು
ಕಣ್ ಕೆಕ್ಕರಿಸಿ ನೋಡಿತು ವ್ಯಗ್ರ ಭಾವದಿಂ.
ಭಯಾನಕ ಭೀಕರ ಪುಲಿಯುಂ ಒಂದೇ ನೆಗೆತಕೆ
ಎಟುಕಲಿಹ ಕಂದನಂ ನೋಡಿ ಗುರ್‌ಗುರ್ ಎನುತ
ಎದ್ದು ಕುಳಿತು ದುರುಗುಟ್ಟಿ ನೋಡುತಿರಲ್ ಬಾಲ
ರಿಸಿಯುಂ ನೋಡಿದನದಂ! ನಿರ್ಭೆಯದಿಂ ಬಾಳ್ವ
ವೃಗವಲ್ಲನೆಂಬುದರರಿವು ತೆಕ್ಕನಾದುದು
ಮನಮತಿಗಳಿಗೆ. ಒಡನೆಯೇ ಧೈರ್ಯ ಸ್ಥೈರ್ಯದಿಂ
ಅಭಯ ಹಸ್ತವಂ ಎತ್ತಿ ಹಿಡಿದಂ ಪೆರ್ಬುಲಿಯ
ಮುಂತೆ ಬಾಲರಿಸಿ. ಚಣಗಳ್ ಉರುಳಿದುವು ದಿವ್ಯ
ನಿಶ್ಶಬ್ದ ಗತಿಯಲಿ. ಪುಲಿಯುಂ ಗರ್ಜಿಸಿ
ಅತ್ತಿತ್ತ ನೋಡಿ ಸಪ್ರನೋಡಿ ವನಾಂತರಂ
ಪೊಕ್ಕು ಕಣ್ಮಾಯವಾಯ್ತು, ಮಂತ್ರ ಮುಗ್ಧತೆಯಿಂ.
ವನಾಂತರದಲಿ ಪಕ್ಷಿಗೊರಳ ಸಂಧ್ಯಾರಾಗವದು
ಮೊಳಗಿದುದು ಮನಮುಟ್ಟುವವೊಲ್. ಮಕರಂದವಂ
ಪೀರ್ದ ಬಂಭ್ರಮದ್ಭ್ರಮರಂಗಳ್ ಮತ್ತೇರಿ
ಝೇಂಕರಿಸುತೆ ಓಂಕಾರದ ಸ್ವರವಂ ಉಣ್ಮೆ
ಆನಂದ ತೇಜದಿಂ ಮರಳುತಿರ್ದುವು ಗೂಡಂ
ಗುರಿಗೊಂಡು. ಕರ್ಣಗಹ್ವರವಂ ಸ್ವರಾನು-
ಸ್ವರಂಗಳ್ ಪುಗುತಿರೆ ಶುಕದೇವಂ ದಿನಾಂತದಲಿ
ವರ್ಣವರ್ಣಾಂತ ಮಧುರ ಕಾವ್ಯಮಯ ಜಗತ್ತಂ
ಅವಲೋಕಿಸುತ ಮನಕೆ ಮುದನೆತ್ತಂ. ನಿಶ್ಶಬ್ದ
ನಿರ್ಜನ ನೀರವತಾ ಶಾಂತಿಯಲಿ ಕಣ್ಗೆಸೆದ

→

ಸಾಯಂ ಸೊಬಗು ಪುಟಿಪುಟಿಸಿತು ಮೈಮನಂ.
ಬಾಲರಿಸಿ ಮನದೆ ಮುದಿಸಿ ಮುಂಕೊಂಡು ಬರುತಿರೆ
ಕಂಡನಾ ಮಿಥಿಲಾನಗರಿಯಂ ಸುರೇಂದ್ರ ಗಿರಿ
ಧಾಮದ ಪದತಲದಲಿ. ಬೃಹದ್ ಪ್ರದೇಶದ
ಮಹಾ ವಿಸ್ತಾರದೊಳ್ ಉದ್ದಗಲವನಳೆಯುಲ್
ಆಗದವೊಲ್ ಹರಡಿರ್ದುದು ಕಣ್ಗೆಡ್ಡವಾಗಿ.
ಅರುಣಾರುಣದ ಚಂದನಕಾಂತಿಯ ಲೇಪದಿಂ
ಜಗಜಗಿಸುತಿರ್ದುದು ಮಿಥಿಲಾನಗರಂ. ರಾಜ
ವೈಭೋಗದ ಅದ್ಭುತೈಶ್ವರ್ಯ ಸಂಪದವೆ ಸಂಪದಂ.
ರಾಜಪಥದಿಕ್ಕೆಲದಲಿ ಮೈವೆತ್ತ ಬೃಹದ್
ಗೃಹಶ್ರೇಣಿಯೊಳ್ ಮಿಸುನಿಲೇಪವೊರೆದಿರ್ದ
ಕಿಟಕಿ ಬಾಗಿಲುಂ, ಸಂಯಾತ್ರಿ ಸಾಯಂ ರವಿಯು
ದಿವ್ಯ ಪ್ರಭೆಯಿಂದೆ ತೊಳಗಿ ಬೆಳಗಿರೆ ಮನವಂ
ಸೆಳೆವಂತೆ ಥಳಥಳಿಸಿ. ಸಾಲುದೀಪಾಲೋಕದ
ಸುಸುಂದರ ಅಲಂಕರಣಂ. ಅಂಬರ ಚುಂಬೀ
ದೇವದಾರು ವೃಕ್ಷಂಗಳ ಮೈಸಿರಿಯುಂ ಮಿಗೆ
ಪರಿಶೋಭಿಸಿದುದು ಪಚ್ಚರಾಗದೈಸಿರಿಯಿಂ.
ಎಲ್ಲವಂ ಪರಿವೀಕ್ಷಿಸುತ ಬಾಲವಟು ನಡೆಯೆ ಮುಂದೆ
ಕಂಡನದ್ಭುತ ವೈಭವೋಪೇತ ಅರಮನೆಯು
ರನ್ನಗಳಸಂ. ಮುಗಿಲ್ ಮುದ್ದಿಸುವೊಲ್ ನಿಗುರ್ದು
ವಜ್ರವೈಡೂರ್ಯಗಳ ಪೆಂಪಿನಿಂ ಶೋಭಿಸುತ
ಉಜ್ವಲೋಜ್ವಲಿಸಿದುದು ಕಣ್ ಕುಕ್ಕುವಂತೆವೊಲ್ !
ಬೀದಿಯಲಿ ಅತ್ತಿತ್ತ ವಿಹರಿಸುವ ಜನಕೋಟಿ
ಕಣ್ಗೆಸೆದುದು ಶ್ರೀಮಂತ ವೈಭದವಲಿ. ಎಲ್ಲಿ

→

ಯಾವೆಡೆ ಕಣ್ ಹೊರಳಿಸಿದೊಡಲ್ಲಿ ರಾಜಭೋಗದ ವೈಭವೀಕರಣವಲ್ಲದೆಯೆ ಬೇರೊಂದಿಲ್ಲ.

ಬಾಲರಿಸಿ ತನ್ನೊಳ್ ವಿಚಾರ ಶೀಲನಾದಂ, ಯೋಚಿಸಿದೊಡೆ ಈಯೊಂದು ರಾಜಭೋಗದಲಿ ಪರಮಾತ್ಮ ಇರಲಕ್ಕುಮೆ? ಅದ್ಭುತ ಧನ ಭೋಗಂ ಭಗವಧ್ಯಾನಕೆ ಇಂಬುಕೊರ್ಪುದೇಂ? ಎಂಬೊಂದು ಆಶಂಕೆ ಪೊಕ್ಕುದುದು ಮನಮತಿಗಳ ಕಲ್ಪಂ. ಆಲೋಚನಾಲವಾಲದಲಿ ಮುಳುಗಿ ಮುನ್ನಡೆಯೆ ಬಾಲರಿಸಿ ಮುಟ್ಟಿದನ್ ಅರಮನೆಯ ಮುಂಬಿನಾ ಸ್ವರ್ಣದ್ವಾರಮಂ. ಈಟಿಯುಂ ಕೈಯೊಳಾಂತಿಹ ದೌವಾರಿಕರ್ ದ್ವಾರ ಪಹರೆಯೊಳ್ ನಿರುತರಿರುತೆ ಕಂಡರ್ ಎದುರ್ವೆತ್ತ ಅಪೂರ್ವ ಜ್ಯೋತಿರ್ಮಯ ಕಂದನಂ. ಸ್ವರ್ಣಮೂರ್ತಿಯೊಲಿರ್ದ ಬಾಲಕಂ ಸ್ವರ್ಗದಿಂದಿಳಿತಂದನೊ, ಯಕ್ಷಲೋಕದಿಂದೈದನೊ ಅಥ ಅಗ್ನಿ ಶಿಖೆಯೆ ಮೂರ್ತೀಭವಿಸಿದುದೊ ಎನಲ್ ಅಮಿತ ತೇಜಪುಂಜಂ! ದೌವಾರಿಕಂ ಅಚ್ಚರಿಯ ಕಂಗಳರಳಿಸಿ ಕೇಳಿಸಿದಂ

"ಏನೈ ಕುಮಾರ? ನೀನಾರ್? ಎಲ್ಲಿಂದೈದೆ?"

"ಆನುಂ ಶುಕದೇವ. ದೂರ ಋಷ್ಯಾಶ್ರಮನೆನ್ನ ನಿಜಸ್ಥಲಿ. ಜನಕ ಚಕ್ರವರ್ತಿಯುಂ ನೋಡಲೆಂದೈದೆಂ. ಈಗಳ್ತೆ ನೋಡಿ ಪೋಗಲವಕಾಶಂ ನೀಡಿಮೆಂದಾನು ಕೋರುವೆಂ."

→

ನಲ್ಮಾತಿನ ನುಡಿಗಟ್ಟು ಕಿವಿಯಂ
ಪುಗಲ್ ಆ ದೌವಾರಿಕಂ ಹಾಸ್ಯ ಪ್ರಧಾನ
ಧ್ವನಿಯಲಿ,

"ರಾಜರೊಳ್ ಏನಂತ ಉಜ್ಜುಗಂ
ಕಂದಂಗೆ?"

"ಉಜ್ಜುಗಂವಿಲ್ಲದೆಯೆ ಬಹುದುಂಟೆ
ದೂರದಿಂ ? ನೀನೆನ್ನ ತಡೆಹಿಡಿಯುದಿರ್ ಕಿರಿಯ
ಅಣುಗನೆಂದು ಭಾವಿಸಿ ಮನದೊಳ್."

ದೌವಾರಿಕಂ
ಗೌರವಭಾವದಿಂ,

"ಆಯ್ತು, ಮಹರಾಯ ! ನಿನ್ನಂ
ಕರೆದೊಯ್ವೆ ಮಹರಾಜರ ಬಳಿಗೆ. ಇದೀಗಳ್ತಿ
ಬರುವುದೆನ್ನಯ ಬೆಂಗಡೆಯೆ."

ತನ್ನೊಡನೆ ಬಾಲ
ವಟುವಂ ಕರೆದೊಯ್ಯುತಿರೆ ದೌವಾರಿಕಂ ಮಹಾ
ದ್ವಾರದಿಂ ಅರಸನಾಸ್ಥಾನದವರೆಗುಂ ಕಣ್
ದಿಟ್ಟಿಗೆತ್ತುದು ಮಹದೈಶ್ವರ್ಯ ವೈಭೋಗ
ರಾಶಿಯಂ ಮನಗೊಂಡು ಪರಿವೀಕ್ಷಿಸುತೆ ಭವ್ಯ
ಆಸ್ಥಾನಮಂ ಸೇರಿದಂ. ನೋಡೆ, ಅರಮನೆಯ
ಪರಮೋಚ್ಚ ಸಭಾಲಯದ ಸೌಂದರ್ಯ ವಿಶೇಷಂ
ಅವರ್ಣನೀಯಮೆನಿಪೊಲ್ ಸ್ವರ್ಗಸದೃಶಂ.

"ಆ
ಆಸ್ಥಾನ, ಆ ವಿದ್ವನ್ಮಂಡಲಿ, ಆ ಚಕ್ರವರ್ತಿ
ಆ ಘನ ಗಂಭೀರ ಸ್ವರ್ಗೋಪಮ ವೈಭೋಗಂ

→

ರಾಜಕಾರಣಕ್ಕಲ್ಲದೆ ಆತ್ಮ ಅಧ್ಯಾತ್ಮ
ಚಿಂತನೆಗೆ ಅಲ್ಲವೇ ಅಲ್ಲ ! ಕೂಗಿ ನುಡಿದುದು
ಮಾನಸ ಪಕ್ಷಿ.
ಬಾಲರಿಸಿ ಹೊಸ್ತಿಲಿನೊಳ್ ನಿಂತು
ಭವನವಂ ನಿಟ್ಟಿಸಿದನ್. ಮಿಸುನಿರಸಲೇಪಿತ
ಸಭಾಭವನ ಜಗಜಗಿಸುತಿರ್ದುದು ಕಣ್ಕುಕ್ಕುವ
ಮಾಳ್ಕೆಯಲಿ. ಅಃ, ಸುರಲೋಕವೇ ಧಾರಿಣಿಗಿಳಿದು
ಬಂದುದೋ ನೀಲಿಮಾ ನಭೋಂಗಣದ ತಾರಕಿತ
ಉಜ್ವಲ ಸಂಪದವೆ ಆಸ್ಥಾನಕ್ಕೈದುದೋ
ಎನೆ ಜ್ವಾಜ್ವಲ್ಯಮಾನಂ. ಮಾಸಭೆಯ ಬಿತ್ತರದ
ವೇದಿಯಲಿ ವಜ್ರವೈಡೂರ್ಯಾದಿ ನವರತ್ನ
ಖಚಿತ ದಿವ್ಯ ಸಿಂಹಾಸನದೊಳ್ ಅಲಂಕರಿಸಿದ
ಜನಕ ಚಕ್ರವರ್ತಿಯ ತೇಜೋಭರಿತ ವದನ
ಮಂಡಲಂ ಕಣ್ಗೆಸೆದುದು ಆಕರ್ಷಕವಾಗಿ.
ಕೊರಳ ಕಂಠೀಹಾರ ಕರ್ಣಕುಂಡಲಗಳಿಂ
ಪರಿಶೋಭಿಸಿ, ಪರಮ ಪೀತ ಕೌಶೇಯ ದಿವ್ಯಾಂ-
ಬರಂ ಧರಿಸಿರ್ದ ಜನಕರಾಜಂ ದೇವೇಂದ್ರ
ವೈಭೋಗವಂ ಮೀರಿದಂತಿರ್ದಂ. ಎಡಬಲದಿ
ಚಾಮರಿಯುಂ ಬೀಸ್ವ ಚೇಟಿಯರ್. ಪೊಗಳಿ ಪಾಡುವ
ವಂದಿ ಮಾಗಧರ್ ಕಂಡುಬಂದರ್ ಬಿಟ್ಟ ಕಣ್ಗೆ !
ಎಲ್ಲವುಂ ಸಾಮಾನ್ಯ ರಾಜಮಾನ್ಯರಪ್ಪೋಲ್
ತೋರಿವಂದಿರೆ ಯೋಚನಾಶೀಲ ಬಾಲರಿಸಿ
ತಟ್ಟನೆ ಜಿಹಾಸೆಗೊಳಗಾದಂ. ಮನಮತಿಗಳ್
ಗಾಢಚಿಂತನೆಯ ಚಕ್ರದಲಿ ಸಿಲ್ಕಿ ವಿಚಾರ

→

ಪರವಶತೆಯಲಿ ಮುಳುಗಿದಂ. ಅದೇ ಸಮಯದೊಳ್
ಇಡೀ ಸಭೆಯುಂ ಇತ್ತಲ್ ಕಣ್ಣೆಟ್ಟು ಬೆಕ್ಕಸ
ಬೆರಗುವಟ್ಟು ತಂತಮ್ಮೊಳ್,

"ಇಂತೊಂದು ದಿವ್ಯ
ಜ್ಯೋತಿರ್ಮಯ ವಟುವಂ ಮುನ್ನೆ ತಾನೆಂದು ಕಂಡು
ಕೇಳಿ ತಿಳಿದುದಿಲ್ಲಂ. ಅಮಮ! ಏಂ ವಿಚಿತ್ರಮೊ!
ಎಳೆಯ ಬಾಲನೊಳ್ ಉಜ್ವಲಿಪ ತೇಜಸ್ಸು! ಅಧಿಕ
ಸುಜ್ಞಾನದ ಭಂಡಾರ! ಭಗವಂತನ ಸೃಷ್ಟಿ
ಆಳಮಂ ಅರಿವುದೆಂತು?"

ತಂತಮ್ಮೊಳ್ ಆಶ್ಚರ್ಯ
ಮುಗ್ಧರಪ್ಪ ಮಾಳ್ಕೆಯಲಿ ವಿಣ್ಣನಿರ್ದರ್ ನುಡಿಯೆ
ಬಾಯಿ ಬಾರದೆ! ಅದೇಪೊಳ್ತಿನಲಿ ಬಾಲವಟು
ಶುಕದೇವನುಂ,

"ಅಃ, ಈ ಸ್ವರ್ಗ ಸದೃಶಮಾದ
ಐಶ್ವರ್ಯಮುಂ ಸವಿದ ಧನಮಾನ್ಯರಲಿ ಜ್ಞಾನ
ಸುಜ್ಞಾನ ಸಂಪದಂ ಇರ್ಪುದೆಂತೊ? ಪಿತನುಂ
ಎನ್ನನಿಲ್ಲಿಗೆ ಕಳಿಪಿಕುಡೆ ಕತಮೇನೊ?"

ಅದ್ಭುತ
ಚಿಂತನೆಯ ನೆನೆಗುದಿಯಲಿ ನೆರೆ ಸಿಲ್ಕಿರೆ ಭಾವ
ಗಾಂಭೀರ್ಯದಿಂ ಆಸ್ಥಾನದ ಹೊಸ್ತಿಲಿನೊಳ್‌ಗಳಿಗೆ
ಮಾತ್ರ ನಿಂತು ತಾನೊಂದು ಪರಮಾಶ್ಚರ್ಯಕರ
ತಾನವಿತಾನದ ಚಿನ್ಹೆಯಂತೊಪ್ಪಿ ಆಸ್ಥಾನ
ವಿದ್ವಾಂಸರ ಕಣ್ಮನಗಳಂ ಸೆಳೆದಂ ಸೂಜಿ
ಗಲ್ಲಿನೊಲ್! ಚಕ್ರವರ್ತಿ ಜನಕ ಮಹರಾಜನ

→

ಚಿತ್ತಾಲೋಕಂ ಬಾಲರಿಸಿಯೊಳ್ ನೆಲೆನಿಲ್ಲಲಾ
ಕ್ಷಣವೆ,
"ಈ ಬದುಕು ಆಶಾಪಾಶಗಳಿಗಲ್ಲದೆ
ಪರಮ ಪವಿತ್ರ ಚಿಂತನೆಗಳಿಗಲ್ಲಮೆಂಬುವ
ಸುವಿಚಾರ ವಿಹಾರದ ದಳ್ಳುರಿಗೆ ಸಿಲ್ಕಿದಂ
ಬಾಲರಿಸಿ. ಪರಗಂಭೀರ ಚಿಂತನಮಂಥನದ
ಸೇಶಾವವೇಶಂ ನಿಮಿರಿನಿಲ್ಲುದು ಬಗೆಯಲಿ,
ಅಲ್ಲೊಂದು ಗಳಿಗೆ ನಿಲ್ಲಲ್ ಮನಂವೊಪ್ಪದಿರೆ
ಆಕ್ಷಣಂ ಪೊರಟನಲ್ಲಿಂದೆ, ದಿಟ್ಟತನದಿಂ.
ಆಸ್ಥಾನಿಕರ್ ಒಡನೆ ಅಚ್ಚರಿಯ ಕುಂಡದಲಿ
ಮುಳುಗೆದ್ದು ಏನಿದೇನೆನುತೆ ನೋಳ್ಪನಿತರೊಳ್
ಕಣ್ಮರೆಸಿದನಾ ಕಂದ ಮಿಂಚಿ ಮಿನುಗಿ ಮಾಯ
ಮಂತ್ರದಾಟವಾಡಿದ ಮಾಯಾ ಮೃಗದವೊಲ್ !

ಮಹರಾಜನಾಸ್ಥಾನಂ ಅಚ್ಚರಿಯ ಬೆಂಕೆಯಲಿ
ಸುಟ್ಟುರಿದು ಚಡಪಡಿಸಿ ತೇಂಕಾಡಿದತ್ತಿಹಾ
ಸ್ನೇಹಪ್ರೇಮಕಾತರ ಪೂರ್ಣ ಮಾನಸದಿಂದೆ.
ಬಾಲರಿಸಿಯ ಸಂವರ್ತನೆಯ ಬಾವವನರಿತು
ಹೃನ್ಮನಗಳಂ ಆ ಕ್ಷಣದೊಳೋದಿ ಸ್ವಾನುಭವ
ಘನಿಸಿದ ಜನಕ ಚಕ್ರವರ್ತಿಯುಂ ವೃದ್ಧ ಮಂತ್ರಿ
ಮಹೋದಯನಂ ಕುರಿತು ಬೆಸಸಿದಂ,
"ಈಗಳ್ತೆ
ನೀಂಪೋಗಿ ಬಾಲವಟುವಂ ಕರೆತನ್ನಿ ಅಮಾತ್ಯರೆ!"

ಅಮಾತ್ಯಂ ಚಕ್ರವರ್ತಿಯ ಮನದಲಿ ಉಕ್ಕಿದ
ದಿವ್ಯಪ್ರೇಮದ ಝುರಿಯವನಲೋಕಿಸಿ ಶಿರದೊಳ್ →

ಅಪ್ಪಣೆಯ ಭಾರಮಂ ನಿರ್ವಹಿಸಿ ಬಾಲಕನ
ಬೆಂಬಿಡಿದು ಓಡುತ್ತೋಡುತ್ತೆ ಲಗುಬಗೆಯಿಂದೆ
ಮುಂಗೆತ್ತು ಪ್ರಸನ್ನ ಭಾವೋನ್ಮತ್ತ ಮುಖದಿಂ
ಕೇಳಿಸಿದನ್,

"ಅಯ್ಯಾ, ಋಷಿ ಕುಲೋತ್ತಮನೇ, ನೀಂ
ಸಭೆಗುಯ್ಯ್ವ ಚಣಂ ನಿಲ್ಲದೆಯೆ ಪಿಂದಿರುಗಿಬಂದುದರ
ಕತಮೇನ್ನೆ? ಇಂತಚ್ಚರಿಯುಂ ಇನ್ನೆಬರವಾನು
ಕಂಡೆನಿಲ್ಲಂ. ಅಹಿತಕರಮೇನಿರ್ದೊಡದನುಂ
ಮನಗೊಳದೆ ಪಿಂದಿರುಗಿ ಬಾರ್ಕೈ. ಜನಕರಾಜನ
ಅಪ್ಪಣೆಯಾಮಂತ್ರಣಂ ಇರ್ಪ್ಕಂ ನಿನಗೆ. ಈಗ
ನಸ್ಸಿಂದೆಯೇ ಬಂದು ನಿನ್ನಯ ದರ್ಶನಂ
ಈವುದರೊಂದಿಗೆ ಚಕ್ರವರ್ತಿಯ ಸಂದರ್ಶನ
ಪಡೆದುಕೊಳ್ಳೈ?"

ಮಂತ್ರಿ ಮಹೋದಯನ ನಲ್ವಾತು
ನಯವಿನಯದಿಂ ಪೊದಳ್ದಿರೆ ಬಾಲರಿಸಿಯ ಮಿದು
ಮನಂ ಮರುಗಿ ಕರಗಿದುದು ಬಸಿಲಟ್ಟಿದ ಮಂಜು
ಗಡ್ಡೆಯೊಲ್. ಬಾಯ್ಬಿಟ್ಟು ಏನೊಂದಂ ನುಡಿಯದೆಯೆ
ಮಿಣ್ಣನೆ ವೃದ್ಧಮಂತ್ರಿ ಮಹೋದಯನ ಬೆಂಬಿಡಿದು
ನಡೆದಂ ಅರಮನೆಯಾಸ್ಥಾನಕೆ. ಮತ್ತೆ ಹೊಸ್ತಿಲ್
ಎರ್ನಿಂತು ದಿವ್ಯಸಭೆಯಮೇಲೆ ಕಣ್ಣಿಟ್ಟು
ಸಂವೀಕ್ಷಿಸಿದಂ ಕ್ಷಣಕಾಲಂ. ಜನಕರಾಜಂ
ಸಿಂಹಾಸನದಿಂದೆಳ್ದು ಅತಿ ಗೌರವಾದರದಿಂ
ಸ್ವಾಗತಿಸಿ ನುಡಿದಂ

"ಎಲೆ, ಬಾಲ ಮಹರ್ಷಿಯೇ!

→

ನಿನ್ನ ನಿರ್ಗಮನನೆನ್ನ ಮನಂಗೆಡಿಸಿತು ಕಣ!
ಕುಶಲವೇ ಕಂದ ? ದೂರದಿಂದ್ಯೆದು ಬಳಲಿರ್ಪೆ.
ಇತ್ತ ಬಾರೈ. ಎನ್ನ ಬಳಿಯೆ ಕೂಡು, ಬಾಲಕನೆ !"

ಉಚಿತಾಸನವನಿತ್ತು ಪಾಲ್ಪಣ್ಣುಗಳ ದಿವ್ಯ
ಉಪಹಾರಮಂ ನೀಡಿ ಉಪಚರಿಸಿದಂ ಅನು
ನಯುದಿಂದಲಿ. ಪ್ರಸನ್ನಮುಖದಿಂ ಪೊರಬಿಳ್ದ
ನುಡಿಗಟ್ಟಿನಲಿ ಹೃದಯಾಬ್ಧಿಯ ಮಧುರ ಪ್ರೇಮ
ರಸಾನ್ವಿತ ದ್ರವ್ಯಮಂ ಹಾಸಿ ನುಡಿದಂ

"ಎಲೈ,
ಜ್ಞಾನದಾಹೀ ಮುಮುಕ್ಷುವೇ! ಈಗಳ್ ನಿನ್ನಯ
ಮನದಲಿ ಜಿಹಾಸೆ ಏನಿರ್ದೊಡಮದಂ ಇನಿತು
ಸಂಕೋಚಿಸದೆ ಮುಕ್ತ ಹೃದಯದ ದಾಹನುಂ
ಚಿಂತನಾವೇಶದ ಜಟಿಲತೆಯುಂ ಏನೆಂದು
ವಿವರಿಸಿದೊಡೆ ಕೇಳ್ವೆಂ"

ಬಾಲಕನಂ ನೃಪತಿಯು
ನುಡಿಯನಾಲಿಸುತ್ತಾಲಿಸುತೆ ಮನ ಮಥಿಸಿ ಚಿತ್ತ
ಭಿತ್ತಿಯಲಿ ಮಿಂಚೆಸೆವ ಪರಿಯೊಳ್ ಧುಮುಧುಮಿಸಿತು
ಜ್ಞಾನದಾಹಂ. ಲಗುಬಗನೆ ಆತ್ಮ ಆಧ್ಯಾತ್ಮ
ವಿಚಾರ ವಿಹಾರ ನಿಡೆದುದು ಅಂತರಂಗದಲಿ.
ಆಸ್ಥಾನದಲಿ ಆಸ್ಥಾನಿಕರಿರುತಲಿರ್ದಪದು
ಇನಿತಿಲ್ಲದ ಶಾಂತಿಯವತರಣಂ ಪರಮೋಚ್ಚ
ಹೃದಯದಾಹೀ ತೃಷಾಪೂರ್ಣ ಲೋಕಜ್ಞಾನದ
ವಿದ್ಯಾರಾಶಿಗೆ ಇಂಬುಕುಡುವಪೊಲ್. ಪ್ರಸನ್ನ

→

ಮುಖಮುದ್ರೆಯುಲೊತ್ತಿದುದು ಅಧ್ಯಾತ್ಮದಾಹಂ.
ಚೆಲಾಂವಂತ ಚೆಲ್ವಿನ ವದನಬಿಂಬವದು ಮೃದು
ಹಾಸಮಂ ಬಿಂಬಿಸಿತು. ಬಾಲರಿಸಿಯುಂ ತನ್ನ
ಗ್ರಂಥಗಳ ಓಲೆಕಟ್ಟುಗಳಂ ಬಳಿಯೊಳಿರ್ರಿ
ಅಣಿಯಾಗಿ ತನ್ನಾತ್ಮಪ್ರವಾಹವಂ ಹರಿಯು
ಬಿಟ್ಟಂ. ಕೊನೆಯಿಲ್ಲದ ಪ್ರಶ್ನಾವಳಿಗಳ ಸರ
ಮಾಲೆಯದು ಹರಿದುದೆಳೆದನಿಯುಲಿ ಜನಕನ ಮನ
ಮತಿಗಳಿಗೆ ಅಮಿತ ಕಸುವ ನೀವ ತೆರಂ. ಕೇಳು
ಕೇಳುತ್ತೆ ಜನಕ ಚಕ್ರವರ್ತಿಯುಂ ಎಳೆರಿಸಿಯುಲಿ
ಅಮೃತನಿಧಿಯೊಲ್ ಘನಿಸಿರ್ದ ಜ್ಞಾನಬಲವಂ
ಆವಲೋಕಿಸಿ ಅಮಿತಾನಂದದಿಂ ಪ್ರೇಮದಿಂ
ಪ್ರಶ್ನೋಚಿತ ಪ್ರವಚನವಂ ಹರಿಸಿ ಭೋದಿಸಿ
ಚೋದಿಸಿದಂ; ಮುಗಿಲ್ ನೋಡಗಳ್ ಬೋರೆಂದು
ಮಳೆ ಸುರಿಸಿದ ಪಾಂಗಿನಲಿ ಎಣೆಯಿಲ್ಲದ ದಿವ್ಯ
ಪ್ರವಚನ ಧಾರೆ ಹರಿಯುತಲಿದ್ದುದು ಮುಕ್ತ
ಹೃದಯದಿಂ. ಉಜ್ವಲಿಪ ಉಲ್ಕೆಗಳ ಮಾಳ್ಕೆಯುಲಿ
ಬೆಳಗಿ ತೊಳಗುತಿಹ ನಯನದ್ವಯಗಳ ಕಾಂತಿ
ಪ್ರವಾಹೆ ಹರಿದುದು ಎಳೆಮನಃಚಿತ್ತಗಳಂ
ಹೆಡೆಮುರಿಗಟ್ಟುವ ಮಾಳ್ಕೆಯುಲಿ.

ಸಾಯಂ ಲಕ್ಷ್ಮಿ
ತಾನದಾವ ಚಣದಲಿ ಮೈಗರೆದಳೊ, ನಿಶಿಯೆಂತು
ಮುಂದೈದಳೊ, ತಾರಾಳಿಗಳೆಂತು ಮಿನುಗಿದುವೊ
ತಿಳಿಯದೊಲ್ ಉರುಳಿದುದು ಇನಿಪೊಳ್ತು. ಆದರಾ
ಜನಕರಾಜನ ಪ್ರವಚನಂ ಮುಗಿವ ಸೂಚನೆ

→

ತೋರದು ಶುಕದೇವಂಗೆ. ಒಡಲಲಿ ಮೂಡಿರ್ದ
ಹಸಿವು ತೃಷೆಯಿಂ ದೂರ ಪಯಣದ ಬಳಲ್ಕೆಯಿಂ
ಕಂಗಳಿಗೆ ಮುಸುಂಕುವ ನಿದ್ದೆಯ ಮಂಪರದಿಂ
ಬಾಲಕಂ ಬಳಲಿರಲದಂ ಗಮನಿಸಿದನಿಲ್ಲ
ಚಕ್ರವರ್ತಿ. ಆಸ್ಥಾನಿಕರ್ ನಿರ್ಗಮಿಸಿದರ್.
ಇರುಳ್ ಪಾಳಿಯ ದೂತರ್ ಆಗಮಿಸಿದರ್. ಕಡು
ಕತ್ತಲೆಯ ನಿಶಾದೇವಿಯುಂ ಜಗಜಗಿಸಿದಳ್
ತಾರಾ ಮಂಡಲದ ಮಾಲೆಯಂ ಸೂಡಿ. ರಾತ್ರಿಯ
ನವ್ಯೋನವ ಪ್ರಕರಣ ಕಮನೀಯ ಸುಶಾಂತಿಯ
ರಾಸಲೀಲೆಯುಂ ರಂಗೇರಿದುದು ಚಣಚಣಂ.
ಚಕ್ರವರ್ತಿಯ ಪ್ರವಚನ ಚಿಂತಾಮಣಿಯಿಂದೆ
ಮನಃಪ್ರಾಣರೋಚಕ ವಿದ್ವತ್ತೆಯಾ ಸಾರ
ಸರ್ವಸ್ವಮಂ ಮನಗೊಂಡ ಬಾಲರಿಸಿಯುಂ ಮಂತ್ರ
ಮುಗ್ಧನಾದಂ. ಜೀವನದ ಸುರಸುಂದರ ವಿಧಿ
ವಿಧಾನದ ಸತ್‌ಸಂಪದಮಂ ಹಿಂಜಿದರಳೆಯ ತೆರದಿ
ಮುಂದಿಡುತಲಿರೆ ತನ್ನಯ ಬಳಲ್ಕೆಯನಿನಿತುಂ
ಲೆಕ್ಕಿಸಿದನಿಲ್ಲವಾ ಚಕ್ರವರ್ತಿ ಜನಕಂ.
ಎಲ್ಲಿಯುಂ ಸದ್ದು ಗದ್ದಲಂಗಳ ಸೊಲ್ಲಿಲ್ಲ,
ಜಡಿ ನಿದ್ದೆಯೊಳ್ ಘನತೆವೆತ್ತ ಮಹಾ ರಾತ್ರಿ!
ಪ್ರವಚನಲಹರಿಯುದು ಆಸ್ಥಾನದ ಗೋಡೆ–
ಮಾಡುಗಳ ಮುಟ್ಟಿ ಧೀಂಕಿಡುತಲಿರ್ದುದು ಕರ್ಣ
ದೇಶಮಂ ಜಡಿತುಂಬಿ ಮರವಟ್ಟು ಹೋಹವೊಲ್ !

ಇಂತು, ಪ್ರವಚನದಾವೇಶ ರಂಗು ತಳೆದಿರೆ
ಭಯಭ್ರಾಂತಿಯಿಂ ಗಾರೆಲ್ದ ದೂತನೊರ್ವಂ

→

ಓಡೋಡಿ ಬಂದನಾಸ್ಥಾನಕೆ ಏದುಸಿರದು
ಕಟ್ಟುಸಿರಾಗಿ, ಪ್ರಾಣಂ ಕೊರಳೊತ್ತಿದೊಲ್ ಉಚ್ಚ
ಸ್ವರದಲಿ ಒದರಿದಂ ಘೋರವಾರ್ತೆಯುಂ,
"ಹೇ,
ಮಹರಾಜ! ಕ್ಷಮಿಪುದೆನ್ನಂ, ದುರ್ವಾರ್ತೆಯನೊರೆಯೆ
ಬಾರದೆನ್ನ ಬಾಯಿ! ಕ್ಷಮಿಸು, ಪ್ರಭುವೇ! ಕ್ಷಮಿಸು."
ಎಂದಬಳಿಕ ಭಯದಿಂ ದುಃಖದಿಂ ದೈನ್ಯದಿಂ
ಮತ್ತೆ ಒದರಿದಂ!"
"ಜೀಯಾ, ಎಂಥ ಘೋರತಮ
ಸಂಕಟವೊದವಿ ಬಂದುದೊ ಈ ದೇಶಕೆ! ಹಾ,
ಆವ ದುಷ್ಟ ಗ್ರಹದ ಚೋದನೆಯೊ ಕಾಣೆನಾಂ ದೊರೆಯೆ!"

ಅವಂ ಭೋರನಳುತಲಿ ಮತ್ತೆ ಕೂಗಿ ಒದರಿದಂ,
ದೀರ್ಘ ಭಾವವಿಭಾವದ ಪೀಠಿಕೆಯಿಂದಲಿ
ಹೊರಬಿಳ್ದುದು ಘೋರಾತಿಘೋರತಮ ಪ್ರಕರಣ.

"ಮಿಥಿಲಾ ನಗರಿಗೆ ಬೆಂಕಿ ಬಿಳ್ದುರಿಯುತಿದೆ ಧಗ
ಧಗಿಸಿ! ಎನಿತೆನಿತು ಪ್ರಯತ್ನಿಸಿದೊಡಂ ಇನಿತು
ಹತೋಟಿಗೆ ಬಂದುದಿಲ್ಲಂ. ಪ್ರಭೋ! ನೀನೈದು
ಪರಿಬಟ್ಟಿ ತೋರದಿದೊಡಿಲ್ಲ ಗತಿ!"
ಅಂತೊಂದು
ಭೀಭತ್ಸ ವಾರ್ತೆಯದು ಎರ್ದೆಯುಂ ಮುಟ್ಟಿಯುಂ
ಮಹರಾಜ ಕಿಂಚಿತ್ ವಿಮುಖನಾಗದಿರ್ದುದಂ
ಕಂಡ ದೂತ ಭಯ ಭೀತಿಯಿಂ ಮತ್ತೊಮ್ಮೆ
ಕೂಗಿ ಒದರಿದಂ "ಜೀಯಾ! ಉದಾಸೀನತ್ಯೆಯುದೆಯೆ
ತ್ವರೆ ಮಾಡೈ!"

ಜನಕ ಮಹರಾಜಂ ಇನಿತು ಮನ
ಮತಿಗೆಡದೆ ಬಿತ್ತರಿಸಿದಂ "ಎಲ್ಲರೊಗ್ಗಿನಿಂ
ನಂದಿಸಿರೈ !"
ಮರುಕ್ಷಣಮೆ ಮತ್ತೆ ಪಿಂದುದನನ್ಯ
ಪ್ರವಚನ ವ್ಯಾಖ್ಯಾನ. ಕೆಲಸಮಯಮೆಂತುಮಳಿ
ಸಂದುದೊ ಬಳಿಕಲಾ ದಿಶೆಯಿಂ ಭಯನೋ ಮೂರ್ತಿ
ಎತ್ತಿ ಬಂದುದೊ ಉಗ್ರಭೀಷಣತೆಯ ರೂಪುಂ
ನುರ್ಗಿವಂದುದೊ ಎನಲ್ ಮತ್ತೊರ್ವನೋಡೋಡಿ
ಬಂದು ಚೀರಿಡುವೊಲ್ ಬೆಸಗೊಂಡಂ
"ಹೇ, ಪ್ರಭೂ !
ಪಲವಾರು ಮನೆಮಠಗಳ್ ಭಸ್ಮೀಭೂತಮೆನೆ
ಬಾಯಿ ಬಾರದು ಎನಗೆ. ಎಲ್ಲೆಡೆಯುಂ ಅಗ್ನಿ
ಧಗಧಗಿಸುತ ಮುಂಬರಿಯುತಿದೆ ಮನೆ ಮನೆಗಳಂ
ನುಂಗಿ ನೊಣೆವವೊಲ್ ! ಜೀಯಾ! ಮನ್ನಿಸಿ ಪೊರೆದೈ !"

ದೂತನ ಮನವಿ ಹೃದಯಂ ಮುಟ್ಟಿದೊಡಂ ಮನ
ಮತಿ ವಿಚಲಿತಗೊಳದೆ ಅನನ್ಯ ಅನುಪಮ ಶಾಂತಿ
ಪರ್ವಿದೊಂದು ಯೋಗದಲಿ ಅಧ್ಯಾತ್ಮ ಚಿಂತನಾ
ವೇಶದೊಳ್ ತಾನಿರ್ದನ್ ಜನಕ ಮಹರಾಜಂ !
ಆಗಳುಂ ಸುಮ್ಮನಿರದ ದೂತಂ ಮನಗೆಟ್ಟು
ಮತಿಗೆಟ್ಟು ಉಚ್ಚದನಿಯುಲೊದರುತೆ ಬೇಡಿದಂ !
ಆದೊಡಂ ಮನಂಗೆಡಲಿಲ್ಲವಾ ಚಕ್ರವರ್ತಿ !
ಸದ್ಧರ್ಮದೇಶನಂ ನಡೆದತ್ತು ಯಥೋಚಿತ
ರೀತಿಯಲಿ. ದೌವಾರಿಕಂ ದಿಕ್‌ಗೆಟ್ಟು ನೆರೆ
ಭಯಭೀತ ಸ್ಥಿತಿಯೊಳ್ ಓಡಿದನ್ ತಾಂ ಬಂದ

→

ಬಟ್ಟೆಯೊಳ್.

"ಅಹಾ ! ಏನಾಶ್ಚರ್ಯಂ !" ತನ್ನೊಳ್ ಬೆಮೆಗೊಳ್ಳುತೆ ಬೀಗಿಡ ಶುಕದೇವಂ ಆ ಪ್ರಕರಣ ಕಾವ್ಯವಂ ನೋಡಿ ಮನದೊಳೋದಿ ಅಚ್ಚರಿಯಕುಂಡದಲಿ ಮುಳುಂಗಿ ವಿಚಾರ ವಿಹಾರ ತತ್ಪರನಾದನ್. ಅನಿತರೊಳ್ ಮತ್ತೊರ್ವಂ ಏದುಸಿರ್ ಬಿಡುತಲೋಡುತಲೈದು ಎದುರ್ವೆತ್ತಂ ! ಸಂಕಷ್ಟದಿಂ ಬೆಂದುಬೇಯುತೆ ಗಾರೆಳ್ದು ಆತುರ ಕಾತರದಿಂದೊದರಿದಂ,

"ಜೀಯಾ ! ಅರಮನೆಯುರಿದು ಕರಿಮುರಿಯಾಗಿ ತವ ಸಿಂಹಾಸನದ ಬಳಿಗೆ ಬೆಂಕಿಯಲೆ ಚಾಚಿಯುಂ ಸುಮ್ಮನಿಪ್ಪುವರೆ ? ನೀಂ ಜೀವವುಳಿಸಿಕೊಳ್ಳಲ್ ಈಗಳ್ತೆ ಇಲ್ಲಿಂದ ಪೊರಗೋಡಿರ್ಪೈ ಒಡೆಯಾ ! ತ್ವರೆಮಾಡಿ !"

ಚೀರ್ದನಿಯದು ಅವ್ವಳಿಸಿದುದು ಕರ್ಣ ಗಹ್ವರಗಳಂ. ಚಕ್ರವರ್ತಿ ಜನಕ ರಾಜಂ ಧಗಧಗಿಸಿ ಉರಿವಗ್ಗಿಯಲೆಗಳಂ ನೋಡಿದಂ ! ಚಿಟಿಚಿಟಿಲ್ ಎನುತೆ ಕೆನ್ನಾಲಿಗೆಗಳಂ ಚಾಚಿ ಚಾಚಿ ನೆಕ್ಕಿ ಕಬಳಿಸುತಲಿರುತಿರೆ ಅರಮನೆಯ ಸುಸುಂದರ ರೂಪು ಘೋರ ಭಯಂಕರ ಜ್ವಾಲಾ ವಹ್ನಿಗಾದತ್ತು ತುತ್ತು ! ಹಾ ! ಏಂ ಭಯಾನಕ ದೃಶ್ಯಮಾ ಸುಡುಬೆಂಕೆಯು ರೋಷಾವೇಶಂ ? ದೂತನುಂ ಮತ್ತೆ ಕೂಗಿದಂ,

"ಜೀಯಾ ! ಎನ್ನ ಮನ್ನಿಸಿಂ. ಈಗಳ್ತೆ ನೀಂ ಪೊರಗೋಡಿ ಬದುಕಿಂ !" →

ಬಾಲರಿಸಿಯುಂ ಕುರಿತು ಮತ್ತೆಂದನ್

"ತಮ್ಮಾ!

ನೀಂ ಓಡಿ ಪೊರಗುಯ್ದು ಜೀವನವನುಳಿಸಿ
ಕೊಳ್ಳೈ. ಏಳೀಗಳ್ತೆ! ನೀಂ ದೀರ್ಘಕಾಲ ಉಳಿವ
ಅಣುಗ!

ಪರಿಸ್ಥಿತಿ ಗಂಭೀರಮಾಯ್ತು! ಚಿಂತಿತ
ಮನಂ ಚಂಚಲಿಸೆ ಶುಕದೇವನುಂ ಭಯಭೀತಿ
ಕಾವಳಿಸಿ ಚಿಂತನಾವೇಶದಿಂ ಭೋಂಕನೆಯ
ಪೀಠದಿಂ ಜುಗುಳ್ದಿದ್ದು ತನ್ನ ಗ್ರಂಥಮಂ
ಕೈ ಚಾಚಿ ಸೆಳೆದುಕೊಂಡನ್. ಆಗಳುಂ ಜನಕ
ಚಕ್ರವರ್ತಿಯುಂ ಶಾಂತಸಾಗರದೊಲ್ ಧೀರ
ಪ್ರಸನ್ನ ಮುಖಿಯಾಗಿ ಎರಡು ಕೈಗಳನೆತ್ತಿ
ಅಭಯ ಹಸ್ತಮಂ ತೋರಿದಂ! ಅಃ, ಏನಾಶ್ಚರ್ಯ?
ಆ ಕ್ಷಣಮೆ ಬೃಹದ್ ಅಗ್ನಿ ಜ್ವಾಲಾ ವಹ್ನಿಯುಂ
ತಟ್ಟನೆ ಅಳಿದು ತಣ್ಣಗಾಯ್ತು ತಣ್ಣೀರ್ ಹೊಯ್ದೊಲ್!
ಬಾಲರಿಸಿ ಬೆಚ್ಚಿ ಬಿಳ್ದು ನೋಡಿದನ್ ಆಶ್ಚರ್ಯ
ವಿಶೇಷಂ! ಎಲ್ಲಿಯುಂ ಸುಟ್ಟು ಕರಿಕಲಾಗಿಹ
ಗುರುತು, ಕಪ್ಪುಹೊಗೆ ಆವೊಂದರ ಸಣ್ಣ ಛಾಯೆ
ಉಳಿದಿರದ ಮಂತ್ರ ಮಾಯದಾಟ ಅಸಮಾನ್ಯಂ!
ಅಪೂರ್ವಂ! ಲೋಕೋತ್ತರಂ!

ಜನಕ ರಾಜನುಂ

ಪ್ರಶಾಂತ ಭಾವದಿಂ ಕೇಳಿಸಿದನಿಂತು

"ಹೇ,

ಶುಕದೇವ! ಮಿಥಿಲಾ ನಗರಿಯುಮಲ್ಲದೆ ಎನ್ನ

→

ಅರಮನೆ ಸಿಂಹಾಸನಗಳ್ ಧಗಧಗಿಸುತ ಪೊತ್ತಿ
ಉರಿದೊಡಾಂ ಧೃತಿಗೆಡದೆ ಶಾಂತಿಯಿಂದಿರುತಿರಲ್
ನೀಂ ಗ್ರಂಥಗಳನುಳಿಸಿಕೊಳಲ್ ಚಡಪಡಿಸಿದೆ!
ಎನ್ನಂ ಮಿಸುನಿ ಪಂಜರದ ಪಕ್ಕಿಯೆಂದು ನೀಂ
ಭಾವಿಸಿದೆಯಲ್ತೆ? ಏಗಳುಂ ಕಾವನಿರ್ಪನ್
ಎಂಬುದಂ ನೀಂ ಮರೆತುದರಿಂ ಗ್ರಂಥರಕ್ಷೆಯುಂ
ಗೈದೆಯೆಂಬುದನು ಜಾನಿಸಿ ನೋಡೈ. ನಿನ್ನೊಂದು
ಸಂಕುಚಿತ ಮನೋಗತಿಗೆ ನಿದರ್ಶನವನೀಯೆ
ಈ ಚಮತ್ಕಾರಮುಂ ತೋರ್ದ ಭಗವಂತ! ನೀಂ
ದೈವಧ್ಯಾನಂ ಬಿಟ್ಟು ಗ್ರಂಥರಕ್ಷೆ ಮಿಗಿಲೆಂದು
ಬಾವಿಸಿದೆಯಲ್ತೆ? ಈಗಳ್ ತಿಳಿದುಕೊ ನಿನ್ನ ಭವ
ದಾಸೆಯುಂ, ಎಲೆ ಜ್ಞಾನಿಯೇ!"
ಬಾಲರಿಸಿ ಮನದಿ
ಯೋಚಿಸೆ ನಲಿದುದು ವಿದ್ಯಮಾನಂ ಕಣ್ಮುಂತೆ.
ಪ್ರವಚನ ಮೊರೆದುದು ಮನಃಪ್ರಾಣಗಳ್ ಜುಂ
ಎನುವವೊಲ್. ಹೃದಯದಲಿ ಭಕ್ತಿರಸ ಭಾವದ
ಸಂಪದಂ ವೆರ್ಚೆ ಅನುನಯದಿಂ ತಲೆ ಮಣಿದು
ನಮಿಸಿ ರಾಜರ್ಷಿಯುಂ ಬೇಡಿದಂ
"ದಯೆಗೈದು
ತವ ಸನ್ನಿಧಾನದ ಕಿರುಶಿಷ್ಯನೆನೆ ಸ್ವೀಕರಿಸಿ
ಉಪಕರಿಸೈ ಮಹರಾಜ!"
ಕಂದನ ಒಡಲಾಸೆ
ಪರುಷದಿಂ ನಮ್ರವಿನಮ್ರತೆಯಿಂ ಹೊಮ್ಮಿದುದು.
ಜನಕರಾಜಂ ಬಾಲ ವೈರಾಗ್ಯ ಸಿಂಧುವಿನ

→

ಲೌಕಿಕದತಿಸೂಕ್ಷ್ಮತಮ ವೈಚಾರಿಕವಾದ
ಎಳೆಎಳೆಗಳಂ ಸಡಿಲ್ಚಿ ಭುವನೈಕ ವೇದಾಂತ
ಬ್ರಹ್ಮಜ್ಞಾನದ ಚಿಂತನೆಗೆ ಸಲ್ಲುವೊಡೆ ಪ್ರೀತಿಯಿಂ
ಸಜ್ಜು ಗೊಳಿಸಿದಂ.

ನಿಶಿಯುರುಳಿ ತನಿಯಿಂಪುಗುವ
ಪ್ರಾತಃಕಾಲೀನ ಮಂದ ಮಂದಾನಿಲಂ ನೆರೆ
ಒಯ್ಯನೊಯ್ಯನೆ ಸುಳಿದು ಸುಯ್ದು ಬೀಸುತಿರಲುರೆ
ಎಳೆಬೆಳಕು ತುಳುಕಿದುದು ಉದಯ ಚೂಡದಮೇಲೆ
ಸುನೀಲಿಯ ಬಿತ್ತಿಯಂಚಿನಲಿ. ಪಕ್ಷಿಗೊರಳಿನಿಂ
ತರತರದ ರಾಗಮಾಲೆಯುಂ ಹೃದಯಾನಂದ
ಮೋದದಲಿ ಪೊದಳ್ದುದು ಪಾತಃಪ್ರಭಾತಮಂ
ಬಯಸಿ ಸ್ವಾಗತಿಸುವೊಲ್. ತನಿವೊಳ್ತಿನ ತಂಪು
ಪಕ್ಷಿಗಳ ಸುಪ್ರಭಾತದ ಪೆಂಪು ಒಗ್ಗೂಡಿದುದು
ಜಗತ್ ಪ್ರಾಣಾಳಿಕೆಗೆ ತನಿಯೂಡಿಸುವ ತೆರದಿ.
ರಾಜರ್ಷಿಯುಂ ತನ್ನ ಚಿಂತನಾ ಮಂಡಲದಿ
ಭಾವೈಶ್ಚರ್ಯಮಂ ತುಂಬಿ ಮಂಗಲ ಮೋಕ್ಷಮಂ
ಹಾರೈಸಿ ಬಾಲವಟು ಶುಕದೇವನುಂ ಕುರಿತು

"ಎಲೆ,
ಬಾಲರಿಸಿಯೆ! ನಿನ್ನಯ ಕೈಹಸ್ತಗಳಿಗಿಂದು
ಪೊತ್ತುರಿವ ತೈಲಾಂಜನವನೀಪೆಂ. ಅವೆರಡುಂ
ತೈಲದಿಂ ತುಂಬಿ ತುಳುಕುವೊಲಿರ್ಪುವು ಎನಲ್
ನೀನೆಚ್ಚರದಿಂ ಕೈಕೊಂಡು ಅರಮನೆಯ ಒಳ
ಕೊಠಡಿಗಳ ಸಮೀಕ್ಷೆಯಂ ನಡೆಸು. ಎಲ್ಲೆಲ್ಲಿ ಯಾವ
ಯಾವ ಕಡೆ ಏನೇನಿಹುದೆಂಬುದನು ನಿನ್ನಯ

→

ಮನದಟ್ಟುಗೈದು ಬಂದೆನಗೆ ವರದಿಯನೊಪ್ಪಿಸೈ.
ಕಂದ, ಅಂತುಮಲ್ಲದೆಯುಂ ಕೈಯಲುಗಿ ತೈಲ
ತುಳುಕಿ ಚೆಲ್ಲದಂತೆವೊಲೆಚ್ಚರಿರು ! ನೆಲ ಹಾಸು
ರನ್ನಗಂಬಳಿಯ ಮೇಲೆ ಚೆಲ್ಲಿ ಸೂಸಿ ಪಾಳ್ಗೈವ
ಹೀನ ಕಜ್ಜವನೆಸಗದಿರ್ ಜೋಕೆ !"

ಅರಸನಾಜ್ಞೆ

ಕರ್ಣಗಹ್ವರಂ ಬೊಕ್ಕು ನಿನದಿಸಿತು ಮತ್ತೆ
ಮತ್ತೆ. ನಿಟ್ಟಾಲಿಯಿಂ ನಿಟ್ಟಿಸಿದನಾ
ದೀಪಾಂಜನಂ ನಿಂತೆಡೆಯಲಿಯೆ ತುಳುತುಳುಕಿ
ಚೆಲ್ಲಿ ಸೂಸುವೊಲ್ ಕಂಠಪೂರ್ತಿ ತೈಲದುಂಬಿದ
ದೀಪದ ಕುಡಿಗಳು ಅತ್ತಿತ್ತ ತುಯ್ಯುತಿರ್ದುವು
ಗಾಳಿಯಾಟದಿಂ. ಮನಮತಿಗಳು ಮುಳುಂಗಿರಲ್
ಕರ್ತವ್ಯ ನಿಷ್ಠೆಯಲಿ ಕಾರ್ಯಕಾರಣ ವೃತ್ತಿ
ಪ್ರವೃತ್ತಿಯುಂ ನಲಿದುದು ಕಣ್ಮುಂತೆ. ದೀಪದ
ಜ್ಯೋತಿರ್ಕುಡಿಯಮೇಲೆ ಕಣ್ಣಿಟ್ಟು ಪೊರ್ವಂಟ
ಅರಮನೆಯ ಸಮೀಕ್ಷೆಗೆ.....ನೂರಾರು ಕೊಠಡಿಗಳ
ಅರ್ಥಾತ್ ಪರಿಶೀಲನೆಯೆನೆ ಸಾಮಾನ್ಯಮೇ ?
ಪ್ರಯತ್ನಮೆನ್ನದೆನೆ ಫಲಾಂಶಮುಂ ನಿನ್ನ
ಪದತಲಕೆ ಒತ್ತೆಯೀವೆನೆನ್ನುತೆ ದೈವಮಂ
ನೆನೆದು ಮೆಲುಮೆಲ್ಲನೆ ತೆಗೆದನಲ್ಲಿಂದೆ ಪಜ್ಜೆಯಂ.
ಮಹಾನ್ ನಿವಾಸದ ಪರಮ ಸೌಂದರ್ಯ ಲಕ್ಷ್ಮಿಯ
ಮಹೋಜ್ವಲ ಕರಕುಶಲ ಕಲಾ ಸಾಮ್ರಾಜ್ಯಮಿಹ
ಕೊಠಡಿಗಳ ಸಮೀಕ್ಷೆಯನೆ ಸಾಹಸೀಯ ಕೃತ್ಯಂ !
ನೂರು ಕಂಗಳಿರ್ದೊಡಂ ಸಾಲದೆನಿಪ ಅಮೋಘ

→

ವಸ್ತುಗಳ ಸಂಗ್ರಹಂ ! ಒಂದೊಂದು ಕೊಠಡಿಯುಂ
ದಿವ್ಯ ಕಲೆಯ ಆಗರವಾದ ಕಲಾಗಾರವೇ
ಆಗಿರ್ದು ಎತ್ತ ನೋಡಿದೊಡಮದು ಅನುಪಮ
ಕಲೆಗಳ ಕಲಾಗಾರ ಎಂಬಿನಂ ಇರುತಿರಲ್
ಬೃಹದ್ ಅರಮನೆಯ ಸುದರ್ಶನದಲಿ ಕಳೆದುದು
ಸಮಯವದು ತಾನರಿಯದವೊಲ್. ಇಡೀ ಪಗಲ್
ಉರುಳಿ ಮುಗಿಬಗಿಯಾಯ್ತು. ತಾನೆಸಗಿದ ಅನನ್ಯ
ಪ್ರಯತ್ನಮೇನಿರ್ದೊಡಂ ಕಲೆಯ ದರ್ಶನವೆ
ಮಿಗಿಲಾಯ್ತು ಸಮೀಕ್ಷೆಯ ಮಧುಜಗವದಾನಂದ
ಸುಖ ಮೂರ್ಛೆಯಿಂದೆ. ಬಾಲರಿಸಿಯುಂ ಪರಮೋಚ್ಚ
ಕಾರ್ಯಭಾರಮಂ ತೀರ್ಚಿ ಪಿಂದಿರುಗಿ ಬಂದನ್
ರಾಜನಾಸ್ಥಾನಕೆ. ಕರಕಮಲದ್ವಯಗಳಲಿ
ಪೊತ್ತಿರಿವ ದೀಪಾಂಜನಗಳಂ ಬಲು ನಮ್ರ
ವಿನಮ್ರತೆಯಿಂ ಜನಕ ಮಹರಾಜನ ಮುಂದಿರ್ಕಿ
ತಲೆ ಮಣಿದನ್.

"ಏನ್ಯೆ, ಕುವರ ! ಅರಮನೆಯ ಎಲ್ಲ
ಕೊಠಡಿಯಂ ಕಂಡು ತಿಳಿದುದಾಯ್ತೇ ? ಏನೆಲ್ಲಂ
ಕಂಡೆ, ಪೇಳ್ಳೆ ?"

ಪ್ರಸನ್ನ ಮುಖದಿಂ ಚೆಲ್ಲಿದುದು
ಒಲವುದುಂಬಿದ ದನಿಯ ರಸವಾಹಿ.

ಬಾಲರಿಸಿ
ರಾಜರ್ಷಿಯಂ ಲಜ್ಜೆ ಭಯ ಚಿಂತೆಯು ತುಂಬಿದ
ಭಾವಭಾರದಿಂ ನಿಟ್ಟಿಸಿದಂ. ಅಕ್ಷಿ ಪಟಲದ
ಮುಂದೆ ಅರಮನೆಯ ಕೋಣೆ ಕೋಣೆಗಳ್ ಸುಳಿದೊಡಂ

→

ವಿವರಿಸುವನಿತು ಸುಸ್ಪಷ್ಟವಿಲ್ಲಂ. ಕಣ್ಮುಗಿದು
ಭಾವಿಸಿದಲದು ಸುಲಭಮೆ ವಿವರಿಸೆ? ಬಾಲವಟು
ಮಾತುಳಿದು ಮೂಕಮೌನಿಯಾದಂ. ಹೃನ್ಮನಂ
ತಳಮಳಿಸಿದುವು ಸೋತು ಸೋಲೊಪ್ಪಿ, ಯೋಚಿಸುತೆ
ಮನಮಥಿಸಿ ಬೆಮೆಗೊಂಡ ಪಾಂಗಿನಲಿ ನುಡಿಸಿದಂ,

"ಮಹರಾಜ! ಅನನ್ಯಯ ಸಂಪೂರ್ಣ ಲಕ್ಷ್ಯಮಂ
ದೀಪಾಂಜನಗಳಲಿರಿಸಿ ಧ್ಯಾನಾವಸ್ಥಿತಿಗೆತ್ತಿ
ಭಾವನಾಬ್ಧಿಯಲಿ ಮುಳುಗಿರೆ ವಸ್ತು ವಸ್ತುವಂ
ಕೂಲಂಕಶಮರಿತೆನಿಲ್ಲಂ."

ಬಾಲ ರಿಸಿಯುಂ
ತಲೆಬಾಗಿ ಕೆಂಪಡರ್ದು ಲಜ್ಜಾಮೂರ್ತಿಯೆನೆ
ನಿಂದಿರಲ್ ಜನಕ ಚಕ್ರವರ್ತಿಯುಂ ಅಪೂರ್ವ
ಸಮಾಧಾನದಿಂ ಕೇಳಿಸಿದಂ ಶಾಂತಿರಸಮಂ
ಸೂಸುವೊಲ್,

"ಇರ್ಕೆ, ನೀಂ ಇನ್ನೊರ್ಮೆ ಪ್ರಯತ್ನ
ಪಡುವುದರಲೇಂ ಅಡ್ಡಿಯಿಲ್ಲಮೆನೆ ಮನಮುಟ್ಟಿ
ಪ್ರಯತ್ನಿಸು ಕಂದ!"

ಮಹರಾಜನ ನಲ್ವಾತು
ಎರ್ದೆಯಾಳಕ್ಕಿಳಿಯೆ ಬಾಲವಟು ತೋಷದಿಂ
ಮುಂ ಪ್ರಯತ್ನಕೆ ಅಣಿಯಾದಂ. ಹೃತ್ ಕಲಶದ
ಆಶಾದೀಪ್ತಿಯುಂ ಉಜ್ವಲಿಸಿದ ತೆರದಲಿ ಥಳ
ಥಳಿಸಿದುವು ಕಂಗಳುಂ. ತಲೆಯೆತ್ತಿ ನೋಡಿದಂ.
ವೃದ್ಧ ಜನಕ ಮಹರಾಜನ ದಿವ್ಯ ಗಂಭೀರ
ನಿಲುವು ಆತ್ಮಸ್ಫೂರ್ತಿಯ ಚಿಲುಮೆಯೆ ಘನೀಭವಿಸಿ

→

ಮೂರ್ತಿಯೆತ್ತ ಮಾಳ್ಕೆಯುಲಿ ಕಣ್ಗೆಸೆದತ್ತು. ಆ
ಮಹಾ ತೇಜೋರಾಶಿಯುಂ ಉಜ್ವಲಿಸುತಲಿರೆ
ದಯೆ ಕರುಣೆಗಳ ಸ್ಫುಲಿಂಗಗಳ್ ಸ್ಫುರಿಸಿದುವು
ದೇಹದಾದ್ಯಂತ ನೋಳ್ಪ ಕಣ್ ಮತ್ತಾಗುವೊಲ್ !
ಬಾಲರಿಸಿ ಭಕ್ತಿಯಿಂ ಕಣ್ಮುಗಿದು ನಮಿಸಿದಂ,
ಜನಕ ಚಕ್ರವರ್ತಿಯ ಮನ ಮುದಿಸಿ ಪ್ರೇಮದಿಂ
ಬಾಲರಿಸಿಯ ಕೈ ಹಸ್ತಗಳಿಗೆ ಪೊತ್ತುರಿವ
ತೈಲಾಂಜನಗಳನಿತ್ತು ಹರಸಿದನ್. ಬಾಲಕ
ಶುಕದೇವನುಂ ಜನಕ ಚಕ್ರವರ್ತಿಯ ದಿವ್ಯ
ಆದೇಶಮಂ ಶಿರದೊಳಾಂತು ಪೊರಟಂ ಮತ್ತೆ
ಮಹಾನ್ ಅರಮನೆಯ ಸಮಿಾಕ್ಷೆಗೆ. ಕರಕಮಲದ
ದೀಪದಾನಿಗಳ ಕುಡಿ ಮಂದಮಂದಾನಿಲನ
ನಲ್ ಸೇವೆಯಿಂ ಅಲುಗುತ್ತಿರಲತ್ತಿತ್ತ ಮನಮಂ
ದೀಪಗಳ ಮೇಲಿಟ್ಟು ಚಿತ್ತಮಂ ಅರಮನೆಯ
ಸಮಿಾಕ್ಷೆಯೊಳ್ ನೆಟ್ಟಂ ; ಕಟ್ಟೆಚ್ಚರಂ ವಹಿಸಿ.
ಅತುಲೈಶ್ವರ್ಯ ಸಂಪದ್ಭರಿತ ಅರಮನೆಯೊಳ್
ಕರಕುಶಲಕಲಾ ಕೌಶಲತೆಯಿಂ ವಿಜೃಂಭಿಸುವ
ವಸ್ತು ಸಮಸ್ತಮಂ ಕಣ್ಣಿನೊಳ್ ಕಣ್ಣಿಟ್ಟು ಮೆಲು
ಮೆಲ್ಲನೆಯೆ ಕೋಣೆಕೋಣೆಗಳಿಗೆತ್ತು ನೋನೋಡಿ
ಸಮಿಾಕ್ಷಿಸಿ ಮನಗೊಂಡು ಪಿಂದಿರುಗಿದಂ ಜನಕ
ಚಕ್ರವರ್ತಿಯ ಬಳಿಗೆ. ಬಾಲರಿಸಿಯ ಪ್ರಸನ್ನ
ಜ್ಯೋತಿರ್ಮಯೀ ವದನ ಬಿಂಬದಲಿ ಧನ್ಯತೆಯ
ಭಾವಶಾಂತಿ ಸ್ಫುರಿಸುತಿರೆ ಜನಕ ಮಹರಾಜಂ
ಸಂತುಷ್ಟಿಯಿಂ ಪ್ರೇಮಾದರದಿಂ ಸ್ವಾಗತವ

→

ಬಯಸಿದಂ ; ಹಾಲ್ಜೇನಿನ ಸವಿಯಂ ಸೂಸುತ್ತೆ.

ಬಾಲರಿಸಿಯುಂ ಕೈಯೊಳಾಂತ ಉಜ್ವಲಿಪ ದೀಪ
ವರ್ತಿಕೆಗಳ ಜ್ಯೋತಿರ್ಕಿರಣಂ ಮುಖಮಂಡಲವ
ಬೆಳಗೆ ದಿವ್ಯರಾಗಾತಪಃಸ್ನಾತ ಸುರಮ್ಯ
ಸೌಂದರ್ಯ ಸುಶೋಭಿಸಿದುದು ದ್ವಿಗುಣಿಸಿದಂತೆ.
ಜನಕ ರಾಜನುಂ ಪ್ರಸನ್ನ ಮುಖದೊಳ್ ಮುಗುಳ್
ನಗೆಯ ಹೊನಲ್ ಹರಿಸಿದಂ. ಬಾಲರಿಸಿಯ ಸುಂದರ
ಬಿಂಬದಲಿ ಧನ್ಯಭಾವದ ಮುದ್ರೆಯೊತ್ತಿರಲ್
ನೋಡಿ, ಮಹದಾನಂದ ಸಂತೃಪ್ತಿಯಂ ಸೂಸಿ
ನುಡಿಸಿದಂ "ಎಲೆ, ಬಾಲರಿಸಿಯೆ ಏಂಗೈದೆ ? ನೀಂ
ಮನಗೊಂಡ ಕಾರ್ಯಮಂ ಕೈಗೂಡಿಸಿದೆಯಾ ಪೇಳ್ ?"

"ಅಹುದು ಪ್ರಭುವೆ !" ಎಂದ ಬಾಲರಿಸಿಯುಂ
ಸಮೀಕ್ಷೆಯ ವರದಿಯನೊಪ್ಪಿಸಿದಂ ಸುಲಲಿತವಾಗಿ.
ಷೋಡಶ ಕಳೆಗಳುಗುವ ಎಳೆ ವದನ ಬಿಂಬವದು
ಪೂರ್ಣಚಂದ್ರನ ಚಂದ್ರಿಕೆಯಿಂ ಚುಂಬಿತಮಾದೊಲ್
ಪ್ರಶಾಂತಮಯತೆಯಿಂ ಆನಂದ ತೃಪ್ತಿಯಿಂ
ಸುಶೋಭಿಸಿದುದು ಬಾಲರಿಸಿಯ ನೆಲೆ ಬೆಲೆಯನುಂ
ಪ್ರದರ್ಶಿಪಂತೆವೊಲ್. ರಾಜರ್ಷಿಯುಂ

"ಅಯ್ಯಾ,
ಪರಮ ಜಿಜ್ಞಾಸು ಯೋಗಿಯೇ ! ನೀನೀಗಳೀ
ಲೋಕದಲಿ ಇರ್ದೊಡಂ ಜೀವನಂ ಲೋಕಕಾಗಿ
ಅಲ್ಲವೆಂಬುದಂ ಅರಿದೆಂ. ಲೌಕಿಕ ಸಂಪದಂ
ದೈವವನೆಂದಿಗುಮರೆಸಬಾರದೆಂಬುದು ಇದರ
ಮರ್ಮಕಣ ! ಕೇಳ್, ನೀನಿನ್ನೆಬರಂ ಬದುಕಿಗೇಂ →

ಸಲ್ಲಿಸದೆ ಬಾಳ್ದುದೇ ಪ್ರಥಮ ಪರೀಕ್ಷೆಯಲಿ
ಸೋಲೊಪ್ಪೆ ಕಾರಣಂ. ದ್ವಿತೀಯ ಪ್ರಯತ್ನದೊಳ್
ಕಾರ್ಯಕಾರಣಗಳ ಅನನ್ಯ ಸಂಯೋಜನೆಯ
ನೇಮದಲಿ ಜಯಗಳಿಸಿ ಕೃತಾರ್ಥನಾದೆಲ್ಶೈ,
ಕಂದ! ಜೀವನ ಬದ್ಧ ಆಸೆ ಆಕಾಂಕ್ಷೆಗಳ್
ಸಕಲತರ ಪಾಶಗಳೆನಲ್ ಎಲ್ಲ ವಗೆಯೊಳ್
ಹಿತಮಿತವ ಪಾಲಿಸಿದೊಡೆ ಜಂಜಡಮಿನಿತಿಲ್ಲಂ.
ಈ ಲೋಕದೊಳ್ ನಾವಿರುವನ್ನ ಕರ್ಮನಿಷ್ಠೆಯುಂ
ಅನಿವಾರ್ಯ. ಕರ್ಮಕಾಂಡಂ ಅನಿವಾರ್ಯ. ಪುಟ್ಟು
ಸಾವು ಜೀವನಿಗೆ ಜನ್ಮತಃ ಬೆಂಬಿಡಿದು ಬಪ್ಪ
ಸಿದ್ಧಿಯಿರೆ ಜೀವನಂ ಅನಿವಾರ್ಯ. ಆದೊಡಂ
ಜಗದೊಳಾವುದುಂ ದಕ್ಕದೆಮಗೆ. ಆವೊಂದರ
ಒಡೆಯರಲ್ಲಾವು. ಕಾಮುಕಾಮನೆಗಳಿಗೆ ಬಲಿ
ಬಿದ್ದೊಡೇಂಬಹುದು ? ಯಮಪಾಶವೊಗೆಯೆ ಎಲ್ಲಂ
ಕಾಲದೆಶೆಯೊಳ್ ತಳ್ಳಿ ಹೋಹುದಲ್ಲದೆ ಬೇರೆ
ಗತಿಯಿಲ್ಲನ್ಶೈ. ನಮ್ಮಾಯ ಬೆಂಗಾವುದು ಭಕ್ತಿಯ
ಸಾರ ಮಾತ್ರಂ. ತಾವರೆ ಪತ್ರದ ಮೇಲಿಪ್ಪ
ನೀರ ಗುಳ್ಳೆಯೊಲ್ ಇರಲಿ ಜೀವನಂ ನಿಚ್ಚ
ಭವಧಿಯಲಿ."

ಶುಕದೇವನಾ ರಾಜರ್ಷಿಯ ವದನ
ಬಿಂಬದೊಳ್ ಸ್ಫುರಿಸಿದ ಜೀವನೀಯ ಶಾಂತಿ
ರಸವಾಹಿಯುಂ ಹೀರಿ ಮನದುಂಬಿ ಚಿಜ್ಜ್ಯೋತಿಯ
ಕುಡಿಯುಂ ವೆಳಗಿ ಚಿನ್ಮಯತೆಗೇರೆ ಗಂಭೀರ
ಚಿಂತನಾವೇಶದ ಮನಮಂಥನದಲಿ ಉಕ್ಕಿ

→

ಹರಿದ ರಸವುಂ ರಸಾನುಭೂತಿಯುಂ ಪ್ರಜ್ಞಾನ
ಬನದ ಕವಿಕಾವ್ಯದೊಳ್ ಮೂಡಿ ಮಿಡಿ ಮೊಗ್ಗಾಗಿ
ಅರಳಿ ಹೂವಾಗೆ ಸರಸತಿಯಡಿಗೆ ಸಮರ್ಪಿಸಿ
ಪರಮ ಪುನೀತಸಾದನ್ ಬಾಲರಿಸಿ ಶುಕದೇವ.

ಪೊಳ್ತುರುಳಿ ಸಾಯಂ ಸೊಬಗು ಹರಡಿದುದು. ದೂರ
ಕರ್ವೆಟ್ಟಿನ ಮೇಗಡೆ ಇಳಿನೇಸರ್ ಉಜ್ವಲ
ಅರುಣ ತೇಜದಿಂ ಜಗಜಗಿಸುತಿರೆ ಜಗವೆಲ್ಲ
ಅರುಣ ರಾಗದಲಿ ಮಿಂದು ರಾಗಾರುಣತಾನಂ
ಮಿಾಂಟಿದುದು ಆನಂದ ಘೋಷದಿಂ ವ್ಯೋಮರ್ಬಿ
ಬಾಲರಿಸಿಯುಂ ಆಶೀರ್ವದಿಸಲೊ ಎಂಬಂತೆ.
ತರತರದ ವಿಹಂಗಗಳಿಂಚರಂ ಪರಮೆಗಳ
ಝೇಂಕೃತಿಯುಂ ವಟುವಿನ ವಿಜಯ ಮಹೋತ್ಸವಕೆ
ಅನುರಾಗದಿಂ ಮಿಾಂಟಿದುವು ರಾಗತಾನವುಂ.
ದಿಗ್ದೇಶದ ನೀಲಿಮ ರಂಗದಲಿ ಅತ್ತಿತ್ತ
ತುಯ್ಯಲಾಡುತೆ ಒಯ್ಯನೊಯ್ಯನೆಯೆ ತೇಲುತಿಹ
ಬೃಹದ್ ಪಯೋನಿಧಿಗಳ ಸೌಂದರ್ಯ ಸಂಪದಂ
ಅರುಣರಾಗದಿಂ ರಾರಾಜಿಸಿತು ಬಾಲವಟು
ಶುಕದೇವನಂ ಅರುಣಜಲದಲಿ ಮಿಾಯಿಸುವವೊಲ್.
ಜ್ಞಾನ ಪ್ರಜ್ಞಾನ ಸಂವೃದ್ಧಿಯಂ ಹಾರೈಸಿದ
ಅಧಿಮಾನಸ ತಕಪಕನೆ ಕುದಿಗೊಳೆ ತಮಮನಂ
ಪುಳಕವಾಗಿ ಬಾಲರಿಸಿಯುಂ ಬ್ರಹ್ಮಜ್ಞಾನದ
ರಸವಾಹಿನಿಯೊಳ್ ಮುಳುಗೆದ್ದಂ. ಕವಯಿತ್ರಿ
ಮಲ್ಲಿಕಾ ಕಾವ್ಯ ಕಾನನದಲಿ ಸಂಜೀವನೀ
ಮಾಲೆಯೊಳ್ ಮೂಡಿದ ಮಿಡಿಮೊಗ್ಗು ತಾನೊಂದಾಗಿ.

— o —

ಸಾರಸ್ವತ ಸಂಜೀವನ ತಪಸ್ವಿನಿ

ನಮಂತಿ ಫಲಿತಾ ವೃಕ್ಷಾ
ನಮಂತಿ ಚ ಬುಧಾ ಜನಾಃ ।
ಶುಷ್ಕ ತಾಸ್ತಾನಿ ಮೂರ್ಖಾಶ್ಚ
ಬಿದ್ಯಂತೇ ನ ನಮಂತಿ ಚ ॥

ಓವ್ರೊ,

ಆವಾವ ಗ್ರಹಗಳ್ ಉಪಾರೂಢವಾದುವೊ
ನಭೋದೇಶದಲಿ. ಸುರಸುಂದರ ಸುಮಾನಸಂ
ಸುಗಳಿಗೆಯನಾರೈವ ಕತದಲಿ ಕೂಡಿದುವೆನೆಲ್
ಪೂರ್ಣಿಮಾ ಚಂದ್ರನ ಸುಜ್ಯೋತ್ಸ್ನೆಯುಂ ಹಠಾತ್ತನೆ
ಸಮುಜ್ವಲಿಸಿದವೊಲ್, ವರ ನಕ್ಷತ್ರಗಳ ದಂಡು
ಚನ್ನಗೆ ಹರಿಸಿದವೊಲ್ ಸೊಗಸಾಯ್ತು ಅಂಬರಂ.
ಸುಶಾಂತಮಯ ನಿಶಾರಾಣಿಯುಂ ವಿಜೃಂಭಿಸಿರೆ
ಮನಸೋಹಕತೆಯಲಿ ಸಡಗರ ಸಂಭ್ರಮಂಗಳ್
ಒಗ್ಗೂಡಿದುವು ಶಾಂತಿ ಮಂತ್ರದಾರಾಧನೆಯಿಂ.
ಗಳಿಗೆಗಳಿಗೆಗಳ್ ಉರುಳಿ ಇಂದ್ರಮುಹೂರ್ತವದು
ಕಳೆದಳಿದು ಅಭಿಜಿನ್ ಮುಹೂರ್ತಂ ಅಡರಿಬರಲ್
ಮುಂಗೋಳಿಗಳ್ ಕೊರಳ್ ಎತ್ತಿ ಉಚ್ಚ ದನಿಯುಂ
ಮೊಳಗಿಸಿದುವು ಪುರುಪಿನಿಂ. ಮಂದ ಮಾರುತಂ
ತಣ್ಣಗೆ ತನಿಯಿಂಪಿನಲಿ ಬೀಸಿವೀಸುತ ಬರಲ್
ಪ್ರಾತಃ ಮುಹೂರ್ತಂ ಅಡರಿದುದು ಮನಮೋಹನ
ರೂಪಿನಿಂ. ಪೂರ್ವೀ ದಿಗಂತದಲಿ ಹೊಂಬೆಳಕಿನ
ಛವಿಯುಂ ಚಿಮುಕಿಸುತಲೈದಳ್ ಉಷೆ ಅಮೃತದ
ಹೊಂಗಿಂಡಿಯಿಂ. ದಿಗ್ ತಟಾಂತದಲಿ ಚಣಚಣಂ

ವೃದ್ಧಿಸುತಿರೆ ತನಿವೆಳಗಿನ ತಿಳಿಬೆಳಕು ಹೊನ್ನ
ಹೊತ್ತರೆಯಲಿ ಪಕ್ಷಿಗೊರಳಿನ ಇನಿಗಾನ ಸ್ವಾಗತ
ಬಯಸಿದುದು ಕಿರುಗೆಜ್ಜೆಗಳನಲುಗಿಸಿದ
ಪಾಂಗಿನಲಿ. ಗಿಡಮರಗಳ ಎಲೆಎಲೆಗಳ್ ಅಲುಗಿ
ಮರ್ಮರ ಶ್ರುತಿಯಂ ಬಿತ್ತರಿಸಿದುವು ಪಕ್ಷಿಗಳ
ಇನಿಗಾನ ಮೋಹನ ಮಂಜರಿಗನುಗುಣಮಪ್ಪಿ.
ಗಗನ ಭಿತ್ತಿಯ ತಟಾಂತ ಲಗ್ನದಲಿ ಮೆಲ್ಲನೆ
ಇಣಿಕಿದನ್ ಉದಯ ಭಾಸ್ಕರಂ ಸ್ವರ್ಣದುಂಡೆಯು
ಪಾಂಗಿನಲಿ. ನಸುವೊಳ್ತಿನಲಿ ಒಯ್ಯನೊಯ್ಯನೆಯೆ
ಮುಗಿಲ್ ದಿಣ್ಣೆಯನೇರಿ ರಂಜಿಸಿದನಾ ಬಾಲ
ಕೋಮಲ ರವಿ ಜಗಜಗಿಸುತ. ಸುತ್ತುಮುತ್ತಿನಲಿ
ಸುತ್ತುವರಿದ ಬೃಹದ್ ಹೆಮ್ಮುಗಿಲ್‌ಗಳ್ ನೀರ್
ಮೈಗೊಳದೆ ಬೆಳ್ಳಗೆ ಬೆಳರ್ತು ಬೆಂಡಾಗಿ ಗರಿ
ಹಗುರಮೆನೆ ಸಂಚಲಿಸುತಲಿರ್ದುವು ಗಗನದಲಿ.
ತಂಬೆಳಗುವೊಳ್ತಿನ ತನಿಯಿಂಪಿನ ತಣ್ಪುಂಡು
ಉನ್ಮನಂ ಮುದಿಸಿ ಹೆಪ್ಪುಗಟ್ಟಿದ ಪಾಂಗಿನಲಿ
ಪೆರ್ಚಿದೊಲ್ ನವಿಲ್‌ಗಳ ಮುದ್ದು ಸಂಸಾರವದು
ವನಾಂತರದಿಂ ಬಯಲಿಂಗೆತ್ತುವು ತಂತಮ್ಮ
ಕ್ಷುದ್ ಬಾಧೆಯಂ ಹರಿಸಿಕೊಳ್ಳೆ. ಚಿಂಬಿಸಿಲಿಂಗೆ
ಮೈವೆರ್ಚೆ ಮನವೆರ್ಚೆ ನಲಿನಲಿದು ನರ್ತನಂ
ಗೈಯುತಿರಲುರೆ ವಿಸ್ಮೃತಿಯ ಭೋಗದಾನಂದ
ಮೋದದಲಿ ಮೈಮರೆತು. ಉದುರಿತು ಕುಸುಮದಳ
ಕುಸುಮ ರೇಣುಗಳ ವೃಷ್ಟಿ ಗಿಡುಮರಗಳ ಕೊಂಬೆ
ಕೊಂಬೆಯ ಹೊದರಿಂದೆ. ಮುರುಮುರು ಗುರುಗುರು ಕೊರಳ

→

ಬಲುಹು ಹರಿದುದು ರಾಗಾರುಣತಾನಂ ಸೂಸಿ,
ಅಮಿತ ತೋಷದಿಂ ಕೊರಳೆತ್ತಿ ಕೇಕಾರವಂ ಹರಿಸೆ,
ಪ್ರಾತಃಮುಹೂರ್ತ ಸ್ವರ್ಗಸದೃಶವಾದತ್ತು
ಪ್ರಕೃತಿಯ ವೈಭವೋಪೇತ ಸೌಂದರ್ಯದಿಂದೆ.

ಭಾರತ ವರ್ಷದ ಪರಿಪುಣ್ಯ ಭೂಮಿಯಲಿ ಉತ್ತರ
ಪ್ರದೇಶದ ಫರೂಕಾಬಾದ್ ನಗರದ್ದೇಶಂ
ಮೈಕೊಡವಿ ಮಡಿಯುಟ್ಟವೊಲ್ ಧವಳ ಕಾಂತಿಯಿಂ
ಬೆಳಗಿದತ್ತು ಸುಮುಹೂರ್ತದ ಕಿರಣಂಗಳ್ ಮೂಡಿ
ಶ್ರೀಗೋವಿಂದ ಪ್ರಸಾದ್ ವರ್ಮಾ ಎಂಬುವ ನಲ್
ನಾಮಧೇಯವನೊತ್ತ ಸಭ್ಯ, ಸದ್ಗೃಹಸ್ಥ
ಮಹೋದಯನ ಸಹಧರ್ಮಿಣಿಯ ಗರ್ಭಾಂಬುಧಿಯೊಳ್
ಮೈದಾಳಿ ಸಂಜನಿಸಿದುದು ಮುದ್ದು ಶಿಶುವೊಂದು
ಭಾರತೀಯ ಸ್ತ್ರೀಜನರ ಕಲ್ಯಾಣಾರ್ಥವಾಗಿ !
ಕದ ಮುಚ್ಚಿದ ಒಳಕೊಠಡಿಯಿಂದೆ ನವಜಾತ
ಶಿಶುವಳುವ ಹೂದನಿ ಕಿವಿಗವ್ವರಮಂ ತಾಗಿ
ಮೈಮನ ಪುಳಕಗೊಂಡೊಡನೆಯೆ ಬಾಗಿಲಿನ ಬಳಿ
ಕಾದಿರ್ದ ಬಂಧು ಬಳಗ ತೆಕ್ಕನೆ ಆನಂದ
ಮೋದದಿಂ ಕರೆದು ಕೇಳಿದರ್ ಸೂಲಗಿತ್ತಿಯಂ
"ಕೂಸು ಹೆಣ್ಣೋ ? ಗಂಡೋ ?" ಎಂದು ಬಿತ್ತರದ
ಧ್ವನಿಯಲಿ. ಕುತೂಹಲಿತ ದನಿಗೆತ್ತ ಉತ್ತರ
"ಹೆಣ್ಣು !" ಎಂದೆಂಬ ನೀರಸದಾಯಕ ಡಂಗುರ !

ಕುಲಪುತ್ರನ ಶುಭಾಗಮನವಂ ಬಯಸಿ ಆಸೆ
ಪ್ರತ್ಯಾಸೆಗಳಿಂ ಪುಟಿಯುತಲಿರ್ದ ಜೀವಗಳ್
ಒಡನೆ ಮೈಮುದುಡಿದುವು ಗತಿ ತಪ್ಪಿದಂತೆವೊಲ್. →

ಸದ್ ನಿರೀಕ್ಷೆಯುಂ ಅತ್ಯಂತ ನಿರಾಸೆಯ ರುದ್ರ
ಕುಂಡದಲಿ ಮುಳುಗಿ ಮರು ನುಡಿಯೆ ಬಾಯಿಬಾರದೆ
ಮಿಣ್ಣನಾದರ್ ನಿಟ್ಟುಸಿರ್ ಬಿಟ್ಟು. ಕುಲಪುತ್ರನ
ಕನಸು ನನಸಾಗದೆಯೆ ನಿರರ್ಥಕ ಎನಿಸಿದುದು
ಸದ್ವಂಶದ ಬಾಳು. ಎನಿತ್ರೆನಿತ್ರೋ ಹರಕೆಗಳ್
ಅಡವಿಪಾಲು. ಕುಲಪುತ್ರನೆ ಕುಲೋದ್ಧಾರದಭಿನೇತ್ರ !
ಪುತ್ರನೆ ಪರಗತಿಗೆ ಅತ್ಯುತ್ತಮ ಸೋಪಾನ!
ಇಂತಿರೆಯಿರೆ ಪೆಣ್ಣು ಶಿಶು ಸಂಜನಿಸಲೇಂ ಫಲ ?
ಎಂಬೊಂದು ದಿವ್ಯ ತಾತ್ಸಾರದ ನಿಟ್ಟುಸಿರ್ !

ಮುದ್ದಿನ ಶಿಶು ಪೆತ್ತವರ ನಲ್ಮೆಯ ಉಡಿಯಲ್ಲಿ
ಸುಖ ಶಾಂತಿಗಳ ಸಮರಸ ಒಗ್ಗೂಡಿ ಹರಿದುದು
ಕಂದಸಾಗಮನದಿಂ. ಕುಲ ಕೀರ್ತಿಗೆ ಏಕೈಕ
ದಿವ್ಯ ಕುಡಿಯೆನೆ ಸಂಜನಿಸಿದ ಮುದ್ದುಮುದ್ದಿನ
ಧವಳ ಕಾಂತಿಯ ಕುವರಿಯುಂ ಬಲ್ಮೆ ಒಲ್ಮೆಯ
ನೋಂಪಿಯಲಿ ಪ್ರೇಮದ ತನಿರಸಂ ಮೈದುಂಬಿ
ತೊಳಗಿ ಬೆಳಗಿದಳ್. ತರುವಾಯಿ, ಶುಭ ಮುಹೂರ್ತವ
ನಾರ್ಕೈದು ಅಮಿತ ಬಂಧುಬಳಗದ ಸಂಗದೊಳ್
ಸಡಗರದ ನಾಮಕರಣೋತ್ಸವವು ಜರುಗಿದುದು
ಸಂತಸದಲಿ. 'ಮಹಾದೇವಿ' ಎಂಬ ನಲ್ ಪೆಸರಂ
ಪಡೆದು ಧನ್ಯಮಾಯ್ತು ಶಿಶುರತ್ನ. ಭವಿತವ್ಯದಲಿ
'ಮಹಾ' ಶಬ್ದ ಸಂವರ್ಧನೆಗನುಗುಣಮಪ್ಪಿ ತಾಂ
ಬದುಕಿ ಬಾಳಿದ ಮಹಾನ್ ಮಹಿಳೆ ಮಹಾದೇವಿ.

ಪರಮಪಿತ ಗೋವಿಂದ ಪ್ರಸಾದ್ ವರ್ಮನುಂ
ಪೆಸರಾಂತ ವಿದ್ಯಾವಿಭೂಷಣನಿರುತಿರಲಾ

ಬಾಗಲ್ಪುರದ ಕಾಲೇಜಿನೊಳ್ ವರ ಪ್ರಾಚಾರ್ಯ
ಪೀಠಸ್ಥಂ. ಮಾತೆ ಹೇಮಾರಾಣಿ ದೇವಿಯುಂ
ಸಂಗೀತ ವಿದುಷಿ, ಮೇಣ್ ಚಿತ್ರಕಲಾಪ್ರವೀಣೆ.
ಮಾತಾಮಹನುಂ ಬ್ರಜ ಬಾಷೆಯಲಿ ಶ್ರೇಷ್ಠ
ನಾಮಾಂಕಿತ ಕವಿಗಳ್ ಎನಲ್ಕಾ ಪರಮೋಚ್ಚ
ಪ್ರಕಾಂಡ ಪಂಡಿತರ ಸದ್ವಂಶದಲಿ ಪುಣ್ಯ
ವಶದಿಂದೆ ಸಂಜನಿಸಿತಾ ಶಿಶು ಮಹಾದೇವಿ.
ದಿನದಿನಂ ಬಾಲೆ ಎಳೆಬಾಳೆ ಸಸಿಯವೊಲ್ ಶುಕ್ಲ
ಪಕ್ಷದ ಚಂದ್ರನವೊಲ್ ಮೈದುಂಬಿ ಬೆಳೆಯುತಿರೆ,
ಪೆತ್ತವರ್ಗೆ ಮುದ್ದಾದಳ್ ಅಂಗೈಲಾಡುವ
ಅರಗಿಳಿಯಂತೆ. ಏಗಳುಂ ಶಿಶುವಂ ಜೋಗಳಿಸೆ
ಹೇಮಾರಾಣಿದೇವಿಯುಂ ಪಾಡುತಿರ್ದುದು ಮೀರಾ
ಭಜನೆಗಳ್. ಎಳೆತನದಲಿ ಭಕ್ತಿರಸ ಪೂರಿತ
ರಾಗರಸಮಂ ಪೀರ್ದು, ಭಕ್ತಿಮಾರ್ಗವ ಪಿಡಿದು
ಮೀರಾಬಾಯಿ ಪೆಜ್ಜೆಯನುಸರಿಸಿ 'ಆಧುನಿಕ
ಮೀರಾ' ಎಂಬ ಪೆಸರ್ ಗಳಿಸಿ ಧನ್ಯವಾಯ್ತು ಜೀವ
ದೂರಭವಿತವ್ಯದಲಿ. ಬಾಲೆ ಯುಕ್ತ ಸಮಯದಿ
ಶಾಲೆಗೆತ್ತಳ್ ಓರಗೆಯ ಚಿಣ್ಣ ಮಕ್ಕಳೊಡಂ.
ಮನೆಯೊಳ್ ಜನನಿಯೇ ನಿಜ ಗುರುವಾಗೆ ಅಕ್ಷರದ
ಜ್ಞಾನಮೊಡನೆ ಸಂಗೀತಕಲೆ ಚಿತ್ರಕಲೆ ಮೇಣ್
ನಯವಿನಯಾದಿ ಸೌಜನ್ಯ ಸೌಶೀಲ್ಯತೆಯುಂ
ಮೈಮನದುಂಬಿದುದು ಸಂಜೀವನ ಯೋಗಕೆ
ಅನುಗುಣಮಪ್ಪಿ. ಮುದ್ದು ಕುವರಿಯ ಧೀಶಕ್ತಿಯಂ
ಕಂಡು ಪ್ರೀತಿಯಿಂ ಪೆರ್ಮೆಯಿಂ ಲಾಲಿಸಿ ನಗಿಸಿ

→

ನುಡಿಸಿ ಪಾಲಿಸಿದರ್ ಪರಮೋತ್ಸಾಹದಿಂದಲಿ
ಪೆತ್ತವರ್ ಪೆತ್ತೊಡಲ್ ತೋಷದಿಂ ತಣಿವನ್ನ.
ಪ್ರಾಥಮಿಕ ಶಿಕ್ಷಣಂ ಇಂದೂರಿನಲಿ ಒದಗಿದುದು,
ಕಲಿಕೆಯಲಿ ತನಗೆಣೆಯಿಲ್ಲದೊಲ್ ಕಲಿಯುತ್ತೆ
ಶಿಕ್ಷಕರ ಪಿರಿಯರ್ಕಳ ಅಚ್ಚುಮೆಚ್ಚಂ ಗಳಿಸಿದ
ಉಚ್ಚ ತರಗತಿಯ ವಿದ್ಯಾರ್ಥಿನಿ. ಅಜಜಾಯೆಯ
ಸುಪುತ್ರಿ ಮಹಾದೇವಿ ಬೆಳೆಯುತಿರ್ದಳ್ ಸಕಲ
ಸದ್ಗುಣಗಳ ಗಣಿಯೆನೆ ಗುಣಮಂ ಸುಗುಣಗೊಳಿಪ
ಸರ್ವಾಂಗ ಸೌಂದರ್ಯ ಸೌಭಾಗ್ಯದಿಂದೊಪ್ಪುವ
ಲಲನೆಯೈಸಿ. ಬಾಲ್ಯದೊಳೆ ವಿಧವಿಧ ಕಲೆಗಳುಂ
ಮನೋಗತವಾಗುತಿರೆ ಪೇಳಲೇಂ ಸಂಭ್ರಮ
ಸಡಗರಂಗಳ ಸಂಯುಕ್ತ ಸಂಜೀವನಮಂ ?
ಬೃಹದಾರಣ್ಯದಲಿ ಮುಂಬೆಳೆದ ಶ್ರೀ ಗಂಧದ
ಮರದವೊಲ್ ಬಾಲೆ ದಿವ್ಯ ಬಂಧುರ ಕಲಾಕಲೆ.
ಪಾರಿವದೊಲ್ ಮನೆಯಿಂ ಶಾಲೆಗೆ ಪಾರಿ ಅನನ್ಯ
ಲಕ್ಷ್ಯದಿಂ ತೇಜದಿಂ ಮನೋಹರ ಭಾವದಿಂ
ಕಲಿಯುವಳ್

ಅಂದಿನ ರೂಢಿಯೊಳ್ ಮನನೆಟ್ಟ
ಗೋವಿಂದ ಪ್ರಸಾದ್ ವರ್ಮನುಂ ಮುದ್ದುಮಗಳ
ವಿವಾಹಂ ಗೈವ ವಿಚಾರದಲಿ ನಿರತಸಾದಂ.
ಮಹಾದೇವಿಯ ವಯಸ್ಸು ಕುಲಗೋತ್ರ ಮತ್ತಂ
ಬುದ್ಧಿವಂತಿಕೆಗಳಿಗೆ ಅನುರೂಪನೆನಿಪ ಬಾಲ
ವಿದ್ಯಾರ್ಥಿ ಘನನುಂ ಬಂಧು-ಜೀವ-ವಲಯದಲಿ
ಕಂಡುಬರೆ ಸಮ್ಮುದಿತ ಮಾದುದವನ ಹೃನ್ಮನಂ.

→

ರೂಪ ನಾರಾಯಣನೆಂಬ ಅಭಿದಾನಮುಳ್ಳ
ಸತ್ಪಾತ್ರನಂ ಆಯ್ದು ತನ್ನಯ ಕುಲ ಕೀರ್ತಿಗೆ
ಒಪ್ಪುವಿಡಲ್ ಶಕ್ತನೆಂದು ಮನ ಮೆಚ್ಚಿದಂ.
ಬಳಿಕಲಾ ಮಂಗಳ ಮುಹೂರ್ತದಲಿ ಸಂಲಗ್ನ
ನಿಶ್ಚಿತವಾಗೆ ಗುರುಜನ ಬಂಧುಜನ ಒಗ್ಗೂಡಿ
ನಿತ್ಯ ಅಂಗೈಲಾಡುವ ಅರಗಿಳಿಯೊಲಿರುತಿರ್ದ
ಪುತ್ರಿಯುಂ ಹಸೆಮಣೆಯ ಹೆಣ್ಣಾಗಿಸಿದರ್.
ಎಳೆಯ ಬಾಲಕಿಯುದಂ ತನ್ನೊಂದು ದಿನದಿನದ
ಎಳೆಯರಾಟದೊಲ್ ಸ್ವೀಕರಿಸಲಾ ಕಾಲದೊಳ್,
ಲಗ್ನದ ಮುಹೂರ್ತಂ ಕೂಡಿ ಸಂಲಗ್ನವಾದತ್ತು.
ಪರಿಸರದ ಸಾಮಾಜಿಕ ರೀತಿನೀತಿಗಳಂ
ಅರಿತು ನುರಿತು ಮನಗೊಂಡ ಬಾಲೆಗದರೊಳೇಂ
ವಿಶೇಷಂ ಕಂಡುಕೊಳದೊಪ್ಪಿದಳ್ ಬಾಲೋಚಿತ
ಉತ್ಸಾಹದಿಂ. ಪುಟ್ಟಪುಟ್ಟ ಒಡವೆ ವಸ್ತುಗಳಿಂ
ಸಿಂಗರಂಗೊಂಡ ಎಳೆಮಗಳ ಮದುವೆಯ ಕಾರ್ಯ
ಮಹೋತ್ಸವವದು ನಡೆದುದು ಐದುದಿನವಾನದ
ಪರ್ಯಂತರಂ. ಸಂಭ್ರಮಿತ ಬಂಧು ಬಳಗಗಳ
ಕಣ್ಮನ ತಣಿಯುವನ್ನ. ಹೃದಯ ಕಮಲ ಅರಳಿ
ಹೂವಾಗುವನ್ನ. ಭೂರಿ ಭೋಜನಂ ಉಂಡಿರ್ದ
ಜನಮಾನ್ಯರ್ ಗಸ್ರನೆ ತೇಗಿದರ್ ತೋಷದಿಂ.
ಮಿತ್ರರುಂ ಮಧುಮಾಸಮುರ್ದಬಂದಂತೆಪ್ರೊಲ್
ಸ್ಮೈಮರೆತರ್ ಪರಮೋತ್ಸಾಹದಾನಂದದಿಂದಲಿ.

ವಿವಾಹ ಮಹೋತ್ಸವ ಮುಗಿದ ಬಳಿಕ ಕುವರಿಯುಂ
ಉಳಿದಳ್ ಜನನಿಯುಡಿಯ ಶಿಶುವಾಗಿ, ಸಾಮಾಜಿಕ

→

ರೂಢಿಯನ್ವಯಂ. ತಣ್ಣಗೆ ತೀಡಿತು ತಂಗಾಳಿ,
ಕೇಳಿದುದು ವಿಹಂಗ ಸುಮಂಗಲ ಕಿರುವಾದ್ಯಂ
ಎತ್ತೆತ್ತಲುಂ. ವಸಂತ ಪ್ರಭುವಿನ ಉನ್ನತ
ಸಾಲಂಕೃತಾಸ್ಥಾನಮೆನೆ ಮೆರೆವ ಚಾರುವನ
ಧೀರ ದಿವ್ಯ ಮನೋಜ್ಞ ತರುಗೋಷ್ಠಿಯುಂ ಸ್ವರ್ಗ
ಮರ್ತ್ಯಂಗಳುಂ ಕಾಲದೇಶಂಗಳುಂ ನಿಚ್ಚ
ಸುಖದುಃಖ ಜನ್ಮ ಮೃತ್ಯುಗಳೆಲ್ಲಮೊಂದಾಗಿ
ಮುಳುಗಿರ್ದುವೊಂದನಂತಾನಂತ ರಸಧಿಯಲಿ !

ಇಂತು ಕಾಲದ ಪ್ರಜ್ಞೆ ಎಳೆತನದ ಮುಗ್ಧತೆಯು
ಮುಟ್ಟೆ ತಟ್ಟೆ ಎಬ್ಬಿಸಿ ಹಚ್ಚಿದುದು ಸಂಜೀವನ
ಪಥಕೆ. ತಾಯುಡಿಯ ಹುಲ್ಲೆ ಕರುವಿನ ಮಾಳ್ಕೆಯಲಿ
ಉಳಿದಳ್ ಭವ ಭಂಗಗಳಿಂ ದೂರವಾಗಿ. ಅಜನ
ರಾಣಿಯಾ ಪರಮ ಪ್ರಸಾದಮಂ ಪಡೆಕೊಂಬ
ಪ್ರೋದ್ವಿಗ್ನ ಆಕಾಂಕ್ಷೆಯ ಕಿಡಿಗಿಂಬಿತ್ತುದೆದೆಯ
ಪಕ್ಷಿ. ಅಂದು, ಶಾಲೆಯ ಪಠ್ಯ ಪುಸ್ತಕದಿಂ ದಿವ್ಯ
ಪಾಠಮಂ ಕಲಿಯುಲವಕಾಶವೊದವಿದುದು ವಿಧಿ
ವತ್ತಾಗಿ. ಶ್ರೀಗುರು ಗೌತಮ ಬುದ್ಧದೇವನಾ
ಸಂಜೀವನ ಚರಿತೆಯ ದರ್ಶನಂ ಕೈಗೂಡಿ,
ಅಧ್ಯಯನ ಮಾಳ್ಪಯೋಗನೊದವಿತು ಮುಗ್ಧಮನ
ಮತಿಗಳಂ ಚಿಂತನಾವೇಶದ ನಿಡುಗತ್ತರಿಯು
ಕೂರಲುಗಿಗೆ ಸಿಲ್ಕಿಸೆ. ಕಾರು ಕತ್ತಲೆಯೊಳ್ ಕರ
ದೀಪಮಂ ಬೆಳಂಗಿದ ಪಾಂಗಿನಲಿ ಸುಜ್ಞಾನದ
ಭಂಡಾರ ಬೆಳಗಿದತ್ತು ಬೆಳ್ಳಂ ಬೆಳಕಾಗಿ.
ಬಾಲ್ಯದೊಳ್ ಭಕ್ತಿರಸ ಘನಿಸಿ ಎದೆಯಾಳವಲಿ

ಭಕ್ತಿಭಾವದ ಗೀತಗಳಂ ಕೇಳ್ದು ಹಾಡಿ
ಪಾಡಿ ನಲಿವಳ್ ಭಕ್ತಿಭಾವದಲಿ ನೈಮರೆತು.
ಸಾಹಿತ್ಯ ಸತ್ ಸೃಷ್ಟಿಯುಂ ನಡೆದುದು ಕಲಿಕೆಯು
ಜೊತೆಜೊತೆಗೆ. ಸಂಗೀತ ಪಾಠದಲಿ ಸೂರದಾಸ.
ತುಳಸೀದಾಸ ಮೊದಲಪ್ಪ ದಾಸವರೇಣ್ಯರ
ಗೀತೆಗಳ ಪರಿಪಾಠದಲಿ ಭಕ್ತಿಭಾವ ಮೇಣ್
ವಿರಕ್ತಿಯ ಭಾವಗಳ್ ಪೊಳೆತುವು ಎದೆಯಮೃತ
ಕುಂಡದಲಿ. ತರುಣಿ ಮೀರಾ ಭಜನೆಯಲಿ ಮುಳುಗಿ
ಭಕ್ತಿಗೇಯದ ರೀತಿನೀತಿಯುಂ ಮನಗೊಳ್ಳೆ
ಕಾವ್ಯರಚನ ಕೌಶಲ್ಯ ಕರಗತಮಾಯ್ತು ಸುಲಭದಿ.
ಲೋಕ ಪ್ರಜ್ಞೆಯುಂ ಇನಿದಿನಿದಾಗಿ ಅರಳುತ್ತೆ
ಸಹಸ್ರಾಕ್ಷಿಣಿಯೆನೆ ಹರಿಸಿದಳ್ ಕಣ್ ದಿಟ್ಟಿಯುಂ
ದೀನ ದುಃಖಿ ಪೆಣ್ಮಣಿಯರ ಮೇಲೆ. ಸ್ತ್ರೀಜನಂ
ದುಃಖ ದುಗುಡಮಂ ತಂತಮ್ಮ ಕರ್ಮದಿಂದೇ
ಬಗೆದು ಅನುಭವಿಸುವ ಕರುಣಾಜನಕ ದುಃಖ
ಪೂರ್ಣ ಚಿತ್ರಮಂ ತನ್ನೊಳ್ ನೆನೆದು ಮರುಗುತ್ತೆ
ಕರಗುವಳ್ ಬಿಸಿಲ್ ಮುಟ್ಟಿದ ಮಂಜಿನ ತೆರದಲಿ.

ಯೋಚನೆಯ ತೇಜಿಯುಂ ಆವಾವ ಶಾದ್ವಲದ
ಉದ್ಯಾನದಲಿ ಮೇಯುಬಿಟ್ಟೊಡಮದಲ್ಲಲ್ಲಿ
ಸುತ್ತಿ ಸುತ್ತಾಡಿ ಬಂದು ನಿಲ್ಲುತಲಿರ್ದುದಾ
ದುರ್ದಾಂತ ಬಿಂದುವಿನಲ್ಲೇ. ಅಹೋ, ಆ ಕಾಲದ
ಭಾರತೀಯ ಪೆಣ್ಗಳ ಬಾಳ್ಗತಿಯ ರಣಗೋಳು!
ಒಳಹೊರಗೆ ಕಗ್ಗತ್ತಲೆಯ ಬೀಡು. ಅಜ್ಞಾನ–
ಮೂಢನಂಬಿಕೆಯ ಕಗ್ಗಾಡು! ಮುಗ್ಧ ಮಾನಸ

→

ಅಧಿಮಾನಸಕೇರ್ವೊಡುವೊಡೆ ಬಿಜ್ಜೆಯದೊಂದೇ
ಕರದೀಪ. ದೀಪದಿಂ ದೀಪಮಂ ಉರಿಸುವುದೆ
ಜಾಣ್ಮೆ ಇಂದಿನ ದುಃಖದಗ್ಧಮಯ ಪರಿಸ್ಥಿತಿಗೆ.
ಭಾರತ ಜನಜೀವನಮಂ ಎಂತು ಯಾವ್ಯಾವ
ಮಾನದಂಡದಿಂದಳೆದೊಡಂ ಬದುಕು ಅಪೂರ್ಣ -
ಅಸುಂದರವೇ ಎಲ್ಲಾ. ಭಾರತ ಸುಸಂಸ್ಕೃತಿ
ಕಾಲಾನುಕಾಲದಿಂ ಪ್ರಸಿದ್ಧಮಿರುತಿರಲ್
ಮತಿಮೌಢ್ಯದಿಂ ತಮಗೆ ತಾಮೆ ಉರುಳು ! ಇದಕೇಂ
ಶೀಘ್ರ ಪರಿಹಾರಮೊ ಎಂದೆಂಬುವ ಚಿಂತೆಯು
ಕೀಟವದು ಕೊರೆವುದೆರ್ದೆಯ ಸಂಪುಟಂ. ಆ
ಕಡು ಚಿಂತೆಯೊಳ್ ಕಳೆದುವೆನಿತೊ ದಿವಸಮಾನಂ
ಪರಿಹಾರಮಂ ಕಾಣದೆಯೆ. ಮಹಾದೇವಿಯುಂ
ತನ್ನೊಳ್ ಮರುಗುವಳ್ ಕರಗುವಳ್ ಚಿಂತಾದ್ರವ್ಯಂ
ಘನಿಸಿ. ಪರಿಸರದ ಜಂಜಡಮಂ ಪರಿವೀಕ್ಷಿಸಿ
ತಾಳ್ವುದಲ್ಲದೆ ಬೇರೆ ಮಾರ್ಗಮಿಲ್ಲ ತರಳೆಗೆ.

ಷೋಡಶ ವರ್ಷಮಾನಗಳುರುಳಿ ಷೋಡಶಿಯಾಗಿ
ಮೈಮನದುಂಬಿದ ನಾರೀಮಣಿ ವೈರಾಗ್ಯ ಭಾವದಿಂ
ಸಂಸಾರದನುಬಂಧಮಂ ನಿರಾಕರಿಸಿದಳ್
ತಾಯುಡಿಯ ಮುದ್ದು ಮಗುವಾಗಿ ತಾನುಳಿಯುತ್ತೆ.
ಸುವಿದ್ಯಾಧಿದೇವತೆಯನಾರಾಧಿಸುದೊಂದೇ
ದೃಢಮನದಿಂ ಪೂಜಿಸಿ ನಲಿದಳ್ ಎಳೆತನದ
ಮನಃಚಿತ್ತಗಳ್ ಸಿದ್ಧಿವೊಡೆವನ್ನ, ಚಿಂತನ
ಮಂಥನ ಕುದಿವನ್ನ ಭಾವಧಾರೆ ಮೊಳವನ್ನ.
ಕನ್ಯಾಮಣಿಯ ಮನೋವಿಕಾಸಮಾಗಿ ಅದುಭುತ

→

ಪ್ರಜ್ಞಾನ ದಳ ಬಿರಿದಿರೆ ಸಮ್ಯಕ್ ದೃಷ್ಟಿಯುಂ
ಹರಿದತ್ತು ಭಾರತದಗಲ. ಎಲ್ಲೆಡೆಯುಂ ಕಣ್
ದಣಿವಂತು ಸಂಕಟ ಸಂಕಷ್ಟಗಳ ದಿವ್ಯ
ಆತಿಥ್ಯ ನಿರಕ್ಷರೀ ಜನಕೋಟಿಗೆ. ಮತ್ತಂ
ಶಾಸ್ತ್ರಗಳ ಸಂಕೋಲೆಗಳಿಂದೆ ಸುತ್ತಿ ದಟ್ಟ
ಕತ್ತಲೆಯ ನರಕ ಕೂಪದಲಿ ಕೊಳೆತು ನಾರ್ವ
ಸ್ತ್ರೀಜನರ ರಣಗೋಳು. ಎಳೆಯ ಮನಮತಿಗಳಂ
ಎಳೆದಾಡಿದತ್ತು ಮುಳ್ಳಿನ ಕಣದಿ. ಮನಮಥಿಸಿ,
ಭಾರತದ ಪುಣ್ಯಭೂಮಿಯಲಿ ಪರಿಪುಣ್ಯವಶದಿಂ
ಸಂಜನಿಸಿ ಸತ್ ಸಂಸ್ಕೃತಿಯಲಿ ಬಾಳಿಯುಂ ನೆರೆ
ಅಜ್ಞಾನದ ಕುಂಡದಲಿ ಮುಳುಂಗಿ ಮುಂಗಾಣದ
ಮಹಿಳಾಮಣಿಯರ ಆತ್ಮೋದ್ಧಾರವಾಗದೆಯೆ
ಸಂಜೀವನ ಸೌಖ್ಯಮೂಡದೆಂಬ ನಗ್ನಸತ್ಯ
ತೆರೆದ ಪುಸ್ತಿಕೆಯೊಲ್ ಕಣ್ ಮುಂದಿರೆ, ಮಹಿಳೆಯ
ಸರ್ವೋದ್ಧಾರಕಾಗಿ ತನ್ನಯ ಇಡೀ ಜೀವ
ಮಾನವಂ ಮೀಸಲಿಡುವ ಪಣವಂ ತೊಟ್ಟಳಾ
ಲಲನೆ ಮನದಿ. ಒಳಗಣ್ ತೆರೆಯದಿರೆ ಕಂಬನಿಯ
ಬಾಳ್ ಕೊನೆಗಾಣದೆಂಬುದು ಮನೋಗತಂ. ಆ
ಚಿಂತಾ ಸಮುದ್ರದಲಿ ಮುಳುಗೆದ್ದ ಹೃನ್ಮನಂ
ದಣಿದು ಕಂಬನಿ ನೊಳೆತುದು ದುಃಖಿತ ಕಂಗಳಲಿ.
ಎನಿತೆನಿತು ಜಾನಿಸಿದೊಡೆ ಅನಿತನಿತು ಕಾಂಬುದದು
ಜಟಿಲ ಕುಟಿಲ ಕುಮತಿಯು ಕುತಾಪವೆ ಮನೋಗತಿಗೆ.
ಮನುಕುಲದಲಿ ಧರ್ಮಕರ್ಮ ಸಂಯೋಗದಿಂದೆ
ಸಂಜನಿಸಿ ಕ್ರಿಮಿಗಳ ಮಾಳ್ಕೆಯಲಿ ಬಾಳಿಗೈದು

→

ಸಂದು ಹೋಹ ನಾರೀಮಣಿಯರಂ ನೆನೆನೆನೆದು
ಪರಿತಪಿಸುವಳ್ ಮನದಿ ; ಕಾರುಣ್ಯ ದ್ರವ್ಯವದು
ಕರಗಿ ದ್ರವಿಸಿದ ತೆರದಿ. ಹೃದಯಾಬ್ಧಿ ಬಿಸಿಲ್,
ಮುಟ್ಟಿದ ಮಂಜಿನವೊಲ್ ಕರಗಿ ದ್ರವಿಸಿ ಹರಿದುದು
ಸಹಸ್ರ ಸಹಸ್ರ ಶ್ರೋತಗಳ್ಸಿಸಿ. ಎಂದಿಗುಂ
ಸೊತ್ತಾಗಿ ತೊತ್ತಾಗಿ ದಾಸೀಪದವನೊಪ್ಪಿ
ನರಳ್ವರ ಚಿತ್ರಣ ಮರೆಯಾಗದು ಕಣ್ಣಿಂದೆ.
ನಶಿಸದು ಮನದಿಂದೆ. ರಮಣೀಮಣಿಯುಂ ಗಹನ
ವಿಚಾರ ತತ್ಪರತೆಯಲಿ ಅನುದಿನದ ಚಿಂತನ
ಮಂಥನಗಳ ಅನುಭವರಸ ಹರಿವುದು ಲೇಖನ
ಕೃಷಿಯಲಿ, ಮನುಕುಲದ ಮನಃತಂತ್ರಿಯಂ ನೆರೆ
ಮಿಡಿಸುವೊಲ್. ಆದರಾ ನಿರಕ್ಷರೀ ಜನಕೋಟಿಗೆ
ಗ್ರಂಥ ದ್ರವ್ಯ ಸಲ್ಲುವುದೆಂತು ? ಎಂಬುವ ಪ್ರಶ್ನೆ
ಮನಮಿಡಿಸೆ, ಆಪನಿತು ವಾಗ್ಜ್ಞಾನ್ಧವಿಯಂ ತಾಂ
ಹರಿಸುವಳ್ ಮುಗ್ಧ ದುಗ್ಧ ಮನವಂ ಮುಟ್ಟುವೊಲ್.
ಬಾಲ್ಯವಿವಾಹ, ವಿಧವೆಯರಗೋಳು, ಮತ್ತಮಾ
ವೈಯಕ್ತಿಕ – ಆರ್ಥಿಕ ಸ್ವಾತಂತ್ರ್ಯಗಾಣದ ಮುಗ್ಧ
ಮನದ ಮುಗುದೆಯರ ದಿವ್ಯ ಅಶ್ರುದ್ಧಿ ಹರಿವುದು
ಸ್ತ್ರೀವಿದ್ಯಾಭ್ಯಾಸದಿಂ ಬಂದಪುದು ಎಂಬುದದು
ಮನೋಜನಿತ ನಿತ್ಯಸತ್ಯಮಿರೆ ವೈಚಾರಿಕತೆಯ
ಹುಚ್ಚು ಪ್ರವಾಹದಲಿ ಕೊಚ್ಚಿ ಹೋವುದು ಮನಂ.

ಕಡುಕತ್ತಲೆಯಿಂದೆ ನಿರುತಕ್ಕೆ ದಿಟ್ಟೆಯಟ್ಟಲ್
ಅಲ್ಲಿ ಜಾನವೇ ಹಿನ್ನೆಲೆಯಾಗೆ ಮುಲುಗುಡಿವ
ಜನಕೋಟಿಯಲಿ ಜನ್ಮ ಸಾಫಲ್ಯಮಂ ಕಾಣಲ್

→

�಼ಸಿ ಈಸಿಯುಂ ತಟಿನಿಯುಂ ಸೇರಲಾರದೆ
ಪರಿತಪಿಸುವ ಚಿತ್ರನೆ ಎಲ್ಲೆಲ್ಲಿಯುಂ. ಭಾರತ
ಸಂಸ್ಕೃತಿಯುಂ ಅಗಾಧ. ವೇದಾಂತ ಪರಿಮಳಂ
ಅಗಾಧ. ಪವಿತ್ರತಮ ನಾರೀಜನ ಧರ್ಮವುಂ
ಅಗಾಧ. ಆದೊಡೇಂ ಎಲ್ಲಮಿರುತಿರ್ದೆನಿಲ್ಲದ
ಮಾಳ್ಕೆಯುಲಿ ಜನಜೀವನಂ ನೀರಸಮಾಯುಮೇ!
ಭಾರತ ಸಾಮ್ರಾಜ್ಯದಲಿ ಯೋಗಿಗಳ ಕವಿಜನರ್
ದೇವಪುರುಷರ್ ಮಹಾತ್ಮರ್ ವಿದ್ವನ್ಮಣಿಗಳ್
ಸಂಜನಿಸಿ ರಾಷ್ಟ್ರೋದ್ಧಾರಕಾಗಿ ಹೋರಾಡಿ
ಪರಿಶೋಭಿಸಿ ಕಣ್ಮರೆಯಾದ ಪುಣ್ಯವಂತರ್
ಬೋಧಿಸಿದ ಸಂಜೀವನ ಧರ್ಮವದು ಗಾಳಿಯ
ಬೆನ್ನೇರಿ ಸಗ್ಗಮಡರ್ದುದೊ ಎನೆ ಎಲ್ಲೆಡೆಯುಂ
ಜನಜೀವನ ತೀವ್ರ ಕಲುಷಿತಂ, ಅಸುಂದರಂ.

ಎಂಟ್ರೆನ್ಸ್ ಪರೀಕ್ಷೆಯಲಿ ಅಗಣ ಸಂಯುಕ್ತ
ಪ್ರಾಂತ್ಯಕ್ಕೆ ಪ್ರಥಮ ಸ್ಥಾನಮಂ ಪಡೆದಳ್ ಬಾಲೆ.
ಮಹಿಳೆಯರ್ಗೆ ವಿದ್ಯಾಭ್ಯಾಸ ನಿಶಿದ್ಧಮಾಗಿರ್ದ
ಕಾಲಮಾನಮೆನೆ ಸಾಮಾಜಿಕ ಪಿತೃವರ್ಗದ ಕಿಡಿ
ಗಣ್ ಉರಿದುರಿದು ಮಲರ್ದು ಕೆಂಗಣ್ಣಾಗಿ, ಕಟು
ಮಾತುಗಳ ಬಾಣಗಳ್ ಚುಚ್ಚಿದುವು ಅರ್ಥಾತ್
ಮುಳ್ಳಿನಪೊಲ್. ಅಂತುಮಲ್ಲದೆಯುಂ ಮತಿಮಾಂದ್ಯದಿಂ
ಬಿಡುತೆಗಾಣದ ಸ್ತ್ರೀಕುಲಂ ಶಾಸ್ತ್ರ ಸೂತ್ರಗಳ
ಆಧಾರದೊಳ್ ಮನವಿಟ್ಟು ವಾಗ್ಬಾಣಾಜಲಂ
ಹರಿಸಿದರ್ .... ಗೃಹಿಣಿಯೈಸಿ ಗೃಹಿಣೀ ಪದಮಂ
ಅಂಗೀಕರಿಸದ ನಾಣ್ಗೇಡಿಯೆನೆ ದೂಷಿಸುತ

→

ನಿಂದಿಸಿದರ್. ಅಂತೊಂದು ಕ್ಷುದ್ರತರ ಸಮಾಜ
ಕ್ಷೇತ್ರಮಂ ಎದುರಿಸುವ ದುರ್ಯೋಗ ಬಲ್ ಭೀಕರ!
ಆದೊಡಂ ಹಿಂಜರಿದಳೆ? ಕುಗ್ಗಿದಳೆ? ಸೋಲ್ದಳೆ?
ವಿದ್ಯಾರ್ಜನೆಯಂ ಕೈಬಿಟ್ಟಳೆ? ಮತಿಮೌಢ್ಯದ
ಕೂರ್ಬಾಣಗಳಿಗೆ ಕಿವುಡಾಗಿ ವಿದ್ಯಾಧಿದೇವಿ
ಅಜನ ರಾಣಿಯಂ ಭಕ್ತಿಯಿಂ ಆರಾಧಿಸಳ್.

ಸಂಜೀವನವೇ ಒಂದು ದಿವ್ಯ ಕಲೆಯಾಗಿರೆ
ಬದುಕಿಗೊಂದು ನವ್ಯ ಮಾರ್ಗಯೋಗವ ಕಾಣಲೆನೆ
ಆಸ್ಥೆಯಿಂ ಧೈರ್ಯದಿಂ ಮುಂದೈದು ಅಲಹಾಬಾದ್
ವಿಶ್ವವಿದ್ಯಾಲಯಕೆ ವೇದ ಮೇಣ್ ಸಂಸ್ಕೃತ
ವಿದ್ಯಾಭ್ಯಾಸಂಗೈಯಲವಕಾಶ ನೀಡಿಮೆಂದು
ಪುರುಷ ಗಣ್ಯರೋಚಿತವಾದ ಕೋರಿಕೆಯಂ
ಮಂಡಿಸಿದಳ್, ಅಧಿಕಾರ ವರ್ಗದ ಕಿಡಿಕಾರ್ವ
ಕೆಂಗಣ್ಣ ಮುಂತೆ! ಆಗಳೇಂ ಸಾಮಾಜಿಕರ
ಅದ್ಭುತತಮ ಗೊಂದಣಂ? ಕಾಗೆಗಳ ಹಿಂಡಿಗೆ
ಕಲ್ಲೆಸೆದವೊಲ್ ಕಾಕಾಕರಿಸಿದುದು ಜನರಾಶಿ!
ಎಲುವಿಲ್ಲದಿಹ ನಾಲಗೆಯ ತುಚ್ಛೀಕರಣಂ
ನಡೆದತ್ತು ಎಡೆವಿಡದೆ. ಕೋಪದ ಕಿಡಿಗಳಂ
ಹರಿಸಿ ತೂತ್ಕರಿಸಿತು ಜನತೆ. ಪೆಣ್ಣೊಂದು ಸಂಸ್ಕೃತ
ವಿದ್ಯಾರ್ಥಿಯೆನೆ ಮುಂದೈದುದು ಘೋರ ಅಪರಾಧ-
ಧರ್ಮಾಂಘತೆ ಎನುತಲಿ ಪರಿಸರದ ಮನುಕುಲಂ
ಸಿಡಿದೆಳ್ದುದು. ಅತ್ತಲ್ ಪಂಡಿತ ವರ್ಗಮದು
ಅಬ್ರಾಹ್ಮಣಿಗೆ ಕಲಿಪುವುದೆಂತೆಂಬುವಾ ಧರ್ಮ
ಸಂಕಟಕೆ ಈಡಾಗಲ್ ಮನಕೊರೆವ ಭೈರಿಗೆಯೆ

→

ತಾನಾಯ್ತು ಸನ್ನಿವೇಶಂ. ಅಂದಿನಿಂ ಬಾಲೆ
ಬಗೆವಗೆಯ ಕುಮತಿಯ ಕುಠಾರಮಂ ಎದುರ್ಚುವ
ಶಿಲಾ ಕಾಠಿಣ್ಯಹೃದಯಿ ಇರುತಿರಲ್ ತಮ್ಮ
ಕೈಸಾಗದಿರ್ದ ಖಿಣ್ಣನಾಯ್ತಾ ಜನಕೋಟಿ.

ಅಂತಿಂತು ಭಂಗದಿಂ ಧೈರ್ಯದಿಂ ಆಸ್ಥೆಯಿಂ
ವಿಶ್ವವಿದ್ಯಾಲಯದ ಪ್ರವೇಶಮಂಬಡೆದು
ಕಲಿತು ಬಲಿಯುತೆ ಪ್ರತಿ ಹಂತಹಂತದಲಿಯುಂ
ಪ್ರಥಮ ಶ್ರೇಣಿಯ ಶಿಖರವನೇರುತ್ತೇರಿ
ವಿದ್ಯಾ ಸರಸ್ವತಿಯವೋಲ್ ರಂಜಿಸಿದಳ್ ವರ
ನಾರೀಮಣಿ. ನಿಚ್ಚಂ ಕಲಿಪೊಂದು ಇಚ್ಛೆಯುಂ
ಪಚ್ಚೆಯಾಗೆ 'ಪ್ರತಿಭಾನ್ವಿತೆ' ಎಂದೆಂಬ ಬಿರುದಿನ
ಪೂಮಾಲೆ ಕೊರಳ್ಗಿತ್ತುದು ತಾನೇ ತಾನ್ಯೈಸಿ.
ಆದರಾ ರಾಷ್ಟ್ರೀಯ ಉದ್ದಗಲದಲಿ ಹಬ್ಬಿ
ಹರಡಿದ ಜನ ಸಾಮ್ರಾಜ್ಯದಲಿರ್ಪ ನಿರಕ್ಷರೀ
ಪೆಣ್ಮಣಿಯರ ಬಾಳದು ಸಾಮಾನ್ಯಮೆನಲುಂಟೆ ?
ಕಣ್ಣಿರ್ದು ಕುರುಡಾದೊಡೆ ಎನ್ನೀ ವಿದ್ಯೆಗೇಂ
ಸ್ಫೂರ್ತಿ ? ಕಿಂಚಿತ್ ಪರಮ ಸೇವೆಯುಂ ಸಲಿಸಿದೊಡೆ
ಬಾಳಿಗೊಂದು ಗುರಿ, ಎನಲ್ ತನ್ನ ವಿದ್ಯಾಸ್ಫೂರ್ತಿ
ತೃಣವಾಗಿ ಋಣವಾಗಿ ತೋರ್ದುದು ಅಬಲೆಯರ ನಿಜ
ಉರಿಬಾಳಿನ ಕಡುಕತ್ತಲೆಯ ಮುಂದೆ. ತನ್ನಯ
ತನುಮನಗಳಿಗಡರಿಕೊಂಡಂತಿರ್ದ ವಿದ್ವತ್ತೆಯ
ಕೀರ್ತಿಯುಂ ಕಿತ್ತೊಗೆದು ವಿವಿಧ ಕಾರ್ಯಕಾರಣ
ಗತಿಯುಲ್ಲಿ ಸನ್ನದ್ಧಳಾದಳ್ ಮಹಾದೇವಿ
ವರ್ಮಾ. ಲತಾಂಗಿಯರ ಪಜ್ಜೆ ಪಜ್ಜೆಗಳನುಂ
ಬೆಳಕಿನೆಡೆಗೆ ನಡೆಸುವ ಪರಮಾರ್ಥಯೋಗದಲಿ

→

ಉಲ್ಲೇಖನ ಸಾಹಿತ್ಯಮಂ ವರ್ಚಿಸಿದಳತಿ
ಶ್ರದ್ಧೆಯಿಂ. ಆದರಾ ಗ್ರಂಥಸಾಹಿತ್ಯ ಮನೆ
ಮನೆಯಂ ಪುಗಲುಂಟೇ ಎಂಬೊಂದು ಸಂಕೆಯುಂ
ಮನವನಾವರಿಸೆ ಚಿಂತನಾವೇಶದಲಿ ದಿವ್ಯ
ಜ್ಞಾನದಿಂ ಕರ್ತವ್ಯ ನಿಷ್ಠೆಯಿಂ ಸ್ವಯಿಚ್ಛೆಯ
ಪರಾಕಾಷ್ಠೆಯಿಂ ಪತ್ರಿಕೋದ್ಯಮ ರಂಗಮಂ
ಪೊಕ್ಕಳ್. ಪತ್ರಿಕಾ ಸುದ್ದಿಯಲಿ ಸರಳೀಕೃತ
ಸುವಿಚಾರಮಂ ರಾಜ್ಯವ್ಯಾಪಿ ಹರಿಸಿ ಜಡಮನ
ಮತಿಗಳಂ ಅರಳಿಸುವ ಸಂಯೋಜನೆಯನನ್ಯ
ಗುರಿಯಿಂದೆ. ವರಭಾರತ ರಾಷ್ಟ್ರದ ಉಜ್ವಲೋ-
ಜ್ವಲ ಭವಿಷ್ಯಮಂ ಬಯಸಿ ಕಾತರಿಸಿದ ಮನಕೆ
ಸ್ತ್ರೀ ವಿದ್ಯಾಭ್ಯಾಸನೆ ಪ್ರಮುಖ ತಳಹದಿಯಾಯ್ತು.
ಎನಿತೆನಿತೊ ವಿದ್ಯಾವತಿಯರಿರುತಿರ್ದು ವಿಶಾಲ
ವಿಶ್ವಮಂ ಅರಿತು ನುರಿತೊಡಂ ಹಳೆಯ ಪಥವೇ
ಪಥಂ. ಇದಕೇಂ ಪರಿಹಾರಮೋ ಎಂದೆಂಬ
ಚಿಂತೆಯಲಿ ಸೋಲ್ವುದು ಮನಂ. ಮಹಾದೇವಿಯುಂ
ತನ್ನಾತ್ಮದ ಪ್ರವಾಹಮಂ ಸರ್ವತ್ರ ಸದಾ
ಹರಿಯ ಬಿಡುವೊಂದು ಮಹೋದ್ದೇಶ ಘನೀಕರಿಸೆ
ಮನದಿ, ಪತ್ರಿಕಾ ಸಂಪಾದಕತ್ವಕಿಳಿದಳ್.
'ಚಾಂದ್' ನಾಮಧೇಯುವನೊತ್ತು ಕಾಲೋಚಿತಂ
ಸಲ್ಲುವ ವರ್ತಮಾನ ಪತ್ರಿಕೆಯೊಂದು ಜನ್ಮತಳೆದು
ಸುದ್ದಿ ಸಾರಗಳ ಮಹಾಪೂರಮಂ ಹರಿಸಿದತ್ತು.
ವಿಕಲ್ಪಮತಿಯ ಕಲ್ಮಷ ಜೀವನದ ಕರ್ಮಗತಿಗೆ
ದರ್ಪಣವನಿಡಿವವೊಲ್. ಅನುದಿನಂ ಕಟು ಕಠಿಣ
ಶ್ರಮವಂ ಶ್ರಮಿಸಿ ಬೆವರಿಳಿಸಿದಳ್ ಕರುಣಾ →

ಹೃದಯಿ! ಪಗಲಿರುಳ್ ತಪವನೋಂತ ತಪೋನಿಧಿ !
ಸಂಸ್ಕೃತ ವೇದವೇದಾಂಗದಲಿ ಮುಳುಗೆದ್ದು
ಪ್ರಥಮ ಶ್ರೇಣಿಯ ಎಂ. ಎ. ಪದವಿ ಗಳಿಸಿದ ಸುಜ್ಞಾನಿ.
ಭಾರತ ಮಹಿಳಾವರ್ಗೀಯ ಸ್ತರದಲಿ ನಿಚ್ಚ
ಮುಂಚೂಣಿಯೊಳ್ ನಿಲ್ವ ಸತ್ ಕೀರ್ತಿ ಪರಿಮಳಂ
ಹಬ್ಬಿದುದು ದೂಷಿಪರ್ ಬೆಕ್ಕಸಂಬಡುವವೊಲ್.
ಸಂಸ್ಕೃತದ ಪಾಂಡಿತ್ಯದೈಸಿರಿ ಪ್ರಥಮ ಮಹಿಳಾ
ವಿದ್ಯಾವತಿ ಎಂಬುವ ಗೌರವಾದರಗಳ್ ನೀಡಿ
ಮಹಿಳಾ ವಿದ್ಯಾ ಪೀಠದ ಪ್ರಾಚಾರ್ಯೆಯ ಪಟ್ಟ
ಕಟ್ಟಿ ಅಧಿಕಾರ ಗದ್ದಿಗೆಯ ನೇರಿಸಿದತ್ತು.
ಮಹಾತ್ಮಾ ಗಾಂಧೀಜಿ ಮತ್ತಮಾ ಗುರುದೇವ
ರವೀಂದ್ರನಾಥ ಟಾಗೋರ್ ಪ್ರಣೀತ ಮನು
ಕುಲ ಸುಧಾರಣಾ ತತ್ವಾಧರಿತಮಿಹ ಪಾಠ
ಪ್ರವಚನಗಳಿಂದಲಿ ಸಂವೃದ್ಧಮಾದುದಾ
ಮಹಿಳಾ ವಿದ್ಯಾ ಪೀಠದ ವಿದ್ಯಾ ಸಾಗರ.
ಮಹಾದೇವಿ ಪ್ರಾಚಾರ್ಯೆಪದದ ಪರಿಶ್ರಮದಿ
ಪೆಣ್ಮಣಿಯರಿಂಗೆ ಜ್ಞಾನ ವಿಜ್ಞಾನಗಳರಿವು
ಬರಿಸಿ ಜ್ಞಾನವೇತ್ತರಂಗೊಳಿಪ ಪುರುಪು
ಸಾಗಿದುದು ವಿದ್ಯಾಪೀಠದ ಸಂಯೋಜನಾ
ಕ್ರಮ. ಸಂಗೀತ ಕಲೆ, ಸಾಹಿತ್ಯಕಲೆ ಚಿತ್ರ
ಕಲೆ ಮೇಣ್ ಕರಕುಶಲಕಲೆಗಳ ತರಗತಿಯುಂ
ನಿಯೋಜಿಸಿ ಮುಗ್ಧ ಮನಮತಿಗಳ ವಿಕಸನಮಂ
ಗುರಿಗೊಂಡು ವಿದ್ಯಾಲಯಮಂ ನವನಾಗರಿಕ
ಪಥವಿಡಿಸಿದಳ್ ಜೀವನಾದರ್ಶ ಯೋಜನೆಗೆ
ವಿಚಾರ ಶೀಲ ಚಿಂತನಮಂಥನಗಳಂ ವೆರಸಿ.

→

ಪರಮ ಪುಣ್ಯಾವನಿ ಮಹಾದೇವಿಯುಂ ನಿಚ್ಚ
ಆಹಾರ ವಿಶ್ರಾಂತಿ ನಿದ್ರಾದಿ ಸ್ವಹಿತಮಂ
ಲೆಕ್ಕಿಸದಿನಿತು ಶ್ರಮ ಸಾಧನೆಯಲಿ ಮುಳುಂಗಿ
ಮೈಮರೆಯುವಳ್ ಕರ್ತವ್ಯ ಪ್ರಜ್ಞೆಗೆ ಶರಣಾಗಿ.
ಭಾರತ ಮಹಿಳಾಮಣಿಯರ ಕರುಣಾಜನಕ
ಚಿತ್ರಮಂ ನೆನೆವಳ್ ಮನದಿ ಕಡು ಚಿಂತೆಯಿಂ.
ಆರ್ಥಿಕ ವೈಯಕ್ತಿಕ ಬೌದ್ಧಿಕ ವೈಚಾರಿಕ ಧಾರ್ಮಿಕ
ಮುಂತಪ್ಪ ಸತ್ ಚಾರಿತ್ರ್ಯಗಳಿಂದೆ ಪೂರ್ಣ
ವಂಚಿತರೈಸಿರೆ ಬಾಳುಬದುಕು ದುರ್ಭರಂ.
ದಿನಂ ತನ್ನನುಂ ತಾಂ ಪರಮ ನಿಸ್ವಾರ್ಥತೆಯ
ಘನ ಪ್ರೇಮದಿಂ ಸಮರ್ಪಿಸಿಕೊಂಬ ದೀನೆಯರ
ಕಣ್ಣೀರಿನ ಬಾಳಂ ಕಂಡು ಮರುಗಿ ಕರಗಿದ
ಮಿದು ಹೃದಯದ ಸದಯಿ. ತನ್ನಿಂದೆ ಅಷ್ಟಿಷ್ಟು
ಅಖಿಲ ಮಳಲ ಸೇವೆಯು ಸಲ್ಲಿದೊಡೆ ಈ ಬದುಕು
ಸಾರ್ಥಕ ಎಂಬೊಂದು ಗಂಭೀರ ಚಿಂತನೆಯ
ರುದ್ರಝರಿ ನರನಾಡಿಗಳಂ ಸೀಳುವಂದದಿ
ಹರಿವುದು ಶರೀರದಾದ್ಯಂತಂ. ತರಳೆ ತನ್ನ
ಮನದೊಳ್ ಪರಿತಪಿಸುವಳ್ ಕರುಣದಿಂ ನಿತ್ಯಂ
ನಿರಂತರಂ; ದುಃಖಜಲ ತುಂಬಿ ಭಾರವಾದ ಮರಿ
ಮೋಡವೇ ತಾನಾಗಿ, ಒಡಲೆಲ್ಲ ದುಃಖಮಯ,
ಚಿಂತನಾಮಯ. ವಿಚಾರಶೀಲಮಯ ವಿರಕ್ತಿ
ಭಾವಮಯ. ಇಂತಿಂತ ಮಯತೆಯಿಂ ತುಂಬಿದ ಮಯಿ.

ನಿರರ್ಥಕವಾಗಿ ಕಾಲದಲೆಗಳಲಿ ತೇಲಿ ಹೋಹ
ಅಂದಿನಾ ಕಾಲಮಾನದಲಿ ಪರಿಸರದ ಕವಿ

→

ಜನಂ ತಂತಮ್ಮ ಬಹುಮೂಲ್ಯತಮ ಕೃತಿಯಂ
ಪ್ರಕಾಶಂಬಡಿಸೆ ಕಠಿಣಾತಿಕಠಿಣವಾದುದು
ಪ್ರಕಾಶನ ಸಂಸ್ಥೆಗಳೊಡೆಯರ ದುರ್ಮಾನದಿಂ.
ಸ್ವತಃ ಕವಯಿತ್ರಿಯೈದ ಮಹಾದೇವಿಯುಂ
ಕವಿ ಬಂಧುಗಳ ಸಂಕಟ ಸಂಕಷ್ಟವನರಿತು
ಮನಗೊಂಡು "ಸಾಹಿತ್ಯಕಾರ್ ಸಂಸದ್" ಎಂಬ
ಸಂಸ್ಥೆಯೊಂದಂ ಸಂಸ್ಥಾಪಿಸುತೆ ಸತ್ ಸಾಹಿತ್ಯ
ಸಂಪದಂ ಪ್ರಕಾಶನ ಪಡಿಸಲನುಕೂಲಿಸಿ
ಕವಿಮಹೋದಯರ ಮಾನಸ ಪಕ್ಷಿಗೆ ನೆಮ್ಮದಿಯ
ಹಾಲ್ಮಂಡಿಗೆಯ ನೂಡಿಸಿದಳ್. ಶೋಕ ಭಾರದಿಂ
ಚಿಂತೆಯಿಂ ಕುಗ್ಗಿ ಕುಸಿದ ಕವಿಜನ ಗೋಷ್ಠಿಯುಂ
ತೋಷದಿಂ ನಗೆಮೊಗವರಳಿ ಕೃತಿ ಪ್ರಕಟನ
ಕಾರ್ಯದೊಳ್ ಕಂಡರ್ ಆತ್ಮ ಪ್ರವಾಹದಾ
ಸಹಜೈಶ್ವರ್ಯ ಚೈತನ್ಯ ವಾಹಿಯಂ ಹರಿಸಿ.
ಸಾರಸ್ವತ ಸಂಜೀವನ ತಪಸ್ವಿನಿಯ ಸತ್
ಸಾಹಿತ್ಯವಾಹಿ ಹರಿದುದು ಎಡೆವಿಡದೆ ಭಕ್ತಿ
ರಸಪೂರ್ಣವಾಗಿ. "ಆದುನಿಕ ಮೀರಾ" ಎಂಬ
ಪೆಸರ್ವೆತ್ತ ತಪಸ್ವಿನಿಯುಂ ಮೀರಾಬಾಯಿಯ
ಪಜ್ಜೆಯಂ ಅನುಕರಿಸಿ ನಡೆದಿರೆ ಎಡೆಗವಿಯಲಿ
ಭಕ್ತಿರಸ ಹರಿದತ್ತು ಕೋಡಿಯಾಗಿ. ಅನುಭವ
ಘನಿಸೆ ದಿನದಿನ ಸಾರಸ್ವತ ಲೋಕದಲಿ ದಿವ್ಯ
ತಾರೆಯಾಗೆಸೆದಳ್ ತನಗೆಣೆಯೇ ಇಲ್ಲದೊಲ್.
ಸಾಹಿತ್ಯ ಸುಗ್ಗಿಯಲಿ ಭಕ್ತಿರಸ, ಲೋಕಪ್ರಜ್ಞೆ
ಉಕ್ಕಿ ಹರಿಯುತಿರಲ್ ಜಳಜಳಿಸಿ ; ಪರಿಸರದ

→

ಸಹಚರಿಗಳ ಬಾಳಿಗೆ ಕತ್ತಲೆಗವಿಯೊಳ್ ಕರ
ದೀಪ ಬೆಳಗಿಸಿದಂತೆ ಕರ್ಮುಗಿಲಿನೆಡೆಯೊಳ್ ಸೆಳೆ
ಮಿಂಚು ಸುಳಿದಂತೆ ಹರಿದತ್ತು ಬೆಳ್ಳಿಂ ಬೆಳಕು.
ಅನಾಥರಿಗೆ ತಾಯಾಗಿ, ಸಹಚರಿಗಳಿಗೆ ನಿಜ
ಗೆಳತಿಯಾಗಿ, ವಿದ್ಯಾರ್ಥಿನಿಯರಿಗೆ ಗುರುವಾಗಿ
ಕವಿಬಂಧುಗಳಿಗೆ ತಾರೆಯಾಗಿ, ಸ್ತ್ರೀಜನರಿಂಗೆ
ಪೇಲ್ಪಂಕ್ತಿಯಾಗಿ ಬೆಳಗಿದ ಮಹಾದೇವಿ ವರ್ಮಾ
ಆಧುನಿಕ ಮೀರಾ ಪೆಸರಿಂಗನುಗುಣವಾಗಿ
ಬದುಕಿ ಬಾಳಿ ಸಗ್ಗಕ್ಕೆ ಸಂದ ಸರಳ ಜೀವಿ.

ನಿತ್ಯ ಖಾದಿ ಧವಳಾಂಬರಧಾರಿಣಿ, ನಿರಾಭರಣೆ
ನಿರಾಡಂಬರೆ, ಸ್ನೇಹಮಯಿ, ಭಕ್ತಿಭಾವಮಯಿ,
ಕಠಿಣವ್ರತನಿಷ್ಠೆ, ಪರಮ ಕಾರ್ಯನಿಷ್ಠೆ ಮೇಣ್
ಧರ್ಮನಿಷ್ಠೆ ಎಂಬುವ ಅಮಿತ ಗುಣನಿಷ್ಠೆಗಳ
ಸಂಜೀವಿನಿ ಮಹಾದೇವಿ ವರ್ಮಾ.

ಅಂದಿನ
ಕಾಲಮಾನದ ಕಾವ್ಯರಸಧಾರೆಯಿಂ ಹಿಂಜಿ
ವಿಶ್ಲೇಷಣೆಗೈದು ಪರಾಮರ್ಷೆಯಲಿ ಕಾಲ
ಕಾಲಜ್ಞರಿಗೆಂದ ನುಡಿಯಿದು "ಯುಗಿಯುಗೀಯ ಸವಾಲ್
ಲೇಖನ ಕೃಷಿಗಿಹುದು. ಅಂದಂದಿನ ರಾಜಕೀಯದ
ಶೋಷಣೆ, ಲೈಂಗಿಕ ಭೇದದ ಪಿಡುಗು, ಧಾರ್ಮಿಕ
ಸೊಗಡು ಎಲ್ಲವಂ ಎದುರಿಸಿ ನಿಲ್ವೊಡೆ ಅದುಭುತ
ಧೃತಿಯಿಂ, ಆತ್ಮೋನ್ನತಿಯ ತೇಜದಿಂ, ಸ್ವನಿಷ್ಠೆಯ
ಕಾವಿನಿಂ ಕವಿ ಕ್ರಾಂತಿಕಾರಿಯಾದಪುದಲ್ಲದೆ
ಕ್ರಾಂತದರ್ಶಿಯುಂ ತಾನಾದಪುದೆ ಸರ್ವತ್ರ

→

ಸಿದ್ಧಿ ! ಕ್ರಾಂತ ಭಾವದಿಂ ಸುಖದುಃಖಗಳುಂಬುವ
ಆಧುನಿಕ ಕಾಲೀನ ಸುಜ್ಞಾನಿ ಕವಿಗಳಿಗೆ
ಮಹತ್ತರವಮಾ ಪಂಥಾಹ್ವಾನ! ವ್ಯಕ್ತಿವ್ಯಕ್ತಿಯಿಂ
ಭೌತಿಕ ಪ್ರಪಂಚದಂಶಗಳ ಅನ್ವೇಷಣೆಯೇ
ಪರಮ ವಿಜ್ಞಾನ. ಸವಾಲ್ಗೆ ಸವಾಲಿಸಿದು
ಬದುಕುತೆ ಪ್ರಕೃತಿ ದಾಸ್ಯವಂ ಗೆಲ್ವೊಂದು
ಶಕ್ತಿಯಂ ಪಡೆದು ಗೊತ್ತು ಗುರಿಯುಮಿನಿತಿಲ್ಲದ
ಒಳಿತು–ಕೆಡಕುಗಳ ಮೇಣ್ ಉಚಿತಾನುಚಿತಗಳ
ಘರ್ಷಣೆಯನೆದುರಿಪುದೆ ನಿಜಶಕ್ತಿ. ಪ್ರಾಚೀನ
ಕಾವ್ಯ ಕಾನನದಿ ಪೂವಾಗಿ ತಾನರಳದೆಯೆ
ಪುಟ ನೆಗೆದು ಇಂದಿನೀ ವಿಜ್ಞಾನ ಯೋಗಕ್ಕೆ
ಶರಣೆಂದೊಡೆ ಇಕ್ಕಡೆಯುಲುಗಿನ ಕಡಿಗತ್ತಿಯು
ತೆರಂ ವಿನಾಶದ ಛಾಯೆ ಕಣ್ತಿವಿವುದೆ ದಿಟಂ. ಸಧ್ಯ,
ಭೌತಿಕಾಂಶವಮಂ ಅಧ್ಯಾತ್ಮಿಕ ಸ್ಫೂರ್ತಿಗೇರಿಸೆ
ಸಾಹಿತ್ಯ ಸೌಂದರ್ಯದ ಸತ್ಕಿರಣಗಳೆ ಸರ್ವತ್ರ
ಸಾಕ್ಷಿ."

ಬಗೆವಗೆಯ ಭಾವವಿಭಾವಗಳ ಕಟ್ಟುಸಿರ್
ಒತ್ತುತಿರೆ ಕೊಸಳ್ ನಿದ್ದೆಯನು ದೂರೀಕರಿಸಿ.
ರಮಣೀಮಣಿಯುಂ ನೆರೆ ನ್ಯೆನುರೆತು ಜಗಮರೆತು
ಧ್ಯಾನಗೀತೆಗಳಂ ವಿರಚಿಸಿ ಹಾಡಿ ಪಾಡುವಳ್.
ಸುರರಾತ್ರಿ ತಾಂ ಶರ್ವರಿಯ ತೊಳ್ಸೆರೆಯುಲಿಳಿದು
ದಿವ್ಯ ಪರಮಾನಂದದಿಂ ಮೆರೆಯೆ ಹಾಲ್ಬೆಳಕು
ಚೆಲ್ಲಿಸೂಸಿ; ಅಮೃತಮಯಮಾಗಿರೆ ಜಗತ್ತು
ಆನಂದತೋಷದಿಂ ಹೃದ್ಗಡಲು ಉಕ್ಕುಕ್ಕಿ

→

ಬರಲುರೆ ಪರಮ ಭಕ್ತಿರಸ ಹರಿವುದು ಅನುದಿನ
ಹೃದಯ ವಲ್ಲಭನಾದ ಪರಮಾತ್ಮನ ನೇಮದಿ.
ಒರ್ಮೆ ಭಕ್ತಿರಸ ಉಕ್ಕಿ ಹರಿದೊಡೆ ಇನ್ನೊರ್ಮೆ
ಶೋಕರಸ ಹರಿವುದು ಹೃದಯ ತುಂಬಿ. ಏಕಾಂತ
ಬಾಳು, ಏಕಾಂತ ಭಾವ, ಏಕಾಂತ ಚಿಂತನೆಯಲಿ
ಪೊಣ್ಮಿದುವೆನಿತೊ ಭಾವಗೀತೆಗಳ್. ತನ್ನನ್ನೆ –
ತನ್ನ ಜೀವನವನ್ನೆ ಪೂವೆಂದು, ಧೂಪವೆಂದು,
ದೀಪವೆಂದು, ಕಪ್ಪುರವೆಂದು ನಲ್ಮೆಯಿಂ ಬಲ್
ಪ್ರೀತಿಯಿಂ ಸಮರ್ಪಿಸಿಕೊಳ್ಳುತಲಿ ಎನ್ನನಲ್ಲದೆ
ನಿನಗರ್ಪಿಸಲೇನಿದೆ ಎನ್ನೊಳ್ ಎನುತೆ ಭಕ್ತಿ
ರಸಸೂಸಿ ಬಣ್ಣಿಸಿದ ಗೀತೆಗಳ್ ಪೊಣ್ಮಿದುವು
ಅನುನಯದಿ.

"ಹೇ, ದೇವ! ನಾಂಗೈದ ಒಳಿತು ಕೆಡಕು
ಪಾಪ-ಪುಣ್ಯಗಳನೆಲ್ಲವಂ ತವ ಶ್ರೀಪಾದ
ಪದುಮಗಳಲಿ ಒತ್ತೆಯಿೀವೆನ್ನೈ. ನೀಂ ಕನಿಕರಿಸಿ
ಪರಾಮರಿಸು! ನೀನೆ ಸನ್ಮಾರ್ಗವ ತೋರಿ ಕಡು
ಕತ್ತಲೆಯಿಂ ನಡೆಸು ಬೆಳಕಿನೆಡೆಗೆ. ಕೈಮುಗಿದು
ಕಾಲ್ಪಿಡಿದು ಬೇಡುವೆನ್ನೈ ದೇವಾಧಿದೇವಾ!"
ಎದೆಯಿಂ ಭಾವಗೀತೆ ಹರಿವತ್ತು ಕರುಣ ದ್ರವ್ಯ
ದ್ರವಿಸಿ ಹರಿವವೊಲ್, ನಾರೀಮಣಿಯ ಮುಖದಿಂ.

ಅಃ ಒಯ್ಯನೊಯ್ಯನೆ ಪಶ್ಚಿಮ ದಿಗ್‌ದೇಶಕೆ
ಇಳಿಯುತಿಹ ರವಿಯ ಅಷ್ಟಾಶ್ವಗಳ ಸ್ವರ್ಣರಥ
ಕೆಂಗಲಿಸಿ ಕನಕ ಕಾಂತಿಯು ಚೆಲ್ಲಿ ಸೂಸಿದುದು
ಜಿರ್ರೆಂದು ಜೀರ್ಕೊಳವಿಯುಲಿ ರಂಗೆರಚಿವಂತೆ!

ರುಕ್ಮರುಚಿರ ರಾಗದ ಕೆಂಬಿಸಿಲ್ ಕೋಲು
ಕೋಲ್ಮೈಸಿ ತರುಗಿಡಗಳ ಮಧ್ಯೆ ತೂರಿ ಬರುತಿರೆ
ಸುವರ್ಣ ಸಲಾಕೆಯೊಲೆಸೆದತ್ತು ರಸದೃಷ್ಟಿಗೆ.
ತನಿ ಗಾಳಿ ಕ್ರೀಡಿತ್ತು ಎಲೆ ಎಲೆಗಳಲಿ ನುಸುಳಿ
ಮರ್ಮರ ಮಿದು ಸ್ವರ ಹರಿಸಿ. ಗೂಡುಗಳನರಸಿ
ಅಲ್ಲಲ್ಲಿ ಸುತ್ತಾಡಿ ತರುಕೊಂಬೆ ರೆಂಬೆಗಳ
ಆಶ್ರಯಿಸಿದ ಮೈನಾ ಪಿಕಳಾರ ಕಾಮಳ್ಳಿ
ಗಿಳಿಗಳುಲಿದು ಸಾಂಧ್ಯಗೀತವಂ ಹಾಡುತಿದ್ದುವು
ಕೊರಳೆತ್ತಿ. ಸಂಧ್ಯಾಶಾಂತಿಯ ನಡುವೆ ರಾಗ
ವಾಹಿನಿ ಹರಿದತ್ತು ವಿಧವಿಧ ಕಂಠರುತಿಯುಲಿ.
ಅರುಣಾರುಣನ ಸ್ವರ್ಣ ಬಿಂಬ ಇಳಿದಿಳಿದು ಅಸ್ತ
ಗಿರಿಯ ಬೆಂಗಡೆಯುಲಿ ಕಣ್ಮರೆಯಾಗೆ ಸ್ವರ್ಣಮಯ
ಕಾಂತಿಶಾಂತಿಗಳ ಸಂಕ್ರಾಂತಿಯುಂ ನಡೆದತ್ತು.
ಆನಂದಮೋದವುಂ ಸೂಸುವಂತೆ, ಪಶ್ಚಿಮ
ದಿಗ್ ಭಿತ್ತಿ ಪರಿಶೋಭಿತಗೊಳಿಪ ಪಾಂಗಿನಲಿ.
ಪುಷ್ಪಕೋಟಿಯ ಹೂಗಂಪು ಸಾರುಂ ಸೊಂಪಿನ
ಪೆಂಪು ಮನಮುಂ ಮುಟ್ಟುವಂತಿರ್ದುದು ತಣ್ಣಗೆ.
ನೋಡುತಿರೆಯಿರೆ ಕನಕಕಾಂತಿಯು ಪೆಂಪಿನ ಹೊಳೆ
ಅಳಿವ ಮುನ್ನಮೆಯೆ ಕಣ್ಗೋಚರಿಸಿದುದಮೃತ
ಕಿರಣನ ರಜತ ಮಂಡಳಂ ಮಿಸುನಿಯ ರಸದೊಳ್
ತೇದ ಹಾಲಿನ ವರ್ಣವುಂ ದಿಶೆದೆಶೆಗೆ ಚೆಲ್ಲಿ.
ಮಂಜುಮಯ ಹಿಮರೋಚಿಯುಂಬುಧಿ ವೀಚಿಗಳ
ಮೇಲೆ ಓಲಾಡಿತು ಜಗತ್ತು ರಜನಿಯ ಸುಧಾ
ಸ್ವಪ್ನದಲಿ ತೇಲಿ. ಬೆಳ್ಳನೆ ಬೆಳುದಿಂಗಳ್ಗಡಲಿನ

ಪಿಂಚೆಯರ್ಮಾನ್ಯತ್ಯದಲಿ ಕಂಡ ಪರಿದೃಶ್ಯಮಾನ
ಸೌಂದರ್ಯತೇಂಕಾಡಿತ್ತಹಾ ಭಕ್ತಿಕಾತರ
ಪೂರ್ಣ ಹೃದಯ ತುಂಬಿ ಉಕ್ಕಿ ಹರಿವಂತೆವೋಲ್.
ಆ ಮಹೋನ್ನತ ಶೃಂಗಾರ ಶೈಲಿಯಂ ನೋನೋಡಿ
ಆನಂದಾಮೃತದ ಕಡಲಲಿ ಮುಳುಗಿ ತೇಲುತ್ತೆ
ಮೈಮನ ಪುಳಕಿತಳಾದಳ್ ಮಹಾದೇವಿ ವರ್ಮಾ.

ಬಗೆವಗೆಯ ಕಾರ್ಯಕಾರಣಂಗಳ ರುದ್ರಮಧುರ
ಚಿಂತನಾವೇಶವಾವೇಶದೊಳ್ ಕರ್ತವ್ಯ
ಭಾರದಲಿ ಮುಳುಂಗಿರೆ ಜೀವನಾನುಬಂಧಂ
ಪೆಣ್ ಜೀವನೋದ್ಧಾರಕಲ್ಲದೆಯೆ ಬೇರಲ್ಲಮೆನೆ
ಬೋಧೆಯನುಕ್ರಮದಲಿ ಸುಜ್ಞಾನದ ಸರಿಯಂ
ಸುರಿಸುವಳ್ ವರ್ಷಧಾರೆಯಂತೆವೋಲ್. ಗುರು
ಶಿಷ್ಯ ಸಂಬಂಧ ಪ್ರೇಮಮಯ, ಸ್ನೇಹಮಯಮಿರೆ
ದೈವಜ್ಞರಲಿ ಭಕ್ತಿಭಾವಮಯ, ಕಾವ್ಯಮಯ,
ಸಂಗೀತಮಯ, ಆರಾಧನಾಮಯ, ದೈನ್ಯಮಯ
ಇಂಥಿಂಥ ಅಮಿತಮಯತೆಗಳಿಂದೆ ಜೃಂಭಿಸುತೆ
ಸಾಮಾಜಿಕರ ಪ್ರಾಣಕುಡಿಗೆ ಮಿಂಚನೆಸೆಯುವ
ಕಾದಂಬಿನಿ. ಕಿರಿಯರಿಂಗೆ "ಜೀಜೀ" ಆಗಿ, ಹಿರಿ
ಸಹಚರಿಗಳಿಗೆ "ದೀದೀ" ಎನಿಸಿ ಮನು ಸಂಸ್ಕೃತಿಗೆ
ಸ್ವಚ್ಛ ಮಿಸುನಿ ಲೇಪವನೊರೆದ ಮನಮೋಹಿನೀ,
ನಿತ್ಯ ಕೆಸುವಿನೆಲೆಯ ಮೇಲೆಸೆವ ಶಿಶಿರ ಬಿಂದು
ತಾನಿರುವ ತೆರದಿ ಸ್ನೇಹಿತವನಿನಿತು ಬಯಸದೆ
ಸವಾಲಿಗೆ ಸವಾಲಾಗಿ ಬರ್ದುಕಿ ಸಾಮಾಜಿಕ
ದಾರ್ಷ್ಟ್ಯಮಂ ಗೆಲ್ದು ಉಚಿತಾನುಚಿತಗಳ ವರ್ಗೀ

ಕರಿಸಿದ ಮಹಾನ್ ಮಹಿಳಾಮಣಿ ಮಹಾದೇವಿ.

ಕಾಲಕಾಲದ ಅಮೂಲ್ಯ ಸಾಹಿತ್ಯ ದ್ರವ್ಯದ
ಕೃಷಿಯೆಸೆವ ಪಂಥಾಹ್ವಾನಮಂ ಎದುರ್ಚುವ
ಸಾಸದೊಳ್ ಕವಿಯು ಕ್ರಾಂತಿಕಾರೀ ಭಾವದಿಂ
ಸಂದೀಪ್ತ ಕಾವ್ಯಖಡ್ಗದಲುಗಂ ಬೀಸುವುದೆ
ಕಾರ್ಯ ಸಿದ್ಧಿ. ಸಂಜೀವನ ಸಿದ್ಧಿಂ.
ವ್ಯಷ್ಟಿಯಿಂ
ಸಮಷ್ಟಿಗೆ ಭೌತಿಕ ಪ್ರಪಂಚದಂಶಗಳ ನಿಜ
ಸ್ವರೂಪದರಿವು ಮೂಡಿಸುವುದರಲಿರ್ಪ ಶಾಂತಿ
ಸಮಾಧಾನ ಬಹುದೇಂ ಸ್ವಹಿತ ಸುಖ ಸಾಧನಾ
ರಕ್ತಿಯಲಿ? ಮನುಕುಲದುದ್ಧರಣಮೆ ಜಾನಿಕೆಗೆ
ಸುಖವಸ್ತು. ದಿವಸದವಸಾನ ಸಮಯದಿ ಚಿಂತನ
ಮಂಥನಕೆ ಪೆಣ್ಮಣಿಯರ ಕಂಬನಿ ತೊಡೆವೊಂದು
ಪ್ರಾರ್ಥನೆಯೆ ಇಷ್ಟದೈವದ ಪದತಲಕರ್ಪಿಸುವ
ಪುಷ್ಪಾರ್ಚನೆ. ಭಕ್ತಿ ಝರಿಯಲಿ ಹರಿವ ಪ್ರಾರ್ಥನಾ
ಸಂಗೀತಗಳಲಿ ದೈನ್ಯ ಶೋಕರಸ ಹರಿವುದು
ಎಣೆಯಿಲ್ಲದಂತೆವೊಲ್. ಕಾವ್ಯಧಾರೆಗಳಲ್ಲಿ
ಅಧ್ಯಾತ್ಮಿಕ ಚಿಂತನೆ, ಅನುಭಾವದಮೃತರಸ
ಧಾರೆಯೇ ಪ್ರಧಾನಮೈಸಿ ಹರಿದಿರೆ ಗದ್ಯ
ರಚನೆಗಳಲಿ ಯಥಾರ್ಥ ವಾದಕ್ಕೆ ಒತ್ತುಗುಡುವ
ಸಾಹಸಂ. ಪ್ರಾಚಾರ್ಯೆಯಾ ಸತ್ಯ ಸೌಂದರ್ಯಂ
ಮನಗೊಂಡ 'ಛಾಯಾವಾದ' ರಾಷ್ಟ್ರೀಯ ಹೃದಯಂ
ಮುಟ್ಟಿ ತಟ್ಟಿ ಸ್ಪಂದಿಸುವ ತೆರದಲಿ ಉತ್ಸಾಹ
ಚಿಮ್ಮುವುದು ಸರಳೀಕರಿಸಿದ ಸಂಜೀವನದ

→

ಸೌಂದರ್ಯದಲಿ. ಉಪನಿಷದ್ ಗ್ರಂಥಗಳ
ವೇದವೇದಾಂಗಗಳ್ ಮೇಣ್ ಉತ್ತರ ರಾಮ
ಚರಿತ ಇತಿ ಉದ್ಗ್ರಂಥಗಳ್ ಪ್ರಿಯಮಿರೆ ಸರ್ವದಾ
ಪಾರಾಯಣಂ ತಪ್ಪದು, ವಿಶ್ರಾಂತಿಗಿನಿತುಂ
ಸಮಯಾಸ್ಪದವಿಲ್ಲದ ಮಾಳ್ಕೆಯಲಿ. ಸಾವಿರದೊಂ-
ಭೈನೂರರವತ್ತೆರಡರಲಿ ನೆರೆರಾಜ್ಯ ಚೀನದ
ದುರಾಕ್ರಮಣ ಸಮಯದೊಳ್ ಸ್ವಜನರಂ ತಟ್ಟಿ
ಮುಟ್ಟಿ ಎಚ್ಚರಿಪ ನೇಮದಲಿ 'ಹಿಮಾಲಯ' ಎಂಬ
ಕವನ ಸಂಕಲನಂ ಪ್ರಕಟಮಾದುದು ಜನಗಣ
ಮನಮಂ ಮಿಡುಕಿಸುವ ಪಾಂಗಿನಲಿ. ಪ್ರಾಚಾರ್ಯೆಯ
ಪದದಿಂ ಉಪಕುಲಪತಿ ಪದಕೇರ್ದು ಜೃಂಭಿಸಿ
ಬಳಿಕ ಅಧಿಕಾಧಿಕ ಪದವಿ ಪ್ರಶಸ್ತಿಗಳಂ
ಪಡೆದು ಲೋಕ ಪ್ರಸಿದ್ಧಿ ಪಡೆದ ವಿವೇಚನಾ
ಶೀಲೆ ಸರಳೀಕೃತ ಜೀವನಾಲವಾಲದಲಿ
ಅನಭಿಷಿಕ್ತ ರಾಣಿ ದೀನದಲಿತರ ತಾಯಿ!

ಭವಭೂತಿಯುಂ "ಏಕೋ ರಸಃ ಕರುಣ
ಏವ" ಎಂದ ನುಡಿಗಟ್ಟಿನಲಿ ತಾಂ ಮುಳುಗೆದ್ದು
ಮನದುಂಬಿ ಹೃದ್ಗಡಲಿನಾಳದಿಂ ರಾಗಾನು
ರಾಗಮಂ ಸೂಸುವಳ್ ದೈನ್ಯರಸದಿಂ,

"ದೇವಾ,
ನಾನು ನೀರುದುಂಬಿದ ದುಃಖದಾ ಮರಿಮೋಡ.
ನಿನ್ನ ವಿಸ್ತೃತ ನಭೋಮಂಡಲದ ಆವಾವ
ಮೂಲೆಯೂ ಬೇಡವೆನಗೆ. ದುಃಖದ ಪೂರದಲಿ
ತೊಳೆವೆ ನಿನ್ನ ಪಾದ ಪದುಮಗಳಂ. ಇದಲ್ಲದೆ

→

ಇನ್ನೇನಿಹುದು ಪೇಳಿಕೊಳೆ ನಿನ್ನಬಳಿ ದೊರೆಯೆ !
ಎನ್ನಯ ಮನೋವೇದನೆಯ ಪರಿಚಯವಿದುವೇ.
ಬಾಳಿದುವೆ. ಇತಿಹಾಸವಿದುವೆ ಉಬ್ಬಿದೆ ನಿನ್ನೆ,
ಕರಗಿಹೋಗಿಹೆನಿಂದು ! ದೇವಾ ! ಕರಗಿ ಹೋಗಿಹೆ !
ಸಂಗೀತರಸ ಹರಿಯೆ ಧಾರೆಧಾರೆಯ್ಯೆಸುತ
ಜ್ವಲಂತ ಕಂಗಳ್ ಜ್ವಲಿಸುವುವು ನಿಡುಗಂಬನಿಯ
ಲೇಪನದಿಂ. ಕರುಣೆ ದಯೆ ತುಂಬಿದ ಮಹೋನ್ನತ
ಆಧ್ಯಾತ್ಮಿಕ ಪ್ರೇಮದ ನೆಲೆಯೊಳ್ ಗಗನ ಚುಂಬೀ
ಶೃಂಗಾರಮಯ, ವರ್ಣವರ್ಣಾಂತನುಯ ಶೃಂಗಾರ
ಗೋಪುರಗಳಿಂ, ವೈರಾಗ್ಯದ ವೈಜಯಂತಿಯಿಂ
ವಿಪ್ರಲಂಭ ವೇದನೆಯ ಪ್ರೇಮ ಮಾಧುರ್ಯದಿಂ
ಸಂಗೀತೆಗಳ ಹಾಡಿ ಪಾಡಿದ ಮಹದೇವಿಯುಂ
ನಿತ್ಯ ನಿರಂತರ ವಿರಹಿಣಿ. ಪರಮಾತ್ಮನೆ ನಲ್ಲನೆನೆ
ಆರಾಧಿಸಿ, ತವಿಸಿ, ಪೂಜಿಸಿದ ಪರಮ ಕವ-
ಯಿತ್ರಿಯಂ ಹಿಂದೀ ಭಾಷಾ ವಿದ್ವಾಂಸರುಂ
'ಮಹಾಶ್ವೇತೆ' ಎಂದೆ ಕರೆದು ಗೌರವಿಸಿದರ್
ಪರಮ ಕರುಣಾರಸಪೂರ್ಣ ವೈರಾಗ್ಯದ ಖನಿಯಂ !
ಆದರಾ ಮಹಾಶ್ವೇತೆಯ ವಿರಹಾಗ್ನಿಗೆ ಕೊನೆಯಿತ್ತು
ಕಟ್ಟಕಡೆಗೆ. ಆಧುನಿಕಳೀ ಮಹಾಶ್ವೇತೆಯ ವಿರಹ
ಅಂಗೋಪಾಂಗವುಂ ಸುತ್ತಿ ನೆಯ್ದುದು ಶೋಕರಸ
ಜಾಲವುಂ. ಉಜ್ವಲೋಜ್ವಲ ಪ್ರಖರ ಭಾವದಿ
ನೋವಿನ ಕೋಟೆಯುಂ ಮೂಡಿಸಿ ನಿಂದತ್ತು
ತಾಂ ಅರಿಯದ ಪಾಂಗಿನಲಿ. ಆದರದುವೆ ನಿಚ್ಚ
ಪ್ರಿಯಂ ಕವಯಿತ್ರಿಯ ಮನೋದಧಿಗೆ. ಬೇಸರ-

→

ದುಃಖ ಕಿನಿಸಿಗೆ ಇಲ್ಲದೆಯೆ ಮುಕ್ತ ಹೃನ್ಮನದಿಂ
ಸ್ವೀಕರಿಸಿ ಕಾಪಿಡುವಳ್ ಜತನದಲಿ. ಅದವಳ
ನಲ್ಲನ ಪರಮಕೊಡಿಗೆ; ಪ್ರೇಮದ ಪುರಸ್ಕಾರ,
ಮತ್ತದಂ ತಳ್ಳುವದೆಂತು ? ತಳ್ಳಿದೊಡೆ ನಲ್ಲನಂ
ಪ್ರೀತಿಯುಂ ನಶಿಸದೇಂ ? ಹಾ, ನಲ್ಲನಿಲ್ಲದೆಯೆ
ಬದುಕಲುಂಟೆ ? ಅವಂ ಕಹಿ ಕೊಟ್ಟರುಂ ಸರಿಯೆ. ಸಿಹಿ
ಕೊಟ್ಟರುಂ ಸರಿಯೆ. ಏನಿದ್ದರದು ನಲ್ಲನ ಬೆಲೆ.

ಎಲ್ಲಿರದ ಶೂನ್ಯತೆ ಹೃದಯ ಸಾಮ್ರಾಜ್ಯದಲಿ,
ಆ ಶೂನ್ಯದ ಮಹಾರಾಜ್ಞಿ ಮಹಾದೇವಿವರ್ಮಾ.
ಶೂನ್ಯದ ನೆಲೆಯುಲ್ಲಿ ತನ್ನ ಪ್ರಾಣದ ಕುಡಿಗೆ
ದೀಪವಂ ಹಚ್ಚಿ ದೀಪಾಂಜಲಿಯುನುರಿಸಿ ಬೆಳಗಿ
ದೀಪಾವಳಿಯುನಾಚರಿಪುದು ನಿತ್ಯದ ಕ್ರಮ.
ಉಲ್ಲೇಖಿಸುತ ಹಾಡುವಳ್, ಹಾಡುತ ಉಲ್ಲೇಖ
ವಾಹಿಯುಂ ಹರಿಸುವಳ್.

"ಆಪನೇ ಇಸ್ ಸೂನೆಪನ್ ಕೀ
ಮೈಂ ಹ್ಞೂ ರಾಜೀ ಮತವಾಲೀ ಪ್ರಾಣೋಂ ಕಾದೀಪ್ ಜಲಾಕರ್
ಕರತೀ ರಹತೀ ದೀಪಾಲಿ!"

(ನನ್ನ ಈ ಸೊನ್ನೆ
ತಲದಲಿ ನಾನು ಉನ್ಮತ್ತ ರಾಣಿ! ಪ್ರಾಣಗಳ ದೀಪ
ಬೆಳಗಿ ಮಾಡುತಿಹೆನು ದೀಪಾವಳಿ)

ಅನಿತಿನಿತು
ಕೈಬಿಡುವು ದೊರೆಯುಲಾ ಮಹಾದೇವಿ ಪ್ರಯಾಗದ
ಸುತ್ತಮುತ್ತಲಿನ ಹಳ್ಳಿಹಳ್ಳಿಗಳಿಗೆ ಕಾಲ್ನಡಿಗೆಯುಲ್ಲಿ
ನಡೆದೂನಡೆದು ಪಯಣಂಬೋದು ಅಲ್ಲಿನ ದೀನ

→

ಅಮಾಯಕ ಜನರ ಸೇವೆಯುಂ ಮೇಣ್ ರೋಗದ
ಬಂಧುಗಳ ಸೇವೆಯುಂಗೈದು ಉಪಚರಿಪುದು ಅನು
ದಿನದ ಚರಿ. ಹಳ್ಳಿಗೆ ನಡೆದು ಬರುತಿರೆ ತಮ್ಮಾಯು
ಪರಮೋದ್ಧಾರಕೆ ದೀಪಶಿಖೆಯೆ ನಡೆದೈತರುವ
ದೀಪಲಕ್ಷ್ಮಿ ಎಂದೆಂಬ ಪವಿತ್ರತಮ ನಂಬಿಗೆ
ದಲಿತರ್ದೆಯಲಿ. ಮುಗ್ಧ ಮುಖಭಾವದೊಳ್ ಅರಳಿ
ಪೂವಾಗುವ ನಗೆಯ ಮುಗುಳು ಕಂಡು ತಣಿಯುವುದು
ಸುದತಿಯ ಮನಂ. ದಲಿತರ ಬಾಳಿಗೆ ಚೆಂಬೆಳಕು
ಬೀರುವಳ್ ತಾನೆ ತಾನೈಸಿ, ಬದುಕಿನ ಸೇವೆಯು
ಪರಮ ಧ್ಯೇಯದಿ. ಸೇವೆಯುಮೊಂದಲ್ಲದೇನುಂ
ಬಯಸದಾ ಕಾವ್ಯಮಯ ಜೀವ ಒಂದರಮೇಲೆ
ಒಂದರಂತೆ ಗ್ರಂಥಗಳ ಸರಮಾಲೆ ಸುರಿದುದು
ಬುದ್ಧಿಮಾನ್ಯರಂ ನೆರೆ ಸೆಳೆಯುವಂತೆ. ರಾಷ್ಟ್ರೀಯ
ಪ್ರಶಸ್ತಿಗಳು ಒಲವಿನ ಪೂಮಾಲೆಗಳ ಸಹಿತ
ಗಮಿಸಿದುವು ದಿವ್ಯ ಗೌರವ ಭಾವದಿಂ, ಹಲಕೆಲವು
ರೀತಿಯಲಿ. ದಿನನಿಚ್ಚ ದಿನಾಂತ ಕಾಲೀನ
ಸುಖ ಶಾಂತಿಯಲಿ ಉಪನಿಷತ್ ವೇದಗಳ್ ಮೇಣ್
ಭಗವದ್ಗೀತೆ ಇತ್ಯಾದಿ ಉದ್ಗ್ರಂಥಗಳ್ ಸತ್ಯಸ್ವರೂಪಂ
ತೋರ್ಪುವೆನೆ ರಾತ್ರಿಯೊಳ್ ಸಲ್ಲುವ ಸ್ವಪ್ನ ಸುಧಾ
ಸೂತಿಯಲಿ ವಿಶ್ವ ಜಗತ್ತು ಮಧುಮಯಂ. ಅನು
ರಾಗಮಯಂ. ಕಾವ್ಯಮಯ ಮನಪಕ್ಷಿ ಮಮ್ಮಲಂ.

ಉಪಕುಲಪತಿ ಸ್ಥಾನಂ ಅಲಂಕರಿಸಿ ಸಲಿಸಿದ
ಸೇವೆಯುಂ ಅಪಾರ ಲಲನಾಮಣಿಯರ್ಗೆ. ಆವ
ಜನ್ಮದ ಸುಕೃತ ಫಲವೊ ಎನೆ ಶಿಷ್ಯಗಣದ

→

ಪುಣ್ಯ ಘನಿಸಿದುದು ಧೀಮಂತ ಗುರುವಿನ ದಿವ್ಯ
ಸಾನ್ನಿಧ್ಯದಿಂ. ಆತ್ಮ ಪ್ರದೀಪ್ತಿಯಂ ಸದಾ
ಮರೆತು ಕರದೀಪಕಾಗಿ ತಡುಕುವ ಭಗಿನಿಯರು
ದಿನದಿನಂ ಧೀಮತಿಯ ದೀಪ್ತಿ ಕುಡಿಕಟ್ಟಿದೋಲ್
ಸಾಧನಾರಂಗಕಿಳಿದರ್, ಗುರುವಿನ ಹೆಜ್ಜೆಯ
ಚಿನ್ಹೆಗಳನನುಸರಿಸಿ.

ರಾಷ್ಟ್ರೀಯ ಸ್ವಾತಂತ್ರ್ಯ
ಚಳವಳಿಯ ಮಹಾಂದೋಳನದಲ್ಲಿ ಮೈಕೊಡವಿ
ಭುಗಿಲೆದ್ದ ಜನಕೋಟಿಯೊಳ್ ತಾನುಮೊಂದಾಗಿ
ಸ್ವಾತಂತ್ರ್ಯ ಯಜ್ಞಕುಂಡದಲಿ ಮುಳುಗಿ ಸಕ್ರಿಯ
ಪಾತ್ರ ವಹಿಸಿ ಭಾರತ ಜನನಿಯ ಪದಸೇವೆಗೆ
ನಿಂದಳ್ ಬಹುಮುಖೀ ಪ್ರತಿಭೆಯ ವರತಪಸ್ವಿನೀ.
ಬ್ರಿಟಿಷರ ಸುಡುಗೋಲಿಗಳ ಘೋರತರ ನೊಳಗು,
ಸುತ್ತಮುತ್ತಲ್ ನೆತ್ತರ್ ಕಾರುತ ಚೀರುತ್ತೆ
ಸಾಯುವರ ರಣಗೋಳು, ಒಂದೆಡೆಯಲಿರುತಿರಲ್!
ಇನ್ನೊಂದೆಡೆಯಲಿ ರಾಷ್ಟ್ರಧ್ವಜವಾಂತು ನುಗ್ಗಲ್
ಓಡೋಡಿ ಬರುತೆ, ಭೀಕರ ಯಜ್ಞವೇದಿಯೊಳ್
ಏರಿ ನಿಲ್ವ ಧೀರಾತಿಧೀರ ಸ್ವಾತಂತ್ರ್ಯ ಸಿರಿ
ಯೋಧರುಗಳ ಕೆನ್ನೆತ್ತರಿನ ಸೇಚನೆ ಎಲ್ಲ
ಕಡೆಗಳಲಿ. ಕಂಬನಿಯ ರಣಗೋಳು ಪಗಲಿರುಳ್.
ಗತಿಸಿದವರ ಮೇಣ್ ಬಡಜನರ ನಿರಾಶ್ರಿತ
ಕುಟುಂಬದ ಭಂಗಬನ್ನಗಳ್ ಸುತ್ತಿ ಕೊರಳಂ
ಅದುಮುತಿರೆ, ಮನಮರುಗಿ ಎರ್ದೆಯಲಿ ಕಾರುಣ್ಯ
ದ್ರವ್ಯ ಕರಗಿ ನರನಾಡಿಗಳ್ ಸೀಳುವ ತೆರದಿ

→

ಹರಿದುದು ಶರೀರದಾದ್ಯಂತ; ಮಹಾದೇವಿಯುಂ
ಹುಮ್ಮು ಬಿಮ್ಮುಗಳ ಗಣಿಯಾಗಿ ರಾಜಕೀಯದ
ಅದ್ಭುತ ಅಖಾಡಕಿಳಿದಳ್ ಎಲ್ಲರೊಳಗೂಡಿ.
ನೊಂದು ನೀರಾದವರ ಕಂಬನಿಯ ತೊಡೆಯೆ ದಯೆ
ಕರುಣೆಯಿಂ ಕೊರಳ ಸೆರೆಯುಬ್ಬಿ ಬರೆ ಸುದತಿಯುಂ
ಆಹಾರ, ಹಣ, ಓಷಧಿ, ವಸ್ತ್ರಗಳ ಸಹಾಯ
ಒದವಿಸೆ ಹಣ ಸಂಗ್ರಹಿಸಿ ದೀನ ದಲಿತರ ಸತ್
ಸೇವೆಯಂ ಸಲಿಸಿದಳ್ ಮನಮುಟ್ಟಿ. ಬಹುಮೂಲ್ಯ
ಮಾನವೀಯ ಅನುಬಂಧದಿಂ, ಸರ್ವತ್ರ ಸದಾ
ಸೇವಾಮನೋವೃತ್ತಿಯುಂ ಮೇಣ್ ಅಪರಿಮಿತ
ಸಹನ ಶೀಲತೆಯುಂ ದಯೆ ಪ್ರೇಮಗಳಾಗರಕೆ
ಪೂರಕಮಿರೆ ಬದುಕು ಸುರಸುಂದರಮಾದತ್ತು.
ಹೃದಯ ಕುಂಡದಲಿ ಭಕ್ತಿಭಾವದ ರಸವುಕ್ಕಿ
ಘನಿಸಿ ಕಲ್ಲುಸಕ್ಕರೆಯಾಗುತಿರೆ ಮೈಮರೆತು
ಹಾಡುವಳ್ "ಹೇ, ಪ್ರಾಣವಲ್ಲಭನೇ! ನೀನೆನ್ನ
ಬಳಿಗೆ ಬಾರೆಯಾದೊಡೆ ಎಂತುಳಿವೆ ನಾನಿಲ್ಲಿ?
ನಿನಗಾನುರಿಪ ದೀಪ ಮೇಣಿಡುವ ಧೂಪವದು
ಎನ್ನ ಕಾವ್ಯ ಮಾಲೆಯೆ! ನುಡಿಗಳನೆ ಉರಿಸುರಿಸಿ
ಹಚ್ಚುವೆನು ದೀಪ ಜ್ಯೋತಿಯ. ನುಡಿಗಟ್ಟಲ್ಲದೆ
ಏನಿಹುದೆನ್ನೊಳು ಪ್ರಭುವೇ? ನೀನೆ ಸಿರಿನಲ್ಲ
ನೀನಹುದು ಹೃದಯೇಶ್ವರಾ! ನೀನೆ ಪರದೈವ!
ನಿನಗೆಂತು ಸಲಿಪೆನೆನ್ನ ಪ್ರೇಮದ ನಮನಮಂ
ನಿನ್ನ ನೆಲೆಯನರಿಯದೆ ಪರಿತಪಿಸುತಿಹೆನಿಲ್ಲಿ.
ಹೃದಯದ ಮೊರೆಯನಾಲಿಸಾಲಿಸಿ ಸ್ವೀಕರಿಸು

→

ಭಕ್ತಿ ಭಾವದ ನವುನವುಂ. ಯಾವತ್ಕಾಲಂ ಹೃತ್ ಕುಂಡಲಿನಿ ಭಕ್ತಿರಸದಿಂ ನೆರೆ ತುಂಬಿ ಕೋಡಿವರಿವುದು ನಿನ್ನನು ಧ್ಯಾನಿಸಲಲ್ತೇ ಸ್ವಾಮಿಾ?"

ಅನುಪವು ಭಾವಾವೇಶದಲಿ ಹರಿದ ರಾಗಾರುಣತಾನಂ ಮಿಡಿಸುವುದು ಮನಮನವ ಕರುಣರಸ ಉಕ್ಕೇರುವಂತೆ. ಕವಿ ಕಾವ್ಯದೀ ನಿತ್ಯ ನೇಮದೀ ಅನುಭಾವದೀ ನೇಹ ಸಿರಿ ಸಂಪತ್ತಿಯೀ ದಿವ್ಯ ಅಂತಃಶಕ್ತಿಯೀ ವರ ವಿರಹತಪ್ತವೀ ರಾಗರಸವೀ ಸಂಜೀವನ ತತ್ವದೀ ತವಪದತಲದ ಪರಮ ಧೂಳಿಯಲಿ ಹೊರಳಾಡಿ ನಲಿವುದು ನಿಜದುಃಖದ ಬಿಸುಸುಯ್ಲು ಹೊರಹರಿಸಿ, ಆತ್ಮ ವಿಶ್ವಾಸ ಧೃಢವಾದುದು ಪಜ್ಜೆಪಜ್ಜೆಯಲಿ. ಇಂತಿರೆ ತಪೋ ನಿದ್ರೆಯೊಳ್ ಸ್ವಪ್ನ ದರ್ಶನವೊ ಭಕ್ತಿದರ್ಶನವೊ ಅನನ್ಯ ಕಾವ್ಯದರ್ಶನವೊ ಅರಿವುದೆಂತೈ? ನಾರೀಮಣಿ ಕಂಡಳು ಅನುಭವ ರಸಂ ಹೊನಲಾಗಿ ಜಳಜಳಿಸಿ ಹರಿದು ಕತ್ತಲೆಯ ಕೊಲೆಗೈವ ಕಾಂತಿ ಪ್ರವಾಹವಂ. ಭಾವನೆಗಳ ಬೆನ್ನೇರಿ ದೂರ ಗವ್ಯದ ಪಥವನಿಡಿಯೆ ಜಗದ ಕಣ್ಗೆತ್ತುದು ಎಲೆಯ ಹೊದರಿನ ಕೋಗಿಲೆಯು ಸ್ವಚ್ಛಂದ ಶೀಲತೆಯಲಿ. ಆಗಳೇಂ ಒದವಿದ ಗೌರವಾದರದ ಸುರಿಮಳೆ? ಜ್ಞಾನಪೀಠದ ದಿವ್ಯ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಭಾರತ ಭಾರತಿ ಪುರಸ್ಕಾರ. ಮೇಣಿತರ ಬಗೆಬಗೆಯ

→

ಪ್ರಶಸ್ತಿಗಳು ಬಂದುವು ಸಾಲು ಸಾಲ್ಗೈಸುತೆ.

ಉಚ್ಚ ತರಗತಿಯ ಸ್ಥಾನದಲಿ ರಂಜಿಸಿ ದಲಿತರ
ಸೇವೆಯಲಿ ಮನವಿಟ್ಟ ಧೀಮಂತ ಮಾನಿನೀ!
ಸಾಹಿತ್ಯ ಸಂಜೀವನವ ಸಾರ್ವೈದು ಸುದೀರ್ಘ
ತಪಸ್ಸಾಧನೆಯಲಿ ಮುಳುಗಿ ಜೀವನ ಸುಮವಂ
ಭಗವಧಾರಾಧನೆಗೆ ಮುಡಿಪಿಟ್ಟ ತಪಸ್ವಿನೀ !
ದಿವ್ಯ ಜ್ಞಾನಮಯ ಪ್ರೇಮಮಯ ರಾಗರಸಮಯ
ಗೀತಗಾನಮಯ ಇಂತು ಬಗೆವಗೆಯ ಮಯಗಳ
ಹಾರವಂ ಸೂಡಿ ನೆರೆಮೆರೆದೊಪ್ಪಿದ ಭಾರತ
ಜನನಿಯ ಔರಸ ಕುವರಿ. ಭಾರತ ಸ್ತ್ರೀಯರ
ಬಾಳಿಗೆ ಬೆಳಕಂ ಬೀರಿದ ಜ್ಯೋತಿರ್ಧಾರಿಣಿ!
ಅಧಿಕಾರ ಪೀಠದಲಿ ತಾನಿರ್ದು ಡಂಬದಿಂ
ವೈಭೋಗದಿಂ ಮೆರೆದಳಿಲ್ಲ. ಸರಳೀಕರಿಸಿದ
ಸರಳ ಸುಂದರ ಜೀವನನೇ ಬದುಕಿಗೆ. ದರ್ಪಣ
ಪಿಡಿದು ಮೊಗವ ನೋಡಿ ಕೇಶವಂ ತೀಡುತ್ತೆ
ಸೊಗಸು ಗೈದಳಿಲ್ಲ. ಹಂಸತೂಲಿಕಾ ತಲ್ಪದಲಿ
ಪವಡಿಸಿ ಸುಮನಸ ಮೋಹದಿ ದಿವ್ಯ ಕನಸುಗಳ
ಕಂಡಳಿಲ್ಲ. ಬರಿಯ ಒರಟು ಒರಟಾದ ಹಲಗೆಯ
ಮೇಲೆ ಮಲಗಿ ಶರೀರ ದಂಡನೆಯಂಗೈದ ನೀರೆ.
ಆಧುನಿಕ ಯುಗದಲಿ ಸಂಜನಿಸಿ ವಿಶ್ವವಿದ್ಯಾ
ನಿಲಯದ ಪರಮ ಮೂಸೆಯಲಿ ಕರಗಿ ಪುಟವಿಟ್ಟ
ಅಪರಂಜಿಯೆ ತಾನಾದ ಅನನ್ಯ ಯೋಗಿನಿಯು
ಹದಿನಾರನೇ ಶತಮಾನದ ವಿರಾಗಿಣಿ ಮೀರಾ
ಬಾಯಿಯ ಪದ ಚಿನ್ಹೆಯನನುಸರಿಸಿ ಆಧುನಿಕ

→

ಮೀರಾ ಎನಿಸಿ ಹಾಡಿಪಾಡಿದ ದೇವದಾಸಿ!

ಓ ತಾಯೆ! ನಿನ್ನಮಲ ಪದತಲದಲಿ ಎನ್ನಯ
ತಲೆಮಣಿದು ಕೈಮುಗಿದು ನಮಿಸುವೆ ಭಕುತಿಯಿಂದೆ.
ಎನ್ನ ಮನಃಕಲ್ಪದಲಿ ನೆಲೆನಿಂದು ಕಿರುಕಾವ್ಯ
ಕಾನನದಲಿ ಮೊಗ್ಗಾಗಿ ಮೂಡಿ ದಳವಿರಿದಿಹ
ಧವಳಕಾಂತಿಯ ಸುಮಧುರ ಗಂಧಿತ ಮಲ್ಲಿಕಾ
ಕುಸುಮವೇಶಿನಿ ನಿನಗೆ ಮತ್ತೆಮತ್ತೆ ಮೇಣ್ಮತ್ತೆ
ಸವಿನಯ ಪೂರ್ಣ ವಂದನಂ!

— ೦ —

ಆಪರಿತೋಷಾದ್ವಿದೂಷಾಂ
ನಸಾಧುಮನ್ಯೇ ಪ್ರಯೋಗ ವಿಜ್ಞಾನಂ ।
ಬಲವದಪಿ ಶಿಕ್ಷಿತಾನಾಂ
ಆತ್ಮನ್ಯ ಪ್ರತ್ಯಯಂ ಚೇತಂ ॥
(ಕಾಳಿದಾಸೋಪಾಖ್ಯಾನಂ)

ವಿಷ್ಣು ಮಹದ್ ಮಾನಸ ಮಂದಿರೆ, ಪರಮ ವಾಣಿ,
ಆನಂದ ಮೋದಿನಿ, ಸಿರಿ ವಿಭವೆ, ತ್ರಿಭುವನ
ಕಲ್ಯಾಣಿ, ಭಾವಚಿಂತಾಖನಿಯೆ, ವರ ಮಧುರ
ವಾಗ್ದೇವಿ, ದಿವ್ಯ ವೀಣಾಪಾಣಿ, ಕವಿಕಾವ್ಯ
ಕಲಾಕಮಲೆ, ಶ್ರೀ ಶಿಖಿವಾಹನೆಯೆ, ಸರಸ್ವತಿ,
ವಿಶ್ವಂಭರೆ, ದೇವಿ, ತವ ಪಾದಪದುಮಗಳಲಿ
ಮಮ ಕಾವ್ಯರಸಮಂ ಹರಿಸಿ ಪೂಜಿಸಿ ನಮಿಪೆನ್
ತಾಯೆ, ದಯೆಗೈದೆನ್ನಯ ಶಿರಮುಡಿಯೊಳ್ ತತ್ತ್ರಳ
ತುಳಿದು ತಾಂಡವ ನೃತ್ಯವಂಗೈ ಈ ಜಡಮತಿಗೆ
ವೈದ್ಯುತ ನವಚೇತನ ರಸಭಾರೆ ಹರಿವನ್ನ.
ಹೇ, ಮಮಜನನಿ; ಕಾವ್ಯ ಕಾಮಿನಿಯೆ, ಸಾಹಿತ್ಯ
ಸಂಮೇಲನದಲಿ ಗಂಧಕುಸುಮವರಳುವೋಲ್ ವರ-
ವಿತ್ತೆನ್ನ ರಸಗಂಗೆ ಹರಿಸು ಸ್ವಚ್ಛವಾನಂದ
ಸಂಶೀಲತೆಯಲಿ, ಆನುಲಿವ ರಸಹೀನತೆಯ
ಗಾನವದು ಸರಸ ಸ್ವಾತಂತ್ರ್ಯಮಾಧುರಿ ಚೆಲ್ಲಿ
ಸೂಸಲಿ ಕನ್ನಾಡಿನ ಹೂವೆರ್ದೆ ಅರಳುವೋಲ್.

ಓ ಎನ್ನ ಕಲ್ಪನಾ ಸುಂದರಿಯೆ, ನಿನ್ನೊಂದು
ಕರುಣ ಪ್ರೇಮದಳ್ಕರೆಯ ಆಶೀರ್ವಾದವದು →

ಫಲಿಸೆ ಕರ್ಬಂಡೆ ಬಾಯೊಡೆದು ಗಾನರಸಮಂ
ಹರಿಸದೇಂ ನಿತ್ಯಯೋಗ ಮಾಯೆಯಲಿ ಮುಳುಂಗಿ?

ಕಾಲಾನುಕಾಲದ ಪುರಾಣೇತಿಹಾಸದೊಳ್
ವಿಜೃಂಭಿಸಿದ ಮಹಾಕವಿ ಕಾಳಿದಾಸನಾ
ಪುಣ್ಯ ನಾಮವದು ಸಾಹಿತ್ಯದ ಮಹತ್ ಕ್ಷೇತ್ರ
ಇರುವನ್ನಮಿರ್ಪುದೆಂಬುದು ಸತ್ಯಸ್ಯ ಸತ್ಯಕಣ!
ದೇವನದಿ ಗಂಗಾ ಸಲಿಲದ ಸ್ವಚ್ಛ ಸ್ಫಟಿಕ
ದರ್ಪಣದ ಮೇಲೆ ಮೇಘಗಳ ನೀಲವರ್ಣಂ
ಪ್ರತಿಫಲಿಸಿ ಸುನೀಲ ವರ್ಣಾಂತು ಜಳಜಳಿಸಿ
ಹರಿದತ್ತು ಜಲರಾಶಿ. ಬಂಡೆಬಂಡೆಗಳಿಂಗೆ
ತಾಗಿ ಬಂಡೆಳ್ದು ಅಪ್ಪಳಿಸಿ ಮುನ್ನುಗ್ಗಿ ಪರಿಯೆ
ರಾಗಾರುಣತಾನವದು ಚಿಮ್ಮಿದುದು ಚಿಲುಮೆಯ
ಪಾಂಗಿನಲಿ ಪ್ರವಾಹದಾದ್ಯಂತಂ. ಜಲಧಿಯ
ನಿರ್ಮಲ ಸುರ ದರ್ಪಣದಮೇಗಡೆ ಮೇಘಗಳ
ನೀಲ ವರ್ಣವದು ಪ್ರತಿಫಲಿಸಿ ಸುನೀಲಿಯಾ
ವರ್ಣಾಂತು ಪರಿವಳ್ ಥಳಥಳಿಸಿ ಜುಳುಜುಳಿಸಿ.
ಸರಸಾನ್ವಿತ ಸಲಿಲಂ ಧುಮುಧುಮಿಸಿ ಮಸಮಸಗಿ
ಹೊಸಗಿ ಭೋಂಕನೆ ಭೂಲೋಕದ ಪಾಪ ಪುಣ್ಯಗಳಂ
ತೊಳೆದು ಕೊಚ್ಚಿ ಕೊಂಡೊಯ್ಯುವ ಪುಣ್ಯವಾರಿಧಿ!
ಆವಲೋಕದ ಸ್ವರ್ಣ ಕಲಶವೊಡೆದು ತೆಕ್ಕನೆ
ಅಮೃತರಸ ಚೆಲ್ಲಿಸೂಸಿ ಜಲರಾಶಿಯಾಯ್ತೊ,
ಧರ್ಮರಸ ಹರಿದು ದಿವ್ಯ ವಾರಿಯೆ ತಾನಾಯ್ತೊ,
ವರ್ಣವರ್ಣಾಂತ ಕಾನನಲಕ್ಷ್ಮಿಯು ಬೆಳ್ನಗೆ
ಪಸರಿಸಿ ಜಲಧಿಯಾಯ್ತೊ, ನೆಲವೆಣ್ಣಿನ ಪುಣ್ಯಮೆ

ಉಕ್ಕಿ ಹರಿದು ನೀರಾಯ್ತೊ, ಬೃಹದ್ ಸಾಗರವೆ
ಸಂಕ್ಷಿಪ್ತ ವೇಶದಲಿ ಸಂಜೀವನ ಯೋಗಕೆ
ಪಕ್ವಾಗಿ ಮೆರೆದತ್ತೊ ಎನಲ್ ರಾರಾಜಿಸುವ
ದೇವನದಿಯ ಸುದೀರ್ಘ ಯೋಗದ ಸಲಿಲಂ ಮಿಗೆ
ಲೋಕದೊಳೆಲ್ಲವಗೆ ವು ಜೀವಕೋಟಿಗೆ ಪ್ರಾಣ
ದಾಯಿನಿ. ಪರಮೋಚ್ಚ ಅನುರಾಗದನುಮೋದಿನಿ!
ಗುಳುಗುಳಿಪ ಜಲರಾಶಿ ಯುಲಿ ಪೊಣ್ಮುವ ಬೆಳ್ಳಿಯ
ಮಣಿಗಳವೊಲ್ ತೋರುವ ಫೇನ ಪುಂಜದಲಿ ನೂರೆ
ಮುತ್ತುಗಳ ರಾಶಿ ರಾಶಿ. ಬೆಳ್ನೊರೆ ತೀರವಂ
ಮುತ್ತುತಿರೆ ಹಾಲಿನ ಪೊಳೆಯೊ ಎನೆ ಸುರ ಸುಂದರ
ವೇಶಿ. ವೇದಾಂತ ರಸಾಬ್ಧಿಯಾಗೆಸೆವ ಭಾರತದ
ಮಹದೈಶ್ವರ್ಯ ನಿಧಿ.
ಮುಂಬೆಳಗಿನ ತಣ್ಣನೆ
ತನಿಪೊಳ್ತಿನಲಿ ಮಹಾಕವಿ ಕಾಳಿದಾಸನುಂ
ಗಂಗಾನದೀ ತೀರಕ್ಕೈದು ಪ್ರಾತಃರ್ವಿಧಿಯ
ಧರ್ಮಕರ್ಮವಂ ತೀರ್ಚಿದಂ ಅನುಕ್ರಮದೊಳ್,
ಧ್ಯಾನ ತಪ ಜಪಾದಿಗಳಂ ವ್ರತ ನಿಷ್ಠೆಯಲಿ.
ಇಂದ್ರ ಮುಹೂರ್ತವ ಪಿಂತಿರ್ಕ್ಕಿ ಪ್ರಾತಃಮುಹೂರ್ತ
ಅಡರಿ ಬರುತಿರೆ ವನವಿಹಂಗಗಳ್ ಎಚ್ಚತ್ತು
ಎರೆಂಕೆ ಬಿದಿರ್ಚಿ ಪಟಪಟಿಸಿ ಆನಂದದಿಂ
ಅನುರಾಗ ಮೋದದಿಂ ಕೊರಳೆತ್ತಿ ಪಾಡಿದುವು
ಸುಪ್ರಭಾತಮುಂ ಕೋರಿ. ಬಾಲ ಕೋಮಲ ವರ
ಅರುಣಾರುಣನ ಶುಭಾಗಮನಮುಂ ನೆನೆನೆನೆದು
ಹರ್ಷ ಭಾವೋನ್ಮತ್ತತೆಯಲಿ ಪಾಡಿದುದು ಪಕ್ಷಿ

→

ಸಂಕುಲಂ ವಿವಿಧ ರಾಗಾನುರಾಗದಿಂದಲಿ.
ಕೂಗಿದುವು ಬನಗೋಳಿ. ಕೇಗಿದುವು ನವಿಲ್‌ಜೋಡಿ.
ಕಪಿವಳಗಂ ಚೀರಿಡುತೆ ಚಿರಿಚಿರಿಸಿದುವು ವೀರ
ಭಂಗಿಯಲಿ. ಮಹಾಕವಿ ಕಾಳಿದಾಸಂ ಕುಳಿತ
ಧ್ಯಾನಭಂಗಿಯಲಿ ಕೆಲಪ್ರೊಳ್ತು ಪರಿಸರವಂ
ಅವಲೋಕಿಸಿದಂ. ತನಿನೆಳಗಿನಲಿ ತಣ್ಣನೆಯ
ಹಿಮಗೈಗಳಿಂದೆ ಮುಟ್ಟಿ ಮುದ್ದಿಪ ಮಾರುತನ
ಶೀಟವದು ಚೆಲ್ವಾಯ್ತು ಮೈಮನಗಳಿಗೆ. ಕಾಳಿ
ದಾಸಂ ಪೆರ್‌ಬಂಡೆಯ ಮಂಡೆಯಿಂದಿಳಿತಂದು
ಧ್ಯಾನಮತ್ತ ಮನದಿ ಕವಿಕಾವ್ಯ ರಸಪಾನದ
ಪ್ರೋದ್ವಿಗ್ನ ಭಾವಪಸನೆಯ ಕಠಿಣ ಶೈಲಿಯಂ
ಅವಲೋಕಿಸುತೆ ವನಪಥವಿಡಿದಂ ಸುದೂರದ
ಪರ್ಣಕುಟಿಯಂ ಗುರಿಯೊಳಿರ್ಸಿ. ದಿಂ ದಿಮ್ಮನೆಯೆ
ಗಟ್ಟಿಸಿಡುವ ಪಜ್ಜೆಪಜ್ಜೆಗಳ್ ತಾಳಲಯ
ಛಂದೋಬದ್ಧತೆಯಲಿ ನಡೆದಿರ್ದುವು ಜೀವನ
ದೇಗುಲದ ಗುರುತ್ವಾಕರ್ಷಣೆಯು ಸೆಳೆಯುತಿರೆ
ದಿವ್ಯಪಥವಲಿ ಕಣ್ಣಿಡುವ ಅಗತ್ಯನು ಇಲ್ಲ.
ವನಾಂತರದಲಿ ಪರಸ್ಪರ ಸೌಹಾರ್ದ ಭಾವದಿ
ದುಷ್ಟ ಶಿಷ್ಟ ಮೃಗಗಳೊಗ್ಗಿನಿಂ ಬಾಳ್ದು ವರ
ಆನಂದ ಭೋಗದಿಂ ಜೊತೆಗೂಡಿ ಆಹಾರ
ಸಂಪಾದನೆಯಲಿ ಮನವಿಟ್ಟು ಆಡ್ಡಾಡುತ್ತಿ
ವನ ಪಥಕ್ಕೈನುವು ಕಣ್ಣಿದಿರಾಗಿ.

ವರ ಕವಿಯು
ಆನಂದ ತುಂದಿಲತೆಯಿಂ ನೋಡಿದಂ. ದೂರ

→

ಸಹ್ಯಗಿರಿ ಪದಪ್ರಾಂತ್ಯದಲಿ ಪಸುರುಂಡು ನೈ
ತುಂಬಿ ಸುಣ್ಮೈಯ್ಯ ಶೋಭೆಯಿಂ ಪರಿಶೋಭಿಸುವ
ವಿವಿಧ ಪ್ರಾಣಿವರ್ಗಂ ಕಣ್ಗೆಡ್ಡಮಾಗಿರಲ್
ನೈಮನ ಪುಳಕಿಸಿದತ್ತು. ಮಹಾಕವಿ ಚಿಂತನ
ಮಂಥನದಲಿ ನೆರೆಮುಳುಗಿ ಅಭಿರಾಮ ಭಂಗಿಯಲಿ
ನಡೆಯುತ್ತೈತಂದನ್ ಕುಟೀರಕೆ. ತಲೆವಾಗಿಲಲಿ-
ನಿಡುಗುಂಕುಮದ ಮಡದಿ ಎದುರ್ವೈದ. ಬಿಂದಿಗೆಯ
ಜಲಮಂ ಪತಿಯ ಬೊಗಸೆಗ್ಗೈಗೆ ಸುರಿದಳ್ ನಲವಿಂ.
ಕೈಕಾಲ್ ಮಜ್ಜನಂಗೈದು ಅಭಿಜ್ಞಾನ ಕವಿಯುಂ
ಉದಯಗಿರಿಯ ಜೂಡದಲಿ ಮೆಲ್ಲಮೆಲ್ಲನೆ ತುಳುಕಿ
ಚೆಲ್ಲಿದಂತೆ ಪಸರಿಸಿದ ತಿಳಿಬೆಳಕಿನೈಸಿರಿಯಂ
ಕಣ್ತುಂಬ ನೋಡುತ್ತೆ ಭಾವಾವಿಷ್ಟತೆಯಿಂದೆ
ನೈಮರೆತು ಧ್ಯಾನಾವಸ್ಥಿತನಾದಂ. ಪೊಳ್ತು
ಮೆಲ್ಲನುರುಳುತಿರೆ ಉದಯಮಾನೋತ್ಸವಾಚರಿಸಿದ
ಬಾಲರವಿ ನೀಲ ಭಿತ್ತಿಯ ಮುಗಿಲ ದಿಣ್ಣೆಯಂ
ಏರಿ ವಿಜೃಂಭಿಸಿದನ್. ಸಮುಜ್ವಲೋಜ್ವಲಿಪ
ಕನಕ ಕಿರಣಗಳ ರಾಶಿ ಮುತ್ತಿದುದು ಜಗತ್
ಕಾಂಡಮಂ. ನೋಳ್ಪಕಣ್ ಕುಕ್ಕುತಿರೆ ಕಿರಣದ್ಯುತಿ
ಮರಿತಾರೆ ಜೆಗಿದು ಹೊಂಬೊಳಲ್ ತುಂಬಿತೊ
ಮದ್ದಿಡಿದ ಮಣ್ಣುಡಿಕೆ ಸಿಡಿದೊಡೆದು ಪ್ರಜ್ವಲಿಸಿ
ಸುವರ್ಣಮಯವಾದುದೊ ಎನೆ ಬೆಕ್ಕಸಂಬಟ್ಟು
ನೋಳ್ಪ ತೆರದಲಿ ರವಿ ಉದಯಮಾನೋತ್ಸವದಿಂ
ಸೌಂದರ್ಯ ರಸ ಪರಿದುದಿಳೆಯೊಳ್ ಸತ್ಯಶ್ರೀಯಾಗಿ.
ಮುಂಬೆಳಕಿನ ಛವಿ ಕಿಂಡಿಕಿಂಡಿಯಲಿ ನುಸುಳ್ದು

→

ತೂರಿ ಒಳಗಡೆ ಪಸರಿಸಿರ್ದುದು ಎಳೆ ಎಳೆಯಾಗಿ
ತೈಲ ತುಂಬಿದ ದೀಪವರ್ತಿಕೆಯು ಕುಡಿ ಮಾಪಿ
ನಾಣ್ಚುವೊಲ್. ಆಗಳೇಂ ಮುಂಬಕ್ಕಿ ಸಂಕುಲದ
ಪರಮೋತ್ಸಾಹಮಂ ಪೊನ್ನ ಕಿರುಗೆಜ್ಜೆ ಸರಮಂ
ಗಿಲಗಿಲನೆ ಅಲುಗಿಸಿದ ಪಾಂಗಿನಲಿ ಪೊಣ್ಮಿರ್ದುದು
ರಾಗಾರುಣತಾನದೈಸಿರಿ ಭಕ್ತಿ ಭಾವದಲಿ.
ಸುಯ್ ಸುಯ್ಯನೆ ಸುಯ್ದುಯ್ದು ತೀಡಿಬಹ ಮಾರುತ
ಮಹೋದಯನುಂ ಎಲ್ಲೆಡೆಗಳಿಂ ನುಗ್ಗಿ ಬರುತೆ
ಹರುಷದಿಂ ವ್ಯೋಮನಗಳಂ ಮುದ್ದಿಸಿದಂ ನೆರೆ
ಮುಟ್ಟೆ ತಟ್ಟೆ ಪ್ರೇಮೋನ್ಮತ್ತತೆಯುಲಿ. ಪರ್ಣ
ಕುಟಿಯ ಕಿಂಡಿಕಿಂಡಿಗಳಿಂ ರಾಗಭಾವದಲಿ
ತೂರಿಬರೆ ಚಿಲ್ಲನೆ ನಡುಗಿಪಂತೆ, ರವಿ ಕಿರಣ
ದ್ಯುತಿಯುಂ ತಂಗಾಳಿಯೊಡನೆ ಸ್ಪರ್ಧೆಗೆತ್ತಿದೊ
ಎನೆ ಬೆಚ್ಚನೆ ಮುದ್ದಿಟ್ಟು ಬೆಳ್ಳಂ ಬೆಳಗಿರಲ್
ಸ್ವರ್ಗೀಯ ಸುಖಮಾಯ್ತು ತನಿಯೊಡನೆ ಬಿಸಿಬೆರೆತು.
ಪ್ರಜ್ಞಾನಿ ಕಾಳಿದಾಸ ಮಹೋದಯನುಂ ಒಳ
ಪುಗುತ್ತೈತಂದು ಬೂಜಪತ್ರ, ಲೇಖನಿಗಳಂ
ಕೈಕೊಂಡು ದರ್ಭಾಸನದೊಳ್ ಕುಳಿತು ಲೇಖನ
ಕೃಷಿಯೊಳ್ ಮನವಿಟ್ಟಂ. ಹೃದಯಕಲಶದಮೃತ
ವಾಹಿನಿ ಹರಿದುದು ಲೇಖನದೊರತೆಯಲಿ ಕಾವ್ಯ
ಧಾರೆಯೈಸಿ. ಮಿಸುಕದೆ ತದೇಕ ಧ್ಯಾನದಲಿ
ತದೇಕ ಚಿಂತನೆಯುಲಿ ನಡೆದುದು ಲೇಖನ ಕೃಷಿ.
ಪೊಳ್ತುರುಳಿದುದು ನಿತ್ಯ ಸಂಯೋಜನೆಯೈಸಿರಿ
ಚಕ್ರದಲಿ ಸಿಲುಕಿ ತನ್ನೊಂದು ಪಸ್ನತಿಕೆಯಂ

→

ಬಿಡದ ದಿಟ್ಟತನದಿಂ. ಪ್ರೋದ್ವಿಗ್ನತೆಯ ದೂರ
ದೀರ್ಘಯಾನದ ನಿರೀಕ್ಷಣೆಯ ಕಟು ಕಠಿಣತರ
ಶೂಲದನೊನೆಯಲಿ ತಿವಿದು ಇರಿವೊಲ್ ನುಗ್ಗುವಂ
ಕಾಲವಾಹಿ ತಾನದುಳ್ಳ ತ್ತಸಂತಾಚ್ಛನ್ನ
ಯಾತ್ರೆಗೆತ್ತು. ರೋಮಾಂಚನಗೊಳ್ವನಿತು ಹರ್ಷ
ರೋಚಕಂ, ಹಸಿಗಂಪು ತನಿಗಂಪು ಹೂಗಂಪು
ಸಮ್ಮಿಳಿತವಾಗಿ ಗಂಧಮಯವಾದುದು ದಿವ್ಯ
ಪ್ರಾತಃಸಮಯಂ. ನವಿಲುಗಳ್ ಕುಣಿಯೆ, ಕೊಂಚೆಗಳ್
ಅರಸಂಚೆಗಳ್ ಮಿಂಚುಳ್ಳಿಗಳ್ ನಲಿದು ತಣಿಯೆ
ಮಧುರವಾಗೆಸೆದತ್ತು ತನಿವೊಳ್ತು. ಬನಗಾಳಿ
ಬೀಸಿವೀಸಿ ಕಾರ್ಮುಗಿಲ್ಕಾಂತೆಯರ್ ಒಗ್ಗೂಡಿ
ಎಳೆ ನೇಸರಿಂಗೆ ತೆರೆಪಿಡೆಯೆ ಮಳೆ ತನಿಯುಂಬ
ಆಸೆಯಿಂ ಕೃಷಿಕರ್ ಕೃತಜ್ಞತೆಯಿಂದಲಿ
ನುತಿಸಿ ಮಣಿಯೆ, ತೃಣರಾಶಿ ಪಚ್ಚೆಯ ಪುಲಕದೊಲ್
ಮೈದೋರೆ ಸಂಭ್ರಮದಿಂ ನಲಿದುದು ಮನಮತಿ.

ಸತೀ ಚೂಡಾಮಣಿಯುಂ ಪತಿಯ ಬಳಿಗೈದು ಕುಳ್ತು
"ಆರ್ಯ, ನೀಮಿಂದು ಈಗಾಗಳ್ತೆ ಲೇಖನಿಯ
ಕೃಷಿಗೆ ತೊಡಗಿದುದತಿ ವಿಶೇಷನೆನಿಪುದೆನಗೆ. ಏಂ
ಸಮಾಚಾರವೋ?"

"ಕೇಳ್ಸೈ ಸತೀಮಣಿ, ಸಾಹಿತ್ಯಕ
ಚಿಂತನಮಂಥನಗಳ್ ನೆರಸಿ ಮನದಳೊಂದು
ವಿಚಾರ ಮೊಳೆಯುತೆಂದದನುಂ ಒಡನೊಡನೆಯೇ
ಉಲ್ಲೇಖಸದಿರ್ದೊಡದರ ನೆಲೆಬೆಲೆಯುಂ ಗುರಿ
ತಪ್ಪಿ ದಿಕ್ಕೆಡುವುದೆ ದಿಟಂ. ಆಶು ಕವಿತೆಯಂ

→

ಲೇಖಿಪುದು ಕವಿಸಮುದಕನುಗುಣಮಲ್ತೆ ಶುಭೆ!"

"ರಮಣ! ಪರಮ ಸಾಹಿತ್ಯಸಾಕ್ಷಾತ್ಕಾರವದು
ಸುಲಲಿತಮೆ ? ಎಂತದರ ಆವಿಷ್ಕಾರ ?"

"ಶುಭಾನನೆ !
ಕೇಳ್, ಸಾಹಿತ್ಯದಲಿ ಸಾಕ್ಷಾತ್ಕಾರಮೆಂದೆನೆ
ಅನುಭವರಸ ಘನಿಸಿ ಮನನಶಕ್ತಿವೆರ್ಚುತಿರೆ
ಮಂತ್ರೋಪಾಸಕಂಗೆಲ್ಲವುಂ ಸುಲಲಿತವಹುದು.
ಜ್ಞಾನರಸವಾಹಿನಿಯಲಿ ಮಿಂದೆಳ್ದು ಯೋಗದ
ತ್ಯಾಗದ ಸ್ನಾತನಾದಪುದೆ ಘನಮನ ರೋಚಕಂ.
ಶ್ರಾವಣಾಕಾಶದಲಿ ಗಡಣಿಸಿರೆ ಕಾರ್ಮೋಡ
ಮಂಜು ಮುಸುಕಿ ಜಿನುಗುತಿಹ ಸೋನೆಯ ಸುರಿಮಳೆಯ
ಹಿನ್ನೆಲೆಯೊಳ್ ಸಪ್ತವರ್ಣದ ಕಾಮನ ಬಿಲ್ಲಿನ
ಸೌಂದರ್ಯರಾಶಿಯೆಂತು ರಸದೃಷ್ಟಿಗೆ ಹಿತವೊ
ಅಂತಂತು ಸಾಹಿತ್ಯವದು ಬೇರೆವೇರೆ ದೃಷ್ಟಿ
ಕೋನಗಳ ಸತ್ಯಸ್ಯ ಸತ್ಯ ಸೃಷ್ಟಿಯ ರೂಪ."

ಪತಿಯುಂ ಅನುಭವ ರಸಾನ್ನವನುಣಿಸಿ ಬೀಗಿಸಿರೆ
ತನ್ನಿಂದೆ ಸಾಹಿತ್ಯ ಕೃಷಿಗಡಚಣೆಯೊದವಿ
ಕಜ್ಜಕ್ಕೆಡರ್ ಬಾರದಿರಲೆಂದು ಬಗೆದು ಮಡದಿ
ಕದಲಿದಳ್ ಅಲ್ಲಿಂದೆ. ಕುಟಿಯ ಪ್ರಾಂಗಣಕ್ಕೈತರೆ
ದೂರ ನೀಲಿಯ ದಿಗ್ ದೇಶದಲಿ ಬಾಲರವಿಗೆ
ಮಂಗಳಾರತಿಯುಂ ಬೆಳಗಿದಪಮೊ ಎನೆ ಕರ್ಪು
ವರ್ಣದಿಂದೆ ಕರಿ ಚುಕ್ಕಿಯೊಲ್ ಕಾಂಬ ಕಾಮಳ್ಳಿ
ಪಕ್ಷಿಗಳ ಜೋಡಿ ಪಾರುತಿರ್ದುವು ಸುಳಿಸುತ್ತಿ
ಮಂಡಲಾಕಾರದಲಿ ದಿವ್ಯಾಂಬರದೊಳ್. ಸವಿ

→

ಗೊರ್ಳಿಂಪಿನ ದನಿಯಂ ಹರಿಸುತಿರಲಾಗಾಗ
ಅನುರಾಗಮಯಮಾದುದು ಪ್ರಾತಃಮುಹೂರ್ತಂ.
ದೃಷ್ಟಿಕಕ್ಷೆಯಲಿ ಪ್ರಕೃತಿಯ ವೈಭವೋಪೇತ
ಸಂದೃಶ್ಯಮಾನ ಸೌಂದರ್ಯಂ ಜೃಂಭಿಸಿರ್ದುದು
ಮನಮೋಹನ ರೂಪಿನಲಿ. ನಸುವೊಳ್ತು ಪ್ರಕೃತಿಯ
ಆರಾಧನೆಯೊಳ್ ಮುಳುಗಿ ಕಣ್ಮನಂಗಳ ತಣಿಸಿ
ಬಳಿಕ ಮನವಿಟ್ಟಳ್ ದಿನಚರಿಯುಲಿ. ಅಂಗಣಕೆ
ಗೋಮಯಂ ತಳ್ತು ಗುಡಿಸಿ ರಂಗೋಲಿಯನೊರೆದು
ಸುಸುಂದರ ಚಿತ್ತಾರಮಂ ಚಿತ್ರಿಸಿ ತುಳಸಿಯ
ಪೂಜೆಗೈದು ಪೂಗಿಡಗಳಿಂಗೆ ಎದೆಯ ಪ್ರೇಮ
ವಾರಿಯಂ ಸುರಿವವೊಲ್ ನೀರುಣಿಸಿದಳ್ ಸುದತಿ.
ಪ್ರಾಂಗಣದ ಅಂಚಿನಲಿ ವರ್ಣವರ್ಣಾಂತ ಹೂ
ಹಿಲಾಲುಗಳಂ ಪೊತ್ತು ತಂಗಾಳಿಯಲೆಪದಿಂ
ನಲವಿಂ ತಲೆದೂಗುವ ಪುಷ್ಪವಾಟಿಯಲಿ ಗಿರಿ
ಮಲ್ಲಿಗೆ ಇರುವಂತಿಗೆ ಸಂಪಿಗೆ ಗುಲಾಬಿ ಬಿಳಿ
ಸೇವಂತಿಗೆ ಕಣಗಿಲು ಕನಕಾಂಬರ ಎಲ್ಲಂ
ವಿವಿಧ ರಂಗಿನಿಂ ಮೆರೆದಿರೆ ಮನಂನೆರ್ಚಿದಳ್
ಸನಾತನಿ ಪ್ರಾತಃಕಾಲೀನ ಶೋಭಾ ಶೈಲಿಯಲಿ.

ಪ್ರಕೃತಿ ಕವಿ ಮಹೋದಯಂ ಲೇಖನ ಕೃಷಿಯ
ಮಹಾಕಾರ್ಯದಲಿ ಮನವಿಟ್ಟಿರೆ ಎಡೆಯಿಲ್ಲದ
ಮಾಳ್ಕೆಯಲಿ ಸಾಗಿದುದು ಪಗಲುರುಳಿ ಬೈಗುವೊಳ್ತು
ಕವಿವರ್‍ನ. ಮಹಾಕಾವ್ಯದ ಕೊನೆಯ ಅಂಕಮಂ
ತೀರ್ಚಿ ಭೂರ್ಜಪತ್ರದ ಕಟ್ಟುಗಳ ಬಿಗಿಗಟ್ಟಿ
ಹೊದ್ದಿಗಿರಿಸಿದಂ. ಹೃನ್ಮನಂಗಳ್ ತೋಷದಿಂ

→

ಮಂದಾರ ಮಲ್ಲಿಗೆಯೊಲಾದುವು ಅರಳಿ. ಸಂಧ್ಯಾ
ದೀಪವರ್ತಿಕೆಯೊಳುರಿವ ಜ್ಯೋತಿರ್ಕುಡಿ ಮೆಲ್ಲ
ಮೆಲ್ಲನೆ ಚಲಿಸುತಿರ್ದುದು ಬೀಸಿಬಹ ತಣ್ಣನೆ
ತನಿಗಾಳಿಗೆ ಮೈಯೊಡ್ಡಿ ಕುಣಿಯುವ ಪಾಂಗಿನಲಿ.
ಮುಸ್ಸಂಜೆಯ ಸುಶಾಂತಿಯ ಮಂಗಲ ಛವಿಯಲ್ಲಿ
ತನುಮನಂ ಮುದಗೊಳ್ಳೆ ಕವಿಮಹರ್ಷಿಯುಂ ಸತಿ
ಚೂಡಾಮಣಿಯಂ ಕುರಿತಿಂತೆಂದಂ "ಎಲೆ, ಮಂಗಳೆ!
ಇನ್ನೆ ಬರಮೆನ್ನ ಲೇಖನಕೃಷಿಯಾಯ್ತು. ದಿನ
ದಿನಂ ತೀವ್ರ ಮಾನಸಿಕದಾವೇಗದಲಿ ಸೆರೆ
ಸಿಲ್ಕಿ ಚಿಂತನ ಮಂಥನಗಳಿಂದೆ ಕಟು ಕಠಿಣ
ವ್ರತದಲಿ ನಿಂದು ಸೋಲ್ದು ಬಳಲಿತು ಮನೋಗತಿ.
ಈಗಳೇನಾದೊಡೊಂದು ಸರಳ ಸರಸ ಪರಿಯಲಿ
ಖೇಲನಂ ಇರ್ದೊಡೊಳ್ಳಿತು ಚಿತ್ತರಂಜನೆಗೆ."

ಆ ಮಾತಿನಿಂದೆ ಮುದದಿಂ ತೋಷದಿಂ ಮಡದಿ
ತಾಂ ನಲಿನಲಿದು ತನ್ನೇಕಾಂತಗತಿಯಂ ತೊಡೆಯೆ
ಪಗಡೆ ಕಾಯಿ ಮೇಣ್ ಪಗಡೆಹಾಸುವಂ ತಂದು
ಮುಂದಿರ್ಕಿ,

"ಈ ಸರಳ ಸರಸ ಖೇಲನಂ ನಿನ್ನ
ಮನವೊಪ್ಪುದೇಂ?" ಎಂದಳ್ ಸತೀಮಣಿ. ಆಗಳ್
ಮಹಾಕವಿಯುಂ,

"ಆಯ್ತುದುನೆ ಒಳ್ಳಿತು ಇಂದಿನ
ಮನರಂಜನೆಗೆ."

"ನಿನ್ನೊಡನೆ ಸರಸ ಕೇಳಿಯಲಿ
ಪೊಳ್ತು ಕಳೆದುದೆಂದೊ? ಇಂದಿನೀ ಕಾಲದೊಳ್

→

ನಿನ್ನ ಲೇಖನ ಕೃಷಿಯಿಂದೆ ಸರಸ ವಿಲ್ಲಂ.
ಏಗಳುಂ ಗಂಭೀರ ಗತಿಯೆ !"

"ಕೇಳ್, ಅನನ್ಯ
ಅನುರಾಗಿಣಿ ! ನಿನ್ನಯ ಚಪಲ ಚಂಚಲ ಕಣ್ಣ
ನೋಟವೊಂದೆ ಎನಗೆ ಮನರಂಜನೆಯಲ್ತೇ ?
ಮತ್ತೇತರ ಖೇಲನವೇಕ್ಕುಂಮೆನಗೆ?"

"ರಮಣ !
ಅಂತಿಪ್ಪೊಡೆ ನಿನಗಾದತ್ತು ಮನರಂಜನೆಯೆನೆ
ಎನ್ನ ಗತಿಯೇಂ ಪೇಳ್ ?"

"ದೇವಿ, ಎನ್ನ ಬಿಡುವಿನ
ವೇಳೆ ರಂಜಿಸದೇಂ ನಿನ್ನ ?"

"ನಸು ವೊಳ್ತಲ್ತೆ ?"

ಪಗಡೆ ಹಾಸಂ ಹರವಿ ಈರ್ವರುಂ ಆಟದಲಿ
ಮನವಿಟ್ಟರ್. ಆಟವದು ಪುರುಪು ಪುರುಡುಗಳಿಂ
ಸಾಗಿದತ್ತು, ಅಭಿಜ್ಞಾನ ಕಾಳಿದಾಸಂ ಸತೀ
ಚೂಡಾಮಣಿಯೊಡಂ ನಗೆ ಬುಗ್ಗೆಯ ಮಾತುಗಳ
ಮಣಿ ಮುತ್ತುಗಳಂ ಚೆಲ್ಲಿ ಸೂಸಾಡುತೆ ಪಗಡೆ
ಆಟದಲಿ ಸಂಪೂರ್ಣ ಮುಳುಗಿ ಮೈ ಮರೆತಂ.

"ರಮಣನೆ, ಇಂದಿನೀ
ಆಟದೊಳ್ ಗೆಲ್ದೊಡಾಂ ಏಂ ಮನ್ನಣೆಯೆನಗೆ?"

"ಆಂ ಗೆಲ್ದೊಡೇನೀವೆ ಪೇಳೆನಗೆ ನೀಂಮೊದಲ್?"

"ಅಹಹ, ನೀಂ ಗೆಲ್ವುದೊಂದು ಸೋಜಿಗಮಲ್ತು. ನೀಂ
ಬಲ್ಲಿದಂ. ಬೌದ್ಧಿಕಸ್ತರದಲಂತುನುರಿತವಂ, ಎನಲ್ಕೆ
ಪಂಥದೊಳ್ ನೀಂ ನಿಲ್ವುದೇಂ ಪೆರ್ಚಳಂ? ಕೇಳ್, →

ರಮಣ! ಎನ್ನಂಥ ಅಜ್ಞಳಂ ಗೆಲ್ವುದರಲಿ ವಿಶೇಷ
ಮಿನಿತಿಲ್ಲ ಬಿಡು!"
ಕಾಳಿದಾಸಂ ಸತಿಯ ಮೊಗದಿ
ಚಿಮ್ಮಿವಂದ ಪ್ರಸನ್ನ ಭಾವದ ಸುಹಾಸಕೆ
ಪ್ರತಿಹಾಸಂ ಬೆಳಗಿ ಸರಸದಿಂ ಕೇಳಿಸಿದಂ,
"ಎನ್ನ ನಿಚ್ಚ ನಿಡುಗುಂಕುಮುದ ಬಂಧುರಯಾನೆ!
ಬಿಂಕದ ಸಿರಿವೆಣ್ಣೆ! ಎನಿತು ಸುಲಭದ ಮಾತೋ,
ನೀಂ ಕಾವ್ಯ ರಚಿಸದೇ ಇರ್ದೊಡೇಂ, ಇನ್ನಿತರ
ಕಾರ್ಯ ನಿರ್ವಹಣೆಯಲಿ ಎನ್ನ ಸರಿ ಸಾಟಿಯೈ."

ಪತಿಯ ಹೆಗ್ಗಳಿಕೆಯ ನಲ್ವಾತಿಂದೆ ಲಜ್ಜೆಯ
ರಂಗೇರಿ ನೆರೆ ನಾಣ್ಚಿಯುಂ ತೋರಗೊಡದೆಯೇ
ನುಡಿದಳಾ ಚಲ್ಲೆಗಾರ್ತಿ "ಓ! ನಿನ್ನೆತ್ತರಕೆ
ಏರುವೊಡೆ ಇನ್ನೆನಿತು ಜನ್ಮವೇಳ್ಕುಮೊ ಎನಗೆ.
ನಿನ್ನ ನಾನಿಂದು ಅರ್ಥೈಸಿದೊಡೆ ಸಾಲ್ಗುಮಲ್ತೇ?"
"ಅಃ, ಬಣ್ಣನೆಯ ಮಾತಿನಲಿ ಮರುಳುಗೈಯೆ ನೀನತಿ
ಜಾಣೆ!"
ಪತಿಯ ಮಾತಿಗೆ ನಕ್ಕು ನಲಿದಿರೆ ಅಮಿತ
ತೋಷದಲಿ ಪಗಡೆಯಾಟ ಸಾಗಿದುದು ಪುರುಷಿನ
ಮೋಜಿನಲಿ.
"ಮನಃಪ್ರಿಯಳೆ! ನಿನ್ನ ನಿತ್ಯದ
ಸೊಪ್ಪುಸದೆ ಉಂಡುದುದು ಸಾಕಾಯ್ತು; ಇಂದೆನೆಗೆ
ಹೋಳಿಗೆಯ ಮೃಷ್ಟಾನ್ನ ಭೋಜನಂ ವೇಳ್ಕುಂ!"
"ಅಂತಿಪ್ಪೊಡೆನ್ನಯ ಮನ್ನಣೆಯುಮೆಂತೊ ಜಾನಿಸಿ
ಪೇಳ್ಕೆ ಸಿರಿರಮಣ!"

"ಆಂ ಗೆಲ್ವುದೇ ದಿಟಮೆನಲ್
ಎಲ್ಲಿಯು ನಿಜ ಮನ್ನಣೆ ನಿನಗೆ?"
"ಅಃ, ಕಾವ್ಯರಸ
ಋಷಿರಸಿಕನೆ! ನಿನಗಿಹುದು ಕಾವ್ಯಕೃಷಿಯನುಭವ.
ಆದರೀ ಪಗಡೆಯಾಟದಲಿ ಗೆದ್ದೀ ಗೆಲ್ವ
ಎಂಬುದದು ಅನುಮಾನವಲ್ತೆ?"
"ಎಲೆ, ಮನದನ್ನೆ!
ರಾಮಾಭಿರಾಮೆ! ಆಂ ಸೋಲ್ವುದು ಪಗಡೆಯೊಳಲ್ಲ.
ನಿನ್ನ ಓರೆನೋಟದ ಸೂಜಿಗಲ್ಲು ಸುಲಭದಲಿ
ಎನ್ನ ಸೋಲ್ಗೆಡುಗುವುದು ಎಂದೊಡದು ತಪ್ಪಲ್ಲ.
ಅಂತುಮಲ್ಲದೆಯೆ ಈವಗೆಯ ಸೋಲು ನಿತ್ಯದ
ಸೋಲಲ್ಲದೆ ಬೇರಲ್ಲ."
"ನೀನೆಂಬುದು ಪರಮ
ಜಾಣ್ಮೆಯ ನಲ್ಮಾತು. ಎನ್ನ ಗೆಲ್ಮೆಯ
ಜಾಣ್ಮೆಯುಂ ಕೀಳ್ಮಾಡಲದು ಉಪಾಯಮೆಂದೆನೆ
ತಪ್ಪಲ್ಲ. ಬಲ್ಮೆಯಗಾರ ಗಡ!"
ವೇದಾಂತ
ಕವಿಮಹೋದಯಂ ಬಾಯ್ದೆರೆದು ಬಲು ಹರುಷಮಯ
ದನಿಯೊಳ್ ನಗುತಿಂತೆಂದಂ,
"ಹೇ, ಧವಳ ನೀಲ
ಕುಂತಳೇ! ನೀಂ ಗೆಲ್ದೊಡಾಂ ಈವುದೆಂದಿನಾ
ಬಲ್ಮೆ ತುಂಬಿ ತುಳುಂಕುವ ಮುದ್ದಿನ ಸೇಸೆ ಗಡ!"

"ಅಹಹ, ಏಂ ಮಾತೋ, ರಮಣ? ಏಗಳ್ ನೀನುಂ
ಇಂತೆಯೆ ಅಲ್ತೆ? ಬಣ್ಣನೆಯ ಮಾತುಗಳಲ್ಲಿಯೇ
ಮುಗಿಸಿದೊಡೆ ಮುಗಿಯಿತು ಪತಿಯ ಧರ್ಮ, ಇದಲ್ತೇ

→

ಜಗದ ಗಂಡರ ಭಂಡತನ!"

ಈರ್ವರುಂ ನಗೆಯ

ಗುಲ್ಲೆಬ್ಬಿಸಿರೆ ಆಟದ ಪುರುಪು ಗರಿಗೂಡಿತು.
ಚಳಚಳಿಸಿ ದಾಳಗಳ ಚೆಲ್ಲಿದಂ ಪ್ರಜ್ಞಾನ
ಕವಿ ಕಾಳಿದಾಸಂ. ನಿಜ ಪೊಗರೇರಿತು ಮನದಿ.

ದೂರನೆಟ್ಟದ ಪಚ್ಚ ಪಸುರ್ಗ್ಗಡಲೊಳ್ ಮೆರೆವ
ಪೆರ್ದೆರೆಗಳ್ ಸ್ಪರ್ಧೆಗೆತ್ತುವೊ ಎನೆ ತರತರದ
ವೀಚಿವೀಚಿಗಳೈಸಿ ಪ್ರಾಚೀ ದಿಗಂತವಂ
ತಬ್ಬುವೊಲ್ ದಿಶೆದಿಶೆಗೆ ಹಬ್ಬಿ ಹರಿದಾಯ್ತು ವನ
ಸಿರಿ ಮನೋದಧಿಗೆ ಆನಂದದೈಸಿರಿಯೊತ್ತಿ
ತುಂಬುವೊಲ್ ಚೆಲ್ವಾಯ್ತು. ಬಹು ವರ್ಣವರ್ಣಾಂತ
ಕುಸುಮತತಿ ದಳದಳಗಳಂ ಬಿರಿಬಿರಿದು ನಲಿಯೆ
ಮಧುಪಂಗಳುಂ ಮೇಣ್ ಭ್ರಮರಂಗಳುಂ ವನ
ಧಾತ್ರಿಯಲಿ ಬೆಳಗಿನಿಂದನ್ನೆಬರಂ ಬಂಡುಂಡು
ಹೂವೊಡಲ ಹೊಂಧೂಳಿಯಲಿ ಹೊರಳಿ ಹೊಗರೇರಿ
ಹಿಂಡುಹಿಂಡಾಗಿ ಹಿಂದಿರುಗಿ ಬಿಡದಿಗೈತರೆ
ಝೇಂಕರಿಸುತಿರ್ದುವು ದಿನನಿತ್ಯದ ಯಾತ್ರೆಯಲಿ
ಮೈನೆರ್ಚಿದವೊಲ್. ವನವಿಹಂಗಗಳ್ ಸಂಧ್ಯಾ
ರಾಗಮಂ ಸ್ವಚ್ಛಂದಮಾಗಿ ಹರಿಸತೊಡಗಿರೆ
ಸಾಯಂಸೊಬಗು ರಮ್ಯಾರುಣ ಜ್ಯೋತಿ ಉರಿಸಿದೊಲ್
ಚೆಲುವಾಯ್ತು. ದಿಶೆದಿಶೆಗಳಿಂದೈತಹ ಮಾರುತಂ
ತೀಡಿ ಮೈಮನಗಳಂ ಮುದ್ದಿಸಿ ಎಲೆ ಎಲೆಗಳ್
ಮರ್ಮರಿಸಿ ಜೋಗುಳಿಸಿ ಸಾರ್ದುದು ದಶದಿಶೆಯಂ
ಗುರಿಗೊಂಡು. ಕಮಲಿನಿಗೆ ಮೊಗಬಾಡಿ ಮುದುಡುತಿರೆ
ಕೋಗಿಲೆಯ ಮೃದುಸ್ವರಂ, ಗಿಳಿಗಳಿಂಡುಗಳ →

ಗಳಹು, ಕಾಜಾಣನಿಂಚರಂ, ಮಡಿವಾಳಗಳ
ನಿಡುಸರಂ ಮೇಣ್ ವಿವಿಧ ಪಕ್ಷಿಗಳ ವಿಧವಿಧದ
ಕೂಜಿತಂ ಫಾಲ್ಗುಣೀ ಸಂಧ್ಯಾರಾಗಮಂ ನೆರೆ
ಮಧುರಮಯಗೊಳಿಸಿರ್ದುವು ತುಮುಲಿತ ದನಿಯಿಂದೆ.
ಪಡುವಣ ದಿಗ್‌ದೇಶದೊಳ್ ಶೋಭಾಶೈಲಿಯಲಿ
ಅಸ್ತಮಾನ ಸೌಂದರ್ಯಧಾರೆ ವಿಜೃಂಭಿಸಿರೆ
ಧರಾತಲಂ ಚೆಲುವಾಯ್ತು. ಸ್ವಚ್ಛಂದಮಾನಂದ
ಯೋಗದಿಂ ಲೀಲಾಮಯವಾಯ್ತು ರಸದೃಷ್ಟಿಗೆ.

ಸಂಧ್ಯಾಸಮೀರನೊಯ್ಯನೊಯ್ಯನೆಯೆ ಬೀಸುತೆ
ತಣ್ಣನೆಯ ತನಿಯೊತ್ತಿ ಮೈಮನಗಳಂ ಮುಟ್ಟಿ
ಮುದ್ದಿಸುತಿರಲ್ ಪಗಡೆಯಾಟವದು ಪುರುಪಿನಿಂ
ಸಡ್ಡೆಯಿಂ ನಡೆದತ್ತು ನಗೆವಾತಿನ ಸರಿಸುರಿಸಿ.
ಕವಿದಂಪತಿಗಳ ಮಾನಸ ಮಂಡಲಕೆ ಕಾಯ
ಕಲ್ಪಗೈವಂತೆವೊಲ್. ಎಂದಿಲ್ಲದ ಬಿಡುವಿನ
ಸುರಮ್ಯತಮವೊಳ್ತಿನಲಿ ರಸಸ್ಫೂರ್ತಿಯುಕ್ಕಿ
ಹರಿದುದು ಸುಖಾನಂದ ಮೋದಮಂ ಮನದುಂಬಿ.

ವರುಣ ದಿಗ್ದೇಶದಲಿ ಮೈಗೊಂಡು ಪೊನಲ್ವರಿವ
ಸರಸ್ವತೀ ನದೀಕೂಲದೊಳ್ ನೆಲೆಗೊಂಡ ಕವಿ
ಭವಭೂತಿಯ ಆಶ್ರಮದಿಂ ವಿಶ್ವಮುಖನೆಂಬ
ಶಿಷ್ಯವರೇಣ್ಯನೈದನ್ ಅದೇ ಇನಿವೊಳ್ತಿನಲಿ.
ವನವರ್ತ್ಮದಿಂ ಪ್ರಾಂಗಣದಂಚಿಗೆ ಪದಾರ್ಪಣೆ
ಗೈದಾಗಳ್ತೆ ದೃಷ್ಟಿಕಕ್ಷೆಗೆತ್ತುದು ನಲ್‌ದಾಣಂ.
ಸಾಯಂ ಶಾಂತಿಯಲಿ ಮಿಂದ ಕುಟೀರವದು
ಸ್ವರ್ಗದಾಣದಿಂ ಸಿಡಿದು ಬಿಳ್ದವೊಲೆಸೆದತ್ತು →

ನೆಟ್ಟ ನಿಟ್ಟಾಲಿಗಳಿಗೆ. ಅಃ, ಏಂ ಪ್ರಶಾಂತ
ಪ್ರಸನ್ನ ವಾತಾವರಣಮೊ ಎಂದಚ್ಚರಿಯಲಿ
ಪಜ್ಜೆಯಂ ಕೀಳದೆಯೆ ನೋಡಿದನ್ ನಿಂತೆಡೆಯಲಿ !
ಕಣ್ಸೆಸೆದುದು ದಂಪತಿಗಳ ಮೋಜಿನ ಆಟಂ.
ಮನಮತಿಗಳಲಿ ತಟ್ಟನೆ ಮಿಂಚಿದೊಂದು ಪ್ರಶ್ನೆ
ಈಗಳೇಂ ಗೈಯಲಿ? ಪಜ್ಜೆ ಮುಂದಿರಿಸಲೇ? ಅಥ
ಹಿಂದಿರಿಸಲೇ? ಮುಂದಿರಿಸಿದೊಡೆ ಸತಿಪತಿಗಳ
ರಸಗಳಿಗೆಯಂ ಕಿಡಿಪುದಲ್ತೆ? ಎಂಬೊಂದು ಕಟು
ಚಿಂತೆ ಮನದಿ ಮೂಡಿ ಕದಲದೆ ನಿಲ್ಲಲಾಚಣಂ
ವೇದಾಂತ ಕವಿ ಕಾಳಿದಾಸನ ಕಣ್ ದಿಟ್ಟಿಯು
ಹರಿಯಲತ್ತ ಕೇಳಿಸಿದನ್ "ಏನ್ಯೆ ತಮ್ಮಾ? ಈ
ಪೊಳ್ತಿನಲಿ ಎಲ್ಲಿಂದೈದೆ? ಏಂ ವಿಚಾರಂ?
ಏನಂದುದಿಲ್ಲಿಗೆ?" ಪ್ರಶ್ನೋಪಪ್ರಶ್ನೆಗಳೇಳೆ
ಪ್ರೌಢವಟು ಆನಂದ ಭಾವದಿಂ ಭಕ್ತಿಯಿಂ
ತಲೆಬಾಗಿ ಕೈಮುಗಿದು ವಿನಯದಿಂ ನುಡಿಸಿದಂ,

"ಅಯ್ಯಾ, ಕವಿಸಾರ್ವಭೌಮನೇ! ತಮ್ಮಿಂದಿನೀ
ರಸಗಳಿಗೆಯಂ ಪಾಳ್ಗೆಯ್ಯಲಾನೊಲ್ಲೆಂ. ನಾಳೆ
ಮತ್ತೆ ಬಂದಪೆಂ ಕ್ಷಮಿಸಿ."

"ಅಂತೇಂ ಬಗೆಗೆಟ್ಟೆ?
ಈ ಪಗಡೆಯಾಟಂ ಬರಿದೆ ವಿನೋದಕಲ್ತೆ?
ಇದರೊಳೇಂ ಪೆರ್ಚಳವ ನೀಂ ಕಂಡೆ? ಬಾರಯ್ಯ,
ಸಂಕೋಚಮಂ ಬಿಟ್ಟು."

ಆ ವಾತನುಂ ಕೇಳ್ದು
ಶಿಷ್ಯಂ ಮನಕೆ ಧೈರ್ಯಮಂ ತುಂಬಿಕೊಳ್ಳುತ್ತೆ

→

ಕೆಲ ಹೆಜ್ಜೆ ಮುಂಬರಿದು ಬಿತ್ತರಿಸಿದಂ "ಅಯ್ಯ,
ಪ್ರಕೃತಿ ಕವಿ ಮಹೋದಯನೇ! ನಿಮ್ಮ ಅನನ್ಯ
ಉದಾರ ಹೃದಯವಂತಿಕೆಗೆ ನಮ್ರ ನಮನಗಳ್,
ಆದೊಡಂ, ಎನಗಿಂ ಸಂಕೋಚ ಬಿಡದು, ಎನೆ
ತಪ್ಪಲ್ಲ."

ಎಂದ ಶಿಷ್ಯನುಂ ಅತಿ ದೈನ್ಯದಿಂ
ವಿನಯದಿಂ ತೋಷದಿಂ ಕೈಮುಗಿದು ಕೇಳಿಸಿದಂ,

"ಅಯ್ಯಾ, ಕವಿವರ್ಯನೆ! ತಮ್ಮಾಪ್ತ ಗೆಳೆಯ ಕವಿ
ಭವಭೂತಿಯುಂ ತನ್ನ ಪೊಸ ಕಾವ್ಯವಂ ನಿಮ್ಮ
ಅವಗಾಹನೆಗೆಂದೆನ್ನ ಕೈಯೊಳ್ ಕಳಿಪಿಹನ್.
ಇದೊ, ನೋಡಿ! ಇಲ್ಲಿದೆ ಅವರ ಮಹಾ ಕಾವ್ಯಂ!"

"ಓ, ಅಂತೇಂ? ಬಾರಯ್ಯ ಶ್ರದ್ಧಾವಂತ ವಟುವೇ!
ಈಗ ನೀನೆನ್ನ ಬಳಿ ಕುಳ್ಳಿರ್ದೋದಿ ಪೇಳ್ದೊಡೆ
ಆನೀಗಳ್ತಿನ್ನಭಿಮತವ ತಿಳಿಪುವೆಂ ಕಣಾ!"

ಮಡದಿ ಚೂಡಾಮಣಿಯುಂ ವಟುವಂ ಸುಸ್ವಾಗತಿಸಿ
ದರ್ಭಾಸನವನಿತ್ತು ನಲ್ ಮಾತುಗಳಿಂದಲಿ
ಕುಶಲಪ್ರಶ್ನೆಗೈದ ಬಳಿಕ ಪಾಲ್ಪಣ್ಣುಗಳನಿತ್ತು
ಅತಿಥಿ ಸತ್ಕಾರಂಗೈದಳ್ ಪ್ರೀತ್ಯಾದರದಿಂ.

"ನೀನದನುಂ ಓದಿ ಪೇಳ್ದೊಡಾಯ್ತು: ಈಗಳ್ತೆ
ಸಲ್ವುದೆನ್ನ ಪೊಳ್ತು ನಿನ್ನಯ ಕಾವ್ಯಧಾರಾ
ವಾಹಿನಿಗೆ."

ಅಂತೆಂದ ಕವಿ ಕಾಳಿದಾಸನುಂ
ಮಡದಿಯಂ ಕುರಿತು,

"ಎಲೆ ಮಂಗಳೆ! ಕುಮುದ ನಯನೆ!

→

ಸುಸುಂದರಯಾನೆ! ನೀಂ ಪಗಡೆಯಂ ಪಿಂತಿಡುವ
ಕತವಿಲ್ಲ. ಆಟವುಂ ಸಾಗಲಿ! ಮಹಾ ಕಾವ್ಯ
ಮನನವುಂ ಸಾಗಲಿ!" ಎಂದನತಿ ಸರಸದಿಂದಲಿ.

ಅದಂ ಕೇಳ್ದವಟು ಚಿತ್ತದಲಿ ಕಟ್ಟಚ್ಚರಿದುಂಬಿ,
"ಇಂತದುಂ ಎಲ್ಲಾದರುಂಟೆ? ಇತ್ತ ಕಾವ್ಯದ
ಮನನ, ಅತ್ತಲ್ ಆಟದ ಪುರುಡು. ಎಂದೆನಲ್
ಎಂತಾವುದು? ಆನಿದಂ ಓದಲೇ? ಬೇಡವೇ?"

ಎಂಬೊಂದು ತೀವ್ರತರ ಭಾವವಿಭಾವದಿಂ
ಮತಿಗೆಟ್ಟು ಮನಗೆಟ್ಟು ಬೇವಸದೊಳೋದಿದಂ.
ಆಗಳಾ ಕವಿ ಸಾರ್ವಭೌಮಂ ವಟುವಿನ ಮನ
ಸ್ಥಿತಿಯಂ ಅರಿತು ಸಂಕೆಯಂ ಕಳೆಯೆ ನುಡಿದಂ,
"ತನ್ಮಾಮನದಿ ಸಂಕೋಚಮಂ ತೊರೆದು
ವಾಚಿಸಲ್ಕೈ ಈಗಳ್ತೆ!"

ಆಗಳ್ ಮನಮಿಡುಕಿ
ಮತಿಮಿಡುಕಿ ನಾಣ್ಚಿದೊಲ್ ವದನದಲಿ ಕೆಂಗೆಂಪು
ವರ್ಣಮಂ ಬಿಂಬಿಸಿ ತಲೆಬಾಗಿ ಭೂಜಪತ್ರಂ
ಬಿದಿರ್ಚಿ ಓದತೊಡಂಗಿದಂ. ಅತ್ತ ಮಹಾಕವಿ
ಕಾಳಿದಾಸಂ ಮತ್ತೆ ಸರಸ ಕೇಳಿಯಲಿ ನೆರೆ
ಮುಳುಗಿದಂ. ಮಡದಿ ಚೂಡಾಮಣಿಯುಂ ಪಗಡೆಯ
ಆಟದಲಿ ಮನವಿಟ್ಟಳು ಮುನ್ನಿನೊಲ್. ಪುರುಪಿನ
ನೆಲೆಯಾದುದು ಪಗಡೆಯ ಖೇಲನಂ. ಪ್ರೌಢವಟು
ಮನದ ಸಂಕೆಯಂ ಬೈತಿಟ್ಟು ಕಾವ್ಯವಾಚನ
ಗೈಯುತಿರ್ದಂ ಚಿಂತೆಯ ಭಾರದಲಿ ತಲೆ ಬಾಗಿ.

ಪಗಡೆಯಂ ಚಾತುರ್ಯದಿಂ ಮುನ್ನೆಡೆಸುತ ಮಿಗೆ

→

ತೋಷದಾವೇಶದಲಿ ಸರಸದಿಂ ಅನುರಾಗ
ಮೋದದಿಂ ಇನಿಯಂಗೆ ಕೇಳಿಸಿದಳ್

"ರಮಣನೆ,

ನಿನ್ನ ಬೌದ್ಧಿಕ ಸ್ತರದೆತ್ತರಕೆ ಏರುವೊಂದು
ಚಾತುರ್ಯಮಿಲ್ಲಮೆನ್ನೊಳ್. ಆಟದೊಳಾನುಂ
ಸೋಲ್ವುದೆ ದಿಟಂ."

"ಏಗಳ್ ನೀನೆಂಬುದಂತೆಯೆ.

ಚಾತುರ್ಯಮೇಂ ಕಮ್ಮಿಯಿಲ್ಲಂ ಬಿಡು, ಮಂಗಳೆ!"

ಕವಿ ಕಾಳಿದಾಸನೊರ್ಮೆಯುಂ ಇತ್ತಲ್ ತಿರುಗಿ
ನೋಡದೆಯೆ ತನ್ನಾಟದೊಳ್ ಪೂರ್ಣ ಚಿತ್ತವಿಟ್ಟು
ಆಗಳಾಗಳ್ ಸಂದರ್ಭೋಚಿತಮಾಗಿ 'ಭಲೆ! ಭಲೆ!'
ಎನುತಿರುತಿರಲಾ ಶುಭೋಕ್ತಿ ಸತಿಯಾಟದ ಮೆಚ್ಚೋ
ಕಾವ್ಯವಾಹಿಯ್ಯೆಸಿರಿಯ ಮೆಚ್ಚೋ ತಿಳಿಯದೆಯೆ
ಮಿಣ್ಣನೋದಿದನಾವಟು ಬೆಪ್ಪಾಗಿ, ಸೊಗಡಾಗಿ.
ಪೊಳ್ತೆಂತುಮುಳಿದುದೊ ಪಗಡೆಯಾಟವೆಂತು ಮುಗಿ
ಬಗಿಯಾದುದೊ ಮತ್ತೆಂತು ವರಕಾವ್ಯವಾಚನ
ಪೂರೈಸಿದುದೊ ತಿಳಿಯುದವೊಲಾಯ್ತು ಕುತೂಹಲಿತ
ಮನಕೆ. ವಟು ಅಚ್ಚರಿಯ ಕುಂಡದಲಿ ನೆರೆಮುಳುಗಿ
ಮಾತುಡುಗಿದವೊಲ್ ಮಿಣ್ಣನಿರೆ ವೇದಾಂತ ಕವಿ
ಮಹೋದಯನುಂ ತೋಷಭಾವದಿಂದುರ್ಬಿದವೊಲ್
ಪ್ರಸನ್ನ ವದನದಿಂ ನುಡಿದಂ

"ಎಲೆ, ವಟುವೇ!

ಗೆಣೆಯ ಕವಿಪುಂಗವಂಗೆ ತಿಳಿಪೈ. ಕೃತಿಯಿದು
ಬಹುಮೂಲ್ಯಮಿಹುದು ಮುಂದೆ ಕಾಲಾನುಕಾಲಂ

→

ಬುದ್ಧಿಮಾನ್ಯರ ಚಿತ್ತಕಲ್ಪಮಂ ಕಾವ್ಯರಸ
ಸೇಚನೆಯಲಿ ತಣಿಪುದರೊಳ್ ಸಂಶಯಮಿಲ್ಲ ;
ಎಂದೆನಲ್ ಆನಂದರಸವುಕ್ಕಿ ಹರಿವುದೆಮ
ಹೃದಯದಲಿ. ಕವಿವರ್ಯ ಭವಭೂತಿಗಾಂ ಮನ
ತುಂಬಿ ಅಭಿನಂದಿಸಿಹೆನೆಂದು ತಿಳಿಪೆಲೈ ವಟು
ಶ್ರೇಷ್ಠನೇ ! ಇದೊ, ಅನಂತ ಧನ್ಯವಾದಂಗಳ್
ಕಣ !”

ಆಗಳ್, ವಟು ವಿಶ್ವಮುಖನುಂ ಮಹಾಕವಿ
ಕಾಳಿದಾಸನ ಅತ್ಯಪೂರ್ವ ಪ್ರಸನ್ನ ಮುಖ
ಭಾವಮಂ ನೋಡಿಯುಂ ನಡೆದೊಂದು ಸುವಿಶೇಷ
ವಿಷಯದೋಹನಂ ನೆನೆದು ಆನೆಂತಿದನೆನ್ನ
ಗುರುವರ್ಯ ಭವಭೂತಿಗೆಲ್ಲವುಂ ತಿಳಿಪುವೆನೊ
ಎಂದು ಮರ್ಮರ ಮರುಗಿ ತಳಮಳಿಸಿದಂ ತನ್ನೊಳ್.
ಮುಖತಃ ಕವಿಕಾಳಿದಾಸ ಮಹೋದಯಂಗೇಂ
ಪ್ರತಿನುಡಿಯಲಾರದೆ ತಲೆಬಾಗಿ ಕೈಮುಗಿದು
ಮುಂದೆಸೆಗೆ ಚಲಿಸಿದಂ ಶಕ್ರದಿಕ್ಚಕ್ರಾಭಿ –
ಮುಖವಾಗಿ. ಹೃತ್‌ಕುಂಡ ಭಾರಾತಿಭಾರಂ.
ಮನಃಕಲ್ಪಮಂ ತರ್ಕವಿತರ್ಕಗಳಲುಗಿಗೆ
ಒಡ್ಡಿ ಮುಂಕೊಂಡು ಬರೆ ಪೂರ್ವದಿಗ್‌ದೇಶದಲಿ
ಚಂದ್ರೋದಯಮಾದುದು ಹಾಲ್ಬೆಳಕಿನ ಹೊಳೆಯಂ
ಹರಿಸಿ. ಪೂರ್ಣಚಂದ್ರನ ಕನಕಮಂಡಳ ದಿವ್ಯ
ರುಂದ್ರಾಂಬರದೊಳ್ ರಂಜಿಸಿದುದು ಲಕ್ಷೋಪಲಕ್ಷ
ತಾರೆಗಳ ಮಧ್ಯೆ. ವರುಣ ದಿಙ್ನಗರಿಯಿಂದೆ
ಬೀಸಿವೀಸಿ ಬಹ ಮಂದ ಮಂದಾನಿಲನ ವರ

→

ಚಾಮರಸುಸೇವೆಗೆ ತನುವೊಡ್ಡಿ ನಡೆಯುತಿರಲ್
ಪಥವೆಂತು ಕಳೆದುದೋ ತಾನರಿಯದೊಲ್ ಆಯ್ತು
ಪದಚಾಲನೆ. ಶಿಷ್ಯನುಂ ಭವಭೂತಿಯಾಶ್ರಮಂ
ಸೇರಿದಾಗಳೆ ಎದುರ್ನೆತ್ತ ಭವಭೂತಿಯ ಮೊಗಂ
ಮಲರಿ ಹೂವಾಯ್ತು ಶುಭ ಹಾರೈಕೆಯ ಆಸೆಯಲಿ.

ಗುರುವರ್ಯನ ಮಲರ್ದ ಮುಖಬಿಂಬವಂ ನೋ
ನೋಡಿ ವಿಷಯಮನೆಂತೊರೆವೆನೆಂಬ ಪರಿತಾಪಂ
ತುಂಬಿದ ಮನಂ ಘಾಸಿಯಾಗಿರೆ ಪಡಿನುಡಿಯಲ್
ಬಾಯಿ ಬಾರದೆ ಮಿಣ್ಣನಾದನಾ ವಿಶ್ವಮುಖಂ.

ಶಿಷ್ಯನ ಮನಸ್ಥಿತಿಯಂ ಕಂಡು ಕಾಣತ್ತೆ
ವಿಷಯಮಂ ಊಹಿಸಲಾರದೆ ತರ್ಕದ ಸುಳಿಯಲಿ
ಸಿಲ್ಕಿ ತಟ್ಟನೆ ಕೇಳಿಸಿದನ್ "ಏನ್ಯೆ, ತಮ್ಮಾ?
ಕವಿಗಳಂ ಕಂಡೆಯಾ? ಅಥ ನಿನಗೆ ದರ್ಶನಂ
ದೊರೆಯಲಿಲ್ಲವೇ? ಏನಾಯ್ತು ನೀಂ ಪೋಗಿರ್ದ
ವಿಚಾರಂ?"

ಗುರುವರ್ಯಂ ಪ್ರಶ್ನೆಯ ಸುರಿಮಳೆಯಂ
ಸುರಿಸುತಿರೆ ವಿಶ್ವಮುಖನುಂ ತನ್ನ ತಾಂ ಸೈಪಿ
ಪಡಿಮೊಗದೊಳ್ ಮೆಲ್ಲನೆ "ಅಯ್ಯಾ, ಗುರುವೆ," ಎಂದ
ಬಳಿಕಲಲ್ಲಿ ನಡೆದೆಲ್ಲ ವಿಚಾರ ವಿಶ್ವಮಂ
ಒದರಿ ಕಡು ಬೇಸರದಲಿ "ಸುವ್ಯರ್ಥ" ಎಂದನಾ
ವಟುಶ್ರೇಷ್ಠ ವಿಶ್ವಮುಖನುಂ. ವಿಚಾರಮನರಿದ
ಭವಭೂತಿಯುಂ ಮನದೆ ನೊಂದು ನೀರಾಗಿ ಮಿಗೆ
ದುಃಖಭಾರದಿಂ "ಈತನಿಂತೊಂದು ಅದ್ಭುತ
ದುಮ್ಮಾನ ದುರಹಂಕಾರದ ಮುದ್ದೆ ಎಂಬುದಂ

→

ಅರಿಯುದೆನು ಸದ್ಗ್ರಂಥಮಂ ಕಳಿಪಿ ಅವಮಾನ
ಸಹಿಸುವಂತಾದುದೆನ್ನ ದೌರ್ಭಾಗ್ಯಂ"
"ಗುರುವೇ,
ಆನದಂ ಓದಿ ಪೇಳ್ದುದೇ ತಪ್ಪಾಯ್ತು ಕಣ!
ಆದೊಡೆ ಅವರು ಓದು ಎಂದೆನಲ್ ಒಲ್ಲೆನೆನೆ
ಬಾಯಿ ಬಾರದಾಯ್ತೆನಗೆ. ಆಗಣ ಅನುಭೂತ
ಸನ್ನಿವೇಶಮೇ ಅಂತಿರ್ದುದು. ಅದರೊಳಾನು
ಸಿಲ್ಕದೆ ಗತಿಯಿರಲಿಲ್ಲಂ. ಈಗಳದಂ ನೆನೆ
ನೆನೆದು ಚಿಂತಿಸುವ ಕತಮಿಲ್ಲ. ಎಂತಿರ್ದೊಡಂ
ಅಪರಂಜಿ ಅಪರಂಜಿಯೇ! ನೀಂ ನಿಶ್ಚಿಂತೆ–
ನಿರಾತಂಕದಿಂ ನಿಮ್ಮ ಕಾರ್ಯಂ ನಿರ್ವಹಿಸಿ
ಮಿಣ್ಣನಿರ್ಪುದೇ ಲೇಸು!"
ಕವಿ ಭವಭೂತಿಯುಂ
ತನ್ನ ಕೃತಿಯಂ ಜೋಳಿಗೆಯಲಿರಿಸಿ ಒಳಮನೆಯ
ಗೂಟದೊಳ್ ನೇತು ಬಿಟ್ಟಂ. ದಗ್ಧ ಹೃದಯಂ
ಭಾವನಾವೇಶದಲಿ ಜಲಭರಿತ ಮರಿಮೋಡ
ಜೋಲುತಿಹ ಮಾಳ್ಕೆಯಲಿ ಭಾರಾತಿಭಾರವೇ.
ಒಳಗುದಿಯಲಿ ವ್ಯಸನದ ಝುರಿಯೆಳೆ ಹರಿದಾಡಿ
ಸುಡುತಿತ್ತು ನರತಂತುಗಳಂ ಎಳೆಯೆಳೆಯ್ಮೈಸಿ.

ಕಾಲಮಾನ ಉರುಳುರುಳಿ ಸಂದುವೆನಿತೊ ದಿನ
ಮಾನಂ ಜಗದರಿಕೆಗೆ ಬಾರದವೊಲ್ ಜುಗುಳ್ದು.

ಜಗತ್ಖ್ಯಾತಿಯಿಂದಲಿ ಕವಿಕುಲತಿಲಕನೆಂಬುವ
ಬಿರುದುವೊತ್ತ ಕವಿಕಾಳಿದಾಸಂ ನಗರಿಯಾ
ವೀಥಿಯಂ ವಿಡಿದು ನಡೆದಿರ್ದನಾ ವನವರ್ತ್ಮ

→

ಪ್ರದೇಶದೊಳ್ ಧೀರ ಗಂಭೀರ ಮರಿಯಾನೆ
ನಡೆದಂತೆವೊಲ್. ಮುಂದೆ ನಸುದೂರದಲಿ ಗೆಳೆಯ
ಭವಭೂತಿಯಾಶ್ರಮವಿಹುದದು ನೆನಪ್ಪುಗೊಳ್ಳಲ್
ಒಡನೆಯುತ್ತಲ್ ನಡೆವನಾ ಕವಿಮುಕೋದಯಂ
ಗೆಣೆಯನಂ ಕಾಂಬ ಪರಮೋತ್ಸಾಹದಲಿ. ರೋಮ
ರೋಮೋದ್ಭಿನ್ನ ಹರ್ಷಿತ ಭಾವ ಮೂಡಿದುದು. ತನು
ಮನಗಳಲಿ. ಕವಿಯ ಮುಂಪಥವದು ಕವಲು
ಕವಲಾಗಿ ಹರಿದುದು ಭವಭೂತಿಯಾಶ್ರಮಮಂ
ಗುರಿಗೊಂಡು. ವಸಂತ ಮಹಾ ಪ್ರಭುವಿನ ದಿವ್ಯ
ಒಡ್ಡೋಲಗದೊಳೆಲ್ಲೆಲ್ಲಿ ಯಾವೆಡೆಯಲ್ಲಿ ಕಣ್ಣಂ
ಹಾಯಿಸಿದೊಡಲ್ಲಿ ನಳನಳಿಪ ಪುಷ್ಪರಾಜಿಯ
ಪರಿಷತ್ತು ವರ್ಣವರ್ಣಾಂತು ಗಂಧ ಪರಿಮಳ
ಸೂಸುತಿರೆ ಹೃನ್ಮನಗಳಿಗೆ ರೋಚಕಮಾದುದು
ಕಾವ್ಯರಸವಾಹಿಯಂ ಉಕ್ಕಿ ಹರಿಸುವ ತೆರದಿ.
ಕವಿಸಾರ್ವಭೌಮನುಂ ಆನಂದ ರಸಾಬ್ಧಿಯ
ಪ್ರವಾಹದಲಿ ಮುಳುಗಿ ತೇಲಿದಂ ಎದೆಯುಬ್ಬಿ.
ಪುಷ್ಪಕೋಟಿಯಲಿ ಮಕರಂದಮಂ ಪೀರಲುರೆ
ಮೋದದಿಂ ಪೂವಿಂಪ್ರೂವಿಗಲೆವ ಭೃಂಗಗಳ
ಝೇಂಕಾರವದು ಮೊಳಗೆ ಓಂಕಾರದೋಜೆಯಲಿ
ಒಕ್ಕೊರಲಂ ವಸದಗಲ ನಲ್ ಶೃತಿಯಾದುದು
ಕಾವ್ಯರಸ ಸ್ಫೂರ್ತಿಸಿರಿಗೆ. ಕವಿಯುಂ ಚಿಂತನಾ
ವೇಶಾವವೇಶದಲಿ ಮೈಮರೆತು ವರಗೆಣೆಯ
ಭವಭೂತಿಯ ಆಶ್ರಮದ ಪ್ರಾಂಗಣಕೆ ತಟ್ಟನೆ
ಪದಾರ್ಪಣೆಗೈಯೆ ಎದೆ ಡವಡವಿಸುವೊಲ್ ಕಂಡನ್

→

ಮಹಾ ಭಸ್ಮರಾಶಿಯುಂ ! ಪರ್ಣಕುಟಿಯುಂ ಘೋರ
ಕಾಳ್ಕಿಚ್ಚಿನ ಕೆನ್ನಾಲಿಗೆಯ ನೊಣೆತಕೆ ಸಿಲ್ಕಿ
ಭಸ್ಮೀಭೂತಮಾದತ್ತು ಕವಿಮನ ಮಿಡುಕುವೊಲ್ !
ಪ್ರಾಂಗಣದಂಚಿನಲಿ ಮುಂಬೆಳೆದ ಶಾಲ್ಮಲೀ
ವೃಕ್ಷದ ಬುಡದೊಳ್ ಶಿರೋಭಾರಮಂ ಕೈದಳದ
ಮೇಲಳುಹಿ ಕುಳಿತಿರ್ದನ್ ಭವಭೂತಿ. ಗೆಣೆಯನ
ದುಃಖಭಾರಮಂ ಕಂಡು 'ಹಾ!' ಎಂದು ಬಿಮ್ಮನೆ
ಬಿಸುಸುಯ್ದನ್ ತನ್ನೊಳ್. ಸುತ್ತುಮುತ್ತಿನ ಭವ್ಯ
ವನಧಿಯುಂ ಸುಟ್ಟುರಿದು ಕರಿಮುರಿಯ್ಯೈಸಿ ರುದ್ರ
ಭಯಂಕರಮಾಗಿರ್ದುದು ನೋಳ್ಪ ನಯನಗಳಿಂಗೆ.
ಏನಿದೇನೆನುತೆ ಜಿಕ್ಕಸ ಬೆರಗುವಟ್ಟವೊಲ್
ನೋಡೆ, ಚಣಮೊಂದು ನಿಂತು ; ಒಡಲಿನ ಕಾರುಣ್ಯ
ದ್ರವ್ಯ ಕರಗಿ ದ್ರವಿಸಿ ಹರಿದುದು ತಂತು
ತಂತುಗಳಲಿ. ಒಡನೆ ಗೆಣೆಯು ಬಂಧುವಿನೆಡೆಗುಯ್ದು
ಪ್ರೀತಿದಯೆಗಳ ಸಂಮಿಶ್ರಿತ ದನಿಯಲಿ ನುಡಿದಂ,

"ಅಯ್ಯಾ ಕವಿ ಋಷಿಯೇ ! ಇನಿತೊಂದು ಕಡುದುಃಖ
ದುಮ್ಮಾನಮೇಕೆ ? ಒಂದಾಶ್ರಮ ವಿನಾಶವ
ಹೊಂದಿದೊಡೆ ಮತ್ತೊಂದು ಕಟ್ಟುವುದು ಸಾಧ್ಯಮಿರೆ
ದುಃಖವೇಕೆ ಬಿಡು ಭವಭೂತಿ ?"

"ಕವಿತಿಲಕನೇ !
ದುಃಖಮಿದು ಕುಟಿಗಾಗಿ ಅಲ್ಲ. ಕುಟಿಯೊಳಿಟ್ಟಿರ್ದ
ಪೊಸ ಕಾವ್ಯದ ಗ್ರಂಥವೆನ್ನ ಸುಟ್ಟುರಿದು ಬರಿ
ಭಸ್ಮವಾದುದು ಸುಡುತಿದೆ ಮನಮಂ."

"ಓ, ಅಂತೇಂ ?

→

ಬಿಡು, ಬಿಡು. ಅದಕೇಕಿಂತಳ್ಕು ? ಆನದರ ಪರಿ
ಪೂರ್ಣ ವಾಚನಂ ಕೇಳಿರ್ಪೆನಲ್ತೇ ? ಕೇಳ್,
ಅದನೀಗಳಾನು ಆದ್ಯಂತ ವಾಚಿಸಬಲ್ಲೆ.
ನೀನದಂ ಲೇಖಿಸೆಲೈ ಮಿತ್ರಾ ! ಚಿಂತಿಸದೆ
ಕಾರ್ಯತತ್ಪರನಾಗು."

ಧೀಮತಿಯಿಂ ಪೊರಬಿಳ್ದ
ಆ ಮಾತು ಕರ್ಣೇಂದ್ರಿಯಂ ಪುಗಲೆಣೆಯಿಲ್ಲದ
ಅಚ್ಚರಿಯ ಕುಂಡದಲಿ ಮುಳುಗೆದ್ದು ಮರವಟ್ಟು
ಬಿಮ್ಮನೆಯೆ ಕವಿಸಾರ್ವಭೌಮನಂ ನೋಡುತ್ತೆ
ನಿಂದವನ್ ನ್ಯೈಮರೆತು. ಬಳಿಕಂ ತನ್ನನುಂ ತಾಂ
ಸೈಪಿ ಮರುನುಡಿದಂ,

"ಅಃ, ಕವಿಸಾರ್ವಭೌಮನನೆ !
ನೀನದಂ ಕೇಳ್ದನಿತೊ ಕಾಲವುರುಳಿಪೋಗಿರೆ
ಇಂ ನಿನ್ನಯ ನೆನವಿನಲಿರ್ಪುದು ಏಂ ಆಶ್ಚರ್ಯ !
ನಿನ್ನ ಧೀಮಂತಿಕೆಗೆ ಎನ್ನ ಧನ್ಯವಾದಂ !
ಮತ್ತೆಮತ್ತೆ ಧನ್ಯವಾದಂ ಗುರುವೇ !"

"ಇದರೊಳೇಂ
ವಿಶೇಷ ವಿಚಾರಮಿಲ್ಲಂ. ನೀಂ ಮನದಿ ಸಂಕೆ
ಇಡದೆ ಉಲ್ಲೇಖಿಸೀಗಳ್ತೇ ಆನೊರೆವೆನದಂ."

ಸರಾಗದೊಳ್ ಅಂತೆಂದ ಮಹಾಕವಿಯುಂ ಅತಿ
ಭಕ್ತಿ ಗೌರವಗಳಿಂ ತಲೆ ಮಣಿದು ವಂದಿಸಿದ
ಬಳಿಕ ಕವಿ ಭವಭೂತಿಯುಂ ಪರಮ ತೋಷದಿಂ
ದಿವ್ಯ ಸ್ಫೂರ್ತಿಯಿಂ ಉರ್ಬಿ ಪ್ರಸನ್ನ ಮುಖಿಯಾಗಿ
ಭೂಜಪತ್ರಮಂ ಕೈಕೊಂಡು ಅತಿ ವಿನಯದಿಂ

→

ಲೇಖಿಸಿದನ್ ಬಾಲವಟುವಿನೊಲ್. ಮಹಾಕವಿಯುಂ
ಗೈದ ನಿರರ್ಗಳ ವಾಚನಾಧಾರೆಯದು ಕಿಂಚಿತ್
ಏರುಪೇರಿಲ್ಲದೆ ಹರಿಯುತಿರಲ್ ಇದೆನ್ನಯ
ಕೃತಿಯೊ ಕವಿ ಮಹಾನುಭಾವನ ಕೃತಿಯೊ ಎಂದು
ಅಚ್ಚರಿ ಪಡುವವೊಲಾಯ್ತು ಭವಭೂತಿಯ ಮನಂ.

ಅಂದು, ಶಿಷ್ಯವರೇಣ್ಯನೊರೆದ ಸಂಗತಿಯೆನೆ ಸತಿಯ
ಸಂಗಡಂ ಪಗಡೆಯಾಟದಲಿ ತಾಂ ಮನವಿಟ್ಟು
ನಿರ್ಲಕ್ಷ್ಯದಿಂದಿರ್ದ ಕವಿ ಮಹೋದಯನಿಂದೆ
ಇಂತೊಂದು ದಿವ್ಯವಾಚನಮೆನಲ್ ಎಂತಪ್ಪ
ಆಶ್ಚರ್ಯವೊ! ಈ ತೆರನ ಅರಿವು ಅಸಮಾನ್ಯಂ!
ಸ್ವತಃ ಲೇಖಸಿದಾಂ ಮರೆತಿಹೆನೆನೆ ಈವೊಂದು
ಚೋದ್ಯಮಂ ಎಲ್ಲಿಯುಂ ಕಂಡೆನಿಲ್ಲ. ಮಿತ್ರನ
ಅಭಿಜ್ಞಾನ ಲೋಕೋತ್ತರಂ. ವರ ಚಿರಂತನಂ.

ಅಃ, ತಣ್ಣಗೆ ತಿನಿಯುಗವ ತಂಗಾಳಿ ಒಯ್ಯನೆ
ತೀಡಿದುದು ಮುದದಿ. ಗಿಡು ಮರಗಳಲಿ ಚಿಲಿಪಿಲಿಸುತೆ
ಹಾಡಿಪಾಡಿ ನಲಿದುವು ಹಕ್ಕಿ. ಎಲೆ ಎಲೆಗಳಲುಗಿ
ಮರ್ಮರ ಶ್ರುತಿಯೂಡಿಸಿದುವು ತೋಷದಿ ಸಂಚಲಿಸಿ.
ಮುಗಿಲ್ ಮಂಜಿನ ರಜತ ವಾಹಿನಿ ಕುಸಿದು ಧರಣಿ
ಮಂಡಲಕಿಳಿದು ಮುದ್ದಿಸಿದುದು ಮುಟ್ಟಿ ತಟ್ಟುತೆ.
ಪೊಳ್ತು ನಿಂತಾಲಿಸಿತು ಮಹಾಕವಿಯ ಸಮಗ್ರ
ವಾಚನದ ಧ್ವನಿವಾಹಿಯುಂ. ಸುಟ್ಟ ಆಶ್ರಮದ
ಭಸ್ಮಧೂಳಿಯುಂ ನಗುತಿತ್ತು ಅಚ್ಚರಿಯ ಕಣ್
ವಿಸ್ತರಿಸಿ. ದಶದಿಶೆಯ ದಿಕ್ಪಾಲಕರ್ ಮಿಡುಕಿ
ತೆಕ್ಕನೆ ಕಣ್ ತೆರೆದರ್ ಸ್ವತಃ ವೇದಮಾತೆಯೆ

→

ಧರಣಿಗಿಳಿತಂದು ಕಾವ್ಯವಾಚನಂ ಗೈದು
ರಮಿಸುತಿಹಳೊ ಎನೆ ಅಚ್ಚರಿಯು ನೆಲೆವೀಡಾಯ್ತು
ಮಹಾಕವಿ ಕಾಳಿದಾಸನ ಕಾವ್ಯವಾಚನಂ.
ಉಲ್ಲೇಖಿಸುತಲಿರ್ದ ಭವಭೂತಿಯುಂ ಮಹಾ
ಕವಿಯ ಅಭಿಜ್ಞಾನ ಕುಂಡದ ಅಗಾಧ ಜಲದಲಿ
ಮುಳುಗೆದ್ದು ತೇಲಾಡಿದಂ. ಹೃತ್ ಕುಂಡಲಿಯ
ಭಾವನಾ ಸ್ಫೂರ್ತಿಗೆ ಕಿಚ್ಚಿನ ಕಿಡಿಯು ತಗಲಿದೊಲ್
ಚಳಚಳಿಸಿದತ್ತು. ಮೈಯ್ಯ ನೆತ್ತರ್ ಕುದಿಕುದಿದು
ಹರಿದುದು ನರನಾಡಿಗಳಂ ಸೀಳ್ವ ತೆರದಿ. ಭವ
ಭೂತಿಯುಂ ಚಿತ್ರಸ್ತವಾದವೊಲ್ ನಿಸ್ಪಂದ
ಕಾರ್ಯಗತಿಯುಲಿರೆ ಪೂರ್ಣಿಮಾ ಸುಧೌತಾಂಬರವ
ಉಟ್ಟು ಮೆರೆದಂತೆ ಹಠಾತ್ತಾಗಿ ಬೆಳಗಿತು ಹೃದಯಂ.
ಮನಂ ಅರಳಿ ಮಂದಾರವಾಯ್ತು. ಮತಿಲೋಕ
ಗರಿ ಬಿದಿರ್ಚಿದ ಮರಿ ಹಕ್ಕಿಯಾಯ್ತು. ಸ್ಫೂರ್ತಿ ದಳ
ಬಿರಿದ ಕಸ್ತೂರಿ ಮಲ್ಲಿಗೆಯಾಯ್ತು. ಮಹಾಕವಿ ಭವ
ಭೂತಿಯುಂ ಮರುಹುಟ್ಟು ಪಡೆದಂತೆವೊಲ್ ದಿವ್ಯ
ಸ್ಫೂರ್ತಿಯಾಗರವಾಗಿ ಪರಮ ಕವಿಯ ಪಾದ
ಪಂಕೇಜಗಳಿಂಗೆ ತಲೆಮಣಿದು ಉದ್ದಂಡ
ನಮನವಂ ಸಲಿಸಿದಂ; ಭಕ್ತಿಭಾವನೆಯುಕ್ಕಿ.

ಎನ್ನ ಕಾವ್ಯ ಕಾನನದಿ ಮಿಡಿ ಮೊಗ್ಗಾಗಿ ಮೂಡಿ
ಮೃದು ಮಧುರ ಮಲ್ಲಿಕಾ ಕುಸುಮದಳ ಬಿರಿದರಳೆ
ಕನ್ನಡಾಂಬೆಯ ಪದತಲಕೆ ಸಮರ್ಪಿತಂ ಎನೆ
ಭಕ್ತಿರಸ ಉಕ್ಕಿ ಹರಿವುದು ಎರ್ದೆಗಡಲಿನಿಂ.

ನಮೋ ನಮೋ ಅಭಿಜ್ಞಾನ ಕವಿ ಕಾಳಿದಾಸ!

— o —

ಭವಸಾಗರ

ನಾಸ್ತಿ ಭಾರ್ಯಾ ಸಮಂ ತೀರ್ಥಂ
ನಾಸ್ತಿ ಭಾರ್ಯಾ ಸಮಂ ಸುಖಂ ।
ನಾಸ್ತಿ ಭಾರ್ಯಾ ಸಮಂ ಪುಣ್ಯಂ
ತಾರಿಣಾಯ ಹಿತಾಯ ಚ ।

೧

ಹೇ, ತಾಯೆ, ವರದೆ, ವೀಣಾಪಾಣಿ, ಸರಸ್ವತಿ
ಅಜಜಾಯೆ, ವಿದ್ಯಾಧರೆ, ವಾಣಿ, ವರ ಶಾರದೆ,
ಪರಮ ಕಲ್ಯಾಣಿ, ಶ್ರೀದೇವಿ, ಮಧುರ ಮೋಹನ
ವಾಗ್ದೇವಿ, ಸರಸ ಸರಳ ಕವಿತಾ ಕಲಾಕಲೆ!
ತಲೆಮಣಿವೆ ನಿನ್ನಮಲ ಪಾದಪದುಮಂಗಳಲಿ.
ಕೃಪೆಗೈದೆಮ ಜಡಮತಿಗೆ ದಿವ್ಯ ಚೈತನ್ಯ
ರಸವೂಡಿ ನಲಿನಲಿದುಲಿಯೆ ಹರಸು ಮಮತಾಯೆ,
ಆನುಲಿವ ಗಾನಗೇಯದಿ ನಿಚ್ಚ ಸ್ವಚ್ಛಂದ–
ಮಾನಂದ ರಸವಾಹಿನಿಯುಕ್ಕಿ ಕುರುನಾಡಿನ
ಕನ್ನಡಿರ್ದೆಯಂ ಮುಟ್ಟಿ ತಣಿಸುವ ಮಾಳ್ಕೆಯಲಿ
ಓ, ಎನ್ನ ಕಲ್ಪನಾ ಸುಂದರಿಯೆ ನಮಿಸಿ ಬೇಳ್ಪೆಂ.

ಮಿನ್ನೆ, ಶತಶತಮಾನ ಪೂರ್ವದಲಿ ಪೌರುಷೇಯ
ಪ್ರವೃತ್ತಿಯುಂ ಮೂಡಿ ಅರಳರಳಿ ಭುಗಿಲೆದ್ದು
ಸಂಜೀವನೋತ್ಕರ್ಷಮಾನಂದದೊಳ್ ಉಕ್ಕಿ
ಹರಿಯೆ ಎಣೆಯಿಲ್ಲದಿಹ ಸ್ಫೂರ್ತಿ ಮೈಮನಗಳಲಿ,
ರುಂದ್ರ ರಾತ್ರಿಯ ಪಾತ್ರೆಯಂಚಿನಲಿ ತಕಪಕನೆ
ಕುದಿದೆದ್ದುದೊ ಸ್ಫೂರ್ತಿರಸ ಎಂದೆನಲ್ ಬಂಧುರ

→

ದಿನೋದಯದ ಪ್ರಭಾತ ಕಾವ್ಯಂ ದಿನನಿಚ್ಚ
ನವಸ್ಫೂರ್ತಿಗಾಸರೆಯು ತಾನಪ್ಪುದು. ಮುಂಗೋಳಿ
ಕೂಗುತೆಬ್ಬಿಸುವ ಮುನ್ನಮೆ ಶಿಜ್ಜೆಯ ಬಿಟ್ಟೇಳ್ವ
ಅಣ್ಣೇಗೌಡಾರ್ಯನುಂ ಬಾಗಮನೆ ವಂಶಸ್ಥಂ.
ಹಿರಿಯಮನೆತನ. ಹಿರಿಯ ಹೊಣೆಗಾರಿಕೆ ಮೇಣ್
ಅಧಿಕಾಧಿಕ ಯುವಶಕ್ತಿಯಂ ಸ್ಫುರಿಸಿ ನಿತ್ಯ
ಪ್ರಸ್ವೇದ ಧಾರೆಯಂ ಹರಿಸಿ ದುಡಿವ ಹುಮ್ಮಿರೆ
ಸವನಪ್ಪೋ ಪುರುಪು ಪುರುಡುಗಳಿಂಗೆಣೆಯಿಲ್ಲಂ
ತನುಮನಂಗಳಲಿ. ಮತ್ತಮಾ ಎರ್ದೆಯಾಳದ
ಪ್ರಾಣಕುಂಡದಲಿ. ಅಲ್ಲಿ ಇಲ್ಲಿ ಸುತ್ತಿ ಸುತ್ತಾಡಿ
ಎಲ್ಲೆಲ್ಲಿ ಕೃಷಿಯೋಗ್ಯ ಭೂಮಿಯುಮಿರ್ದುದೊ
ಅಲ್ಲಲ್ಲಿ ತೋಂಟಗಳ ಚೆಂಬೆಳಸಿನ ಕನಸಂ
ಕಂಡು ನನಸಾಗಿಸಿದ ಧನ್ಯಾತ್ಮ ಅಣ್ಣಯ್ಯ
ಗೌಡಂ. ಬಲುದೂರದ ವನಸ್ಥಳಿಯಂ ಅರಸೆ
ಅಶ್ವಾರೋಹಣವೆ ಗತಿ. ಅಂದು, ಸಾರಿಗೆ ಕಣ್
ತೆರೆಯದ ಸಮಯ, ಹಾದಿಗಳ್ ಮೂಡಿರದ ಕಾಲ.
ನಿರಕ್ಷರೀ ಜನಕೋಟಿ ಕಾಲಜ್ಞಾನವರಿಯದೆ
ಲೋಕ ಪ್ರಜ್ಞೆಯಿಂ ದೂರದೂರದೊಳ್ ಬಾಳಿದ
ದಿನಮಾನ. ಮುಗ್ಧ ದುಗ್ಧ ಮನಮತಿಗಳ್ ಎಲೆಯ
ಮರೆಯಕಾಯಿಗಳೆನಲ್ ರಾರಾಜಿಸಿದ ಬದುಕು.

ಅಂತಿರಲ್, ಬಹುದೂರದ ಬೃಹದ್ ಅರಣ್ಯದ
ರಮ್ಯ ಸ್ಥಳಗಳನರಸೆ ಅಶ್ವಾರೋಹಣಮೆ
ಗತಿ. ಆವುದಾವುದು ಕೃಷಿಯೋಗ್ಯಂ ಮೇಣ್ ಬೂಂದು
ಬೆಳಸಂ ಹುಲುಸಾಗಿ ಬೆಳೆಸೆ ತಕ್ಕುದೆಂಬ ಘನ

→

ಪರಿಶೀಲನೆಗೆ ವನಾಂತರಂ ಬೊಕ್ಕು ನೋಳ್ಪುದೇ
ಪ್ರಥಮ ಗುರುತರಕಾರ್ಯಂ. ಅಣ್ಣಯ್ಯಗೌಡಂ
ದೂರದೂರದಾ ಬೃಹದ್ ಅರಣ್ಯಗಳಿಂಗೆ
ಅಶ್ವಾರೋಹಿಯಾಗಿ ಪಯಣಿಪಂ ಸ್ಥಲವನರಸೆ.
ಅಂತಿಂತು ಅರಸಿ ಅರಸಿ "ಅತ್ತೀಬನ" ವನ
ದೇಶವಂ ಕಂಡು ಘಟ್ಟಡವಿಯಂಬೊಕ್ಕು ಮನ
ಮೆಚ್ಚಿ ಎದೆಯೋತು ಪಡೆದರಂ ಸರಕಾರದ
ಬೊಕ್ಕಸಕೆ ದ್ರವ್ಯವಂ ಸುರಿದು ತಮ್ಮಯ ಕೃಷಿ
ಲೋಕಕ್ಕಾಗಿ, ದೂರದ ಹಾದಿಯಂ ಲೆಕ್ಕಿಸದೆ.
ಆದರಾ ಭಯಂಕರ ಗೊಂಡಾರಣ್ಯಂ ದುಷ್ಟ
ಮೃಗಭೀಕರಮಲ್ಲದೆಯೆ ಹಾವು ಚೇಳುಗಳ್
ಕ್ರಿಮಿಕೀಟಗಳ್ ಮುಸಿಯ ಮಂಗ ಬಗೆವಗೆಯ
ಕಾಡುಬೆಕ್ಕುಗಳ್, ಉಡ ಅಳಿಲು ಗೋಸುಂಬೆಗಳ್
ಸಂವಾಸಿಸುತಿರ್ದ ಮಹಾ ವಿಶಾಲ ದೇಶಂ.

ಅತ್ಯದ್ಭುತ ಮಲೆ ಗುಡ್ಡ ಬೆಟ್ಟಗಳ ಮಹಾಶ್ರೇಣಿ
ಸಕಲ ಪ್ರಾಣಿಗಳ ಸರ್ವೇಂದ್ರಿಯಗಳಿಗೆ ಮಧು
ಪಾನ ನಡೆಸುವ ಸ್ವರ್ಗದೈಶ್ವರ್ಯ ಸಂಪದಂ
ಧರೆಗಿಳಿಸಿದ ಪ್ರದೇಶಂ. ಬಗೆವಗೆಯ ಬಳ್ಳಿ
ಸಸ್ಯ ಗಿಡು ಮರಂಗಳ್ ಭೀಮ ಭೀಕರದೂಪ್ಮ
ವಿರಾಟ್ ಪರ್ವದ ಸ್ಥೂಲತೆಯುತಿ ವೈಯ್ಯಾರದಲಿ
ಮೆರೆದತ್ತು ಕಾನನ ಕನಕಾಂಗಿಯ ದೇಗುಲಂ.
ಖೇಚರಂಗಳ್ ಉರಿವಿಸಿಲ ಬೇಗೆಯಲಿ ಸುಟ್ಟು
ಒಣಗಿ ಗರಿಗರಿಯಾಗಿ ಗಿಡುಮರಗಳಾಶ್ರಯಮಂ
ಬಯಸಿ ಎಲೆಗಳ ಪೊದರಿನಲಿ ಅಡಗಿ ಒಣಬಾಯ್
ತೆರೆದು ಹಾಡುತಲಿರ್ದುವು ವೀತರಾಗದಲಿ. →

ತಂಬೆಲರ್ ಬಿಸಿಯಾಗಿ ಬೀಸಿ ವೀಸಿ ಬರಲಾ
ಪ್ರಾತಃಸಮಯದ ತನಿಯುಂಡು ತನುತಣಿಯದೆ
ನಿಡುಸುಯ್ದು ಸುಯ್ಯುಯ್ದು ಚಾಮರಿಸನ್ ದಿಶೆಯಿಂ
ದಿಶೆಗೆ ಹಸಿಬಿಸಿಯಾಗಿ. ವೇಸಗೆಯ ಪೂವಳಿಯು
ಅರಳಿ ಗಿಡುಮರಂಗಳ್ ಹೂ ಹಿಲಾಲುಗಳಿಂದೆ
ಅಲಂಕೃತವಾಗಿಯುಂ ಹದುಳಿಲ್ಲದ ಶೋಭಾ
ಶೈಲಿ. ಹಸಿರು ಹಿಂಗಿ ಹರಿದ್ವರ್ಣ ವೈಗೊಂಡ
ಹಣ್ಣೆಲೆಗಳುದುರುದುರಿ ಬಿಳ್ದು ಗಚ್ಚಿದುವು ನೆಲವ.
ಪುಷ್ಪರೇಣು ಪುಷ್ಪದಳ ಒಣಕಡ್ಡಿ ದರುಗೆಲೆ
ಉದುರು ಮೊಗ್ಗುಗಳಿಂದೆ ಚಿತ್ರವಿಚಿತ್ರವಾಗಿ
ರಂಜಿಸಿರ್ದುದು ಪುಣ್ಯಭೂಮಿ. ವನ್ಯಪ್ರಾಣಿಗಳ
ಸಂಜೀವನೋಚಿತವೆನೆ ದಟ್ಟೈಸಿದ ವನಧಿಯಲಿ
ವನವಿಹಂಗಗಳುಲಿವ ವಿವಿಧ ರಾಗಗಳ ಮಾಲೆ
ರಾಗಾನುರಾಗದಲಿ ಪೊಣ್ಮಲುರೆ ಬಗೆವಗೆಯ
ರಾಗಮಯವಾದುದಾ ವನವಾರ್ಧಿಯಾದ್ಯಂತಂ.
ನಡುವಗಲ ಚಂಡಪ್ರಚಂಡ ಮಾರ್ತಾಂಡನ
ಪ್ರಖರ ಕಿರಣಗಳುರವಣೆಯುಂ ಮುಟ್ಟದೊಲ್
ದ್ರುಮಗಳ್ ತರತರದ ತಳಿರುಗಳಿಂ ನಳನಳಿಸಿ
ಶೃತಿಯೂಡುತಿರ್ದುವು ಎಲೆಎಲೆಗಳ್ ಮರ್ಮರಿಸಿ.
ಜೀರುಂಡೆಗಳ್ ಜೀಯ್ ಜೀಯ್ ಎನ್ನುತಿರೆ
ಕಗ್ಗಾಡು ಮರುದನಿಗುಡುವೊಲ್ ಮತ್ತಂ ನಿಚ್ಚ
ಕಿವಿಗಳಂ ಕಿಡಿಸುವ ತೆರದಲಿ ಗದ್ದಲಮಯಂ.
ಪಶುಪಕ್ಷಿಗಳಿಂಗೆ ಪರಮಾಶ್ರಯದ ವನಸ್ಥಳಿ,
ಪಕ್ಷಿಕೂಜನ ಸುಂದರಂ. ಪುಷ್ಪ ಸೌಗಂಧ

→

ಸುಂದರಂ. ದಿವ್ಯ ಶಾಂತಪ್ರಶಾಂತ ಸುಂದರಂ.
ಮಣ್ಗಂಧ ನೀರ್ಗಂಧ ಸಸ್ಯಗಂಧ ಮೇಣುಂ
ಸರ್ವಗಂಧಮಯ ಸೌಂದರ್ಯ ಹೇರಾಶಿಯುಂ
ದಟ್ಟಣಿಸಿ ಭವ್ಯ ದುರ್ದಾಂತ ಕೋಶಮಾದುದು
ಪುಕ್ಕಲೆರ್ದೆಯ ಜನಗತಿಗೆ ಮೇಣ್ ಅಬಲರಿಗೆ.

ಅಂತೊಂದು ದೂರ ಪ್ರದೇಶಮಂ ಮನಮೆಚ್ಚಿ
ಅಲ್ಲಿಯೇ ನೆಲಸುವೊಂದು ಸಂಯೋಜನೆಯಿಂದೆ
ಸತೀಮಣಿ ಗೌರಮ್ಮನೊಡಂ ಪೊರಮಂಟರ್ ಅಶ್ವಾ
ರೋಹಿಯಾಗಿ, ಎಳೆಮೈಯ್ಯ ಕುದುರೆ ತಟ್ಟುಗಳ್
ಪುಟಿ ಪುಟಿದು ಕೆನೆಯುತ್ತೆ ನವಪುರುಪಿನ ಗಣಿಯಾಗಿ
ಉತ್ಸುಕತೆಯಿಂ ಉಡಿದು ಕುಣಿದಾಡಿ ಜಿಗಿದಾಡಿ
ಬಾಲವಾಡಿಸಿ ನೆಗೆಯುತೆ ನಡೆದುವು ಹಾದಿಯಂ.
ಲಗಾಮು ಬಿಗಿವಿಡಿದನಿತು ಓಡಿಯೋಡಿ ಪೋಗುವ
ಪುರುಪು ಹಂಡುಂಡ ನವ ಶಕ್ತಿಯ ಕುದುರೆಗಳಿಗೆ.
ಸತಿ ಗೌರಮ್ಮನ ಮೃದು ಹಸ್ತಗಳ್ ಲಗಾಮಿನ
ಬಿಗಿತದಿಂ ಕೆಂಪು ಕೆಂಪು ತಳೆದೊಡಮಿಲ್ಲ ನಸು
ವಿಶ್ರಾಂತಿ. ಕೈವಿಟ್ಟೆನೆ ಗತಿತಪ್ಪಿ ಕೆಳಬಿಳ್ದು
ಕೈಕಾಲು ಮುರಿವ ಯೋಗ ತಪ್ಪದು. ಕುದುರೆಗಳಿಗೆ
ಬಿಗಿದ ಜೀನು ಕಟ್ಟಿದ ಕಣ್ಣು ನೇರ ದೃಷ್ಟಿಯ
ಚರಣರೇಖಾ ಕುಮಾರ್ಗಂ ಎನಲ್ ಓಡುವುದೆ
ದಿವಿನಾದ ಗುರಿ. ಅತ್ತಲಿತ್ತಲ್ ಘನತೆವೆತ್ತು
ಮುಂಬೆಳೆದು ಹರೆಗೈ ಚಾಚಿದ ಗಿಡು ಸಸ್ಯ
ಜಾತಿಯುಂ ಮುಖ ಮೈಗಳಂ ಮುಟ್ಟಿ ಮುದ್ದಿಸಿರೆ
ಮೈಕೈ ತೆರೆಚಿದ ಸಣ್ಣಸಣ್ಣನೆ ಗಾಯಗಳ್

→

ಗಿರಿದೋಿಸಾದಿಯಲಿ. ಪಯಣದ ನಡುವೆ ಅಲ್ಲಿ
ಇಲ್ಲಿ ಕಂಡಕಂಡೆಡೆಯೆ ಬಂಧುಮಿತ್ರರುಗಳಲಿ
ತಂಗಿ ಅಲ್ಪಸ್ವಲ್ಪ ಸುವಿಶ್ರಾಂತಿಯಂ ಪಡೆದ
ಬಳಿಕಲಾ ಮುಂಪಯಣ ನವದಂಪತಿಗಳಿಂಗೆ.
ಮಧ್ಯೆ ಸತಿ ಗೌರಮ್ಮನ ನಲ್ಮೆಯಾ ತೌರುಮನೆ
ಚಂದ್ರಸಾಲೆ ಪಥದಂಚಿನಲಿ. ಸಲಸಲಮಲ್ಲಿ
ಒಂದೆರಡು ದಿನಗಳಂ ಕಳೆಯುತೆ ಸುಖತೋಷದ
ಆತಿಥ್ಯಮಂ ಪಡೆದು ಆನಂದ ಶ್ರಾಂತಿಗಳ
ರಸಾಯನವನುಂಬುದೆ ನವ ನವೋತ್ಸಾಹಮಂ
ನ್ಮೈಗೂಡಿಸಿ ಉಲ್ಲಸಿತ ಮನಮತಿಗಳಿಂದೆ ಗರಿ
ತಳೆದ ಹಕ್ಕಿಮರಿಯಾದಪರ್ ಮುಂಬಯಣಕ್ಕೆ.

ಆರುನೂರೆಕರೆಗಳ ಮಹಾ ವಿಸ್ತೀರ್ಣಮಂ
ಪೊಂದಿ ಲೋಕಾಭಿರಾಮ ಭಂಗಿಯಲಿ ಹರಡಿರ್ದ
ಬನದೈಸಿರಿಯ ಸುತ್ತಮುತ್ತಲಿನ ಪ್ರದೇಶ
ಪ್ರಾಂತ್ಯದಲಿ ಮುಗ್ಧ ದುಗ್ಧ ಮನದ ಬಲು ಸಾತ್ವಿಕ
ಗುಣಗಣಗಳಗಣಿಯೈಸಿದ ಜನ ಸಂಪದಂ
ಇರ್ದುದು ಹೊಲನೆಲ ಗದ್ದೆ ತೋಂಟಗಳಂ ಪೊಂದಿ
ಸುಖಾಶ್ರಯದ ಶಾಂತಿ ಸೌಭಾಗ್ಯದಮೃತವುಂಡು.
ಅಣ್ಣಯ್ಯಗೌಡರಲ್ಲಿನ ಜನ ಮುಖಂಡರಂ
ಭೇಟಿಗೈದು ಮಾತಾಡಿ ಊರೊಳ್ ಸುತ್ತಾಡಿ
ಪರಿಚಿತಿ ಬೆಳೆಸಿ ಸ್ನೆಹಹಸ್ತಮಂ ಚಾಚಿದರ್
ಊರಗಲ. ಸುಜನ ಸಹಕಾರಂ ದೊರಕಿದತ್ತು
ಪರಮ ಭಕ್ತಿಗೌರವಗಳಿಂ. ಕಾನನರಮಣಿಯ
ಉಡಿಯಲ್ಲಿ ನಲ್ದಾಣವನರಸಿಯರಸಿ ನಟ್ಟ

→

ನಡುವೆ ಗಿರಿನೆತ್ತಿಯಲಿ ಮನವೊಪ್ಪುವ ತೆರದಲಿ
ಗೃಹಗಳ ಸಮುಚ್ಚಯಮಂ ಕಟ್ಟಿದರ್, ವನದ
ಗಿಡಗೆಂಟೆಗಳಂ ಕೊಚ್ಚಿಕೊಡವುತಿರಲತ್ತಲ್.
ಮಹಾ ಪರ್ಣಾರ್ಣವದ ವಿಸ್ತೀರ್ಣದೊಳೆಲ್ಲೆಡೆ
ಕೆಂದಳಿರ್ ಬೆಳ್ದಳಿರ್ ಪಚ್ಚದಳಿರ್ ಹರಿದ್ರ
ದಳಿರ್ ಎಂಬೊಲಾ ಬಗೆವಗೆಯ ತಳಿರ್ ಲೋಕಂ
ನಳನಳಿಸುತಲಿರ್ದುದು ದ್ರುಮಗಳಲಿ ತೇರಂ
ಸಿಂಗರಿಸಿದ ಮಾಳ್ಕೆಯಲಿ. ನೋನೋಳ್ಪ ಹೃದಯ
ಕುಸುಮದಳ ಬಿರಿದು ಅರಳಿ ಹೂವಾಗುವ ತೆರಂ.
ಅಃ, ಲಿಖಿತ ಚಿತ್ರದವೊಲ್ ಮೆರೆದಿರಲಾ ಕಾಡು-
ಕಗ್ಗಾಡು ಅಲೆಯೇರಿ ಅಲೆಯಿಳಿದು ತರಂಗಿಪ
ತರಂಗಗಳಾಗಿ ಕಣ್ಸೆಸೆದತ್ತು ಮಿಡಿಮೊಗ್ಗು
ಹೂವು ಹಣ್ಣು ಕಾಯಿಗಳ ಹಿಲಾಲುಗಳ ಹೊತ್ತು
ನಲಿನಲಿವ ತೆರದಲಿ. ಮತ್ತಿಯದ್ರುಮ ಕೋಟಿಯುಂ
ಗಗನ ಚುಂಬೀ ವೈಭವದಲಿ ಮೆರೆದಿರ್ದುವು
ಕಣ್ಗೆಡ್ಡಮಾಗಿ. ತರತರದ ಭೂಜೇಶ ವರ
ಕುಲಕೀತಿಗಳ್ ರುದ್ರಜಟಿಲ ನ್ಯಾಸದಿಂ
ಬೆಳೆದಿರ್ದುವಲ್ಲಿ ಎರ್ದೆಯಾಕರ್ಷಿಪ ಪಾಂಗಿನಲಿ.
ಹೆಮ್ಮರಗಳಂ ತಬ್ಬಿ ಸುಳಿಸುತ್ತಿ ಹರ್ಬಿರ್ದ
ಬಳ್ಳಿದಿಂಡುಗಳ್ ವಕ್ರಾಕಾರದಲಿ ದೀರ್ಘ
ರೂಪಿಂ ನೆತ್ತಿಯೇರಿ ವಿಜೃಂಭಿಸಿರ್ದುವು
ಹೆಬ್ಬಾವುಗಳ ಹೋಲಿ. ಅಶ್ವತ್ಥ ಶಾಲ್ಮಲೀ
ಹಲಸು ಮಾವು ಬೇವು ಬಸರಿ ದೇವದಾರು ಸಿರಿ
ಹೊನ್ನೆ ಹಾಲಿವಾಣ ಇತಿ ಬಗೆವಗೆಯ ಕೋಟ್ಯಾ-

→

ನುಕೋಟಿಯಲಿ ಮುಂಬೆಳೆದು ದಟ್ಟಣಿಸಿದ ವನಧಿ
ಸುಸ ಸಮೃದ್ಧವಾದತ್ತು ನೋಳ್ಪ ರಸದೃಷ್ಟಿಗೆ.

ಅಣ್ಣಯಗೌಡಾರ್ಯಂ ಊರವುಂದಿಯನೆಸಸಿ
ಘೋರಾಟವಿಯಲಿ ನುರ್ಗಿ ಸಸ್ಯ ಮುಳ್ಳು ಕಂಟಿಗಳ
ಕೊಚ್ಚಿ ಕಂಡರಿಸಿ ಬೇರುಗಳ ಸಹಿತ ಕಿತ್ತೊಗೆದು
ಉಚ್ಚಾಟಿಸಿ ಭುವಿಯಂ ಹಸನುಗೊಳಿಸಿ ಭರದಿಂ
ನೆಟ್ಟರ್ ನಳನಳಿಸುವ ಬೂಂದು ಸಸಿಯಂ ಸಹಸ್ರ
ಕೋಟಿಯಲಿ. ಎಳೆಸಸಿ ಮಳೆ ನೀರುಂಡು ಬೆಳೆದುವು
ಅತ್ತಿತ್ತ ಹರೆಗೈಗಳ್ ಚಾಚಿ ಉದ್ದಗಲದೊಳ್.
ಕಾನನದ ಕನಕಲಕ್ಷ್ಮಿಯಂ ಒಲಿಸಿ ಬಂಧುರ
ಬಲೋನ್ಮತ್ತ ಬಾಹುಗಳಿಂ ತಬ್ಬಿದರ್ ಪರಮ
ರಮಣನ ತೆರದಲಿ. ಭಯಾನ್ವಿತ ಬನಗತ್ತಲೆಯ
ಕರ್ಮುಗಿಲ್ ದೂರಾಗೆ ಬಿಡಿಬಿಡಿಯಲಿ ಸುವಿರಳ
ಗತಿಯಲಿ ಮನರಂಜಿಸಿದಳ್ ಬೂಂದು ಬನರಾಣಿ.
ಆನೆಗಳಿಗೆ ಸುಖಾಶ್ರಯವಿತ್ತ ಅಟವಿ ಅತ್ತಿಯ
ದ್ರುಮ ಪರಿವೇಶ್ಟಿತವಿರೆ "ಅತ್ತೀಬನ" ಎಂಬ
ನಲ್‌ವೆಸರ್ ಪಡೆದು ಪ್ರಸಿದ್ಧವಾಯ್ತುಂದಿಗುಂ.
ಕೆಲವಾನು ವರ್ಷಮಾನಂಗಳಲಿ "ಅತ್ತೀಬನ
ಎಸ್ಟೇಟ್" ಪ್ರಖ್ಯಾತವಾಯ್ತು ತೋಂಟಗಳ ವರ
ಶ್ರೇಣಿಯಲಿ. ಭಾಗ್ಯಲಕ್ಷ್ಮಿ ಒಲಿದಳ್ ಬಲ್ಮೆಯಿಂ.

ಅಂದು, ಶತಮಾನ ಪೂರ್ವದೊಳ್ ಸರಕಾರೀಯ
ಯಂತ್ರ ನೆರೆ ರೂಪುಗೊಳ್ಳದಕಾಲ. ಜಿಲ್ಲೆಗಳ್,
ತಾಲ್ಲೂಕುಗಳ್, ಹೋಬಳಿಗಳ್ ಸರ್ವತ್ರ ಸಮನಿಸಿ
ಭಾಗಭಾಗಳ್ ರೂಪುಗೊಳ್ಳದಿಹ ಕಾಲ. ವರ

←

ತಂತ್ರಜ್ಞಾನ ಕಣ್ತೆರೆಯುದ ಕಡು ಮುಗ್ಧಕಾಲ.
ಎಲ್ಲ ರಂಗಗಳಲಿ ಹೆಣಗಿ ತಂತ್ರಜ್ಞಾನವಂ
ರೂಪಿಸಲ್ ಮುಂದೈದರ್ ಅಣ್ಣಯ್ಯಗೌಡರ್.
ಜನಗಣಮನಮತಿಗಳಿಗೆ ನವ ನಾಗರಿಕತೆಯ
ಚೆಂಬೆಳಕಿನ ಛವಿಯಂ ಹರಿಸಿ ಜ್ಞಾನೋದಯದ
ಪರಮಗತಿಗೆ ಹಚ್ಚಲ್ ಶ್ರಮಿಸಿದರ್ ಸಂತತ.

ಅಣ್ಣಯ್ಯಗೌಡರ್ ಸಂಸಾರ ಸಹಿತ ಓರೋರ್ಮೆ
ತಮ್ಮೂರಿನ ಅವಿಭಕ್ತ ಕುಟುಂಬವ ನೆಲೆಮನೆ –
ಭಾಗಮನೆಗೆ ಪೋಗಿಬರುತಿರೆ ಸಲಸಲಕು
ನೇರ ಹಾದಿಯಂ ಕಂಡರಿತು ಹಿರಿನೆಟ್ಟಗಳ
ಮುಮ್ಮಯ್ಯ ದಟ್ಟ ಕಾನನದ ಮಧ್ಯೆ ಅತೀವ
ಅಂಕುಡೊಂಕಿನ ಚರಣರೇಖಾ ಪಥಂವಿಡಿದು
ನಿರೂಪಿಸಿದರ್ ಹಾದಿಯಂ. ಅದಂ ಸರಕಾರ
ಅನುಮೋದಿಸೆ ಸಮತಟ್ಟುಗೊಳಿಸಿ ಸರಿಪಡಿಸಲ್
ಅಣ್ಣಯ್ಯಗೌಡರದೆ ಸಹಕಾರ ಮೇಣ್ ಸಹಾಯ
ಸರಕಾರದ ಅಧಿಕಾರಿಗಳಿಂಗೆ, ಎನಲ್ಕಾ
ಅವರ ದಿವ್ಯ ಸಹಾಯಕಾಗಿ ಪ್ರಶಸ್ತಿಯಂ
ನೀಡಿ ಮಾನಿಸಿತು ಸರಕಾರೀ ಮಂಡಳಿ. ಚರಣ
ಪಥಂ ರಸ್ತೆಯ ಸ್ವರೂಪ ಪಡೆದುದು ಮತ್ತಮಾ
ಕಾಲಕಾಲದ ದುರಸ್ತಿಯಲಿ ನೇರ್ಪಟ್ಟು ನೆರೆ
ಬಳಕೆಗೆ ಅನುಕೂಲಮಿರೆ ಲೋಕದ ಲೋಗರಿಗೆ
ವರದಾನಮಾಯ್ತು ಅರವತ್ತು ಮೈಲಿಯ ಹಾದಿ.
ಬೂಂದುಬನ ಮುಂಬೆಳೆದು ಸಿರಿಹೊನ್ನ ಗಣಿಯಾಗಿ
ಸುಖಶಾಂತಿಯಂ ನೀಡಿದುದು ಹೃನ್ಮನಗಳಿಂಗೆ.

→

ಅನಂದ ಬಂಧುಪತೆಯಿಂದೆ ಮುದಿಸಿದ ಚಿತ್ತ
ಚಂದ್ರಶೋಭಿತಾಂತರಿಕ್ಷದವೊಲ್ ತಣಿಸಿದತ್ತು
ಕೈಂಕರ್ಯವಂ. ಜ್ಞಾನಮುಂ ರಾಗಮುಯ ಜೀವ
ಮುಯ ಊರ್ಧ್ವಮುಖಿಮುಯು ಮುನ್ನಡೆಯೆ ದಿನದಿನಂ.
ಆ ತೋಷ ಸುಖಶಾಂತಿಗಳ್ ಬಹಳ ದಿನಮುಳಿದು
ಬಾಳಲಿಲ್ಲ ; ಉಳಿಯಲಿಲ್ಲ. ವಿಧಿ ಎಲ್ಲಿ, ಯಾವೆಡೆಯು
ಮೂಲೆಯಲಿ ಕಾದಿರ್ದುದೊ ಹೊಂಚಿ. ಬಿಗಿಪಾಶವ
ಬೀಸಿ ಒಗೆಯಿತು ಆರು ಅರಿಯದೊಲ್.

ಎಲ್ಲರ್
ಬಾಗಮುನೆಗೈದಿರೆ ಕುಟುಂಬಸೌಖ್ಯದ ತನಿರಸ
ಮೊಗೆದುಂಡು ಎಳೆಯರ ಮೆಲುನಗೆ ಎಳೆ ದನಿಗಳ
ಮೃದುವಚನಗಳ ಹಾಸ್ಯಪರಿಹಾಸ್ಯ ಹರಿದತ್ತು
ಜನರಾಶಿಯುಲಿ. ಆವ ದೈವದಾಣತಿ ನಕ್ಕು
ಅಣಕದ ಪೊಗರೇಳಿಸಿದುದೊ ಏನೊ, ತನ್ನಬಾಳ್
ರುದ್ರಭೀಷಣ ದುರಂತಮಂ ಕಂಡಳಂಗನೆ.
ಪ್ರಾತಃಕಾಲೀನ ಎಳೆ ಬಿಸಿಲಿಂಗೆ ಮೈಗೊಟ್ಟು
ಪೊರಪೊಂಟರ್ ಅಣ್ಣಯ್ಯಗೌಡರ್ ಪೊಳಲಿಂಗೆ
ಅಶ್ವಾರೋಹಿಯಾಗಿ. ಪುರುಪಿನಿಂದೋಡಿತಾ
ಕುದುರೆ ನಾಗಾಲೋಟದಿಂ. ದೂರ ಪಯಣಿಸುವ
ಮುನ್ನಮೆ ಭಯಭೀತಿಯೆ ನುಗ್ಗಿ ಬಂದಂತೆವೊಲ್
ಬಿರುಗಾಳಿ ಭೋರೆಂದು ಬೀಸಿದುದು ಬಂಡೆಳ್ದು.
ಯಮನಗರಿಯಿಂದೈದುದೊ ಎನೆ ಬೀಸಿವೀಸಿದುದು
ಸುಯ್ಯನೆ ಸುಳಿಸುತ್ತಿ ! ಕುದುರೆಯ ಕಣ್ಣಿಗೆ ಧೂಳ್
ಬಿಳ್ದು ತಿರ್ರನೆ ಬುಗುರಿಯೊಲ್ ತಿರುಗಿ ಬಿಳ್ದತ್ತು

→

ಆಯಿತಪ್ಪಿ! ಆಗಳೇಂ ಗಾಡಪ ಗತಿ? ತಲೆಯೊಡೆದು
ನೆತ್ತರ್ ಬಸಿದು ಬಿದ್ದಿರೆ ಬಸವಳಿದು, ಪಥಿಕರ್
ಕಂಡೆತ್ತಿ ತಂದರ್ ಮನೆಗೆ ದೋಲಿಯುಲಿ. ಸತಿಗೆ
ಒದವಿದ ಪರಮದುಃಖ ಸಂಕಟಕೆಣೆಯುಂಟೇ?
ಕಂಗೆಟ್ಟ ವರಗೌರಮ್ಮ ಕೈಗೆಟುಕಿದ ತನ್ನ
ಕಂದರನೊರ್ವನಂ ಹತಗತಿಗೆತ್ತ ರಮಣಂಗೆ
ಸುತ್ತಿಸುಳಿದು ಗಂಡವದೇನಿರ್ದೊಡದೆಮ್ಮನುಂ
ಬಡಿದು ಬಾರಿಸುತೊಯ್ಯಲೆಂದು ಪರಕೆಗೊಂಡಳ್.
ಭೀಕರ ಭಯ ಭ್ರಾಂತಿಯ ಲಾವಾರಸ ಜಸ್ರನೆ
ನರನಾಡಿಗಳಲಿ ಪ್ರವಹಿಸಿ ಹೆಪ್ಪಾಗುತಿರೆ
ಹೃನ್ಮನಗಳಿಗೆ ಕತ್ತಲೆ ಕವಿದುದು ದಟ್ಟಣಿಸಿ.
ಔಷದೋಪಚಾರ ಶೈತ್ಯೋಪಚಾರ ಸಮಸ್ತಂ,
ಅಳುಗೋಳು ಪರಕೆ ಎಲ್ಲವಂ ಬದಿಗೊತ್ತುತ್ತೆ
ಹಾರಿದುದು ಪ್ರಾಣನಿಧಿ ಸಗ್ಗದೇಣಿಗೆ. ಮಡದಿ
ಮಕ್ಕಳ್ ಅನಾಥರಾದರ್ ತುಂಬಿದ ಮನೆಯೊಳ್
ಇರ್ದೊಡಂ. ಅಲ್ಲಿಗಾಯ್ತು ಪ್ರಗತಿ ಸುಖಶಾಂತಿ
ಸಂತೋಷಗಳ ಸಾಧನೆ. ಅಂತಲ್ಲದೆಯುಂ
ಹಿಂಸೆ ಕಿರುಕುಳಗಳ್ ಕೊರಳ್ಗೆತ್ತುವು ಮಕ್ಕಳ
ತಾಯಿಗೆ. ಎಳೆ ಮಕ್ಕಳೈವರೊಡಂ ಕಂಬನಿಯ
ಕಡಲಿನಲಿ ಮಿಂದೇಳುವಳ್ ದಿನದಿನಂ. ಕ್ರೂರ
ದುರ್ವಿಧಿಯ ಕೃಪಾಪೋಷಿತ ಪಾಶ ಬಿಳ್ದತ್ತು
ಮತ್ತೆಮತ್ತೆ. ಮನೆಯ ಹಿರಿಯಣ್ಣಂದಿರೀರ್ವರ್
ಅತ್ಯಲ್ಪ ಕಾಲಗತಿಯಲಿ ಮಾಸಂಪದ್ಭರಿತ
ಆಸ್ತಿಯಂ ಮಡದಿ ಮಕ್ಕಳಂ ಕೈವಿಟ್ಟು ಕಿರಿ

→

ಸಹೋದರ ಅಣ್ಣಯ್ಯಗೌಡಾರ್ಯನಂ ಬಿಟ್ಟು
ಬಾಳಲಾರದ ಪಾಂಗಿನಲಿ ನಡೆದರ್ ಸಗ್ಗದ
ಪಥವಿಡಿದು.

ಆಗಳೇಂ ಬಂಡೆಳ್ದ ಅಜ್ಞಾನಿ
ದಾಯಾದಿಗಳ್ ಧೂರ್ತಗತಿಯಲ್ಲಿ ಮುಂಗೆತ್ತ
ಶತಮೂರ್ಖ ಮನಮತಿಗಳ ಉಪಟಳದುದ್ರೇಕಂ?
ಸದ್ವಂಶದ ಕೀರ್ತಿ ಕಳಸಮಂ ಉರುಳಿಸಿ ಒದ್ದು
ಸೆಂಡಾಡಿ ಗುದ್ದಾಡಿ ನ್ಯಾಯಾಲಯಗಳ ಕಿವಿ
ಕಿಡಿಸಿ ಬಂಧು ಬಾಂಧವರ ತಲೆಕೆಡಿಸಿದರ್ ಕಟು
ಕಠಿಣವಗೆಯಲಿ. ಕಬ್ಬಿನ ತೋಂಟಕೆ ಸೂಕರಂ
ನುಗ್ಗಿ ತಿಂಬುವನಿತು ಅಗಿದು ತಿಂದು ಕಚ್ಚಿ ಪುಡಿ
ಪುಡಿಗೈದು ಪಾಳ್ಗೆಯ್ದುವೊಲಾಯ್ತು. ಮನೆತನದ
ಪಾರವಿಲ್ಲದ ಮಹೋನ್ನತ ಸತ್ಯ ಸಂಪದಂ
ಕೈವಿಟ್ಟಿತು ದಾಯಾದಿ ಮಚ್ಚರ ಕುದಿಕುದಿದು
ಗಾರಾಗಿ. ನಳನಳಿಸುತ ಮುಂಬೆಳೆದು ಹೊನ್ನಿನ
ಗಣಿಯಾಗಿ ಸೈಯೊಡೆದ ಬೂಂದುಬನಗಳೇ ಪರ
ಭಾರೆಯಾದುವು ಸಮಸ್ತ ಸಂಯೋಜನೆಗಳಂ
ಭೂಗತಗೊಳಿಸಿ. ಹಾಹಾಕರಿಸಿದುವು ಮನೆತನದ
ದೇವಗಣ! ಹೀಹೀಕರಿಸಿದುವು ಹಲ್ಕಿರಿದು ನಗುವ
ಪ್ರೇತಗಣ! ಅಂತಾದೊಡಂ ಸ್ಥಿತಿಗತಿಯರಿತು
ಯೋಚಿಸದೆ ಒಳಗಣ್ಣು ತೆರೆಯದೆ ಪರಿಜ್ಞಾನದ
ಸಂಪುಟವನೊಡೆಯದೆ ಪರಮ ಮೂರ್ಖತನದಿಂದೆ
ದುರಾಡಳಿತದ ಸೂತ್ರವಿಡಿದರ್ ಕುಮತಿ ಕರ್ಮ
ವಿಶೇಷ ಪರಿಪೂಜಕರಾಗಿ, ಮನ ಸ್ಯೈ ಮರೆತು.

→

ಗೌರಮ್ಮನುಂ ದುಃಖದ ಕಡಲಲಿ ಮುಳುಗೇಳುತೆ
ಕಳೆದಳೆನಿತೊ ದಿನಮಾಸಂಗಳ್ ಬಲು ಸಂಕಟದ
ಸುಯ್ಲ್ಗಳಿಡಿಸುತ. ಕಣ್ಣಿದ್ದುರ್ ಕುರುಡಾದ ಕುಟುಂಬ
ಕಡೆಗಣಿಸಿತು ತಬ್ಬಲಿ ಮಕ್ಕಳಂ ಮತ್ತಮಾ
ದುಃಖಿತ ವಿಧವೆ ತಾಯಿಯುಂ. ಕಟುಮನದ ಕಟುಕ
ಹೃದಯಿಗಳ್ ಕಟುವರ್ತನೆಯಿಂದೆ ಪ್ರಾಣಮಂ
ಹಿಂಡಿ ಹೀರಿ ಗಾಣವಾಡಿದರ್ ಘೋರತಮ
ವಿಷಮಂ ನೆರೆ ಕಾರಿ. ಒಡಲ ಶೋಕ ಜ್ವಾಲೆಯುದು
ರೋಮರೋಮಮಂ ಸುಡುತಲಿರ್ದುದು ಚಣಚಣಂ.
ಬುಡಗಳಚಿದೆಳೆ ಬಾಳೆ ಸಸಿಯೊಲ್ ನಲುಗಿನೊಂದು
ನೀರಾಗಿ ಕಂಬನಿಯು ಕಡಲಾಗಿ ಬಿಕ್ಕಿದಳ್.
ತೌರುಮನೆ ಚಂದ್ರಸಾಲೆಗೆ ಕೆಲದಿನಮಾನಂ
ಪೋಗಿಬರುವ ಯೋಚನೆಯು ಮೂಡಿದುದುಮನದಲಿ.
ರಮಣನಿರುವಂದು ಅಶ್ವಾರೋಹಿತನದಿಂದೆ
ಕಳೆಯುತಿರ್ದುದು ದೂರದ ಹಾದಿ. ಜೊತೆಜೊತೆಯಲಿ
ಸಾಗುತಿರ್ದುದು ಪಯಣ. ಇನ್ನದಂ ನೆನೆವುದೇ
ತನಗುಳಿದ ಗತಿ. ಗೌರಮ್ಮ ತನ್ನ ತೌರುಮನೆಯಾ
ದೂರದ ಪಥಮಂ ನೆನೆದು ಚಿಂತಿಸಿದಳ್ ಕೊರಗಿ.
ಸಹಾಯಕರಿಲ್ಲದೆ ಎಳೆಯರೊಂದಿಗೆ ಪಯಣಂ
ಸಾಮಾನ್ಯಮೇನಲ್ಲ. ನೆರಂಗೂಡುವರಿಲ್ಲ.
ವರ್ಷವೆರಡರ ಕೊನೆಯ ಕಂದನುಂ ನಡೆಯನೆನೆ.
ಎತ್ತಿಕೊಬುವ ಶ್ರಮಮಂ ನೆನೆದು ಮರುಗುವಳ್.
ಆದೊಡಂ ದಿನದಿನದ ಸಂಕಷ್ಟದಿಂ ಅಲ್ಪ
ಸಮಯಮಾದೊಡಂ ದೂರವಿರೆ ಬಯಸಿತು ಮನಂ.

→

ದುಃಖಸಂಕಟಂ ಕೊರಳನೊತ್ತುತಲಿರೆ ಮಾತಿನ
ಸ್ವರ ಉಡುಗಿದುದು ಬಾಯೊಳ್. ಕಂಬನಿಯ ಕೋಡಿ
ಉಕ್ಕಿ ಹರಿದುದು ನಯನ ದ್ವಯಗಳಲಿ. ಗೌರಮ್ಮ
ಮನೆಬಿಟ್ಟಳ್ ಪಿಂಬಾಗಿಲಿಂ ಪೊಳ್ತು ಮೂಡುವ
ಮುನ್ನ. ಸದ್ವಂಶದ ಹಿರಿಯ ಗೃಹ– ಪೆಸರಾಂತ
ವೈಭವೋಪೇತ ಮನೆತನದ ಗೃಹ– ಸದ್ದಿನ
ಸೊಲ್ಲಿಲ್ಲದೆ, ಅಕ್ಕರೆಯ ಬೀಳ್ಕೊಡಿಗೆಯಿಲ್ಲದೆ
ನೋಡಿಯೇ ನೋಡಿತು ಅನಾಥರ ನಿರ್ಗಮನವಂ.
ಮನೆಯ ಹಿರಿಕಿರಿ ನಾಯಿಗಳ್ ಬೊಗಳಿ ಬೊಳ್ಳಿಕ್ಕಿ
ಜೊಲ್ಲು ಸುರಿಸಿ ಬಾಲವಾಡಿಸುತೆ ಪ್ರಾಂಗಣದ
ಅಂಚಿನಲಿ ಸಾಲ್ಗಟ್ಟಿ ನಿಂತು ನೋನೋಡುತ್ತೆ
ಬೀಳ್ಕೊಟ್ಟುವು ನಲವಿಂ. ಮುಂಗೋಳಿಗಳ್ ರೆಕ್ಕೆ
ಬಡಿದು ಕೂಗಿದುವು ಕೊರಳೆತ್ತಿ ದುಃಖ ಗರ್ಭಿತ
ಸ್ವರದಿಂ. ಮುಂಬಕ್ಕಿಗಳೆಲ್ಲೋ ಅರಚಿದುವು
ವೀತಗಾನ ಹರಿಸುವೊಲ್. ಕೂಗಿತು ಗೂಬೆ ಗೂ
ಗೂ ಎಂದು. ಮಂಗಲಾಮಂಗಲಂ ಗಮನಿಸದೆ
ನಡೆದಳಾ ಎಳೆಮಕ್ಕಳತಾಯಿ ಎಳೆದಿಂಗಳ
ಎಳೆಬೆಳಕಿನಲಿ ಮಕ್ಕಳೈವರ ಮಧ್ಯೆ ಅನನ್ಯ
ದುಃಖಾರ್ತೆಯಾಗಿ. ಅಂದು, ಪತಿ ಮೆಚ್ಚಿದ ಸತಿಯೆನೆ
ಧರ್ಮಪದವನೊಪ್ಪಿ ಹಸೆಮಣೆಯ ಪೆಣ್
ಹರಿದ್ರಾ ಕುಂಕುಮ ಸುಶೋಭಿತೆಯೈಸಿ ಪತಿಯ
ಹಿಂದೆ ದೇವಾಂಗನೆಯೊಲ್ ತಾನೈದ ದಿವಸಮಂ
ನೆನೆದಳ್ ಮನದಿ. ವೈಭವೋಪೇತ ಸಂಲಗ್ನ
ಸಮಾರಂಭದೊಳ್ ಕಳಸ ಕನ್ನಡಿ ವಾದ್ಯಗಳ

→

ಸಹಿತ ವಿಜೃಂಭಣೆಯಲಿ ಸ್ವಾಗತ ಬಯಸಿರ್ದ
ಪತಿಯ ಸದ್ವಂಶಗೃಹ ಕಣ್ಣಿರ್ದುಂ ಕುರುಡೆನೆ
ಇಂದು ಬೀಳ್ಕೊಟ್ಟ ಪರಿಯಂ ನೆನೆದಳ್ ದುಃಖಿನಿ.
ಬಟ್ಟೆ ಬರೆಗಳಂ ಗಂಟು ಕಟ್ಟಿದ ಹೆಗ್ಗಂಟು
ತಲೆಯ ಮೇಲೆ, ಸೊಂಟದಲಿ ಕಿರಿಯ ಶಿಶು, ಸುತ್ತಲ್
ನಾಲ್ವರಣುಗರು ಪಯಣದೊತ್ತಾಸೆಗೆ. ದುಃಖವೆ
ಮೈವೆತ್ತವೊಲ್ ಸಂಕಟವೆ ರೂಪುಗೊಂಡವೊಲ್
ನಡೆದಳಾ ಗೌರಾಂಗಿನಿ ಸುದೂರದ ತವರುಮನೆ
ಚಂದ್ರಸಾಲೆಯುಂ ಗುರಿಗೊಂಡು. ದುಃಖಭಾರದ
ಹೃದಯಂ ಹೊತ್ತಸತಿಗೆ ಕಾಲ್ನಡಿಗೆಯೆ ಪರಮ
ಗತಿ. ವನವರ್ತ್ಮದೊಳ್ ಮೃಗಚರಣ ರೇಖಾ
ಪಥವೇ ಪಥಂ. ಮಕ್ಕಳೆಳೆಯರಿರೆ ನಡಿಗೆಯುಂ
ಅಗಾಧ ಪರಿಶ್ರಮ. ಹೊಳೆ ನದಿ ಕಾಲ್ವಾಯಿಗಳ
ದಾಂಟಿಸುತೆ, ಎಡವಿ ಬೀಳ್ವ ಕಂದಮ್ಮಗಳನುಂ
ಪಿಡಿದೆತ್ತಿ ಸಂತವಿಸಿ ಕಂಬನಿಯ ತೊಡೆಯುತೆ,
ನಲ್ಮಾತುಗಳಿಂದುಪಚರಿಸುವಳ್ ಸಂತೈಸುತೆ.
ಕೆಲವೊರ್ಮೆ ವಿಶ್ರಾಂತಿಯುಂ ಪಡೆದಪಳ್ ಹಾದಿ
ಅಂಚಿನ ಮರಗಳ ತಣ್ಣೆಳಲಿ ಕುಳ್ತು. ಒಡಲೊಳ್
ಭಗೆದಾವರವೆಳ್ದು ಸುಡುವುದು ದಾವಾನಲದ
ಮಾಳ್ಕೆಯಲಿ. ಕಿರಿಯ ಮಗುವೆತ್ತಿಕೊಂಬಳ್ ಮನತಣಿಸೆ.
ಹಾದಿಯಂಚಿನ ಆವುದಾವುದೊ ಮನೆಯಲಿ ನಸು
ವೊಳ್ತು ಊಟ ವಿಶ್ರಾಂತಿ ಪಡೆದ ಬಳಿಕ ಮತ್ತೆ
ಮುಂಪಯಣ. ಒಮ್ಮೆ ಮಗುವಂಬಗಲೊಳೆತ್ತಿ ಮತ್ತೆ
ಭುಜದೊಳೆತ್ತಿ ಮತ್ತೊಮ್ಮೆ ನಡೆಸುತೆ ಭಂಗದಿಂ

→

ಕಳೆಯುತಿರ್ದುದು ಹಾದಿ. ಬನದಲಿ ನಿಡು ಬಯಲಲಿ
ಸಾಗಿದುದು ತಾಯಿ ಮಕ್ಕಳ ದಂಡು. ಕೆಲವೊರ್ಮೆ
ಬಂಧು ಬಾಂಧವರ ಜೋಡೆತ್ತುಗಳ ಗಾಡಿಯುಂ
ಒದವಿದುದು ನಸುದೂರ. ಅಂತಿಂತು, ಎನಿತೊ ಪಥ
ಸಾಗಿದ ಬಳಿಕ ಚಂದ್ರಸಾಲಿಯಿಂ ದುರ್ವಾರ್ತೆ
ನುಗ್ಗಿ ಬಂದುದು ಕಿವಿ ಕೋರೈಸುವೊಲ್! ಇರ್ದೊಬ್ಬ
ಅಣ್ಣ ಗತಿಸಿ ಸತಿಯಂ ಕೈವಿಟ್ಟು ಮಕ್ಕಳಂ
ಗತಿಹೀನರಂಗೊಳಿಸಿ ಸಗ್ಗ ಸೋಪಾನವಂ
ಅಡರಿದ ವಿಚಾರಂ! ಗತಿಯುಂ ಎರಡುಕಡೆಯುಂ
ಇಲ್ಲವಾಯ್ತೆಂದೆನುತೆ ಮನನೊಂದು ಗೋಳಾಡಿ
ಕರೆದಳ್ ನಿಡುಗಂಬನಿಯ. ದುಃಖದ ಕೋಡಿಯುಂ
ಹರಿದುದು ಕೊರಳ್ತುಂಬಿ. ಕಡುಚಿಂತೆಯ ಕಡಲಲಿ
ಮುಳುಗೆದ್ದಳ್ ವರಗೃಹಣಿ.

ಗಿರಿ ಗಹ್ವರಗಳಲ್ಲಿ,
ಬನದೈಸಿರಿಯುಕ್ಕಿ ಕಂಗೊಳಿಸುತಿದೆ ಮುಂದೆ
ವೈಕುಂಠ ಕೈಲಾಸ ಲೋಕಂಗಳನೆ ತೋರುವ
ಸಮ್ಮೋಹನೀಯ ಚಾರುದೃಶ್ಯಂ. ಮೇಘಾದ್ರಿ
ಚಿತ್ರಮುದ್ರಿತ ಸುನೀಲ ಜಲಧಿಯ ಕಲ್ಲೋಲ
ಸಂಮಥನ ಸಂಜಾತ ಮೌಕ್ತಿಕಾ ಫೇನಮಯ
ಸಂಭ್ರಮಮಯ ಕಾಸಾರಮೆಸೆದತ್ತು ಬೃಹದ್
ವಿಸ್ತಾರ ಕಣ್ ದಿಟ್ಟಿಗೆದುರಾಗಿ. ಗೌರಮ್ಮ
ಕೊಳದಂಚಿಗಿಳಿದು ಮುಖಮಜ್ಜನಂಗೈದು ಕೈಯ
ಬೊಗಸೆಯೊಳ್ ತಿಳಿನೀರ್ ಎತ್ತಿ ದಣಿದ ಮಕ್ಕಳ
ಕೈಕಾಲ್ ಮುಖಮಜ್ಜನಂಗೈದು ನೀರ್ಕುಡಿಸಿ
ತಾನು ಕುಡಿಯೆ ಕಂಬನಿ ಬೆರೆತುವು ತಿಳಿನೀರಂ. →

ಮುಂದಿನ ಹಾದಾರಿ ಕಳೆಯೆ, ನೆಟ್ಟ ನಿಟ್ಟಾಲಿ–
ಗಳಿಗೆ ಗೋಚರಿಸಿತು ಸುದೂರದೆದುರುವಕ್ಕದಿ
ಹಬ್ಬಿ ಹರಡಿದ ತೌರುಮನೆಯು ದಿವ್ಯ ಪಾಳೆಯವು.
ನೋಡಿಯೇ ನೋಡಿದಳ್ ಗೌರಮ್ಮ ಸುಖದುಃಖ
ತುಂಬಿದ ವಿಚಿತ್ರಾಕ್ಷಿಗಳಿಂ. ತಾಂ ಪುಟ್ಟಿನಿಂ
ತಾರುಣ್ಯದಂಚಿಸತನಕ ಆಡಿ ನಲಿದಾಡಿ
ಸೊಗದ ಸುಧೆಯನುಂಡ ಸುಸುಂದರಾಲಯ ಚಂದ್ರ
ಸಾಲೆ. ಬಲು ಪುರಾತನಮಿರ್ದೊಡಂ ನವೀನವ
ನಾಗರಿಕತೆಯಿಂ ಮಿಂಚುವ ಹೆಂಚಿನ ಹೆಮ್ಮನೆ.
ಮತ್ತೆ ನೋಡಿದಳ್ ಕಣ್ಣಿಟ್ಟು. ಒಡನೊಡನೆ ಕಣ್
ತುಂಬಿ ಕಂಬನಿ ಧಾರೆಧಾರೆಯಾಗಿ ಸುರಿದತ್ತು
ತಾನೆ ತಾನ್ಯೈಸಿ. ಮುಂಕೊಂಡು ಮುಂದಿನ ಹತ್ತು
ನೂರು ಹಾದಿಯುಂ ಕಳೆದು ಮನೆಯುಂ ಮುಟ್ಟುವೊಡೆ
ತನು ಕುಸಿದು ಬೀಳುವೊಲ್ ತತ್ತರಿಸಿ ತಲ್ಲಣಿಸಿ
ಕೊತಕೊತ ಕುದಿದುದಾತ್ಮ ಸಂಕಟದ ಸುಡುಬೆಂಕೆ.
ಕಣ್ಣುದ್ದಿ ಉಸ್ಸೆಂದು ಮುಂದ್ಯೈದು ಮೆಟ್ಟಿಲಂ
ಏರುತ್ತೇರಿ ಮಕ್ಕಳೊಡನೆ ಒಳಮನೆಗೈದಾ
ನಾದಿನಿ ಗೌರಮ್ಮನಂ ಕಡು ದುಃಖದ ಕಂಗಳಿಂ
ಸ್ವಾಗತಿಸಿದಳತ್ತಿಗೆ. ಈರ್ವರುಂ ಕೊರಳ್ಕಟ್ಟಿ
ಬಾಹುಬಳ್ಳಿಗಳಿಂದಾಲಂಗಿಸಿ ಒಡಲ ದುಃಖ
ಸಂಕಟಗಳಂ ತೋಡಿ ಚೆಲ್ಲಿ ಸೂಸಿದರ್ ತನು
ಮನಂಗಳ್ ಸೋಲ್ವನ್ನ. ಬಳಿಕಲಾ ನತದೃಷ್ಟ
ವನಿತೆಯರ್ ಪರಸ್ಪರ ದುರದೃಷ್ಟಮಂ ಹಳಿದು
ತಮ್ಮನುಂ ತಾಮೆ ಸಂತೈಸಿದರ್ ಹಲವು ಹತ್ತು

ಮಕ್ಕಳ ಮನಃಕುಂದ ಕುಟ್ಮಲಗಳಿಗೆ ಸಭ್ಯ
ಸಾಂತ್ವನಂಗೊಳಿಸೆ.
ಕಾಲದ ಪಕ್ಷಿ ಪಗಲಿರುಳ್ಗಳ
ಎರೆಂಕೆದ್ವಯಂ ಬಿದಿರ್ಚಿ ಬೀಸಿ ಸಾರ್ದುದು
ಚಣಂ ತಂಗದೆ ತನ್ನೊಂದು ಬಿಗುವಾನದ ಭವ್ಯ
ಪನ್ನತಿಕೆಯಲಿ ಧಾವಿಸುತ್ತೆ. ಕಾಲಪುರುಷನ
ಬೆಂಬೊತ್ತಿ ಸ್ಪರ್ಧೆ ಹೂಡಿದೊಲ್ ಭೂಮಿಯಂ ಉತ್ತಿ
ಬಿತ್ತಿ ಕಾಂಚನ ಖನಿಜು ಖನನದ ಪರಿಶ್ರಮದಿ
ನಿರುತಳಾದಳ್ ವ್ಯಥಿತ ಸತಿ ಬಾಗಮನೆ ಸುತರ
ದಿವ್ಯ ಸಹಕಾರದಿಂ. ಸಂದುವೆನಿತೊ ದಿನ
ಮಾನಂ. ದಿನದಿನ ಪ್ರಗತಿಯು ಪಥವಂ ಪಿಡಿದು
ಸಾಗಿಯುಂ ಮನದಿ ಕೊರಗಿ ಕರಗಿ ಅಡರಿದಳಾ
ಗೃಹಿಣಿ ರುಗ್ಣ ಶಯ್ಯೆಯನು. ಮನೆ ಮದ್ದು, ಪಸುರ್
ಮದ್ದು, ಪಂಡಿತರ ಮದ್ದು ಪ್ಯೆಗೂಡದಿರೆ ಮನ
ನೊಂದು ನಮೆದ ಗೌರಮ್ಮ ನಿಂದಳ್ ಅತ್ತಿಗೆಯು
ಸರ್ವೋತ್ತಮ ಪಥ್ಯೋಪಚಾರಕೆ. ಊರಿನಾ
ಬಳ್ಳಿದರ್ ಭಿಷಗ್ರತ್ನರ್ ಗಮಿಸಿದರ್ ಅಮಿತ
ಶ್ರದ್ಧೆಯಿಂ. ಆರ್ಯದೊಡಂ ರೋಗದ ಬಾಧೆಯುಂ
ಕಳೆವ ಓಸಧಿಯುಂ ಅರಿಯರ್. ಕಾಲಕ್ರಮದಲಿ
ರೋಗವುಲ್ಬಣಿಸಿ ಪತಿಯುಪಥವಂ ಪಿಡಿದಳ್
ಐವರು ಮಕ್ಕಳ ತಾಯಿ. ಭೋಂಕನೆ ಕಡುಕತ್ತಲೆ
ಕವಿದುದು ಮನೆತನಕೆ. ತಲ್ಲಣಿಸಿದುವು ಮನಮತಿಗಳ್
ದಿಕ್ಕೆಟ್ಟು. ಮನೆಮಾರಿರುತಿರ್ದು, ಮನೆಯ ತುಂಬ
ಮಕ್ಕಳಿರುತಿರ್ದು ತಾನೇಕಾಂಗಿಯಾದಳಾ

→

ಗೌರಮ್ಮ. ಕಂಬನಿಯು ಕಾಲುವೆ ಹರಿದುದು ಎಡೆ
ಬಿಡದೆ. ತಾನೈದುದು ಹಲಕೆಲವು ದಿನಗಳ ಭೇಟಿಯಿಂ
ತನ್ನವರ ದುಃಖಸಂಕಟದೊಳ್ ಪಾಲ್ಗೊಂಬುವ
ಸಲುವಾಗಿ. ಆದರಾ ದುರ್ವಿಧಿಯು ಕ್ರೂರತಮ
ಪಾಶ ಕೊರಳಿಂಗೆತ್ತುದು ತಾನರಿಯದ ತೆರದಿ.
ಗೌರಮ್ಮ ದಿನದಿನಂ ಭವದ ಬೆಂಕೆಯಲಿ ನೆರೆ
ಬೇಯುತ್ತೆ ನಿರ್ವಹಿಸಿದಳ್ ಸಕಲ ಕಾರ್ಯವುಂ
ಮನೆಯೊಡೆಯರಿರದ ಮನೆಯ ಹೊಣೆಗಾರಿಕೆ ಹೊತ್ತು.
ಕಣ್ಗೆ ಕತ್ತಲೆ ಕವಿಯುವನಿತು ಭಾರಾತಿಭಾರ.
ದಿನದಿನಂ ಆರ್ಥಿಕ ಸಮಸ್ಯೆ ಕೊರಳಿಗೆ ಉರುಳ್
ಬಿಗಿಯುತಿರೆ ಜೀವಗತಿ ನರಳಿದುದು ನೆರೆ ಹೊರಳಿ
ಹೊರಳಿ. ಕಟ್ಟುಸಿರ್ ನಿಟ್ಟುಸಿರಾಗಿ ಹರಿವುದು ಗತಿ
ತಪ್ಪಿ.

ಬಾಲ್ಯದೊಳ್ ತಾಂ ಕುಟುಂಬದೊಡನೆ ನಲಿದು
ಕುಣಿದು ಕುಪ್ಪಳಿಸಿ ಆಟವಾಡಿದ ದಿನಗಳಂ
ನೆನೆನೆನೆದು ಇಂದಿನ ಪರಿಸ್ಥಿತಿಯಂ ಹೋಲಿಸುತೆ
ಮರ್ಮರ ಮರುಗುವಳ್ ಗೌರಮ್ಮ. ದಿವಸಮಾನಗಳ್
ಬಲು ಭಂಗದಿಂ ಕಳೆದಪವು. ಆದರಾ ಮಾನಿನಿ
ಎರ್ದೆಗೆಡದೆ ನಿರ್ವಹಿಸಿದಳ್ ಕರ್ತವ್ಯಭಾರದ
ಭಾಗ್ಯಮಂ. ಒಳಹೊರಗೆ ಎನಿತೆನಿತು ಗೈದೊಡಂ
ಮುಗಿಯದ ಹೊಣೆ. ಅಣ್ಣನೈವರು ಮಕ್ಕಳೊಳ್ ಹಿರಿಯ
ಕಂದನೆರಡು ಪೆಣ್ಣಿರೆ, ಕಿರಿಯ ಮೂವರು ಚಿಣ್ಣ
ಬಾಲಕರ್, ಎನಲ್ಕಾ ಸಂಸಾರದ ಪೊಣೆಯುಂ
ಅಗಾಧಂ. ಮನಃಚಿತ್ತಗಳ ಚಿಂತನಮಂಥನ

→

ಯೋಗದಲಿ ತನ್ನ ತಾಂ ಸೈಪಿಟ್ಟು ಕಳೆದಳಲ್ಲಿ
ವರ್ಷಮಾನಂ. ಕಾಳ್ಗಿಚ್ಚುರಿವ ಬನದಲಿ ಸಿಲ್ಕಿದ
ಮಾಕ್ಕೆಯಲಿ ಉರಿಬಾಳು. ಭಂಗ ಬನ್ನಗಳುಗುವ
ರಣಗೋಳು. ಮರುಗಿದಪರಿಲ್ಲ. ಕರ ಸಹಾಯುವ
ನೀಳ್ಪರಿಲ್ಲ. ಹತ್ತು ಜನ ಮಕ್ಕಳ ಹೊಣೆಯದೇಂ
ಸಾಮಾನ್ಯಮೇ ? ಗೌರಮ್ಮನೆಲ್ಲವನು ಪೊತ್ತಳ್
ಗಂಭೀರಾಂಗಿಯಾಗಿ. ಪರಿಸ್ಥಿತಿಗನುಗಂಣಮಪ್ಪಿ
ಸಾಗಿತು ಪಥಂ. ತನ್ನ ಪಿರಿಯ ಕುವರರ್ಗೆ ಆ
ಸಂಪತ್ತಿನ ನಿರ್ವಹಣೆಯುಂ ಸಾಂಗಮರಿಪಿದ
ತಾಯಿಯುಂ ತಾಂ ಪತಿ ಗೃಹಕೆ ಪಿಂದಿರುಗುವ
ಯೋಚನೆಯೊಳ್ ಮನವಿಟ್ಟಳ್. ಅಂದು ಪತಿಯುಗಲಿ
ಮಕ್ಕಳ್ ಗತಿತಪ್ಪಿದ ಬಳಿಕ ತನ್ನನುಂ ಅತಿ
ಕೀಳ್ಮಾಡಿ ಕಡೆಗಣಿಸಿ ಕಡುಹಿಂಸೆಗುರಿಪಡಿಸಿ
ರಕ್ಕಸವಗೆಯಂ ತೋರ್ದ ಕುಟುಂಬದ ಹಿರಿಯನ
ನೆನೆಪು ಮರುಗಿರೆ ಮನದಿ ಮುಂದೇಂ ? ಎಂಬೊಂದು
ಗಂಭೀರ ಚಿಂತೆಯುಂ ಕಾವಳಿಸಿ ಗಾಣದೊಳ್
ಹಿಂಡಿದುದು ಹೃದಯಮಂ.

ಆಗಳಾ ಅಣುಗರೈದು
ಮಂದಿಯುಂ ಸುತ್ತುವರಿದು ಇಂತೆಂದರ್ ತಾಯಿ
ಗೌರಮ್ಮಂಗೆ,

“ಚಿಕ್ಕಿತೋಂಟಕೆ ಇನ್ನೆಬರಂ
ಹಿರಿಯರಾರ್ ಪುಗದೆ ಮುಟ್ಟದೆ ಮೂಸದೆ ಪಾಳ್
ಭುವಿಯಾಗಿ ಉಳಿದಿರ್ಪುದು. ನೀಮ್ ಅಲ್ಲಿಗುಯ್ದು
ಗುಡಿಸಿಲ್ ಕಟ್ಟಿ ಸೂಕ್ತತಲದಲಿ, ಅಲ್ಲಿಯೆ ಬಿಡದಿ

→

ಹೂಡಿ ಉತ್ತಿ ಬಿತ್ತಿ ಸಸಿಗಳಂ ನೆಟ್ಟರಾಯ್ತು.
ನಾಲ್ಕಾರು ವರ್ಷಗಳ್ ಭಂಗಮಂ ಸಹಿಸದೆಯೆ
ಗತಿಯಿಲ್ಲ. ನೀಂ ಧೈರ್ಯ ಸ್ಥೈರ್ಯದಿಂ ಕಾರ್ಯಮಂ
ಕೈಗೂಡಿಸಿದೊಡೆ ಮುಂದೆಮಗೆ ಕೊರತೆಯುಮಿಲ್ಲ."
ಕುಮಾರರ ನಲ್ ಸಲಹೆ ಮನೋಭಿತ್ತಿಯಂ ನೆರೆ
ಮುಟ್ಟಿ ಧೀಂಕಿಟ್ಟಿತು ತನುಮನ ಪುಳಕಗೊಳಿಸುವ
ಮಾಳ್ಕೆಯಲಿ.

ಪಶ್ಚಿಮ ದಿಗ್‌ಭಿತ್ತಿಯ ನೀಲಿಯಲಿ
ಕೆನ್ನೀಲ ಕಾಂತಿಯಂ ಒರೆದು ಸ್ವರ್ಣದುಂಡೆಯಂ
ಹೋಲಿ ಇಳಿದನಾ ಅರುಣಾರುಣಂ ಅಸ್ತಗಿರಿ
ಚೂಡದ ನಡುಬಂಡೆಯ ಮೇಲೆ. ಮಿಸುನಿ ಕಾಂತಿಯ
ಚೆಲ್ಲಿ ಸೂಸುತೆ ಜಗತ್‌ಮಂಡಲವ ತೊಳಗಿ ಬೆಳಗಿ
ಉಜ್ವಲೋಜ್ವಲಿಸಿ ರಂಜಿಸಿದನ್ ಮನಮತಿಗಳಂ
ತ್ರಿಲೋಕದಗಲ. ಅಸ್ತಮಾನೋತ್ಸವಂ ಅಮಿತ
ರಾಗದಿಂದಾಚರಿಸೆ ಘನವಾಯ್ತು ಸಿರಿಸೊಬಗು.
ಹೆಮ್ಮುಗಿಲ್ ಕೆಮ್ಮುಗಿಲ್ ಬೆಳ್ಮುಗಿಲ್ ಕೆನ್ನೀಲ
ಮುಗಿಲ್ ಹಳದಿ ಚೆಂದನ ಪೀತ ಕುಂಕುಮ ವರ್ಣ
ವರ್ಣೋಪಮಯ ಮುಗಿಲ್‌ಗಳ್ ಸುತ್ತಮುತ್ತ ಗುಡಿ
ಗೋಪುರಂಗಳ್ ಕಟ್ಟಿ ವಿಜೃಂಭಿಸಿರೆ ಚಿತ್ರ
ವಿಚಿತ್ರಗತಿಯಲಿ ಮೆರೆವತ್ತು ನೀಲಾಂಬರಂ.
ಸಾಯಂ ಸುಶಾಂತಿಯಲಿ ಗಿಡುಮರಗಳಾಶ್ರಯಿಸಿ
ವಿಶ್ರಾಂತಿಗೆತ್ತ ಪಕ್ಷಿಕುಲಕೋಟಿಯುಂ ಮನ
ಮುದಿಸಿ ರಾಗಾರುಣ ತಾನವಂ ಮೀಂಟೆ ಎರೆಂಕೆ
ಬಿದಿರ್ಚಿ ಒದರಿ ಹಾಡತೊಡಗಿದುವು ಕೊರಳೆತ್ತಿ.

→

ವಿವಿಧ ರಾಗಭಾವಗಳ ಸಂಮಿಶ್ರಣಂ ಮನ
ಮತಿಗಳಂ ತಟ್ಟಿ ಎದೆಗುಡಿಯ ಶ್ರೀಕೇಂದ್ರವಂ
ಮುಟ್ಟಿ ಭಕ್ತಿಭಾವದ ಅಲೆಗಳೇಳಿಸುತಿದ್ದುವು
ಶ್ರವ್ಯೆ ಷಡ್ಜಗಳ್ ವೆರಸಿದ ಸತ್ಯ ಸೌಂದರ್ಯದ
ಚೈತನ್ಯವಾರಾಶಿಗೆ.

ಮಿಣ್ಣನೆ ಯೋಚನೆಯ
ಕಲ್ಪವಂ ಕಡೆದು ಮನಮಥಿಸಿ ಹುಟ್ಟಿದ ಮನೆಯ
ಉದ್ಧಾರಮಂ ಗುರಿಯೊಳಿರ್ಕೆ ಎಳೆಯರಿರುತಿಹ
ತಬ್ಬಲಿಗಳ ಸುಖಾಶ್ರಯಮಂ ತನ್ನೊಳ್ ಹಾರೈಸಿ
ಕುವರರಂ ಕುರಿತು ನುಡಿದಳ್ ತಾಯಿ

"ಮಕ್ಕಳೇ,
ಈ ಮನೆಯ ಉದ್ಧಾರಮಂ ನೀಂ ನೆನೆದು ಮನದೆ,
ತಬ್ಬಲಿಗಳ್ ಪ್ರಾಪ್ತ ವಯಸ್ಕರಾಗಿ ಪ್ರೈಮನ
ತುಂಬುವನ್ನ ನಿಮ್ಮೊಳೀರ್ವರಿಲ್ಲಿಯೆ ಇರುತೆ
ಸಕಲ ಸಂಪದದ ಕ್ಷೇಮಾಭಿವೃದ್ಧಿಗೊಳಿಪುದು
ನಿಮ್ಮ ಕರ್ತವ್ಯ. ಆಂ ಪಿಂದಿರುಗಿ ಪೋವಪೆನ್
ಚಿಣ್ಣ ಮಕ್ಕಳ ಸಹಿತ."

ಗೌರಮ್ಮನ ದನಿಯಲಿ
ದೃಢತೆಯ ಸ್ಫೂರ್ತಿಕಿಡಿ ಹಾರಿದುವು ಎಳೆತನಂ
ಹಿರಿಯತನಕೇರಿಸುವ ವಾಕ್ಕಿಯಲಿ.

"ಅಹುದಹುದು,
ಆನಿಲ್ಲಿ ಸುಬ್ಬಯ್ಯನೊಡನಿರ್ದು ಈ ಕಾರ್ಯ
ವಾಹಿಯಂ ನಿರ್ವಹಿಸುವೆ. ನೀವ್ ಅಣ್ಣಯ್ಯ ಮತ್ತಂ
ತಮ್ಮಂದಿರೊಡನೆ ಪಿಂದಿರುಗಿ ಪೋಪುದೊಳ್ಳಿತು."

→

ಅಂತೆಂದವಂ ತೃತೀಯ ಪುತ್ರ ಚನ್ನಯ್ಯಂ.

ಕುಲಪುತ್ರ ಮಧ್ಯಮರ್ ಶ್ರದ್ಧೆಯಿಂ ಎದೆಯೋತು ನುಡಿದಿರಲ್ ಮೆಚ್ಚಿನೆಚ್ಚಿದಳ್ ತಾಯಿ ಮನದೊಳ್. ಹಾಲೋಗರವುಂಡವೊಲ್ ಒಡಲ್ ತಣಿದು ತುಂಬಿ ತುಳುಕಿದತ್ತು ಪ್ರೇಮದ ಝರಿಹರಿಸಿ. ಸುದೂರದ ನೀರವ ವಿಭಾವರಿಯ ನೀಲಿಮೆ ನಭೋಂಗಣದ ತಾರಕಿತ ಸೌಂದರ್ಯ ಅರಳಿದುದು ನಗೆಮುಗುಳ್ ಬಿರಿದು. ಮಂದಾನಿಲಂ ಒಯ್ಯನೊಯ್ಯನೆ ತೀಡಿ ತನಿಯುಣಿಸಿದಂ. ಪಕ್ಷಿಗಳ್ ಅವಿ:ತ ತೋಷದಿಂ ಪಾಡಿದುವು ಕೊರಳೆತ್ತಿ. ಮಯೂರಂಗಳ್ ಮುದದಿ ಕ್ರೇಂಕರಿಸೆ ನೃತ್ಯದೈಶ್ವರ್ಯ ಹೆಗಲೆಣೆಯಾಯ್ತು. ತಾಯಿ ಗೌರಮ್ಮ ಧೀಮಂತ ಪುತ್ರ ಸದೃಢ ಮಾನಸ್ಕ ಚನ್ನಯ್ಯನಂ ಪೆರ್ಮೆಯಿಂದಲಿ ಮಂಡೆಯುಂ ನೇವರಿಸಿ ನುಡಿದಳಾ ಗಳಿಗೆಯಲಿ,

"ಎನ್ನ ಮುದ್ದು ಕುವರಾ! ನಿನ್ನಯ ಜಾಣ್ಮೆಯಂ ಆನರಿಯೆನೇಂ ? ಸತ್ಯ ಶಿಸ್ತು ಸಂಯಮಗಳಿಂದಲಿ ಬಾಳ್ದಪುದು ಮುಖ್ಯಂ. ಇದು ಪರರೊಡನೆ ಎಂಬುದ ನೆಂದುಂ ಮರೆಯದಿರ್. ಅಮಾಯಕ ತಬ್ಬಲಿಗಳಂ ಪ್ರವರ್ಧಮಾನ ಸ್ಥಿತಿಗೇರಿಸುವನ್ನ ನೀಂ ಶ್ರಮಿಸಿದ ಬಳಿಕಲಾ ನಿಮ್ಮ ಜೀವನೋದ್ಧಾರ ಕಣ! ಅನ್ನೆಬರಂ ನಿನಗಿಲ್ಲ ವಿಶ್ರಾಂತಿ."

ಆ

ಮಾತಿಂಗೆ ಮುಗುಳ್ ನಕ್ಕರೀರ್ವರ್ ಸೋದರರ್ ತಂತಮ್ಮ ಹೊಣೆಯನೊಪ್ಪಿ. ತಾಯಿ ಗೌರಮ್ಮನುಂ

ಔರಸ ಪುತ್ರರೀರ್ವರ್ ಮೇಣ್ ಕಿರಿಯ ಸುತನಂ
ತನ್ನ ಜೊತೆಗೊಳಿಸಿ ಪೊರವಂಟಳ್. ತೃತೀಯ
ಮೇಣ್ ಚತುರ್ಥ ಪುತ್ರರಂ ಅನಾಥ ಮಕ್ಕಳ
ನೆರವಿಂಗೆ ಬಿಟ್ಟು. ತಾಂ, ತಾಯ್ಮನೆಯ ಅಗಲುವೊಡೆ
ಮನದಳಲು ಕೊರಳಿನಿತ್ತು ನಯನ ದ್ವಯಗಳಲಿ
ಧಾರೆಧಾರೆಯ್ಯೈಸಿ ಹರಿದತ್ತು ಅನನ್ಯ ಪ್ರೇಮ
ವಾರಿಧಿ. ಅಮಾಯಕ, ಅನಾಥ ಮುಗ್ಧ ಮಾನಸ
ಪ್ರವೃತ್ತಿಯ ಚಿಣ್ಣರೈವರ್ ಅಳುತಳುತ ತನ್ನ
ಪಿಂಬಾಲಿಸಿ ಬರುತಿರೆ ಎದೆಯ ಕಾರುಣ್ಯ ರಸ
ಕರಗಿ ಹರಿದುದು ನೊಂದು ನೀರಾಗಿ. ಗೌರವ್ಮ
ಮನಮರುಗಿ ಒಡಲ್‌ಗರಗಿ ಚಿಣ್ಣರ ನ್ಯೈನಿಳುಪಿ
ಧೈರ್ಯದ ನಲ್‌ವಾತುಗಳ ಮಳೆಗರೆದು 'ಮತ್ತೆ
ಬರುವೆ'ನೆಂದೊರೆದು ಒಪ್ಪಿಸಿ ಮುದ್ದಿಸಿ, ಮುದ್ದಿನ
ಸೇಸೆಯುಂ ಸೂಸಿ ಸಂತೈಸಿ ಬೀಳ್ಕೊಟ್ಟ ಬಳಿಕಂ
ಮುನ್ನಡೆಯೆ ಕಿರಿಯರ್ ನಡೆದರ್ ಪ್ರಾಂಗಣದಂಚು
ಕಳೆಯುವನ್ನ. ಚನ್ನಯ್ಯ-ಸುಬ್ಬಯ್ಯ ಊರಿನ
ಗಡಿಯವರೆಗೆ ದಾಂಟಿಸಿ ಬರೆ ಮುಂದೈದು
ಪಿಂತಿಕ್ಕಿದರ್ ಕಿರಿಯರಂ. ಅಳುತ್ತಳುತ್ತಲೆ
ನಡೆದುವಾ ಬೀಳ್ಕೊಡಿಗೆ.

ಎಳೆತಿಳಿಬೆಳಕು ಮಿಂಚಿ
ಬರುತಲಿತ್ತು ಪೂರ್ವೀ ದಿಗ್ ದೇಶದಲಿ ದಿವ್ಯ
ಅನುರಾಗ ಭಾವದೈಸಿರಿಯಿಂದೆ. ಸ್ವರ್ಣಮಯ
ಕಿರಣಂಗಳ ಜಾಲ ಹರಡುತಲಿರೆ ಕ್ಷಣಕ್ಷಣಂ
ಅಭಿವೃದ್ಧಿಸಿ. ಬೆಳ್ಳನೆ ಬೆಳಗಾಯ್ತು ಊರಗಡಿ

→

ಮುಟ್ಟುವನ್ನ. ಪಿಂದಿರುಗಿದರ್ ಸೋದರರೀರ್ವರ್
ತಾಯಿ ಮೇಣ್ ಒಡಹುಟ್ಟುಗಳಂ ಬಲ್ಮೆಯಿಂದಲಿ
ಬೀಳ್ಕೊಟ್ಟು. ಗಿಡುಮರಂಗಳ್ ಬಾಯೊಡೆದುವೊ ಎನೆ
ಪಕ್ಷಿ ಸಂಕುಲದ ಸುಪ್ರಭಾತಂ ಮೊಳಗಿದತ್ತು
ವನಧಿಯುಗಲ ವಿಧವಿಧ ರಾಗ ಮಾಲೆಗಳಿಂದೆ
ಕಿವಿಗಿಂಪಿನ ರಾಗರಸಮಂ ಸೂಸಿ. ತಣ್ಣಗೆ
ಶೀಡಿಬಹ ತಂಬೆಲರ ತನಿಯಿಂಪು ಹರಡಿದುದು
ಎಲ್ಲೆಡೆಯಲಿ. ದಳವಿರಿದ ಪುಷ್ಪಗಳ್ ಊಡುವ
ನರುಗುಂಪು ಹೃನ್ಮನಗಳಿಗೆ ಅಹ್ಲಾದಮಂ
ತುಂಬುತಿರೆ ಸರಾಗದಲಿ ಸಾಗಿದುದಾ ಹಾದಿ
ನೆಲೆ ಮನೆಗೆ. ಪ್ರಾಂಗಣದೊಳ್ ಪದಾರ್ಪಣೆಗೈದೊಡೆ
ಕಣ್ಗೆತ್ತುದು ಕರುಣಾಮಯ ದೃಶ್ಯ; ದೃಷ್ಟಿಯಾ
ನೇರಕ್ಕೆ ಆನೆವಾಗಿಲಿನ ಸಾಲು ಮೆಟ್ಟಿಲ
ಮೇಗಡೆ ಅನಾಥರ್ಗೈವರ್ ಪಡಿಮೊಗದೊಳ್ ಕುಳಿತು
ತಮ್ಮಯ ನಿರೀಕ್ಷೆಯೊಳಿದರ್ುದುಂ. ಎದೆಯ ಕುಂಡದಲಿ
ಕಾರುಣ್ಯ ದ್ರವ್ಯ ಕರಗಿ ದ್ರವಿಸಿ ಹರಿದತ್ತು
ತಾವರಿಯದಂತೆವೊಲ್. ಎಲ್ಲರಂ ನಲ್ನುಡಿಸಿ
ಪ್ರೇಮಕಾತರತೆಯಿಂ ಬೋಳೈಸಿದರ್ ನಲವಿಂ.
ಮತ್ತೆ ಮುಂಚಿನೊಲ್ ಹೊಲ ಗದ್ದೆ ತೋಟಂಗಳಲ್ಲಿ
ಕೃಷಿಯಜ್ಞ ನಡೆದುದು ಎಡೆವಿಡದೆ ಪರಿಶ್ರಮದಿ
ಪ್ರಸ್ವೇದ ಧಾರೆ ಹರಿಸಿ, ಪ್ರಭೂತ ಬಲದಿಂ.

ದಿಕ್ಕಿಲ್ಲದ ಮನೆಗೊಂದು ದಿವಿಸಾದ ದಿಕ್ಕಾಗಿ
ಸಂಜೀವನ ರಮಣೀಯ ಕಥಾವಳಿಯದ್ಭುತ
ತೇಜದೇಳ್ಗೆಯಲಿ ರೋಮೋದ್ಗತೆಯಂಭವಿಸಿ

→

ಕಾರ್ಯಪ್ರಮತ್ತರಾದರಾ, ಹದಿಹರೆಯದ ಸುಸುಂದಱ ಬಾಲಕರ್. ತಮ್ಮ ಕರ್ಬುನ ದೇಹ ಸಂಪುಟದಲಿ ಉಕ್ಕಿ ಹರಿವ ಹುಮ್ಮು ಬಿಮ್ಮುಗಳ ಪುಱುಡು ಘನವೆತ್ತು ಪೊಗರೇರೆ ಭೀಮ ಭೀಷಣ ಶಕ್ತಿ ಸಂಚಯಸಂ ನಱತಂತುಗಳಲಿ. ಕಾಲನದಿ ಉಱುಳಿ ಹೋಹುತಿರೆಯಿಱೆ ನೆರೆಯ ಬೆಟ್ಟ ಗುಡ್ಡದ ತಾಣದಲಿ ಮುಂಬೆಳೆದ ದಟ್ಟ ದೀರ್ಘದೀರ್ಘಿಕಾ ವನದೇಶ ಮಧುಕೀರ್ತಿ ಎಂಬೊಂದು ವನಸ್ಥಳಿ ತೋಂಟಕನುಕೂಲಮಿರ್ಪುದಂ ಕಂಡುಕೊಂಡರ್.

ಆಃ, ಸುಸುಂದರ ಪ್ರಕೃತಿ ವೈಭವದಿಂ ಮೆರೆವ ಮಹಾ ಪಾರಾವಾಱಂ. ಪಚ್ಚ ಪಟ್ಟುಡೆಯಲ್ಲಿ ಪರಿಶೋಭಿಪ ವನವಾರ್ಧಿ. ಬೂಂದು ಸಸಿಗಳನುಂ ನೆಟ್ಟು ನಾಂಟೆ ನಲ್ತೋಂಟಮಂಗೈಯೆ ಸೂಕ್ತ ಮಿರೆ ಪಡೆದುಕೊಂಡರ್ ಆಳ್ವ ಸಱಕಾಱಮುಂ ನೇಱ ಸಂಪರ್ಕಿಸಿ. ಕಾಲಾನುಕಾಲದಿಂ ನೆಲೆಗೊಂಡು ಮುಂಬೆಳೆದ ಮಹಾ ಭೂಜೇಶಂಗಳ್ ತಣ್ಣನೆ ನೆಱಳಿತ್ತು ಗಂಭೀಱಮಯ ಸಸ್ಯಕೋಟಿಯುಂ ಬೆಳಸಿ ಆದರಿಸೆ ದಟ್ಟಣೆಸಿದತ್ತು ಕಾನನ ದೇಶಂ. ಗಗನ ಚುಂಬೀ ವೇಶದಲಿ ಜೃಂಭಿಸಿ ಸಕಲ ಪ್ರಾಣಿ ಪಕ್ಷಿಗಳಿಗೆ ಸುಖಾಶ್ರಯಮಾಗಿರ್ದ ವನಧಿಯುಂ ಪುಗಲ್ ಎಂಟೆರ್ದೆವೇಳ್ಕುಮೆನೆ ಭೀಕಱಂ. ಜ್ಯೇಷ್ಠಾಷಾಢದಲಿ ಮುಂಗಾರ್ ಮಳೆ ಭೋರ್ ಭೋರೆಂದು ಭೋರಾಡುತೆ ಎಡೆವಿಡದೆಯೆ ಕುಂಭದ್ರೋಣಸರಿ ಸುರಿಯಲೇಂ ಹುಮ್ಮಸ್ಸು ಹದಿ

→

ಹರೆಯದ ತರುಣರ್ಗಿಂಗೆ. ಪುರುಡು ಶ್ರದ್ಧೆಗಳುಕ್ಕಿ
ಹರಿದ ಸಂಯುಕ್ತ ಶಕ್ತಿಯಾಶ್ರಯದಲಿ ದಿಟ್ಟ
ಭಾವದಿಂ ಕೆಚ್ಚಿದೆಯ ಕಟ್ಟಾಳುಗಳ್ ನುಗ್ಗಿ
ಮೈಕೈಗಳಿಗೆ ನೆತ್ತರ್ ಪಿಪಾಸಿ ಸಹಸ್ರಾರು
ಇಂಬಗಳ ದಾಳಿ.
ಕ್ರಿಮಿಕೀಟಗಳ್ ಜೊಮ್ಮನೆ
ಜೊಮ್ಮುಗುಡುತೆ ಮುತ್ತುತಲಿ. ಮುಖ ಮೈಗಳಂ ಕಚ್ಚಿ
ಹೀರುವುವು ನೆತ್ತರಂ. ಬೀರರೆಲ್ಲವಗೆಯಾ
ಸಂಕಷ್ಟಮಂ ಸಹಿಸಿ ದುಡಿದರ್ ತನುಮನಮಂ
ಸೋಲಲೀಯದೆ. ಬೂಂದು ಸಸಿಗಳ್ ನಳನಳಿಸುತ
ಬೆಳೆದುವು ಹೊಸ ಭೂಮಿಯಲಿ. ಜನಧನಗಳ ದಿವ್ಯ
ಸಹಾಯಮಿನಿತಿಲ್ಲ. ಹಿರಿಯರ್ಕಳ ನೆರಮಿಲ್ಲ.
ಬುದ್ಧಿಮತ್ತೆಯ ಸಲಹೆಯಿಲ್ಲ. ಭಂಗವನರಿತು
ನೊಂದು ನೋಯುವರಿಲ್ಲ. ತಾನೆ ತಾಯ್ತಂದೆ. ತಾನೆ
ಬಂಧು ಬಳಗ. ತಾನೆ ಧಣಿದೂತರ್. ತಾನೆ ಸುಖ
ದುಃಖದುಗುಡಗಳಿಂಗೆ ಒಡೆಯರಿರುತಿರಲೆಲ್ಲ
ಭಾರಮಂ ತಾನೆ ಹೊತ್ತರ್ ಸತತ. ಎಲೆಮರೆಯಲಿ
ಹುದುಗಿರ್ದ ಕಾಯಿಯಂತೆವೊಲ್ ತಾನೆ ತಾನೈಸುತ
ಬೆಳೆಯುತಿರ್ದರ್ ಕಾಲಪಣ್ತು ಸಂಜೀವನೋ–
ಚಿತವಾಗಿ. ಹಗಲೆಲ್ಲ ಎಣೆಯಿಲ್ಲದ ಶ್ರಮಿಕ
ವೃತ್ತಿ. ರಾತ್ರಿಯೊಳ್ ಎಳೆಯರ್ಗೆ ಮಿಣುಕು ದೀಪದ
ಬೆಳಕಿನಲಿ ಪಾಠಪ್ರವಚನಗಳ ಸರಮಾಲೆ.
ಕಳೆದುವೈದು ಸಂವತ್ಸರಗಳಿಂತೆ ದಿವಿನಾಗಿ,
ದಿನದಿನಂ ಪುಷ್ಟಿಯಿಂ ಮುಂಬೆಳೆದು ಬೂಂದುಬುನ

→

"ಮಘುಕೀರ್ತಿ ಎಸ್ಟೇಟ್" ಪ್ರವರ್ಧಿಸಿರೆ ಹಚ್ಚ
ಹಸುರಿನ ಮಹಾವಾರ್ಧಿ ಕಣ್ಗೆಸೆದುದು ಸುರಮ್ಯ
ದೇಶದಲಿ. ಮೇಲೆ ದಟ್ಟಣಿಸಿದ ಮರಂಗಳ
ಹಸಿರು. ಕೆಳಗೆ ಬೊಂದುಗಿಡಗಳ ಹಸಿರು. ನೋಳ್ಪ
ಕಣ್ ಹಸಿರ್‌ಗಟ್ಟಿಸುವ ಹಸಿರೇ ಹಸಿರು. ಪಕ್ಷಿಗಳ
ಬೃಹದ್ ಸಮಾಜಕೆ ಸುಖಾಶ್ರಯದ ಮೋದಮಂ
ಉಣಿಸುವ ಮನೋರಮಾ ಬೊಂದು ವನವಾರ್ಧಿ. ಅಃ,
ರೇವತೀ ಮಳೆಯು ದಯನೀಯ ಕೃಪಾಶ್ರಯಂ
ಪುಣ್ಯವಶದಿಂದೊದವಿಬರೆ ಬನದಗಲನೆಲ್ಲ
ಪುಷ್ಪಭರಿತಮಾಯ್ತು, ನೆರೆ ಸಾಲುಸಾಲ್ಗೈಸಿ ರೆಂಬೆ
ರೆಂಬೆಗಳಲಿ ಕಿಂಚಿತ್ ತಾವಿರದ ಮಾಳ್ಕೆಯಲಿ
ನಳನಳಿಸುವ ಪೂಗಳ ಸಂಭ್ರಮವೆ ಸಂಭ್ರಮ!
ಇಡೀ ಬೊಂದು ಬನವೇ ಪೂತು ಅರಳಿ ಸೌರಭವ
ಚೆಲ್ಲಿ ಸೂಸಿರೆ ಪರಮೋಚ್ಚ ಧವಳ ಕಾಂತಿಯುಂ
ವಿಜೃಂಭಿಸಿದುದು ಸ್ವರ್ಗಸುಧೆಯಂ ಧರೆಗಿಳಿಸಿ.
ಮೊಲ್ಲೆಪೂವಳಿಯುಂ ನಲ್ ಪೋಣಿಸಿ ಸುಮದಂತ
ರೂಪಿನಲಿ ರೆಂಬೆರೆಂಬೆಗೊತ್ತಿ ಅಲಂಕರಿಸಿ
ಸೌಗಂಧವನೊರೆದು ಪೂಸಿದಂತೆವೊಲ್ ಘಮಘಮ!
ಪಚ್ಚ ಪಸುರುಡೆಯ ವಾರ್ಧಿಯುಂ ಬೆಳ್ಳನೆ ಬೆಳಗಿ
ಧವಳ ಕೀರ್ತಿಯಿಂದೊಪ್ಪಿ ಸಾರ್ದುದು ಮುಂದಿನಾ
ಸುಫಲದ ಪರಿಘೋಷಂ! ಭೃಂಗಗಳ ಸಡಗರವೇ
ಸಡಗರಂ! ಇಡೀ ವನಧಿಯೇ ಝೇಂಝೇಂಯೆಂದು
ಝೇಂಕರಿಸಿದುದು ಸಂಭ್ರಮದಿಂ. ಸಗ್ಗಿಗರ್ ಪರಿ–
ವೀಕ್ಷಣೆಗೈದಿಹರೊ ಎನೆ ಸಗ್ಗ ಸಾಮ್ರಾಜ್ಯ

→

ನಲಿದತ್ತು ಬೂಂದುಬನ ಧಾತ್ರಿಯಲಿ. ಧೀಮಂತ
ಸೋದರರ್ ತಮ್ಮಯ ಪರಿಶ್ರಮವಿಂತು ಪಣ್ತು
ಅರಳಿ ಪೂವಾಗಿರೆ ಮನವೆರ್ಚಿ ಬನಂ ಪೊಕ್ಕು
ಆನಂದಮೋದದಿಂ ಗಿಡಗಿಡಗಳಂ ನೋಡೆ
ಸುತ್ತಾಡಿದರ್ ನೀಡಿ ಕಂಗಳಿಗೆ ಅಮೂಲ್ಯತಮ
ಪರ್ಬಮಂ. ಯುವ ಪ್ರಭೃತಿಗಳಿಗೆ ಮನಮುದಿಸಿ
ನಲಿವನಿತು ಹಿಗ್ಗು ! ಸಫಲತೆಯ ಸಂಭ್ರಮ ! ಘನ
ಗಂಭೀರ ಸಾಧನೆಯ ಝೇಂಕಾರ ! ಸತ್ಕೀರ್ತಿ
ಮಾಲೆ ! ತರುಣರು ಕುಣಿದು ಕುಪ್ಪಳಿಸಿದರ್ ! ಹಾಡಿ
ಪಾಡಿದರ್ ! ಇಡಿ ತೋಂಟ ಕ್ಷೇತ್ರನೇ ಮಘಮಘಿಪ
ಘಮಘಮ ! ಅಪರಿಮಿತ ಸುಮಕೋಟಿಯ ಸನಿಹದಿಂ
ಪಿಂತಿರುಗಲಾರದನಿತು ಸಂಮೋಹನೀಯತೆ
ಗಿಡಗಿಡದಲಿ. ಬನದಗಲ ಓಂಕರಿಸುವ ತೆರದಿ
ಕೋಟ್ಯಾನುಕೋಟಿ ಖದ್ಯೋತ ಸಂಕುಲರಾಶಿ
ಝೇಂಕರಿಸುತಲಿ ಹಾರುತಿರ್ದುದಂ ಕಾಣುತ್ತೆ
ಆನಂದ ಮೋದದಿಂ ಪಿಂದಿರುಗಿದರ್ ತಮ್ಮ
ನೆಲೆಮನೆಗೆ.

ಅದೆ ವರುಷ ಬೂಂದು ಬೆಳೆ ಮೊಗೆದಿತ್ತ
ಹಣದ ಥೈಲಿಯಿಂ ಅಲ್ಲೊಂದು ನಲ್ ಗೃಹಮಂ
ನಿರ್ಮಿಸುವ ಸಂಯೋಜನೆಯೊಳ್ ಗಿರಿಶಿಖರದ ಪದ
ತಲದಲಿ ಜಲಮೂಲದನುಕೂಲಮಿಹ ತಾಣವ-
ನಾಯ್ದು ಮುದಗೊಂಡರ್ ಮನದಿ. ಆದರಾ ಕಾರ್ಯ
ಕೈಗೂಡಿಸಿಕೊಂಬುದು ಸಾಮಾನ್ಯಮೆ ? ಸಾರಿಗೆ
ಸೌಕರ್ಯಮಿನಿತಿಲ್ಲದ ಕಾಲಮಾನಂ, ಮೇಣ್

→

ವಿಜ್ಞಾನ-ತಂತ್ರಜ್ಞಾನಗಳ್ ದೂರದೂರದಾ
ಗಡಿಯಾಚೆಯು ಕಗ್ಗಂಟು ! ತಾನೆಗುರುವರ್ಯಂ
ತಾನೆ ಶಿಷ್ಯಗಣಂ ಎನೆ, ಕಣ್ಣಿಂ ಕಂಡಿರದ
ಕೇಳಿ ತಿಳಿದಿರದ ವಿಷಯುವಾಗಿರೆ ಎಂತಿದರ
ನಿರ್ವಹಣೆ ಎಂಬೊಂದು ಆಸಂಕೆ ಚಿತ್ತವಂ
ಕೊರೆಯುತಿರೆ, ನಿಜ ಭೈರಿಗೆಯು ತೆರದಿ; ಯುವಶಕ್ತಿ
ಕುಗ್ಗಿತೇಂ ? ಪಣತೊಟ್ಟು ತೋಳ್ಮಡಿಚಿ ಈಸ್ವರುಂ
ಒಮ್ಮನದಲಿ ಮುಂದೈದರ್. ಮನಃಚಿತ್ರಗಳಂ
ಕಡೆದು ಸಕಲ ಸಾಮಗ್ರಿಗಳಂ ಕಲೆಹಾಕಿದ
ಬಳಿಕ ಮುಂಗೆತ್ತು ನಿರ್ವಹಿಸಿದರ್ ಸ್ವಕಾರ್ಯ
ಕರ್ಮವಂ. ಆತ್ಮಧೈಸಿರಿ ಭುಗಿಲೆಳ್ದುದು ತೀವ್ರ
ಗತಿಯುಲಿ, "ಧೃತಿಗೆಡದೆಯೆ ನಿರ್ವಹಿಸು" ಗಂಭೀರ
ಆದೇಶವಂ ನೀಡಿ ಪುರಿದುಂಬಿಪುದು ಪಜ್ಜೆ
ಪಜ್ಜೆಗೆ. ನ್ಯೈಯು ನರನಾಡಿಗಳಲಿ ಕಡು ಕೆಚ್ಚಿನ
ರುಧಿರಿಯು ಜೊಯ್ಯನೆ ಹರಿದು ಸ್ಫೂರ್ತಿಸುವ ಪಾಂಗಿನಲಿ.
ತಂತನ್ಮೊಳಾ ಮನೆಯು ರೂಪುರೇಷೆಯುಂ ಬಲ್
ನವನವೀನ ರೀತಿಯುಲಿ ವಿರಚಿಸಿ ತಳಪಾಯು
ತೋಡಿದರ್. ಶಾದ್ವಲೋದ್ಯಾನದಲಿ ಹಸನಾದ
ಹರವಿನೊಳ್, ಸುಸುಂದರ ರೂವಿನ ಮಹಲ್ ಕಟ್ಟಿ
ಮುಗಿಸಿದರ್ ಆಳು-ಧಣಿಗಳೆರಡು ತಾವಾಗಿ. ಆ
ಪ್ರಾಂತ್ಯದಲಿ ಗ್ರಾಮದೊಳ್ ಎಲ್ಲಿಯುಂ ಆರಾರ್
ಕಟ್ಟಿರದ ಮಾಳ್ಕೆಯುಲಿ. ಪೆರ್ ಗೃಹ ಮಂಡಲಕೆ
ಪಿರಿಯು ಬೆಳಕಿಂಡಿಗಳ ಸಾಲು ಮನೆಯುಂ ಪೊಚ್ಚ
ರೀತಿಯೊಳ್ ಬೆಳ್ಳಂ ಬೆಳಗಿಸೆ. ಗ್ರಾಮೀಣ ಹದಿ

→

ಹರೆಯುದಣುಗರ ಸಾಸ ಕಾರ್ಯವುಂ ಮನಮೆಚ್ಚಿ
ಹರಸಿ ಶುಭ ಹಾರೈಸಿದುದು ಗ್ರಾಮ್ಯಲೋಕಂ.
ನಿಬ್ಬಯುಲ ಶಾದ್ವಲೋದ್ಯಾನದ ಮಹಾ ಹರವಿನ
ಉಡಿಯಲ್ಲಿ ಮೈವೆತ್ತ ಮಹಲ್ ವನ ಭೋಜನದ
ಕೂಟಕೆ ಸಂಜೀವನ ಯೋಗಕೆ ಪಸದನಮಿರೆ
ಮಹೋನ್ನತ ಗಿರಿಶಿಖರದ ಗೃಹ ಸಮುಚ್ಚಯಂ
ಚೆಲುವಾಯ್ತು ಬದುಕಿಗೆ; ಘನವಾಯ್ತು ಪರಿಶ್ರಮಕೆ.

ಹೇ, ವಿರಾಟ್ ಪರಬ್ರಹ್ಮ ಗರ್ಭಸಂಭವೆ, ವರ
ವಿಶ್ವಾಂಡ ಪ್ರಭವೆ, ಪರಮ ವಿಭವೆ, ಆನಂದ
ವರದ, ಭಾವನಾಮಯಿ, ಶಿಖಿವಾಹನೆ, ವೀಣಾ
ವೈಣಿಕೆ, ಭುವನ ಮೋಹಿನಿ, ಮಧುರ ಕಾವ್ಯ ಕಲಾ
ಮಯಿ, ದಿವ್ಯ ಸರಸಾಂಗಿ, ವಿದ್ಯಾಧಿರಾಣಿ, ದೇವಿ
ನಿತ್ಯ ಕಲ್ಯಾಣಿ, ಸುರಸುಂದರಿ, ವಾಗ್ದೇವಿಯೆ,
ವಂದಿಪೆನು ನಿನ್ನಮಲ ಪಾದಪಂಕೇಜದಲಿ
ಹೃದ್ಗಡಲ ನೋವುನಿಡಿಗಳ ಮಹಾ ಪೂರವಂ
ಸುರಿದು ಒತ್ತೆಯಿೀವೆಂ ಎನ್ನೆಲ್ಲ ಸುಖ ದುಃಖ
ಪಾಪಪುಣ್ಯಂಗಳಂ. ಎನ್ನೆದೆಯ ದೇಗುಲದ
ಗರ್ಭಗುಡಿಯಲಿ ಜೃಂಭಿಪ ಜನನಿಯೆ, ನೀನಲ್ತೆ
ಎನ್ನೆಲ್ಲ ಸುಖದುಃಖಗಳಿಗೆ ಕಾರಣಂ ? ನೀಂ
ಪರಾಮರಿಸು ತಾಯೇ ! ನೀನೊಲಿದು ಪ್ರೇಮದಿಂ
ನರ್ತನಗೈಯೆನ್ನಯ ಜಿಹ್ವೆಯಲಿ. ನಿನ್ನಿಂದೆ
ಕಲೆಯ ಮಧುರ ಮಾಧುರ್ಯ ಉಕ್ಕಿ ಹರಿಯಲಿ ಸದಾ.
ಹೇ ದಿವ್ಯಕಲಾ ಯೋಗಿನಿಯೆ ನಿನ್ನಾ ಸ್ಫೂರ್ತಿ
ಸಿರಿಸುಧೆಯ ಮಾಧುರ್ಯ ಪಸರಿಸಲಿ ಬ್ರಹ್ಮಾಂಡ–

→

ದೈಸಿರಿಯು ಅರಳಿ ಹೂವಾಗುವಂತೆ, ಮತ್ತೆನ್ನ
ಲೇಖನಿಯೊರತೆಯಲಿ ನೆರೆ ಚಿಮ್ಮಲಿ ಸ್ವಾತಂತ್ರ್ಯ
ಮಧುರರಸ ಮನಮತಿಗಳರಳಿ ಪೂವಾಗುವಂತೆ,
ಕೈಮುಗಿದು ಕಣ್ಮುಗಿದು ಪಾಡುವೆಂ ಬೇಡುವೆಂ.
ಹೇಳು, ಹೇಳಿಲೆ, ತಾಯೆ! ಮುಂದಿನ ಕಥಾನಕಂ
ಈ ಜೀವಮಾನದ ಕಥೆಯ ಮೇಣ್ ಮತಿಗತಿಯ.

ಅಂದು, ಪುಟ್ಟಸಿಂ ತಾರುಣ್ಯ ಕಳೆಯುವನಕಂ
ಕಿರಿಯತನದ ದಿನಮಾನದೊಳ್ ಬಾಲವೃಂದಂ
ಬರಿ ಚೆನ್ನಯ್ಯ ಸುಬ್ಬಯ್ಯ ಎಂದರ್ಧಮಾತ್ರಂ
ಇರುತಿರ್ದ ಪೆಸರ್ ಪ್ರೌಢಾವಸ್ಥೆಯಲಿ ತುಂಬಿ
ಪರಿಪೂರ್ಣಮಾಯ್ತು ಚನ್ನೆಗೌಡ ಸುಬ್ಬೆಗೌಡ
ಎಂಬಂತೆ; ಮತ್ತೆಲ್ಲರ್ಗೆ. ಗೌಡಾಳಿಕೆಯಿಂದೆ
ವಂಶವಾಹಿಯಂ ತೊಳಗಿ ಬೆಳಂಗಿಪ ಕುರುಹದು.
ದಿನದಿನಂ ತಾರುಣ್ಯದೆಳತನಂ ನಳನಳಿಸಿ
ಪುರುಷಿನಿಂ ಪೂರ್ಣಮನದಿಂ ಮುಗಿಬಗಿಯಾಗಲ್
ಪ್ರೌಢಾವಸ್ಥೆಯ ರುದ್ರ ಗಾಂಭೀರ್ಯದ ಬಿಗುಮಾನ
ಬೆಳೆದತ್ತು ಊರಿನ ಒಡೆತನಕೆ ತಗುವ ತೆರದಿ.

ಅನ್ನೆಗಂ ಮನೆಯೊಳಿಹ ಅನಾಥ ಬಾಲಿಕೆಯರ್
ಬಾಲ್ಯದ ಹೊಸಿಲಂ ದಾಂಟಿ ಪ್ರೌಢಾವಸ್ಥೆಗೇರ್ದು
ಮೈಮನಂ ತುಂಬಿರೆ ಸಹಜ ರೀತಿಯಲಿ ಮೇಣ್
ಕಾಲೋಚಿತಮಾಗಿ ವರಾನ್ವೇಷಣೆಯ ಚಿಂತೆ
ತುಂಬಿದುದು ಮನಃಚಿತ್ತಗಳಂ. ಕಂಡು ಕಾಣದ
ಗುರುತರಿಯರ ಹೆರವರ ಕೊರಳ್ಗೆ ಬಿಗಿಕಟ್ಟಿ
ಗೋಳಿನ ರಣಬಾಳಿಗೆ ತಳ್ಳಿಬಿಡೆ ಮನವೊಪ್ಪಿ

→

ಚಿತ್ತಮಣಿವುದುಂಟೆ ? ಕರುಣೆಯು ಕಟ್ಟೆಯುಂ
ಬಿರಿವುದೆದೆಯಾಳದಲಿ. ತರುವಾಯ ತಮ್ಮತಾಂ
ಗೆಲ್ವೊಂದು ಯೋಜನೆಯಲಿ ಮನಮಥಿಸಿ ಮಥಿಸಿ
ಬಾವನಾ ಸಾಮ್ರಾಜ್ಯದಲಿ ಅಂಡಲೆದು ಜ್ಞಾನ
ದೀಪಿಯುಂ ಬೆಳಗೆ ಕಣ್ದೆರೆಸಿದ ಚಿತ್ರನೆ ಬೇರೆ.

ಆಗಳಾ ಮಮತೆಯ ಜನನಿಯೈತರಲ್ ಅಲ್ಲಿಗೆ
ಇತರ ಮೂವರು ಕುವರರೊಡಂ. ಎಲ್ಲರ್‌ಗೂಡಿ
ಮುಂದೈಯುತೆ ಚಿಂತಾದ್ರವ್ಯಮಂ ದ್ರವಿಸಿ ಮತಿಯ
ಚಿಂತಾಲಿನಲಿ ತೂಗಿ ತೂಗಿ ಅನಾಥೆಯರೀರ್ವರಿಂಗೂ
ತಾಮೆ ನಾಥರಾಗುವ ಒಮ್ಮನದೊಳೊಮ್ಮತಂ
ಮೂಡಿಬರೆ ಹಾಲೋಗರವುಂಡರ್ ತುಷ್ಟಿಯಿಂ.
ಇನ್ನೀರ್ವರ್ ಪೆಣ್ಮಣಿಯರಂ ಸನಿಹದ ಬಂಧು–
ಜೀವ–ವಲಯದಲಿ ಕಂಡು ಸಂಲಗ್ನಂಗೂಡಿಸಿ
ಗೈವುದೊಂದೆ ಮನದಿಂದೆ ಸಂಕಲ್ಪಮಾದತ್ತು,
ಹಿರಿಯ ನಾಲ್ವರುಗಳಿಂಗೆ. ಆಡಂಬರ ಡಂಗೂರ
ಡಮರುಗಳ್ ಇಲ್ಲದೆಯೆ ನಿರಾಡಂಬರ ಮೇಣ್
ಸರಳತೆಯಲಿ ನಡೆಯಲನುವಾಯ್ತು, ಸಮಾರಂಭ
ಸಂಭ್ರಮ ಸಡಗರಗಳೊಗ್ಗೂಡಿಯುಂ ಸುಂದರ
ಸರಳತೆಯೆ ಪ್ರಧಾನಂ ಕೋಲಾಹಲಿಗಳಿಂಗೆ
ಮಾದರಿ ತಾನಪ್ಪಂತೆ. ಸುರ ಸಂಧ್ಯೆ ಓಕುಳಿಯ
ಚೆಲ್ಲಿ ಶರ್ವರಿಯ ತೋಳ್ಸೆರೆಯೊಳಿಳಿದು ಸುಂದರ
ತೇಜದಲಿ ಬಯಲಪ್ಪವೊಲ್ ತೋಷಮಯಮಾಯ್ತು!
ಘನನಿಬಿಡಕಾಂತಾರದ ಮಧ್ಯೆ ನೆರೆ ಮೆರೆದಿಹ
ಚಂದ್ರಸಾಲೆ ಗೃಹದ ಮುಂದೆ ತರುಗುಲ್ಮ ಪರ್ಣ

ಚಪ್ಪರಂ ತರತರದ ಪುಷ್ಪಕೋಟಿಯಿಂದೊಪ್ಪಿ
ಸರ್ವಾಲಂಕೃತವಾಯ್ತು. ಬರ್ಪ ಬಂಧು ಬಳಗಂ
ಸಂಭ್ರಮದಿಂ ಉಪಚರಿಸುತಲಾದರಿಸೆ. ಆ
ಸರಳ ಸತ್ ಸಮಾರಂಭ ಎಲ್ಲೆಲ್ಲಿ ಕೂಡಿ
ಎಲ್ಲೆಲ್ಲಿ ವಿಸರ್ಜನೆಯಾದುವೋ, ಅಂತಿಂತು
ಸಾಲ್ವರ್ ಲಲನಾಮಣಿಯರ್ಯೈದರ್ ಮನೆಬೆಳಗೆ.
ಸಂತಸದ ಸುಸಂಪತ್ತಿಯುಂ ವೈಮನಗಳಂ
ಆಕ್ರಮಿಸುತೊರ್ವೆಗೇ ಪುಳಕಿಸಿತು ತಂಬೆಲರ
ತಣ್ಣನೆಯ ಚುಂಬನ ಕ್ರೀಡೆಯಿಂ ಜುಂಮೆಂದು
ಕಂಪಿಸುವ ತೆರಂ. ಬಳಿಕ ಕರಗಿತು ಕಲ್ಯಾಣ
ಸಮಾರಂಭ. ಗದ್ದಲ ಸದ್ದುಗಳ್ ಅಡಗಿದುವು.
ವಾರವೊಂದುಳಿದುದು ಉಪಶಾಂತಯೋಜನಾ
ವೈಖರಿಯಲಿ. ಸನಿಹದ ದೇಗುಡಿಗಳಲಿ ಪೂಜೆ
ಪುರಸ್ಕಾರಗಳ್ ಹವನ ಹೋಮಂಗಳ್ ನಡೆದುವು
ಭಕ್ತಿಭಾವದಿಂ. ಬಳಿಕಲಾ ಪಂಚಪುತ್ರರ
ತಾಯಿ ಗೌರಮ್ಮನುಂ ಪಂಚ ಪಾಂಡವರ ತಾಯಿ
ಕುಂತೀದೇವಿಯ ಮಾಳ್ಕೆಯಲಿ ಪೊರಮಂಟಳಲ್ಲಿಂದೆ
ದೂರದೂರದ ಸ್ವಸ್ಥಳಕೆ ತನ್ನಯ ಪರಿವಾರ
ಸಹಿತ.

೨

ಉರುಳುರುಳು ಕಾಲವಾಹಿಯೆ, ಉರುಳುರುಳು
ಧೀರ ಗಂಭೀರ ಸ್ನೇಹದಾಗರವೆ, ಎಲ್ಲಿಯು
ನೆಲೆ ನಿಲ್ಲದ ತಂಗದ ಅವಿಶ್ರಾಂತ ತ್ಯಾಗದ
ಭೋಗದಲಿ ನೆರೆ ನುರಿತ ರಾಜಶಾಹಿಯೆ, ದಿವಸ

→

ದಿವಸಗಳನೊದ್ದು ವರುಷವರುಷಂಗಳ ತಳ್ಳಿ
ಗತಕಾಲಕೆಸೆವೆ ನಿಶ್ಶಂಕೆಯಿಂ. ದಿನದಿನಂ
ಉದಯಾಸ್ತಮಾನಗಳ ಕೆಂಬೆಂಕೆ ಮೀಹದಲಿ
ಮಿಂದೆದ್ದು ಜಳಜಳಿಸಿಯುಂ ನಿತ್ಯ ನಿರಂತರ
ಅಗೋಚರ ವ್ರತಧಾರಿಯೆ ನಮೋನ್ನಮಃ!
ನಿನ್ನ ಕಾಲ್ತುಳಿತದಲಿ ಹೊಸಗಿ ಜಜ್ಝರಿಹೋದ
ಜೀವಕೋಟಿಗಳ ಬೇನೆಗಿಲ್ಲ ಪರಿಹಾರಂ.
ಜಗದಾದಿಯಿಂ ಜಗತ್ ನಿಯಂತ್ರುವೆ ನೀನಾಗಿ
ಜಡಿಕುಟ್ಟಿ ಗಡಿಗಟ್ಟಿ ಸರಿದಾಂಟಿ ಮುನ್ನಡೆವ
ನಿನ್ನ ನಿಯಮಕುಂಟೆ ತಡೆ ? ನಿತ್ಯಾತ್ಮದ ಬಯಕೆ
ಬಳ್ಳಿ ದಾಂಗುಡಿ ದಾಂಟಿ ಬ್ರಹ್ಮಾಂಡ ತಂತ್ರಿಯಂ
ಮೀಂಟಿ ಬ್ರಹ್ಮವಂ ತಬ್ಬುವೆ ಅನಂತವ ದಾಂಟಿ.
ಮನುಕುಲದೆದೆಗೆ ಧೈರ್ಯಸ್ಥೈರ್ಯದ ಕಿಡಿಯನೆರೆದು
ಸಾಹಸಕೆಳೆದೊಯ್ವ ನಿರುತ ಸಾಹಸೀನೇಶಿ!

ನಿಶ್ಶಬ್ದ ನೀರವ ನಿಯಮ ಮೋಹಜಾಲವಂ
ಬೀಸಿ ತಣಿಸುವೆ ವರ ಸಮುಲ್ಲೋಲಕಲ್ಲೋಲ
ಶಂಕರ ಭಯಂಕರತೆಯ ಗಂಭೀರ ಮೋಹವ
ಎರಚಿ ಸಂಮುದಿಸಿ ನಿದ್ದಗವ್ವಳಿಸುತಲೆಸೆವೆ
ಜಗದಾದಿಯಿಂ ಜಗತ್ ನಿಯಂತ್ರುವೆ ನೀನಾಗಿ!
ಹೇ, ಕಾಲಪುರುಷನೆ! ತವ ಸಾಹಸ ಪ್ರವೃತ್ತಿ
ಪ್ರಹೇಲಿಕಾ ಪ್ರಾಂಶುಪಾಲನೆಗೆ ನಮೋನ್ನಮೋ !

ಸುಡುವಿಸಿಲ್‌ವೇಸ್ಗೆಯಲಿ ಮುಂಗಾರ್ ಪ್ರಭುವಿನ
ದಯೆ ಕರುಣೆಗಳಿತ್ತ ಹರಿಯುದೆ ಧಗಧಗಿಪ ಕಡು
ಕಟ್ಟಾಸುರನ ಕಟ್ಟುಸಿರಿನ ಕೆಂಬೆಂಕೆ ಉರಿ

→

ಕಾರಿ ಸುಡುತಿರ್ದುದು ತನುಮನಗಳಂ. ನಿಚ್ಚ
ಪ್ರಸ್ವೇದ ಧಾರೆಯು ನಿಮಜ್ಜನಂ ಬಗೆವಗೆಯು
ಜೀವಕೋಟಿಗೆ. ನಡುವಗಲುರವಣೆಯುಂ ದೇವ
ಸೂರ್ಯನಾ ಉಜ್ವಲೋಜ್ವಲಿಪ ಪ್ರಖರಕಿರಣ
ಮಾಲೆಯುಂ ಥಳಥಳಿಪ ಸ್ವಚ್ಛಂದಮಾನದಿಂ
ರಂಜಿಸುವ ಬೆಳ್ಮೋಡಗಳ ಮೋದನೇ ಮೋದ.

ವನರಾಜಿಯು ಎಲೆಎಲೆಗಳ್ ಜೋಲು ಬೀಳ್ದು ನೆರೆ
ಹಣ್ಣಾಗಿ ಉದುರುದುರಿ ನೆಲಹಾಸು ತಾನಾಯ್ತು
ಒಣನೆಲಂ ಗಾರೆಳ್ದು ಸುಟ್ಟುರಿದು ಹೋಹದೊಲ್.
ಜೀವಕೋಟಿಗಳ್ ವರುಣನ ಕೃಪೆಯುಂ ಕೋರಿ
ಬೇಡುತಲಿರ್ದುವು ಊರ್ಧ್ವಮುಖಿಯಾಗಿ. ಆಕಾಶ
ಗಂಗೆ ಎಲ್ಲಡಗಿರ್ದಳೊ ಎನೆ ಅಂಬರವೆಲ್ಲ
ಬೆಳ್ಳನೆ ಬೆಳರ್ತು ಬೆಂಡಾದ ಮೋಡಗಳ್ ಬರಿ
ಸ್ವಚ್ಛ ನಿರ್ಮಲ. ಗಗನ ಸಮೀಕ್ಷೆಯಲಿಹವೊ ಎನೆ
ಪಕ್ಷಿ ಸಂಕುಲನೆಲ್ಲ ನಭದಲಿ ಸುತ್ತುತಲಿನೆ
ಮಂಡಲಾಕಾರದೊಳ್. ಆರಾರ ಮೊರೆ ವರುಣ
ದೇವನಂ ಮುಟ್ಟಿದುದೊ ಒಡನೆ ಕಾರ್ಮೇಘಗಳ್
ಕೂಡಿದುವು ಗುಡಿಗುಟ್ಟಿ. ಗುಡುಗು ಗುಡುಗಿ ಮಿಂಚಿನ
ಸೆಳೆಮಿಂಚು ಹೊಳೆದುದು ನಭೋದೇಶದಲಿ. ಭಾರ
ಭಾರಮಾದ ಕಾರ್ಮೋಡಗಳ್ ಕುಸಿವ ತೆರದಲಿರೆ
ಬೀಸಿವೀಸಿದುದು ತೆಂಗಾಳಿ. ಬೋರ್ ಬೋರನೆ
ಸುರಿದುದು ಮಳೆ ಬೋರಾಡಿ. ಸುಟ್ಟುರಿಯುತಲಿರ್ದ
ಬಿಸಿಲು ಬೇಗೆ ಅಡಗಿದುದು ತಣ್ಣಗೆ ತನಿಯುಂಡು.
ಎನಿತೆನಿತೊ ದಿನಮಾನದುರಿಗೆ ತಡೆಗುಡೆ ಗಗನ

→

ದೇಶ ಬರಿದಪ್ಪುವೊಲ್ ಸುರಿದುದು ಮುಂಗಾರ್
ಮಳೆ. ಕಡ್ಡಿ ಕಸಂಗಳಂ ತೊಳೆದು ಸ್ವಚ್ಛಗೊಳಿಸುತೆ.
ಅಖಿಲ ಚಾತಕ ಪಕ್ಷಿಗಳ ಪರಮ ಆನಂದಂ
ಪಣ್ತು ನೆರೆ ಹಾರಾಡಿ ಚೀಂಕರಿಸಿ ಹನಿಹನಿಗೆ
ಬಾಯೊಡ್ಡಿ ಧಗೆ ದಾವರಂ ಕಳೆಯುತಿರ್ದುವು ಕಿರು
ಬಾಯ್ ತೆರೆದು. ಬಹು ದಿನಗಳ ಹಾರೈಕೆ ಕೈಗೂಡೆ
ಸಗ್ಗವೇ ಧರೆಗಿಳಿದವೊಲ್ ನಲಿದುವು ನೀರಾಡಿ.
ಅಗಾಧ ಅನುಪಮ ಸಸ್ಯಕೋಟಿಗಳ್ ಕೆಮ್ಮನೆ
ಕೈಂಧೂಳ್ಳೈಸಿದ ಮೃಣ್ಮಯಪ್ಪೈಯು ತೊಳೆದು ಸ್ವಚ್ಛ
ಸುರಸುಂದರ ಪಚ್ಚೆ ಪಸುರ್ ವರ್ಣ ಶೋಭೆಯುಲಿ
ಮೆರೆದತ್ತು ಮೈಬೀಗಿ ಮಳೆ ನೀರ್ ವಿಾಹದಲಿ.
ಕೆಂಧೂಳ್ ರಾಶಿಯುಂ ಪರಿದೋಡಿದುದು ತಗ್ಗು
ಪ್ರದೇಶಕೆ ನುಗ್ಗಿ. ಧಗೆಯುಂ ಒರ್ಮೆಗೆ ಹರಿದು.
ತಣ್ಣಗಾದತ್ತು ಪರಿಸರದ ಭೂ ವಿಸ್ತಾರಂ.
ಪಶ್ಚಿಮ ದಿಗ್‌ದೇಶದಲಿ ಸುನೀಲ ಭಿತ್ತಿಯಂ
ಮಂಜುದೆರೆ ಮುಸುಂಕಿರೆ, ದಿಗ್ ತಟಾಂತ ಲಗ್ನದ
ಹಿರಿಯಂಚಿನ ಸಾಲಿನಲಿ ಚಂದನ ಕಾಂತಿಯುಂ
ಅರಳಿದುದು ಉನ್ಮೀಲಿತ ಕೆಂಗಣ್ಣೋ ಎನಲ್
ಮಂಜು ತೆರೆಯುಂ ಹರಿದು. ಸಾಯಂ ಸುಧಾಸ್ವಪ್ನ
ಸಾಮ್ರಾಜ್ಯದಲಿ ತೇಲುವೊಲ್ ಹೊನ್ನಜೊನ್ನಸಿರಿ
ಹರಡಿದತ್ತು ಭಿತ್ತಿಯಗಲ. ನೈರಾಶ್ಯವೆಟ್ಟಿದ
ಕಂದರದ ನಿಮ್ನೋನ್ನತೆಯೊಳೇರಿಳಿದು ಬೆಳಗಿ
ಸಂಧ್ಯಾರುಣನ ಅಂತಿಮ ಯಾತ್ರೆಯ ಸಂದೇಶ
ಹರಡಿದುದೊ ಎನೆ ವರ್ಣವರ್ಣಮಯಮಾದತ್ತು

→

ಸುನೀಲ ಗಗನ ಭಿತ್ತಿ. ಮಿಂಚೆಯೌನ್ನತ್ಯದಲಿ
ಹರಡಿದುದು ಜಗದಗಲ ನವನವೋದಿತ ಶಾಂತಿ,
ತ್ರಿಜಗತ್ ಕಾಂಡವಂ ಮುದ್ದಿಡುವ ಪಾಂಗಿನಲಿ.

ಮಲೆನಾಡಿನ ಪಚ್ಚೆ ಮಡಿಲಲಿ ಚಂದ್ರಸಾಲೆಯು
ಬೂಂದುಬನದ ಅಧಿಮಾನಸಂ ಪಣ್ತುದೋ ಎನಲ್
ಪ್ರಪ್ರಥಮ ಮುಂಗಾರ್ ಮಳೆಯಲಿ ಮಿಂದು ನೆರೆ
ನಳನಳಿಸಿದತ್ತು, ತಣ್ಗಂಪಿನ ಹೂನಗೆ ಚೆಲ್ಲಿ.
ಸಾವಿರದೊಂಭೈನೂರಿಪ್ಪತ್ತಾರ ಜೂನ್ ತಿಂಗಳ
ಹದಿನೈದನೆಯ ತೇದಿ. ಸಾಯಂ ಸಮಯಮುರುಳಿ
ಸೂರ್ಯಾಸ್ತಮಾನವಾದ ದಿವಿನಾದ ಗಳಿಗೆಯು
ಕಳೆದು ಹೋಹ ಮುನ್ನಮೆ ಮನೆಯೊಳಾಂ ಸಂಜನಿಸಿ
ಕಂಡೆ ಜಗದ ಚೆಂಬೆಳಕಂ. ಅಳುತಳುತಲಾನೈದೆ,
ಸುಖದ ಸವಿಗಿಂ ದುಃಖದಳಲು ಪ್ರಧಾನಮೆನೆ
ಅಳುತಳುತಲೇ ಹೊಂಬೆಳಕಿನ ಛವಿಯಂ ಕಂಡೆ.
ಜ್ಯೇಷ್ಠಾಷಾಢ ಪ್ರಭುವಿನ ಒಡ್ಡೋಲಗದ ಬನ
ದಲರುಗಳ ಮೈಯುಸಿರಿ ಮುನ್ನಾಳೆಯಲಿ ಮಿಂದಿರೆ,
ಹಚ್ಚಗೆ ಹಸುರಾಗಿ ಮನರಂಜಿಸಿದುವು ತೀವಿ
ಬೀಸಿ ಬಹ ಗಾಳಿಯಲಿ ಅತ್ತಲಿತ್ತ ಓಲಾಡಿ.
ವಿಹಂಗಗಳಿಂಚರಂ ಪರಮೆಗಳ ಝೇಂಕೃತಿ
ಮೊಳಗುತಿತ್ತು ಮುಸ್ಸಂಜೆ ಕವಿದು ಬರುವನಕಂ.
ಗೋವುಗಳೈದುವು ಹಟ್ಟಿಗೆ. ಎಳೆಗರುಗಳೆಲ್ಲ
ಅಂಬೆ ಅಂಬೆಯೆನುತೆ ಉಡಿದಾಡಿದುವು ಹಾಲಿನ
ಆಕರದಲಿ. ತಾಯಿ ಪಶುಗಳ್ ಮರುದನಿಗೊಟ್ಟುವು
ಅಂಬಾಯೆಂದು. ಪಕ್ಷಿ ಸಂಕುಲಂ ಗೂಡುಗೊಳ್ಳುತೆ

→

ಮಿಣ್ಣನಾದುವು ಸಂಜೆಯು ವಿಶ್ರಾಂತಿಯಂ ನೆರೆ
ಬಯಸಿ. ಮನೆಯ ನಾಯಿಮೆಳಗಂ ಮನಸಿನೊಳಾವ
ದುಃಖವಾಸನೆಯಂ ಪಿಡಿದು ತಮ್ಮಯ ಒಡಲಿನ
ಅಳಲನಂತು ತೋಡಿದುವೊ ಎನಲ್ ಪೆರ್ವಾಯ್
ತೆರೆದು ಕೊರಳೆತ್ತಿ ಊರ್ಧ್ವಮುಖದೊಳ್ ಬೊಳ್ಳಿಕ್ಕಿ
ಸೂಸಿದುವು ಕರುಳ್ ಕೋರೈಸುವಂತೆ ತಮ್ಮಗಳ
ಒಡಲ ಸಂಕಷ್ಟಮಂ. ಎನ್ನಮ್ಮ ಪಾರ್ವತಮ್ಮ
ಪೆತ್ತ ಶಿಶು ಪೆಣ್ಣೆಂದು ತಾತ್ಸಾರಮೆಲ್ಲರಿಗೆ.
ಪೆಣ್ಣಿಂದೆ ಬಾಳಿಂಗೆ ಭಂಗ ಬನ್ನಂ ದಂಡು
ದಂಡೈಸುತ ಬಂದಪವೆನುವ ದಿವ್ಯ ನಂಬಿಕೆಯು
ಪರಮ ತಿರಸ್ಕಾರ ಜನಗಣಮನಮತಿಗಳಿಗೆ.
ಪೆಣ್ಣಿಂದೆ ಏಗಳುಂ ಗಂಭೀರ ಸಂಕಷ್ಟ
ಎಂಬುದೊಂದು ಪುರಾತನ ಪ್ರ್ಯಣತಮ ನಂಬಿಗೆ!
ಕಷ್ಟಕಾರ್ಪಣ್ಯಗಳ್ ಪುಟ್ಟನಿಂದಲ್ಲೈವುವು
ಪೆತ್ತ ಕರುಳಿಗುರುಳಾಗಿ, ಎಂದೆನುತೆ ಸುಯ್ದರ್ !
ಬೃಹಸ್ಪತಿ ವಾರದ ಗೋಧೂಳಿ ಸಮಯದಲಿ
ಕುಲಪುತ್ರನೈದು ವಂಶೋದ್ಧಾರವಾದಪುದು
ಎಂದು ಬಗೆದಿರ್ದವರ್ ಸಪ್ಪೆಯಾದರ್ ಪೆಣ್ಣು
ಶಿಶುವಿನ ಜನನದಿಂದೆ. ಪೆಣ್ಣು ಪುಟ್ಟಿ ಬಾಳ್ದೊಡೆ
ಪೆತ್ತವರಿಂಗೇಂಬಹುದು? ವ್ಯರ್ಥ ಶ್ರಮವಲ್ತೇ ?
ಎಂದಿರ್ದೊಡಂ ಪೆಣ್ಣು ಕುಲಕೆ ಪೊರಗಲ್ಲದೆಯೆ
ಬೇರಿಲ್ಲ. ಕೈ ಹಿಡಿದ ಪತಿಯ ಸಂಜೀವನೋ-
ತ್ಕರ್ಷತೆಗೆ ದುಡಿದು ಹಣ್ಣಾಗಿ ಹತ್ತು ಮಕ್ಕಳ
ತಾಯಾಗಿ ಮಣ್ಣಾದಪುದಲ್ಲದೆ ಏನಿಹುದು ?

→

ಪಿತೃವರ್ಗೆ ಸಾಕಿ ಸಲಹಿದೊಂದೆ ಭಾಗ್ಯವೈಸೆ ?
ಎಂಬುದೊಂದು ನೀರಸ ಭಾವನೆ ಮನುಕುಲದಲಿ.
ಹಂಡೆ ನೀರು ಕಾದಿರೆ ಬೆಚ್ಚನೆ ಸುಖಮಜ್ಜನ
ದೊರಕಿತೆನೆಗೆ. ಮೆತ್ತನೆ ಮರಿವೆಯೊಳ್ ಸುತ್ತಿಡುತೆ
ಮಲಗಿಸಿದರೆನ್ನ ತಾಯುಡಿಯುಲಿ ; ಸವಿನಿದ್ದೆ
ಆವರಿಸಿದುದು ಕಣ್ಗೆ. ದಳಬಿರಿದರಳಿರದ
ಮಿಡಿ ಮನದಿ ಆವಾವ ಕನಸೊ ಮತ್ತಾವಾವ
ಚಿಂತೆಯೊ ಅರಿಯೆನಾಂ. ಮುಮ್ಮಳಿಸಿದೆನೆನ್ನೊಳ್.
ಮುಂದೆನ್ನ ಬೆಳವಣಿಗೆಯುಂ ನಡೆದುದಂದಂದಿನ
ಕಾಲೋಚಿತ ಕರ್ಮಾಂತರದಲಿ. ಸಹಜಾತರ
ಪ್ರೇಮಮಯ ಕೀಟಲೆ ಕಿರಿಕಿರಿಯುಂಬಳಿಯುಂಡು
ಅಳುಗೋಳಿನಾನಂದಮೋದದಿಂ ಮುಂಬೆಳೆದೆ
ಎಳೆ ಬಾಳೆ ಸಸಿಯಂದದಿ. ದಿವಸ ದಿವಸಂ
ಕಳೆದುದು ಮಳೆಗಾಲ. ಅಡರಿದುದು ಚಳಿಗಾಲ. ಮೈ
ನಡುಗುವನಿತು ಕಮನೀಯ ಕಠೋರ ಶೀತಮಯ
ತೆಂಗಾಳಿ ರೊಯ್ಯನೆಯೆ ಬೀಸುತಿತ್ತು ತನುಮನ
ಕೊರೆಯುವಂತೆ. ಬೆಚ್ಚನೆಯ ಕಂಬಳಿಯಡಿ ನಡುಗಿದೆ,
ಗಡಗಡನೆ. ಕಾಗೆಗಳ್ ಕೂಗುತಿರ್ದುವು ನಡುಗಿ.
ಪಕ್ಷಿಗಳಿಂಚರದಲಿ ಪೊಣ್ಮುವುದು ಒಡಕು ಸ್ವರಂ.

ಬದುಕು ಆವೊಂದು ಭಂಗ ಬನ್ನಗಳನುಂಬದೆ
ರೋಗರುಜಿನಗಳ ಕಾಟವಿಲ್ಲದೆ ಎಳತನಂ
ನೆರೆ ತೋಷದಲಿ ಬೆಳಗಿ ಕಳೆಯಿತೆನ್ನ. ತಾಯಿಯ
ಹಾಲುಂಡು ಮೇಣ್ ಹಸುವಿನ ಪಾಲ್ ಬೆಣ್ಣೆಯುಂ
ಮೆದ್ದು ಬೆಳೆದೆನೆಲ್ಲ ಶಿಶುಗಳಂತೆವೊಲ್. ವರುಷ

→

ವರುಷ ಹರುಷವೊತ್ತಿ ಕಳೆದುದು ತಾನರಿಯದಿಹ
ಮಾಳ್ಕೆಯಲಿ. ತಿಪ್ಪತಿಪ್ಪ ಹೆಜ್ಜೆಯನಿರಿಸುತ್ತೆ
ಒಳ ಹೊರಗೆ ಓಡಾಡಿ ಬಿದ್ದೆದ್ದು, ತುಂಟತನ
ಜಾಣತನವೆರೆಸಿ ಕಳೆದತ್ತು ಕಾಲವಾಹಿನಿ.
ಓರಗೆಯವರೊಡಂ ಚೆಲ್ಲಾಟ, ಅಮ್ಮನುಡಿಯಲಿ
ಹಠಮಾರಿತನದ ಗೋಳಿನ ಕಾಟ ಎಲ್ಲವುಂ
ಇರ್ದುದೆಳೆತನದ ಹುಮ್ಮುಬಿಮ್ಮುಗಳುಂ ಬಲಿತು ;
ವರುಷವೆರಡೆಂತು ಉರುಳಿ ಕಳೆದುವೊ ಘನವೆತ್ತು.
ಮುದ್ದು ಮುದ್ದಾದ ಸುರಸುಂದರ ಶಿಶು ಸೋದರ
ಗವಿುಸಿದಂ ; ನವನೀತದ ಮುದ್ದೆಯೊ, ಬೆಳ್ಮುಗಿಲ
ಬೊಂಬೆಯೊ ಅಥ ಸಗ್ಗದ ಸಿರಿಯಿಂದೈವ ಕಂದನೊ
ಎಂದಚ್ಚರಿ ಪಡುವವೊಲ್ ಸುಂದರ ಸೋದರಂ
ವಂಶವಾಹಿಗುಜ್ವಲ ಬೆಳಕಾಗಿ. ಆಗಳೇಂ
ಹಾಲೋಗರವುಂಡವೊಲ್ ಉಕ್ಕಿ ಹರಿದ ಸುಖ
ಸಂತೋಷದ ಗಜಿಬಿಜಿ ? ಆನಂದವೇ ಮೂರ್ತಿ
ಎತ್ತಿ ಬಂದಂತೆವೊಲ್ ಆನಂದಮಯವಾಯ್ತು.
ಶೀತಲಾಂಶುವಿನ ನಯನ ಬಂಧುರ ತೇಜದಿಂ
ನೆರೆ ಮೆರೆದು ರಂಜಿಸಿದ ಸೋದರಂಗೆ ಎನ್ನಯ
ತೊಟ್ಟಿಲು ತೆರವಾಯ್ತು. ಅಮ್ಮನ ಮಡಿಲಲಿ ಎಳೆ
ಕಂದ ಬೆಳ್ಳಿಯ ಬೊಂಬೆಯಂತೆ ಮಲಗಿರೆ ಎನ್ನ
ಒಡಲಲಿ ಉರಿಯೇಳ್ವುದು, ಎನ್ನ ಬಲುಮೆಗೆ ಪಾಲು
ದಾರನೈದ ಸಂಕಟದಿಂ. ಒಡನೊಡನೆ ಮನದ
ಕಳ್ತಲೆಪುಟವಿಗೆ ಬೆಂಕಿಕಿಡಿ ಬಿಳ್ದುದೆನೆ ಮಿಗೆ
ರೊಚ್ಚು ಕುದಿಕುದಿದು ಅಳುಗೋಳು ದುಃಖದರಾಗ

→

ಕಿವಿಕಿಡಿಸಿ ಪೆಟ್ಟುಗಳ ರುಚಿಯುಂ ಸಲ್ಲುವುದು
ದಿವಿನಾಗಿ. ಅಂತಿಂತು ಬಾಲ್ಯವದು ಓರಗೆಯ
ಚಿಣ್ಣರೊಡಗೂಡಿ ಬಾಲಲೀಲೆಗಳಿಂದಲೆಮ
ಬದುಕು ಹಸನಾಯ್ತು. ಚನ್ನಗೆಯ ಚಂದದ ನಿಲುವು
ರಾಗಾನುರಾಗದ ಸುರಸುಂದರ ನೋಂಪಿಯಲಿ
ಬೆಳಗಿಪತ್ತು ಸಂಸಾರ ಮಂದಿರವ. ಮುದ್ದುಮಗು
ಬೆಳದಿಂಗಳ ಬೆಳ್ಳಗೆಯುಂ ಬೀರಿ ಬೆಳೆಯುತಿ
ಸಂತಸದ ಮಧುರರಸವನುಣಿಸಿದನೆಲ್ಲರ್ಗೆ.
ಮನೆತುಂಬ ಮಕ್ಕಳ ನಗುಗಳ್ಸಿರಿಯಿಂದಲಿ
ತೋಷಾಂಬುಧಿಯ ಹೊನಲ್ ಉಕ್ಕುಕ್ಕಿ ಹರಿದತ್ತು
ಮನಮೋಹಕತೆಯೈಶ್ವರ್ಯಂ. ನೆಚ್ಚಿನೆನ್ನಮ್ಮ
ಪಾರ್ವತಮ್ಮ ಪಿತ ಚನ್ನೇಗೌಡಾರ್ಯರೆಂಬ
ಜನ್ಮದಾತರೆಮ್ಮನೀ ಜಗಬೆಳಕಿಗಿತ್ತರ್
ದೈವಾಯುತ್ತಾಗಿ. ಪುಟ್ಟೆನೊಳೆನ್ನ ವಿದ್ಯುಕ್ತ
ಪೆಸರ್ ಲಕ್ಷ್ಮಿ. ಮುಂದೆ ತನುಮನ ಬಲಿತ ಬಳಿಕಂ
ಲಕ್ಷ್ಮೀದೇವಿ ಎಂದನೆ ಪಿರಿತನಕೆ ಚೆಲುವಾಯ್ತು.
ಮನದಿಚ್ಛೆಗದು ಪೂರಕವಾಯ್ತು, ಜಗದ್ಧಾತ್ರಿಯ
ನೇಮದಲಿ.

ಮಳೆ ಹೊಯ್ದು ತಣ್ಪಿನ ಸೆಲೆ ಮೂಡಿದ
ಮಲೆನಾಡಿನಡವಿಯಲಿ ದಟ್ಟಣಿಸಿ ಕವಿದು ಬಹ
ಕಾರ್ಗತ್ತಲೆಯ ಮಹಾಗರ್ಭದೊಳ್ ಘನನಿಬಿಡ
ವೃಕ್ಷಕೋಟಿ ಹಸಿಮುದ್ದೆಯಾಗಿ ಮೌನ ಪಾತ್ರಿಯ
ಏಕಾಂತದಲಿ ಲಕ್ಷೋಪಲಕ್ಷ ಖದ್ಯೋತಗಳ
ಭವ್ಯ ಸಂಕುಲರಾಶಿ ಮೆರೆವಂತೆವೊಲ್, ಮೇಣ್

→

ಕರ್ದಿಂಗಳಾಗಸದೊಳ್ ನೀಲಾವೃತ ಪಥದಿ
ಪೊಳೆಪೊಳೆವ ತಾರಾಸ್ತಬಕ ಸ್ತೋಮದ ತೆಱದಿ
ಚಿನ್ಮಯತೆ ಮೆರೆದತ್ತು ಬಹು ಸಂಖ್ಯೆಯ ಮಕ್ಕಳ
ಮೇಳದಲಿ. ಸಂಜೀವನದ ಬನ ಬೆಳೆಯುತಿರಲ್
ಅನುದಿನಂ ಚಿಂತನಾವೇಶದಲಿ ಭಾವನಾ
ಪೂರ್ಣ ರೋಮೋದ್ಗಮಂ ಅನುಭವಿಸುತೆ ಮುಂದಿನ
ಬಾಳ್ಬೆಳಕಿಗೆ ಹೊಯ್ದಾಡಿತು ಜೀವ.
ಮಿನ್ನೆ, ಅವಿ
ಭಕ್ತ ಮನೆತನದ ದಾಯಾದಿಗಳ ಮಚ್ಚರದ
ಕೆಂಬೆಂಕೆಯಲಿ ಸುಟ್ಟುರಿದು ಪರಭಾರೆಗೈದ
ಅತ್ತಿಬನ ಎಸ್ಟೇಟ್ ಮೇಣಿತರ ಆಸ್ತಿಗಳ
ಬಿಡುತೆಗಾಗಿ ಹೊಡೆದಾಡಿ ಮಹತ್ತರ ಹೋರಾಟ
ನಡೆಸಿ ಸೋಲ್ದುಗೆಲ್ದು ಪಡೆದುಕೊಂಬ ವೇಳೆಯೊಳ್
ಆಸ್ತಿಯುಂ ಪಾಳು ಬಿಳ್ದುದತಿ ನಿರ್ಲಕ್ಷ್ಯದಿಂ.
ಹೋರಾಟಮೆನಲ್ ಕುರುಕ್ಷೇತ್ರವೇ ತಾನಾಯ್ತು
ಕೊನೆವರಂ. ಎನ್ನಯ್ಯ ಮೇಣ್ ಚಿಕ್ಕಪ್ಪಂದಿರ
ಹೋರಾಟಕಿತಿಮಿತಿಯಿಲ್ಲದೊಲ್ ನಡೆದುದು ಘೋರ
ರೀತಿಯಲಿ. ಅಂತಿಂತು ಗೆಲ್ದು ಆಸ್ತಿಯೊಡೆತನ
ಒದವಿಬರೆ ಸೋದರರ್ ಚಂದ್ರಸಾಲೆಯಿಂದಲಿ
ಪೊರಡಲಣಿಯಾದರ್; ಬೆಳೆದಣುಗರ್ಗೆ ಚಂದ್ರಸಾಲೆ
ಆಸ್ತಿಯೊಪ್ಪಿಸಿ ಸಿದ್ಧಹಸ್ತರಾದರ್ ತಮ್ಮ
ಸ್ವಂತಿಕೆಯ ವ್ಯವಹಾರವಂ ಚಂದದಿಂದೊಪ್ಪಿ.

ಅತ್ತಿಬನ ಎಸ್ಟೇಟ್ ಮೂರು ಭಾಗಗಳ್ಗೈಸಿ
ಲಭಿಸಿತೆಮಗೊಂದು ಭಾಗ. ಅತಿನಿರ್ಲಕ್ಷಿತಮಿರೆ

ಉತ್ಪನ್ನದ ಪರವು ಕೊರತೆಯಿರ್ದುದು ಮನವುಂ
ಕಿಡಿಸಂತೆವೊಲ್. ಅನ್ನೆಬರಂ ಹಚ್ಚ ಹಸುರಿನ
ಪಕ್ತಿಯೌನ್ನತ್ಯದಲಿ ಮುಳುಗಿ ಸುಜೀವನಂ
ನಡೆಸಿರ್ದ ಬ್ರಿಟಿಷ್ ಚಕ್ರಾಧಿಪತ್ಯದ ನೌಕರ
'ಸ್ಟೋಕ್' ಎಂಬ ಪುಣ್ಯಾತ್ಮನು ಆಸ್ತಿ ನಿರ್ವಹಣೆ
ವಹಿಸಿರ್ದಂ. ಆಗಳವನ ಅನುಕೂಲ ವಾಸ್ತವ್ಯ
ಮೇಣಧಿಕ ಮೋಜಿನಿಂ ಬಾಳಲೆಂದು ತೋಂಟದ
ಗಿರಿಶಿಖರದ ಮೇಲೆ ಹರವಾಗಿಹ ತಲವಾಯ್ತು
ಅತ್ಯಂತ ನವನಾಗರಿಕತೆಯಿಂದೊಪ್ಪುವೊಲ್
ಭವ್ಯತರ ಪ್ರಸಾದನವುಂ ನಿರ್ಮಿಸಿರ್ದಂ.
ಬಲು ಸುಂದರ ತಾಣಂ ; ಸುಸುಂದರ ಪ್ರಸಾದಂ.
ಪ್ರಕೃತಿಯ ವೈಭವೋಪೇತ ಸೌಂದರ್ಯರಾಶಿ
ನಿಶ್ಯಬ್ದ ನೀರವ ಶಾಂತ ವಾತಾವರಣಂ
ಎನಲಾ ಸ್ವರ್ಗ ಸುಧೆಯೇ ಧರೆಗಿಳಿದು ಬಂದ
ಮಾಳ್ಕೆಯಲಿ ಇರ್ದುದಾ ಅತ್ತೀಬನದೈಸಿರಿ.
ಚಂದ್ರಸಾಲೆಯಿಂದೆಮ್ಮ ಪರಿವಾರ ಪೊರಟುದು
ಅತ್ತೀಬನ ಎಸ್ಟೇಟಿಗೆ. ಸ್ವರ್ಗಸಿರಿ ತುಲ್ಯ
ಬಂಧುರಮಯ ಅರಮನೆಯುಲಿ ತಳವೂರಿತೆನ್ನ
ಅಯ್ಯನ ವರ ಸಂಸಾರ. ಆ ಗೃಹದೇಶೋ
ವಿಶಾಲತೆಯಲಿ ಎಲ್ಲಿ ಆಡಾಡಿ ಓಡಾಡಿ
ನಲಿದಾಡಿದೊಡಂ ಬಾರದು ಸಂತೃಪ್ತಿ ಮೇಣ್
ತೀರದಾಶಾ ಪ್ರವೃತ್ತಿ. ತಕಥೈ ತಕಥೈ ತಕ
ತಕ್ಕ ಕುಣಿತ. ಬಾಲಾವಸ್ಥೆಯ ಬಾಲಲೀಲೆಗೆ
ದಿವಿನಾಯ್ತು ; ಪಸದನವಾಯ್ತು ; ಮಧುರತರವಾಯ್ತು.

→

ಪ್ರಾಂಗಣದೊಳ್ ಹೂಬನ. ವಾಮಾಂಗದೊಳ್ ಸಿರಿ
ಹೊನ್ನ ವರ್ಣದ ಬದಿರಿನ ಪಿಂಡಿಲಿನ ಉದ್ಯಾನ.
ದಕ್ಷಿಣಾಂಗದಲಿ ಕೆಯ್ತೋಲದ ಸುಂದರ ಪರಿಸರ
ಕಣ್ಗೋಚರಂ ಸಗ್ಗ ಸಿರಿಯೆ ಧರೆಗಿಳಿದುದೊ ಎನೆ,
ತಣ್ಣನೆಯ ತಣ್ಪುಗುವ ತಾಣದ ನಡುವೆ ಚಿಣ್ಣ
ಕಾಲ್ವಾಯಿಯೊಂದು ಪರಿದುದು ದೂರದೂರದಾ
ನದೀ ಪಾತ್ರಕೆ. ಅದರ ಜಲ ಸೇಚನೆಯಿಂದಲಿ
ಹದಗೊಂಡ ಕರ್ನೆಲದೆ ಕೊರ್ವಿ ಬೆಳೆದ ಕರ್ವಿನ
ಪಿಂಡಿಲುಂ, ಮುಗಿಲ್ ಮರಿಯಂತೆ ನೀರೊಡಲಿಗಂ
ಎನಿಪ ತೇಂಗಾಯಿಯಿಂ, ಹರಿಯೆಂತಂತು ಕೆಮ್ಮನೆ
ಪೀತಾಂಬರಧಾರಿಯ್ಯೆಸಿದ ನೀರುಳ್ಳಿಯಿಂ,
ಬೆಳ್ಳನೆಯ ಬೆಳ್ಮಡಿಯನುಟ್ಟ ಬೆಳ್ಳುಳ್ಳಿಯಿಂ
ಮತ್ತಂ ಮೆಣಸಿಂ ಜೀರಿಗೆಯಿಂ ತೊಗರಿಬೇಳೆ
ಕಾಳ್ಗಳಿಂ ಮತ್ತಂ ಬಗೆವಗೆಯುಲಿ ನೆರೆನೆರೆದು
ಕಣ್ಗೆಂಬೈದ ಸಂಬಾರಗಳಿಂ ಸುಶೋಭಿಸಿದ
ಕೈತೋಂಟವದು ಸುಜೀವನೋಚಿತವಾದತ್ತು.

ಇಂತು, ಸೊಬಗುಗುವ ಬೀಡಿನಂತೆ ಸೊಗದ ಸುಧೆಯು
ನೆಲೆಯಂತೆ ಬೂಂದುಬನದ ಸೊಗಸಿಗೆ ವರದಂತೆ
ಗ್ರಾಮೀಣ ಬದುಕಿನ ಚೆಲುವು ತೋರ್ವ ಚೆನ್ನಾಡು
ಮಾದರಿ ಮನೆಯಂತೊಪ್ಪಿರ್ದುದಾ ನೆಲೆಯಲ್ಲಿ.
ನಡುವಗಲ ಮಾರ್ತಾಂಡನುರವಣೆಯನಡುಗಿಸುವೊಲ್
ಹರಡಿತ್ತು ಸಸ್ಯ ಸಂಪತ್ತಿನ ಕುಲಕೀರ್ತಿಯು
ಕೋಟ್ಯಾನುಕೋಟಿಯಲಿ. ದಟ್ಟಣಿಸಿ ಮೈದುಂಬಿದ
ಬೂಂದು ಬನದ ಭೂವಿಸ್ತಾರದಲಿ ನೆಲೆಗೊಂಡ

→

ಬಲೋನ್ಮತ್ತ ಪೆರ್ಮರನ ಅಡಿಯಿಂ ಮುಡಿಯುವರೆಗುಂ
ಪಣ್ಗಳಿಂ ತುಂಬಿ ಮೆರೆವ ಬಕ್ಕೆ ವಲಸುಗಳಿಂ
ಪಸುರ್ವಟ್ಟೆಯು ದಿವ್ಯ ಬೀಡಾರಮೆನೆ ರಂಗು
ರಂಗಿನ ಚೆಂದಳಿರಿಂ ಪೊಸಪೂವಿಂ, ಬೀಗಿರ್ದ
ಮಾಮರದ ಸೊಗಸಿನಿಂ, ತುಂಬಾರಲ ಮರದೊಳ್
ಗೊಂಚಲ್ವೆತ್ತು ತಂದಲ್ಸುರಿವ ಕಳಿವಣ್ಗಳಿಂ,
ರಸದುಂಬಿ ಜೋಲುಬಿಳ್ದ ಕಿತ್ತೀಳೆಗಳಿಂ,
ಪೆರ್ಮರನ ಪಲ್ಲವ ಪಾಣಿಗಳಲಿ ನಿಡುಗೊಂಚಲು
ಗೊಂಚಲುಗಳಲಿ ಜೋಲು ಬಿಳ್ದ ನೇರಿಳೆಯಿಂ,
ಪೋರೆವಣ್ಗಳಿಂ ತುಂಬಿರ್ದ ಪೇರೀಳೆಯಿಂ
ತುಂಬಿರುತಿರೆಯಿರೆ ದೋರೆವಣ್ಣಿಲ್ಲದ ಕಸುರ್
ಕಾಯಿಲ್ಲದ ತನಿವಣ್ಣಿಲ್ಲದ ಮರವಿಲ್ಲವೊ
ಎಂಬೊಲ್ ಬಗೆವಗೆಯಲಿ ಸಸ್ಯಕೋಟಿಯಿರ್ಪ
ತೋಂಟದೊತ್ತಿನಲಿ ಹರಡಿದ ಬಯಲ ಅಂಚಿನಲಿ
ನೆನೆಯೇರಿ ಸೊಗಯಿಸಿದ ಸುರಯಿಯಿಂ, ಚೆಲ್ವಿನೊಳ್
ಚೆಲ್ವಾದ ಕೆಂಡಸಂಪಿಗೆಯಿಂ ಬಲು ಚೆಂದದ
ಪುನ್ನಾಗದಿಂ ಮೇಣಿತರ ಪೂವಳಿಯು ಪರಮ
ಪುಟ್ಟುವಳಿಯಿಂ ಪರಿಪಕ್ವಾದ ಪ್ರಾಂಗಣಂ ಪಡೆದ
ಹರ್ಮ್ಯಸಿರಿಯಿಂದೆ ನೋಳ್ಪಕಣ್ ಮತ್ತಾಗುಪೊಲ್
ಮೈಗೊಂಡುದುದು ಗ್ರಾಮೀಣ ಬರ್ದುಕಿಗೆ ಚೆಂದದ
ಇಂಬುಕೊಟ್ಟು. ಹಿಂಬದಿಯಲಿ ಗೋಶಾಲೆ. ಗೋಮಯ
ತಳ್ತು ರಂಗೋಲಿ ಸಿಂಗರದಿಂ ಸುರಸುಂದರ
ಶೈಲಿಯಲಿ ಪೂದೋಂಟವಮಂ ಪೊಂದಿದ ಬೃಹದ್
ಭೂವಲಯುವದು ನಂದನೋದ್ಯಾನವಮಂ ಮೀರಿ

→

ಮೆರೆದತ್ತು ಎಲ್ಲವಗೆಯಲಿ ಪೂರ್ಣಗೊಂಡಂತೆ.
ಪೂರ್ವದೊಳ್ ಪಿನಾಮಹನುಂ ಮೈಯ ನೆತ್ತರಂ
ಬಸಿದು ಸಸಿಗಳಂ ನೆಟ್ಟು ಬೆಳೆಸಿದ ಬೆಳೆಯಿಂದೆ
ಹಲವಾರು ಬಡಕುಟುಂಬಗಳ್ ಬಾಳಿ ಬರ್ದುಕಿ
ದೈವಭಕ್ತಿ ಗುರುಭಕ್ತಿಯಿಂ ಸಾರುವೊಲಿರ್ದ
ಶಾಂತಿಧಾಮವದು ಭೀಷ್ಮ ಸಂಮೋಹಕತೆಯಿಂ
ನಳನಳಿಸಿ ಮೆರೆದತ್ತು ಲಿಖಿತ ಚಿತ್ರದ ತೆರಂ.

ಶಾಂತ ಪ್ರಶಾಂತವಾಶಾಂತ ಸುಶಾಂತಮಯ
ವಾತಾವರಣದ ಹೂಗಾವು ತನುಮನಗಳಿಗೆ
ಮತ್ತೇರಿಸಿದತ್ತು ಮನೋರಮ ವೈಖರಿಯಲಿ.
ಮುಂದಿನೆಲ್ಲ ಸುಜೀವನ ವರ್ಷಮಾನಂಗಳ್
ಸುಖಸಂತಸದ ಸವಿಯುಣಿಸಿ, ಪ್ರಕೃತಿಯ ಭವ್ಯ
ಉಡಿಯಲ್ಲಿ ಕಳೆದುವು ತೋಷಮಯಮಾಗಿ ; ಅನು
ರಾಗಮಯಮಾಗಿ. ಮತ್ತದಾವ ಗ್ರಹಗತಿಯೊ
ಕಾಲಪುರುಷನುಂ ಕೈವೀಸಿ ಕರೆದನೊ ಮೇಣ್
ವಿಧಿಯ ಆದೇಶಮೊ ಪೊಳಲಿಗೆತ್ತು ಉದ್ಯಮ
ಶೀಲರಾಗುವ ಆಸೆ ಮನಮತಿಗಳಲಿ ಮೂಡಿ
ಪೊರಮಂಟನೆನ್ನಯ್ಯ ದೂರದ ಪೊಳಲಿಗೆ
ಸಂಸಾರ ಸಹಿತ. ಅತ್ತೀಬನದ ಭಾರವದು
ಸೋದರನ ಭಜವೇರಿದತ್ತು. ಜನ ಬಾಹುಳ್ಯ
ತುಂಬಿ ತುಳುಕುತಲಿರ್ದ ಪೊಳಲ್ ; ಗಜಿಬಿಜಿ ಗದ್ದಲ
ಮೇಣ್ ನಾಗರಿಕ ಪ್ರಸಾದನಗಳುಳ್ಳ ಮಹಾ
ನಗರಿಯಲಿ ವ್ಯಾಪಾರ ಕೇಂದ್ರದೊಳ್ ಉದ್ಯಮರಂಗ
ಬೀಡು ಬಿಟ್ಟು ಚಳಚಳಸಿತು. ಉದ್ಯಮದ ಕಾವು

→

ಮತ್ತೇರಿ ಸಾಗಿದುದು ಹತ್ತಾರು ವರುಷಗಳ್
ಸುಗಮ ರೀತಿಯಲಿ. ಧನಲಕ್ಷ್ಮಿ ಬಂದು ಹೋದಳ್
ನಿಂತು ನೆಲೆಗೊಳದ ತೆರದಲಿ. ಭಂಗ ಬನ್ನಗಳ್
ಮೂಡಿದುವು, ಮತ್ತಂ ಪೊಳಲಿನ ವಾತಾವರಣ
ಒಗ್ಗದೆಯೆ ರೋಗ ರುಜಿನಗಳ್ ಕಾಡುತಿರ್ದುವು
ರಾಹುಕೇತುಗಳ ಮಾಳ್ಕೆಯಲಿ. ಅದು ಮಾತ್ರನೇಂ ?
ಶ್ವೇತವರ್ಣೀಯರ ಮದಮತ್ತತೆಯಾಳ್ವಿಕೆಯ
ಹಸಿಬಿಸಿಯ ಕಾವು ತಾಗುತಿರ್ದುದು ದಿನದಿನಂ.
ಸನಿಹದಲಿಯೆ ಶಾಲೆಗಳ್ ಇರುತಿರ್ದೊಡಂ ಬಿಳಿಯರ
ಸಂಸ್ಕೃತಿಯ ನೆರಳ್ ಬೀಳದಿರಲೆಂಬ ಆಶಯ
ಪಿತೃವರ್ಗೆ. ಸೋದರರ್ ಗುರುಕುಲಮಂ ಸೇರ್ದು
ಕಲಿಯುತಿರ್ದೊಡಂ ನಮಗಿಲ್ಲಮಾಯ್ತು ವಿದ್ಯಾ
ಸರಸತಿಯ ದಿವ್ಯ ಪ್ರಸಾದ. ನೆರೆಯ ಶಾಲೆಯ
ಐಗಳೈದು ಮನೆಯೊಳಷ್ಟಿಷ್ಟು ಪಾಠ ಪ್ರವಚನ
ಹೇಳುತಿರ್ದರ್. ಆಗಳಾ ಐಗಳ್ ಬಾರದಿರೆ
ಒಳ್ಳಿತೆನಿಪ ಎಳೆತನನೆಮಗೆ. ಅಂತಿಪ್ಪೊಡಾ
ಗುರುಪ್ರಸಾದಮಂ ಜಾನಿಸಿ ನೋಡ್ವೈ ಬಂಧುವೇ !
ಬಿಳಿಯ ಪ್ರಭೃತಿಗಳ ಸಾಸವೃತ್ತಿ ಪುಂಡಾಟ
ಮೇಣವರ ಸೈನಿಕ ಕವಾಯತುಗಳಂ ದೂರ
ದೂರದಿಂ ಹಣಿಕಿ ಇಣಿಕಿ ನೋಳ್ಪುದೆಮ ದಿನಚರಿ
ಮೇಣದೆಮ ಮನರಂಜನೆ ! ಅತ್ಯದ್ಭುತ ಕಲ್ಪನೆ !
ಇಂತಿಂತು ಕಳೆದುದೆಮ ಬಾಲ್ಯ ದಿನಮಾನಗಳ್
ಎಳೆಯಾಟದ ಗಮನಕೆ ನಿಲುಕದಿಹ ಮಾಳ್ಕೆಯಲಿ.

ಎನ್ನಯ್ಯ ಕೈಗೂಡಿಬಾರದುದ್ಯಮದಲ್ಲಿ

→

ಸಿಲುಕಿ ಸೆಣಸಿ ಬಗೆಗೆಟ್ಟು ಭುಜಕೊಡವಿ ಪೊರಗೆ
ಪಾರಿ ನಿರ್ಭಾರದಿಂ ತೋಷದಿಂ ಬಾಗಿಲಂ
ಮುಚ್ಚಿದ ಬಳಿಕಂ ಪಿಂದಿರುಗಿ ಬಂದುದಾಯ್ತು
ಅತ್ತೀಬನ ಎಸ್ಟೇಟಿಗೆ. ಷೋಡಶ ವರುಷಂ
ಕಳೆದು ಷೋಡಶಿಯಾದೆನಗೆ ರಾಮಾಯಣ
ಭಾಗವತಗಳ ಪಠಣ ಒಳಗಣ್ ತೆರೆಸಿದತ್ತು.
ಓದಿದ್ದೇ ಓದಿದೆ ಮತ್ತೆಮತ್ತೆ ಮೇಣ್ಮತ್ತೆ ;
ಭವ್ಯ ಸುಜ್ಞಾನ ಕ್ಷೇತ್ರಕ್ಕಿದ್ದ ಎಲ್ಲೆಯುಂ
ಕಿತ್ತು ಪರಿತಪಿಸುತೆ ವಿಚಾರವೇದಿಕೆಯೇರಿ
ಅಂಡಲೆದೆ. ದುಃಖದುಗುಡಗಳೊತ್ತಿಮುವು ಕೊರಲ್.
ಆಶೆ ಆಕಾಂಕ್ಷೆಗಳ್ ಮೊಳೆತುವು ಎದೆಯುಲಿ. ಅಃ,
ಚಿಂತನಾವೇಶದ ಪರಮ ಮಂಥನಂ ಎನ್ನ
ಇರುವಿಂಗೆ ಹಿಡಿಯಿತು ನಿಜಗನ್ನಡಿ. ಬಳಿಕಲಾಂ
ಎಚ್ಚೆತ್ತೆ ಬಡಿದೆಬ್ಬಿಸಿದ ಮಾಳ್ಕೆಯಲಿ. ಒಡನೆ
ವಿದ್ಯಾಧಿದೇವಿ ಸರಸ್ವತಿಯುಂ ಸುಳಿಸುಳಿದಳ್
ಮನೋಭಿತ್ತಿಯ ಮೇಲೆ. ಕಣ್ಮುಗಿದು ಕಾಲ್ವಿಡಿದೆ
ದೈನ್ಯಾತಿದೈನ್ಯದಿಂ. ಬೇಡಿದೆ ನೆರೆ ಕಾಡಿದೆ
ಒಡಲ್ ಸಂಕಟವ ಸೂಸಿ. ದಯೆಯಿಂ ಹರಸಿದಳ್
ಅಭಯ ಹಸ್ತಮಂ ತೋರಿ. ಎನ್ನಿಚ್ಛೆ ಕುದುರಿತು
ಪರಮಭಕ್ತಿ ನೇಮದಿಂ. ಶಾರದೆಯ ದಿವಿನಾದ
ಪಾದ ಪೂಜೆಯಂ ಆರಂಭಿಸಿದೆ ಅನುದಿನಂ.
ಎದೆಯಾಳದಲಿ ಕಂಬನಿಯು ಕೋಡಿ ಹರಿದತ್ತು
ಭಕ್ತಿರಸವಾಗಿ. ಆದರಾ ತೋಂಟದ ಗೃಹ,
ಗ್ರಾಮೀಣ ಬದುಕು. ಕಲಿವೆನೆನೆ ನಿಜ ಸಾಧನಾ

→

ಸೌಕರ್ಯ ದೂರದೂರವೇ. ಅಕ್ಕರೆಯ ಮನೆ
ಗ್ರಾಂಥಿಕ ಕಣಜ ಹೊಂದಿರದ ಕಾಲ. ಹದರ್ವತು
ಕಲಿಪ ಗುರುವಿಲ್ಲ ಮುಂದೆ. ಶಾಲೆಯುವಿರದ ಊರು.
ಸ್ವಪ್ರಯತ್ನವೆಂದೇ ಮುಂದಿರ್ದ ಹಾದಿ. ಹೃತ್
ಜ್ಯೋತಿಯಂ ಬೆಳಗಿ ವಿದ್ಯಾರಾಧನೆಗೈವುದೆ
ನಿಜ್ಜ. ಕಜ್ಜದುಜ್ಜುಗವಾಯ್ತು, ಆಕರಿಪ ಮನ
ಮತಿಗಳ ಪರಮ ಸಾಂತ್ವನೆಗೆ ಬಿಂದುಬಿಂದುವೆನೆ
ಚೇತನದ ಚಿಲುಮೆ ಇನಿದಿನಿದಾಗಿ ಒಡಮೂಡಿತು
ಎಡೆವಿಡದೆ. ಕಟು ಕಠಿಣ ವ್ರತದಿಂ ಅಕ್ಕರದ
ಅಕ್ಕರೆಯು ಬಲಿದತ್ತು ಎರ್ದೆಯಲಿ. ಕೆಲವಾನು
ಕಾಲಮಾನದೊಳ್ ಕನ್ನಡಾಂಬೆಯ ಪ್ರಸಾದ
ಲಭಿಸಿದುದು ಚಚಚಳಿಸಿ ಗುರುಕರುಣೆಮಿಲ್ಲದೆಯೆ.
ನಾನೆ ಗುರು. ನಾನೆ ಶಿಷ್ಯ. ನಾನೆ ಸದ್ ಯೋಜನೆ.
ನಾನೆ ಮೃದು ಭಾವನೆ ಎನೆ ಸಾಲ್ಗುಂ ಸುಪರಿಚಿತಿ.

ವಿದ್ಯಾಧಿದೇವತೆಯ ಚರಣ ಸೇವೆಗೆನ್ನಯ
ಹೃತ್ ಜ್ಯೋತಿಯನುನುರಿಸಿ ದೀಪಾಂಜಲಿಯನಿತ್ತು ;
ಕಂಬನಿಯ ನೈವೇದ್ಯಗೈದು ಬಿಸುಸುಯ್ಲಿನ
ಧೂಪಾರತಿಯನೆತ್ತಿದೆನ್. ಎದೆಯ ಹಾರೈಕೆಯ
ಸುಮಂಗಳ ದ್ರವ್ಯಮಂ ಭಕ್ತಿಭಾವದಿಂದಲಿ
ತಾಯ ಪದತಲಕರ್ಪಿಸುತೆ ಬೇಡುತಿರಲನುದಿನ
ಒಲಿದಳೆನ್ನಂ ದೀನ ಮೊರೆಗೆ ಮನ್ನಣೆಯಿತ್ತು.
ಮುಂತೆಯುಂ ಎನ್ನ ಮೇಲವಳ ದಯೆಯುಂ ಘನಿಸಿ–
ಘನೀಕರಿಸುತಿರಲಿ ಕೊನೆವರಂ. ಕಣ್ ಜ್ಯೋತಿಯು
ಬಳಲಿ ನಂದುವನ್ನ ಲೇಖನ ಮಸಿಯೊರತೆಯು

ಆರುವನ್ನ. ಬರ್ದುಕು ಸಾರ್ಥಕ ಗೊಳಿಸುವನ್ನ.
ಎಂಬೆಂಬ ಹೊರೆಯೆನ್ನ ಆವಾವ ಗಳಿಗೆಯೊಳ್
ಮುಟ್ಟಿದುದೊ ಹರಸಿದಳ್ ಸಾಹಿತ್ಯದಧಿದೇವಿ
ಪರಮ ಮಾತೃಕೆ, ಅಜನ ರಾಣಿ. ಒಡನೆ ಎನ್ನಯ
ಭಾವನಾ ಸಾಮ್ರಾಜ್ಯವುಕ್ಕಿ ಹರಿಯಲುರೆ ಹಲ
ಕೆಲವು ಕೃತಿಗಳ್ ಮೂಡಿದುವು ಕಾಲೋಚಿತವಾಗಿ.

ಅನ್ನೆಗಂ ದಶಕವೆರಡರ ಗಾಲಿಯುರುಳಿ ನೆರೆ
ಏರಿರಲ್ ದೂರ ಶಕ್ರದಿಗ್ಚಕ್ರ ಗಿರಿತಲದ
ಸಾನು ಪ್ರದೇಶದಿಂದೈದ ಕನ್ಯಾರ್ಥಿಯನುಂ
ಸುಸ್ವಾಗತಿಸಿದರ್ ಪಿರಿಯರ್ ನವ ಪುರುಷಿನಿಂ.
ಮುಗ್ಧದುಗ್ಧ ಕಣ್ಮನಗಳಿನ್ನ ರುಚಿ ಅರುಚಿಯ
ವಿಶ್ಲೇಷಣಾ ವೈಖರಿಯಲಿ ಅರಿಯಲಪಕ್ವಮೆನೆ
ಮರುನುಡಿಯುದಾನು ತೋಷ ಭಾವದ ಸಿರಿಯುಕ್ಕೆ
ಮನಮತಿಗಳಿಂದೊಪ್ಪಿ ಎದೆಯೋತು ಮನಪ್ರೀತು
ಗೃಹಿಣೀಪದವ ಸ್ವೀಕರಿಪ ಭಾಗ್ಯಂ ಒದವಿ–
ದತ್ತು ಲಗ್ನ ಫಲ ಕೈಗೂಡಿ. ಲೋಕರೂಢಿಯ
ಕಟ್ಟು ನಿಟ್ಟಿನಲಿ ಪೆರ್ಣ್ ಜೀವನಂ ದಯನೀಯ
ಗತಿಯೊಳ್ ನಿರೂಪಿತಗೊಳೆ ತಲೆಬಾಗಿದೆ ವಿನಯ
ಪೂರ್ವಕ ವಿಧಿಯೊಳ್. ದೂರದೂರದ ಸಂಬಂಧ.
ದೂರವೆಟ್ಟಲ್ ಕಣ್ದಿಟ್ಟಿಗೆ ಘನವಾಯ್ತು.
ಮನಮತಿಗಳಿಗೆ ಹರುಷದ ನಿಧಿಯಾಯ್ತು. ಯೌವನ
ಪ್ಯೆಗೂಡಿರೆ ಚೆಲುವಾಯ್ತು ಪರಮ ತೋಷದಿಂದೆ.
ಬಾಳ್ಬನದ ಕೌಟುಂಬಿಕ ಸುಖದಾಸೆಯ ಬಳ್ಳಿ
ಕೊನರಿ ಮಲರಿ ಹೂವಾಯ್ತು. ಲೋಕಾಭಿರಾಮದ

→

ಭಂಗಿಯೊಳ್ ನಡೆದತ್ತು ಸಂಲಗ್ನ ಸಮಾರಂಭ.
ಆ ಸುಂದರ ಬಂಧುರ ಅರಮನೆಯ ಹೊಸ್ತಿಲಂ
ದಾಂಟಿ, ಪೆತ್ತವರಂ ಒಡಹುಟ್ಟುಗಳಂ ಅಗಲಿ,
ಮಹಾ ವೈಭವೋಪೇತ ಪ್ರಕೃತಿ ಸೌಂದರ್ಯ
ರಾಶಿಯುಂ ಹಿಂದೆಯೇ ಬಿಟ್ಟು ಪಯಣಂಬೋಪೊಡೆ
ಕರುಳ್ ಕುಡಿ ಕತ್ತರಿಸಿದೊಲ್ ನಲುಗಿ ಕಂಬನಿಯ
ಕೋಡಿ ಹರಿದತ್ತು ನಿಜ ಸಂಕಟದಲಿ. ಎಲ್ಲಂ
ವಿಧಿಯ ಆದೇಶದೈಸಿರಿಯ ಸೂಕ್ಷ್ಮರೂಪಿನ
ಮೋಹಸೂತ್ರದನುಬಂಧದಿಂ ನಡೆದಿರೆ ದುಃಖ
ಸಂಕಟವ ನುಂಗಿ ನೊಣೆಯುದೆ ಗತಿಯಿಲ್ಲವಾಯ್ತು.
ಆದೂರದೂರು ಸರ್ವತ್ರ ಸದಾ ಉರಿವಿಸಿಲ
ಝಳದಿಂದೆ ಉರಿವ ಊರು. ತಣ್ಣನೆಯ ತಣ್ಪಿನ
ಬೂಂದುಬನ ವಿಸ್ತಾರದ ಪುಣ್ಯತಲದಿಂದೈದು
ಉರಿಬೆಂಕೆಯುಲಿ ಸುಟ್ಟುರಿನ ಪೊಲಾಯ್ತೆಮ ದಿವ್ಯ
ಬಾಳಿನಂಕ. ಪ್ರಾಕೃತಿಕ ವೈಭವದ ಉರಿ. ಭವ
ರೋಗದೈಶ್ವರ್ಯದುರಿ ರೋಮರೋಮಂಗಳಂ
ಸುಡುತಲಿರೆ ಘೋರ ಸಂಕಟಕೀಡಾಯ್ತೆನ್ನ
ಹೃದಯ ಪಕ್ಷಿ ಉರಿ ಬೆಂಕೆಯುಲಿ ಸುಟ್ಟುರಿದು. ಮಿಗೆ
ಚಿಂತಾಸಮುದ್ರದಲಿ ಮುಳುಗಿ ಯೋಚನೆಯುಲೆಯೆ
ಸ್ತಬ್ಧವಾದುವು ಗತಿತಪ್ಪಿ. ಅಳ್ತತ್ತು ಕಂಬನಿಯ
ಕಡಲ್ ಬರಿದಾಯ್ತು ಸೋಸೋರಿ. ಎರ್ದೆಯ ಮೃದು
ಮಧುರ ಭಾವಧಾರೆ ಬತ್ತಿಗಾರೈಸಿತು ದುಃಖದ
ಭಾರದಿಂ. ಆಗಳಾ ಕಡು ದುಃಖ ಬದಿಗೊತ್ತಿ
ಬಾಳಿನ ಹಿನ್ನೋಟನೊಂದೆ ನಿಜ ಪರಿಹಾರ,

→

ಆ ಬೂಂದು ಬನದೊಳಾಡಿ ನಲಿನಲಿದ ಬಾಲ್ಯದ
ದಿವ್ಯ ಸ್ಮರಣೆಯುಂ ಮನೋದಧಿಯಲಿ ಕೊತಕೊತ
ಕುದಿವ ಕೆಂಬೆಂಕೆಯುಂ ತಣಿಸಿಕೊಳೆ ಪರನೋಚ್ಚ
ರಾಮಬಾಣ. ಪೇಣುಂ ರಾಮಧ್ಯಾನ.

ಏನೆಂಬೆ

ಅದ್ಭುತ ಭವಸಾಗರದ ಅಲೆ ಅಲೆಗಳಲಿ ಸೆರೆ
ಸಿಲ್ಕಿ ಆತ್ಮಚೇತನ ಕುಗ್ಗಿ ಮುಗ್ಗಿ ನರಳಿತು
ಕಿಂಚಿತ್ ಬಿಡುತೆಗಾಣದೆ. ಪ್ರತಿದಿನದಿನಂ
ಕೂಳು ಬೇಯಿಸಲೆಂದು ಒಲೆಯುಗ್ಗಿಯೂದೂದಿ
ಆತ್ಮದಗ್ಗಿಯಂ ನಂದಿಸುವ ಉಜ್ಜುಗವಾಯ್ತು
ಲೇಖಿಸುವ ಕರಕಮಲಗಳಿಂಗೆ. ಮನಮತಿಗಳ್
ಕೊರಗಿ ಕರಗಿ ನೊಂದು ನಲುಗಿ ನೀರೈಸಿ ಹರಿದುವು
ದೇಹಶುಕ್ತಿಯಂ ಭಳಲಿಸಿ ಸೋಲ್ಗಿಡಗುವಂತೆ.
ಅಂಟಿದುದು ಭವರೋಗ ಜೀವ ಕಣಕಣದಲಿ,
ಮನಮತಿಯಲಿ, ಹೃದಯ ಕುಂಡದಲಿ ಅಳಿಸಿ
ತೊಡೆಯಲಾಗದವೊಲ್ ಸದಾ ಸಂಕಟವನೂಡಿ.
ಅಶಾಂತಿ–ಅಶಾಂತಿ ಎಣೆಯಿಲ್ಲದ ಅಶಾಂತಿಯುಂ
ಕಾಡಿದತ್ತು ಕರ್ಬಿನ ಕರ್ಬುನದ ಗಾಣದೊಲ್.
ಯಾವತ್ಕಾಲಂ ದುಃಖಸಂಕಟಗಳ್ ಮತ್ತಂ
ರೋಗರುಜಿನಗಳೆನ್ನ ರಕ್ತಕಣಕೆ ಅಂಟಿದ
ಇಂಬಳಗಳ್. ಒಳಗೊಳಗೆ ಕೆನ್ನೆತ್ತರ್ ಪೀರಿ
ಒಡಲ್ಬುಂಬುವ ಸೂಕ್ಷ್ಮತರ ರಣಕಣಗಳೊಡನೆ
ಸರಸ ವಿರಸಗಳಕಾಂಡತಾಂಡವನೃತ್ಯದೊಳ್
ಪಾಲ್ಗೊಂಡು ತಾಳತಟ್ಟುಗುವೆ ನಿತ್ಯಚರಿ.

→

ಸಂದುವು ದಿವಾರಾತ್ರಿಗಳ್ ನಿಜ ಆರೋಹಣ
ಅವರೋಹಣಗಳ ಭಂಗಿಯುಲಿ. ಕವಿತಾ ಗೆಳತಿ
ದೂರದೊಳ್ ನಿಂತು ಕನಿಕರದಿಂ ದಯಾಪೂರ್ಣ
ಹೃದಯುದ ಕಳಕಳಿಯಿಂ ನೋಡುತಿರ್ದಳೆನ್ನಂ
ಪರಿತಾಪದಿಂದೆ. ಮುಂದೆಂದಾದೊಡಂ ಬಂದೆ
ಬಂದಪೆನೆನುವ ನಂಬುಗೆಯಿಂ. ಆದರದನಾಂ
ಅರಿತರಿತು ಭರವಸೆಯಾಳದಲಿ ಮುಳುಗಿ
ಸಂಜೀವವನಾನುಭವ ಪಡೆದೆನಿಲ್ಲ ಸುಲಭದಿ.
ದುಃಖಿತ ಮನದಿಂದೊರ್ಮೆ, ಚಿಂತಿತ ಮನದಿಂದೊರ್ಮೆ
ಕುದಿಕುದಿದು ಭಾವನಾವೇಶಾವೇಶದೊಳ್
ತೊಳಲಿ ಬಳಲಿದೆ ಜೀವನ್ಮೃತ್ಯುವಿನ ಕೆಳತನದಿ.
ಬಾಳ್ ಬದುಕಿನ ಬೃಹದ್ ಆಶಾಪಾಶಗಳ್
ಒಂದುಕಡೆ, ಕೀರ್ತಿ ಕಲಶಗಳ್ ಮತ್ತೊಂದು ಕಡೆ
ಎಳೆದಾಡುತಿರೆ ಕತ್ತಲೆಯು ಜಾಡಿನ ಬೀಡಿನ
ಕೋಳ್ಕೈಸರ ಬೆಂಚೆಯುಲಿ ಕಾಲೂರಿ ನಿಂದೆನಾಂ
ದೃಢ ಮನೋಗತಿಯುಲಿ. ನೀನ್ನೈದೆ ಎದುರ್ವೆತ್ತು,
ಪ್ರೇಮಾತಿಶಯುದಿಂ ಸುನಯನೋತ್ಫುಲ್ಲೆಯಾಗಿ.
ನಿಂದೆ – ಸಂಚಲಿಸದೆಯೆ ನಿಂದೆ, ದಿಟ್ಟಗತಿಯುಲಿ,
ನಿನ್ನನಾಂ ಗುರುತಿಸದಿರೆಯುಂ ನೀಂ ಲೆಕ್ಕಿಸದೆ
ಕಾದೆ. ಬಲು ತಾಳ್ಮೆಯಿಂ ಶಾಂತಿಯಿಂ ಕಾದಿರ್ದೆ.
ಪೆತ್ತ ತಾಯಿಗಿಂ ಮಿಗಿಲಾಗಿ. ಹೇ, ಬ್ರಹ್ಮಾಂಡ
ಮನಮೋದಿನೀ ತಾಯೆ ! ಸಾಹಿತ್ಯ ಕಲಾನಿಧಿ !
ನಿನ್ನ ಬಲುಮೆಗೆ, ನಿನ್ನ ತಾಳ್ಮೆಗೆ ವಿನಮ್ರತೆಯು
ನಮನ. ಮತ್ತೆಮತ್ತೆ ನಮನ ಮೇಣ್ಮತ್ತೆ ನಮನ !

→

ದಶಕ ನಾಲಕು ಉರುಳಿಹೋದುವು ಗತಿತಪ್ಪಿ.
ಮತ್ತೆರಡು ವರುಷಗಳ್ ಮಸಗಿ ಹೊಸಗಿದುವು ತವ
ಕಣ್ಮುಂತೆ. ಬರಿಬಾಳಿನ ಅಗ್ನಿಯು ಉರಿಯಲ್ಲಿ,
ಬಳಿಕಲಾ ತೆರೆಯ ಹಿಂದಿನ ಸುಂದರಿಯು ತೆರದಿ
ನೀನೊರ್ಮೆ–ಇರ್ಮೆ ದರ್ಶನವಿತ್ತೆ ಕಣ್ತಣಿಪ
ಪಾಂಗಿನಲಿ. ಮತ್ತೆಮತ್ತೆ ನೀನ್ಯೈದು ಎದುರಿನಲಿ
ಸುಳಿಸುಳಿದೆ. ನಲಿನಲಿಯುತೆ ಕಣ್ಮನವಂ ಸೆಳೆದೆ.
ಅಃ, ಕಂಡೆ ನಿನ್ನಂ ನಿರಾಕಾರ ಸುಸುಂದರ
ರೂಪಿನಿಂ, ಅಪ್ರತಿಮ ದೇವ ಮೂರುತಿಯಾಗಿ.
ಚೆಲುವಿನ ಚಿಲುಮೆಯ್ಯೈಸಿ ಕನಸಿನಲಿ ಮನಸಿನಲಿ
ಭಾವದಲಿ ಹೃದಯದಲಿ ಸಂಜ್ಞೆ ಸಂಜ್ಞೆಯಾಗಿ
ಮೂಡಿ ಬಂದೆ. ಆದರದರ ಸಂಜ್ಞೆಯುಮೇನೆಂದು
ಅರಿದೆನಿಲ್ಲ. ಸುಖದುಃಖದುದಾಸೀನ ಕಾಡಿತು
ಮಾಯೆಯಾಗಿ. ತಾಯೆ, ಮತಿಗೆಟ್ಟಾಂ ಸೋಲ್ದೊಡಂ
ನೀಂ ಸೋಲ್ವುದುಂಟೆ ? ನೀಂ ಬಂದೆ ಎದುರ್ವೆತ್ತು.
ನಿನ್ನನಾಂ ಅರಿಯದಿರ್ದೊಡಂ ನೀಂ ಲೆಕ್ಕಿಸದೆ
ಬೋಳೈಸಿದೆ. ನಕ್ಕುನಲಿದು ಆನಂದರಸವಂ
ಸೂಸಿ ರಾಗ ಭಾವದ ಪರಮೈಶ್ವರ್ಯದಲಿ
ನವೋನವ ಮುಕ್ತಾವಳಿಗಳ ನಳವಡಿಸುತೆಮ
ಗ್ರೀವಕೆ ಪುರುಡಿತ್ತೆ. ಹದುಳಿರದ ಅಶಾಂತಿಯ
ಬೀಡಿನಲಿ ಲೇಖನ ಕೃಷಿಯೆನಲದು ಸಾಮಾನ್ಯ
ತರಮಲ್ತು. ನಿನ್ನೊಂದು ಭರವಸೆಯು ಒತ್ತಾಸೆ
ಬಲವತ್ತರಮಾಯ್ತು ಅನುದಿನ. ಎದೆಯಾಳದಲಿ
ಕುಗ್ಗಿ ಮುಗ್ಗಿ ಮೈಮುದುಡಿದ ಸುಪ್ತ ಚೇತನವ

→

ನೀಂ ಮುಟ್ಟಿ ತಟ್ಟಿ ಎಬ್ಬಿಸುತಿರಲ್ ಲೇಖನಿಯ
ಮಸಿಯೊರತೆ ಹರಿಯತೊಡಗಿದುದು ಇನಿದಿನಿದಾಗಿ.
ಅನುದಿನದ ಭಾವನಾ ಸಾಮ್ರಾಜ್ಯ ವೈಚಾರಿಕ
ವಿಪ್ಲವದಲಿ ಮುಳುಂಗಿ ಕುದಿಯುತಿರೆ ಅರಳರಳಿ
ಮಲರಿ ಹೂವಾಯ್ತು ದಳ ಬಿರಿದ ನಿಜ ಮಂದಾರ
ಕುಸುಮದೊಲ್. ದಿವ್ಯ ಸಂಗಾತಿಯಾಯ್ತು ಅನುಪಮ
ಸಾಹಿತ್ಯ ಸಂಪದಂ. ಆದರಾ ಅತಿ ಚಿಗುರು
ಚಿಗುರಾದ ಕೃತಿಗಳ್ ಸುವ್ಯರ್ಥಮೆನೆ ಪುಷ್ಟಿ
ಪೂರ್ಣ ಕಾತರತೆಯುಂ ವೆರ್ಚಿದುದು ಹೃನ್ಮನಗಳ
ಒಳಗುದಿಯುಲಿ. ಯೋಚನೆ ಘನವೆತ್ತು ಕಾಡಿದುದು
ಹಿಂಸ್ರಕ ಪಶುವಿನೊಲ್. ಅದಲ್ಲದೆಯೆ ಪುಸ್ತಿಕೆಯ
ಪ್ರಕಾಶನದ ಭಾರವದೇಂ ಸಾಮಾನ್ಯಮೇ
ಪುಣ್ಯನಕೆ ? ಸ್ವಾತಂತ್ರ್ಯ ಹೀನತೆಯ ನೈರಾಶ್ಯ
ಕಂದರದ ನಿಮ್ನತೆಯೊಳೀರಿಳಿದ ಚಿಂತೆ ಕಾಡಿತು
ಹರಿಶ್ಚಂದ್ರನಂ ಕಾಡಿದ ನಕ್ಷತ್ರಕನವೊಲ್ !
ಆರ್ಥಿಕ ನೆರವಿನಿತಿಲ್ಲ, ಸುಜ್ಞಾನದ ಪರಮ
ಪೋಷಣೆಯುಮಿಲ್ಲ. ಭವಸಾಗರದಲಿ ತುಂಬಿದ
ಮರಗತ್ತಲೆಯು ರಕ್ಕಸರೂಪದ ಉರಿಗಣ್ಣು
ಕಿಡಿ ಕಾರುತಿದೆ ಸುತ್ತಮುತ್ತ, ಅಳಿಸಲಾಗದ
ಪಾಂಗಿನಿಂ. ಸ್ವಾರ್ಥ ಸಾಧನೆಯೆ ಪುರಸ್ಕಾರಮೆನೆ
ವಾಣಿಯುಂ ಬೇಡಿಯೇ ಬೇಡಿದೆ ಸತ್ ಸಾಧನೆ
ಸಾಧ್ಯತೆಯ ಪರಿಪುಷ್ಟಿಗಾಗಿ. ಒಡಲಾಳದಲಿ
ಕಂಬನಿಗಡಲು ತುಂಬಿದುದು ವರ್ಷಾಕಾಲದ
ಕೋಳ್ಕೆಸರ ಕುಂಡದೊಲ್ ಯೋಚನೆಯ ಭಾರದಲಿ

→

ಸಾಹಿತ್ಯದಾರಾಧನೆಯ ಪರಮ ನೋಂಪಿಯಿಂದಲಿ
ಪಗಲಿರುಳ್ ಮೊರೆಯಿಡುತಿರೆ ಒಲಿದೈದಳ್ ಜನನಿ
ಕಾಳ ತೆರೆಯಲಿ ಕರಗಿ. ನಿದ್ದೆ ಬಾರದೆ ಮುಚ್ಚಿ
ಬಿಗಿಯೊತ್ತಿದ ಕಂಗಳಿಗೆ ಹೊರಳುತಿರುತಿರಲಾಂ
ಸೆಜ್ಜೆಯಲಿ, ಅಭಿಜಿನ್ ಮುಹೂರ್ತದೊಳ್ ಸವಿನಿದ್ದೆ
ಮಂಪರಂ ತುಂಬಿತು ಕನಸಿಗೆ ಆಗರವಾಗಿ.
ಕಂಡೆನೊಂದು ದಿವ್ಯ ಕನಸೊಳ್ ಗರುಡ ಪಕ್ಷಿಯಂ,
ಅದು ರಯ್ಯನೊಯ್ಯನೆಯೆ ಬಂದಿಳಿಯೆ ಎದುರ್ವೆತ್ತು,
ಭ್ರಾಮಕಾಕ್ಷಿಗಳಂ ಸುವಿಸ್ತರಿಸಿ ಗಂಭೀರ
ಭಾವದಿಂದೆ ಬೆಕ್ಕಸಬೆರಗುವಟ್ಟು ನೋಡಿದೆ!
ಪರಮೋಚ್ಚ ನಿಸರ್ಗ ಸೌಂದರ್ಯದ ಹಿನ್ನೆಲೆ
ಶೋಭಿಸಿರೆ ಸೊಗಸಾಯ್ತು ಗರುಡದೇವನ ಭವ್ಯ
ನಿಲುವು. ಸಗ್ಗದ ಸಿರಿಯೊ ಅಥ ಲಿಖಿತ ಚಿತ್ರಣವೊ
ಎನುತೆ ಸಂಚಲಿಸದೆಯೆ ಚಂಚಲಿಸದೆಯೆ ನಿಂತು
ಪ್ರತ್ಯಕ್ಷ ಚಿತ್ರಮಂ ನೋಡಿದುವು ನೆಟ್ಟೆನ್ನ
ನಿಟ್ಟಾಲಿ. ವೈಕುಂಠದಿಂದಲಿಳಿತಂದ ಶ್ರೀ
ವಿಷ್ಣುವಾಹನನೆಂಬವೊಲ್ ಕಣ್ಗೆಸೆಯುತಿರುತಿರೆ
ಕರ ಜೋಡಿಸಿದೆಂ ಕಣ್ಮುಗಿದು. ಆಕೆತ್ತರದ
ಗರುಡದೇವನ ಕೆಮ್ಮನೆ ಮಿಂಚುವ ಕೆಂಗಣ್ಣ
ತೇಜೋರಾಶಿ ಮಿರುಗಿ ಪೊಳೆದತ್ತು ಚಳಚಳಿಸಿ.
ಅನ್ನೆಬರಮಾನು ಕಂಡರಿಯದಚ್ಚರಿಯಲ್ಲಿ
ಕೊಚ್ಚಿ ಹೋಹುತಿರಲ್ ಮನಮತಿಗಳ್ ಮರವಟ್ಟು
ಆ ಗರುಡಪಕ್ಷಿ ಕೊರಳ್ ಕೊಂಕಿಸಿ ನುಡಿಯಿತಿಂತು,

"ಚಿಂತಿಸದಿರ್ ಮಗಳೇ, ನಿನ್ನ ಸಲುವಾಗಿಯೇ

→

ಆನ್ನೈದೆಂ. ಇದೋ ಈ ರೆಕ್ಕೆಗಳ ನಿನಗೀವೆ
ಪರಾಮರಿಸು."
ಆ ಕ್ಷಣಂ ರೆಕ್ಕೆಗಳನೊದರಿದುದು
ಗರುಡ ಪಕ್ಷಿ. ಎಡಬಲದಿ ರೆಕ್ಕೆಗಳ್ ಉದುರಿದುವು;
ಪಕ್ಷಿ ಪಾರ್ದುದು ಮತ್ತೆ ವಿಯದ್ರಂಗಕೆ. ಆಶ್ಚರ್ಯ
ವಿಸ್ತೃತ ನಯನಗಳಿನ್ನ ನಿಟ್ಟಿಸಿದುವತ್ತಲೆ.
ಕೆಳಗೆ ಬಿಳ್ದ ರೆಕ್ಕೆಗಳ ಸ್ಥಾನದಲಿ ಇರ್ದರ್
ಈರ್ವರ್ ಯುವ ಮನೀಷಿಗಳ್! ತಟ್ಟನೆಯೆ ಕನಸು
ಒಡೆದು ಬಯಲಾಯ್ತು, ನೀರಿನ ಗುಳ್ಳೆಯಂತೆವೊಲ್.
ಕನಸಿನ ಸುಂದರ ಚಿತ್ರಮಂ ನೆನೆನೆನೆದು
ಅವಲೋಕಿಸಿ ತರ್ಕವಿತರ್ಕಹೂಡಿ ಜುಣುಗಿತು
ಮನಂ ಸೋಲೊಪ್ಪಿ. ಆಲೋಚನೆಯಲೆಯಲೆಗಳ್
ಸ್ತಬ್ಧವಾದುವೊರ್ಮೆಗೆ ಭಾವ ಭಾರದ ತೆರಂ.
ಕೆಲವಾನು ದಿನಮಾನದೊಳ್ ಕಂಡೆನಾ ದಿಟ್ಟ
ಯುವ ಮನೀಷಿಗಳಂ. ಸತ್ ಸಾಹಿತ್ಯ ಮೌಲ್ಯಮರಿತ
ಸುವಿದ್ಯಾ ಘನತೆಯಿಂ ತುಂಬಿ ತುಳುಕುವೊಲಿರ್ದ
ಭ್ರಾತದ್ವಯರೆಸೆದರ್ ಗರುಡದೇವನ ದಿವ್ಯ
ರೆಕ್ಕೆಗಳಂ ಹೋಲಿ! ಸಾಹಿತ್ಯ ಸಂಸ್ಕರಣ
ವಿಧಿವಿಧಾನಕ್ಕೊಂದು ರೆಕ್ಕೆಯಿರೆ, ಸಾಹಿತ್ಯ
ಪ್ರಕಾಶನಕ್ಕಿನ್ನೊಂದು ರೆಕ್ಕೆ. ವರ್ತಮಾನ
ಪತ್ರಿಕಾ ಪ್ರಪಂಚದ ಅಭಿಜ್ಞಾನದಿಂದಲಿ
ಸಾಹಿತ್ಯ ರಸಸ್ವಾದನೆಗೈದೊಡಲ್ ತುಂಬಿದ
ಚಂದ್ರಮೌಳೀಶ್ವರಂ! ಮೇಣ್ ನ್ಯಾಯವಾದಿತ್ವ
ವಿದ್ಯೆಯೊಳ್ ಅರಿತು ನುರಿತು ಜ್ಞಾನದೈಸಿರಿಯಿಂ

→

ಸತ್ ಸಾಹಿತ್ಯಾರಾಧನೆಯಲಿ ನಿಸ್ಸೀಮನೆನೆ
ಮೆರೆದೊಪ್ಪಿದ ಮೂಡಲೇಶ್ವರಂ! ದೈವಕೃಪೆಯಿಂ
ಮುಂದೈದರ್ ಸ್ವಯಂ ಸೇವಾಕಾಂಕ್ಷೆಯ ಬಲದಿಂ.
ಕಂಡು ಕೇಳರಿಯದ ಯುವಮನದಲಿ ದಿವಿನಾದ
ಸಾಹಿತ್ಯ ಮೂಡಿಸಿತು ರಾಗಾನುರಾಗವಂ.
ಸರೋವರಕೆ ಪೊಚ್ಚ ಪೊಸ ಜಲ ತುಂಬಿ ಕೋಡಿಯು
ಹರಿವಂತೆ, ಮಸುಬೆಳಕಿನ ಗವಿಗೆ ಅರುಣಕಿರಣ
ತೂರಿ ಬರುವಂತೆ, ಬಡವಂಗೆ ನಿಧಿ ರಾಶಿಯುಂ
ಕೈಗೂಡಿದಂತೆ ಎನ್ನ ನಿರಾಶೆ ತೊಲಗಿದುದು
ಮಹದಾಸೆ ಎದೆತುಂಬಿ. ಸಲಸಲಂ ಭವಿಸಿರ್ದ
ಪರಾಜಯವೆ ಜಯವಾಯ್ತು ಜಯ ಡಿಂಡಿಮವ ಢಣ
ಢಣಿಸಿ ಬಾರಿಸುವೊಲ್ ! ಮನದಳಲಿನ ನೆರೆಯಿಳಿದು
ಹರಿದು ಹೋಯ್ತು ವರ್ಷಾಕಾಲದ ಜಲರಾಶಿಯೊಲ್ !
ಸಂಜೀವನ ಭಾಗ್ಯೋದಯದ ನವೋ ನವೀನ
ಅಂಕಣದ ಹಿರಿಮೆ ಗರಿಮೆ ಮೈಗೂಡಿ ಘನವಾಯ್ತು.
ಜೀವನ ಕುಸುಮವಿದು ಭಗವದ್ ಸನ್ನಿಧಿಗೊಳಿಸೆ
ಸ್ವಚ್ಛ ಸುಂದರವಾಯ್ತು ಜಗದ ಚೆಂಬೆಳಕಿನಲಿ
ಮಿಂದು. ಪೂರ್ವಪುಣ್ಯವಶದಿಂದೀ ಜನ್ಮದಲಿ
ಮನುಕುಲಕ್ಕೈದ ಪುಣ್ಯಯೋಗಕೊಂದು ಸುಂದರ
ಬರ್ದಿಲಂ ಬಿಡೆ ಮಲ್ಲಿಕಾ ಕಾವ್ಯನಾಮದಲಿ
ಕನ್ನಡ ನುಡಿ ಸೇವೆಗೈವೊಂದು ಗುರಿಯಿಂದೆ
ಉಲ್ಲೇಖಿಸಿದುದತಿ ಸಮಾಧಾನ ಜೀವಕ್ಕೆ.
ಏಳು ದಶಕದ ಬಾಳ್ ತುಂಬಿ ಮುಗಿಬಗಿಯಾಯ್ತು
ಇಂದಿನೀ ವೈಶಾಖೀ ಪರ್ವಮಾನದೊಂದಿಗೆ.

ದೂರ ಗಮ್ಯದ ಜಾಡನರಸುತ್ತೆ ಕರಂಗುತಿಹೆ
ದಿನದಿನಂ ವಯೋಧರ್ಮಕೆ ಶರಣು ಶರಣೆಂದು.

ಓ! ತಾಯೆ! ನಿನ್ನ ಕರುಣೆಯಿಂದೆನ್ನ ಹೃದಯ
ಕುಂಡಲಿನಿಯಿಂದುಣ್ಮಿಬಹ ಕಾವ್ಯಮಾಲೆಯಂ
ತವ ಪದಾಂಭೋಜಗಳಿಗರ್ಪಿಸಿ ಪರಮ ಪೂಜೆ
ಸಲಿಸುವೆಂ ಭಯ ಭಕ್ತಿಯಿಂ ವ್ರತ ನೇಮದಿಂ.
ಭವ ಸಾಗರದ ಚಂಡ ಪ್ರಚಂಡ ಅಲೆಗಳಲಿ
ಮುಳುಗೆದ್ದು ತೇಲಾಡಿ ಅಗಾಧ ಪ್ರಯತ್ನದಿಂ
ಕಂಡುಂಡ ಸುಖದ ತುಣುಕೆನಲ್ ಸಾಹಿತ್ಯಾಮೃತ
ಪಾನಮಾತ್ರಂ. ಉಳಿದುದೆಲ್ಲವುಂ ಬರಿ ನಶ್ವರ.
ಮಿಥ್ಯೆಯ ಅವತಾರ, ಮತಿಶೂನ್ಯ, ಗತಿಯು ಶೂನ್ಯ
ಸಾಹಿತ್ಯರಸಾಬ್ಧಿ ಎದೆ ತುಂಬಿ ಹರಿಯುತಿರೆ
ಸರ್ವಾಭಿಲಾಷಾಗಳಾಕಾಂಕ್ಷೆಗಳಿಗೆಲ್ಲ
ಚರಮಗತಿ! ಮೇಣ್ ಪರಮ ಗತಿ! ವರಮುಕ್ತಿ ಗತಿ!
ಓ, ತಾಯೆ! ಅಜಜಾಯೆ! ನಿನಗೆ ನಮ್ರ ನಮನಂ!
ಮತ್ತೆ ಮತ್ತೆ ಮೇಣ್ಮತ್ತೆ ವಿನಮ್ರ ನಮನಂ!

— ೦ —

ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೧) ಜೀವನಗಂಗಾ
೨) ಡಾ|| ಅಘೋರ
೩) ಡಾ|| ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ
೬) ಮನೋಸ್ಮಣಿ
೭) ಸಂತ್ರಾಸಿನಿ
೮) ಆಸೆಯ ಸುಳಿಯಲ್ಲಿ

(ಕಥಾ ಸಂಕಲನ)

೯) ಬಹುರತ್ನಾವಸುಂಧರಾ
೧೦) ರತ್ನಗರ್ಭಾವಸುಂಧರಾ
೧೧) ಸುಧಾಮಣಿ
೧೨) ರಮಣೀಮಣಿ
೧೩) ಲಿಯೋನಾ
೧೪) ಶ್ರೀಮುಖಿ
೧೫) ಶ್ರೀಹರ್ಷಲಾ
೧೬) ವೈಶಾಖೀ ಪರ್ವ
೧೭) ಫಾಲ್ಗುಣೀ ಪರ್ವ
೧೮) ಮಣಿಮೇಖಲಾ
೧೯) ಮಣಿಕರ್ಣಿಕಾ

(ಕವಿತಾ ಸಂಕಲನ)

೨೦) ಪೂಜಾವಸಾನ ಸಮಯೇ....!
೨೧) ಧ್ಯಾನಾವಸಾನ ಸಮಯೇ....!
೨೨) ಗಗನ ಕುಸುಮ
೨೩) ಜೀವನ ಕುಸುಮ
೨೪) ಚಂಪಕ ರಾಜಿ
೨೫) ಬಕುಳ ರಾಜಿ

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

೨೬) ಕಸ್ತೂರಿ ಮಾಲಿಕಾ
೨೭) ಮಂದಾರ ಮಾಲಿಕಾ
೨೮) ವಿಜಯ ಗಾಥಾ
೨೯) ಗಾನ ತೀರ್ಥ
೩೦) ನಾದ ಬಿಂದು
೩೧) ಕಾವ್ಯಾನಂದ ನಂದಿನಿ
೩೨) ಭಾವಾನಂದ ನಂದಿನಿ

(ಸಂಜೀವನ ಕಾವ್ಯ)

೩೩) ಮಂಗಳ ಭಾರತಿ
೩೪) ಕಲ್ಯಾಣ ಭಾರತಿ
೩೫) ಉತ್ತರೋತ್ತರಣೆ
೩೬) ರಾಗಾನುರಾಗಿಣಿ
೩೭) ಪ್ರಫುಲ್ಲ ಭಾರತ

(ಪೌರಾಣಿಕ ನಾಟಕ)

೩೮) ಪುಣ್ಯಪಯೋನಿಧಿ
೩೯) ಪುಣ್ಯಾಭಿಸಾರ

(ಸಾನೆಟ್‌ಗಳು)

೪೦) ತರಂಗಿಣಿ

(ಗದ್ಯ ಕಾವ್ಯ)

೪೧) ಐಂದ್ರ ಕೀರ್ತಿ ಕೇತನಂ
(ಉಪನಿಷತ್ಕಥಾ)
೪೨) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೩) ದೂರ ದೇಶದಲ್ಲಿ
೪೪) ಬೆಳದಿಂಗಳ ರಾತ್ರಿ
೪೫) ರಂಗನ ಸಾಹಸ
೪೬) ಓಹಿಯೋಜ ಸರೋವರ
೪೭) ಕೌಶಿಕನ ಗೊಂಬೆ
೪೮) ವಿಶೇಷ ಸುದ್ದಿ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು–560 025